ಮಂಗಳೂರು
ಗುರುವಾರ, 29 ಏಪ್ರಿಲ್ 2026
ಸಂಪುಟ 48, ಸಂಚಿಕೆ 42, ಪುಟಗಳು 12+8
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಬಿಜೆಪಿಗೆ ಬಂಗಾಳ? ಮತದಾನೋತ್ತರ ಸಮೀಕ್ಷೆ
• ಪುಟ 2

ಕಿರುಸುದ್ದಿ

ಮೇ 1ರಂದು ಮಹಾಲಕ್ಷ್ಮೀ ಬ್ಯಾಂಕ್ ವತಿಯಿಂದ ಚಂಡಿಕಾ ಯಾಗ

ಉಡುಪಿ : ಮಹಾಲಕ್ಷ್ಮೀ ಕೋ ಆಪರೇಟಿವ್ ಬ್ಯಾಂಕ್ ವತಿಯಿಂದ ಮೇ 1 ರಂದು ಉಚ್ಚಿಲ ಶ್ರೀ ಮಹಾಲಕ್ಷ್ಮೀ ದೇವಸ್ಥಾನದಲ್ಲಿ ಚಂಡಿಕಾ ಯಾಗ ನಡೆಯಲಿದೆ. ಪೂರ್ವಾಹ್ನ 9 ಗಂಟೆಗೆ ಚಂಡಿಕಾಯಾಗ, 11.30ಕ್ಕೆ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರ ದಿವ್ಯ ಉಪಸ್ಥಿತಿಯಲ್ಲಿ ಪೂರ್ಣಾಹುತಿ ನೆರವೇರಿಸಲಿದ್ದು, ನಂತರ ಪ್ರಸಾದ ವಿತರಣೆ ಹಾಗೂ ಮಹಾ ಅನ್ನ ಸಂತರ್ಪಣೆ ನಡೆಯಲಿದೆ. ಬ್ಯಾಂಕಿನ ಗ್ರಾಹಕರು, ಸದಸ್ಯರು, ಭಕ್ತಾಭಿಮಾನಿಗಳು ಆಗಮಿಸಿ ಶ್ರೀ ದೇವರ ಪ್ರಸಾದ ಸ್ವೀಕರಿಸುವಂತೆ ಬ್ಯಾಂಕಿನ ಅಧ್ಯಕ್ಷ ಹಾಗೂ ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮ್ಯೂಸಿಕ ಸುಪ್ರಿಯಗೆ ಡಾಕ್ಟರೇಟ್ ಪದವಿ



ಪುತ್ತೂರು: ಮಾಹೆ ವಿಶ್ವವಿದ್ಯಾಲಯದ ಎಂ.ಐ.ಟಿ.ಯ ಸ್ಕೂಲ್ ಆಫ್ ಕಂಪ್ಯೂಟರ್ ಇಂಜಿನಿಯರಿಂಗ್‌ನಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಮ್ಯೂಸಿಕ ಸುಪ್ರಿಯ ಅವರು ಮಂಡಿಸಿದ 'ಎ ಮಷೀನ್ ಟ್ರಾನ್ಸ್ ಲೇಷನ್ ಸಿಸ್ಟಮ್ ಫಾರ್ ಕನ್ನಡ ಟು ಇಂಗ್ಲಿಷ್ ಅಂಡ್ ಇಂಗ್ಲಿಷ್ ಟು ಕನ್ನಡ' ಎಂಬ ಮಹಾಪ್ರಬಂಧಕ್ಕೆ ಮಾಹೆ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಅವರು ಎಂ.ಐ.ಟಿ.ಯ ಸ್ಕೂಲ್ ಆಫ್ ಕಂಪ್ಯೂಟರ್ ಇಂಜಿನಿಯರಿಂಗ್‌ನ ಡಾ. ದಿನೇಶ್ ಆಚಾರ್ಯ ಯು. ಹಾಗೂ ಡಾ. ಆಶಾಲತಾ ನಾಯಕ್ ಅವರ ಮಾರ್ಗದರ್ಶನದಲ್ಲಿ ಈ ಸಂಶೋಧನೆಯನ್ನು ನಡೆಸಿದ್ದರು. ಅವರು ಸುಜಯ ಕೆ.ಎಸ್.-ಎಸ್.ಎ. ಕೃಷ್ಣಯ್ಯ ದಂಪತಿ ಪುತ್ರಿ, ಅಭಿಜಿತ್ ಎಲ್. ಕೋಟ್ಯಾನ್ ಅವರ ಪತ್ನಿ.

ಮೇ 1ರಂದು ಕೊಡಗು ಜಿಲ್ಲಾ ಬಂಟರ ಭವನಕ್ಕೆ ಶಂಕುಸ್ಥಾಪನೆ

ಮಡಿಕೇರಿ: ಕೊಡಗು ಜಿಲ್ಲಾ ಬಂಟರ ಭವನ ಟ್ರಸ್ಟ್ ಮತ್ತು ಜಿಲ್ಲಾ ಬಂಟರ ಸಂಘದ ವತಿಯಿಂದ ಮಡಿಕೇರಿಯ ಅಬ್ಬಿಫಾಲ್ಸ್ ರಸ್ತೆಯಲ್ಲಿ ನಿರ್ಮಾಣವಾಗಲಿರುವ ಕೊಡಗು ಬಂಟರ ಭವನಕ್ಕೆ ಮೇ 1ರ ಪೂರ್ವಾಹ್ನ 11 ಗಂಟೆಗೆ ಶಂಕು ಸ್ಥಾಪನೆ ನೆರವೇರಲಿದೆ ಎಂದು ಕೊಡಗು ಜಿಲ್ಲಾ ಬಂಟರ ಸಂಘದ ಅಧ್ಯಕ್ಷ ಬಿ.ಡಿ.ಜಗದೀಶ್ ರೈ ತಿಳಿಸಿದ್ದಾರೆ.

ನವರದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಒಡಿಯೂರಿನ ಶ್ರೀ ಗುರುದೇವಾನಂದ ಸ್ವಾಮೀಜಿ ಸಾನಿಧ್ಯದಲ್ಲಿ ನಡೆಯುವ ಕಾರ್ಯಕ್ರಮವನ್ನು ಶಾಸಕ ಡಾ.ಮಂಥರ್ ಗೌಡ ಉದ್ಘಾಟಿಸಲಿದ್ದಾರೆ. ಶಾಸಕ ಎ.ಎಸ್.ಪೊನ್ನಣ್ಣ, ಸಂಸದರಾದ ಯದುವೀರ್ ಒಡೆಯರ್ ಕ್ಯಾ.ಬ್ರಿಜೇಶ್ ಚೌಟ, ಎಂಎಲ್‌ಸಿ ಸುಜಾ ಕುಶಾಲಪ್ಪ, ಮಾಜಿ ಶಾಸಕರಾದ ಕೆ.ಜಿ.ಬೋಪಯ್ಯ, ಎಂ.ಪಿ.ಅಪ್ಪಚ್ಚು ರಂಜನ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಕ್ರೀಡಾಕೂಟ : ಕೊಡಗು ಯುವ ಬಂಟ್ಸ್ ವತಿಯಿಂದ ಏ. 30ರಿಂದ ಮೇ 3ರವರೆಗೆ ಕ್ರಿಕೆಟ್, ವಾಲಿಬಾಲ್, ಥ್ರೋಬಾಲ್, ಹಗ್ಗ ಜಗ್ಗಾಟ ಸೇರಿ ವಿವಿಧ ಕ್ರೀಡಾ ಸ್ಪರ್ಧೆಗಳು ನಡೆಯಲಿವೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಬಿ.ಬಿ.ಐತಪ್ಪ ರೈ, ರವೀಂದ್ರ ಎ.ರೈ, ಅಪ್ಪು ಬಾಲಕೃಷ್ಣ ರೈ, ಬಿ.ಎಸ್. ಸದಾಶಿವ ರೈ, ಬಿ.ಕೆ.ಸದಾನಂದ ರೈ ಉಪಸ್ಥಿತರಿದ್ದರು.

ಅವೈಜ್ಞಾನಿಕ ರೀತಿಯಲ್ಲಿ ತ್ಯಾಜ್ಯ ನಿರ್ವಹಣೆ | ಪಂಚಾಯತ್ ದಿಢೀರ್ ಪರಿಶೀಲನೆ

ಮಂಗಳೂರು ವಿವಿಗೆ ಬಿತ್ತು ₹25,000 ದಂಡ!

ಮಂಗಳೂರು: ಅವೈಜ್ಞಾನಿಕ ರೀತಿಯಲ್ಲಿ ತ್ಯಾಜ್ಯ ನಿರ್ವಹಣೆ ಮಾಡಿದ ಹಿನ್ನೆಲೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಕೊಣಾಜೆ ಗ್ರಾಮ ಪಂಚಾಯತ್ 25,000 ದಂಡ ವಿಧಿಸುವ ಮೂಲಕ ಬಿಸಿ ಮುಟ್ಟಿಸಿದೆ.

ಕೊಣಾಜೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಲು ಗ್ರಾಮ ಪಂಚಾಯತ್ ನಿರಂತರವಾಗಿ ಶ್ರಮಿಸುತ್ತಿದ್ದು, ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಕಸ ಸುಡುತ್ತಿರುವ ಬಗ್ಗೆ ನಿರಂತರ ದೂರುಗಳು ಬರುತ್ತಿದ್ದವು. ಈ ಹಿನ್ನೆಲೆಯಲ್ಲಿ ಬುಧವಾರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳ ಜೊತೆ ಸ್ಥಳ ಪರಿಶೀಲನೆ ನಡೆಸಿದಾಗ ತಮ್ಮ ಸಂಸ್ಥೆಯ ಕಸವನ್ನು ಗೊತ್ತುಪಡಿಸಿದ ನಿಗದಿತ ಸ್ಥಳದಲ್ಲಿ ಕಸ ರಾಶಿ ಹಾಕಿ ಸುಡುತ್ತಿರುವುದು ಸ್ಪಷ್ಟವಾಗಿದೆ. ಪ್ಲಾಸ್ಟಿಕ್ ಹೊಗೆ ಸಾರ್ವಜನಿಕ ಆರೋಗ್ಯಕ್ಕೆ ಮಾರಕವಾಗಿರುವ ಬಗ್ಗೆ, ವೈದ್ಯಾಧಿಕಾರಿಗಳು ವರದಿ ನೀಡಿರುತ್ತಾರೆ. ಸಾರ್ವಜನಿಕ ಆರೋಗ್ಯ ರಕ್ಷಣೆ ಮತ್ತು ಪರಿಸರ ರಕ್ಷಣೆಯ ಹಿತದೃಷ್ಟಿಯಿಂದ ರೂ. 25000 ದಂಡ ವಿಧಿಸಲಾಗಿದೆ ಎಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿ ತಿಳಿಸಿದ್ದಾರೆ.

10 ದಿನದೊಳಗೆ ಪಾವತಿಸಲು ಸೂಚನೆ

ದಂಡದ ಮೊತ್ತವನ್ನು 10 ದಿನದೊಳಗೆ ಪಾವತಿಸಲು ಸೂಚಿಸಲಾಗಿದೆ. ಒಂದು ವೇಳೆ ಈ ಅವಧಿಯಲ್ಲಿ ಪಾವತಿಸದಿದ್ದರೆ ಎಫ್‌ಐಆರ್ ದಾಖಲಿಸಲಾಗುವುದು ಎಂದು ಪಿಡಿಒ ಎಚ್ಚರಿಸಿದ್ದಾರೆ.





ನಿರಂತರ ಜಾಗೃತಿಯ ನಡುವೆಯೂ ಹೆಚ್ಚಳ

ಪರಿಸರ ಜಾಗೃತಿಯ ಕಾರ್ಯ ನಿರಂತರವಾಗಿ ನಡೆಯುತ್ತಿದ್ದರೂ ಎಲ್ಲೆಂದರಲ್ಲಿ ತ್ಯಾಜ್ಯ ಎಸೆಯುವುದು ಮಾತ್ರ ನಿಂತಿಲ್ಲ. ತೊಕ್ಕೊಟ್ಟಿನಿಂದ ಮಂಗಳೂರು ವಿವಿವರೆಗಿನ ರಸ್ತೆಯ ಇಕ್ಕೆಲಗಳು ತ್ಯಾಜ್ಯದಿಂದ ತುಂಬಿವೆ. ರಾಜ್ಯ ವಿಧಾನಸಭಾ ಸ್ಪೀಕರ್ ಯು.ಟಿ.ಖಾದರ್ ಸೇರಿದಂತೆ ಜನಪ್ರತಿನಿಧಿಗಳು ನಿತ್ಯ ಓಡಾಡುವ ಜಾಗವಿದು. ಮಂಗಳವಾರ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಕೂಡ ಇದೇ ದಾರಿಯಲ್ಲಿ ಸಾಗಿದ್ದಾರೆ.

ಸ್ಪೀಕರ್ ಖಾದರ್ ಅವರು ವಿತ್ತ ಸಚಿವರಿದ್ದ ಬುಧವಾರದ ಕಾರ್ಯಕ್ರಮದಲ್ಲಿ ತಮ್ಮ ಭಾಷಣದಲ್ಲಿ ತಮ್ಮ ಕ್ಷೇತ್ರದಲ್ಲಿ ಯಾವುದಾದರೂ ಬದಲಾವಣೆ ಮಾಡಬೇಕಿದ್ದರೆ ಹೇಳಿ ಖಂಡಿತಾ ಮಾಡುತ್ತೇನೆ ಎಂದು ನಿರ್ಮಲಾ ಸೀತಾರಾಮನ್‌ರನ್ನು ಉದ್ದೇಶಿಸಿ ಹೇಳಿದ್ದರು. ಅವರ ಮಾತಿಗೆ 'ಉಳ್ಳಾಲದಿಂದ ಮಂಗಳೂರು ವಿವಿ ವರೆಗಿನ ರಸ್ತೆಯ ಇಕ್ಕೆಲಗಳು ತ್ಯಾಜ್ಯದಿಂದ ದೊರಕಿಸಿದರೆ ಅದೊಂದು ದೊಡ್ಡ ಕಾರ್ಯವಾದಂತೆಯೇ ಎಂದು ಸಾರ್ವಜನಿಕರು ಆಡಿಕೊಳ್ಳುತ್ತಿದ್ದಾರೆ. ಏಕೆಂದರೆ ತೊಕ್ಕೊಟ್ಟು, ಉಳ್ಳಾಲ, ಕೊಣಾಜೆ, ದೇರಳಕಟ್ಟೆ, ಮುಡಿಪು, ಅಸೈಗೋಳಿ, ಕುತ್ತಾರ್, ತೊಕ್ಕೊಟ್ಟಿನಿಂದ ಪಂಪ್‌ವೆಲ್‌ವರೆಗಿನ ರಸ್ತೆಯ ಇಕ್ಕೆಗಳು ತ್ಯಾಜ್ಯ ರಾಶಿಯಿಂದ ತುಂಬಿ ಹೋಗಿವೆ.

ಸ್ವಚ್ಛತೆ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಜಿಲ್ಲಾ ಪಂಚಾಯತ್ ಮಾಜಿ ಒಂಬುಡ್ಸ್ ಮನ್, ಪರಿಸರ ಕಾಳಜಿಯ ಶೀನ ಶೆಟ್ಟಿ ಮತ್ತು ಕೃಷ್ಣಮೂಲ್ಯ ಅವರು ನಿರಂತರ ಪ್ರಯತ್ನ ಮಾಡುತ್ತಲೇ ಇದ್ದಾರೆ. ಇವರ ಕಾರ್ಯಗಳಿಗೆ ಜನತೆ ಸಾಥ್ ನೀಡಬೇಕಿದೆ.

ಎಲ್ಲೆಲ್ಲಿ ಎಷ್ಟು?

ಸಾರ್ವಜನಿಕ ಸ್ಥಳಗಳಲ್ಲಿ ತ್ಯಾಜ್ಯ ಎಸೆದ ಪ್ರಕರಣಕ್ಕೆ ಸಂಬಂಧಿಸಿ ಬಂಟ್ವಾಳ 4, ಬೆಳ್ತಂಗಡಿ 11, ಕಡಬ 7, ಮಂಗಳೂರು 14, ಮೂಡುಬಿದಿರೆ 1, ಮುಲ್ಕಿ 1, ಪುತ್ತೂರು 5, ಸುಳ್ಯ 2 ಮತ್ತು ಉಳ್ಳಾಲದಲ್ಲಿ 3 ಪ್ರಕರಣ ದಾಖಲಿಸಿ 87 ಸಾವಿರ ದಂಡ ವಿಧಿಸಲಾಗಿದೆ.

ತಿಂಗಳೊಳಗೆ 48 ಪ್ರಕರಣ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏ.1ರಿಂದ ಏ.27ರವರೆಗೆ ಎಲ್ಲೆಂದರಲ್ಲಿ ತ್ಯಾಜ್ಯ ಎಸೆದ ಒಟ್ಟು 48 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ಈ ಪೈಕಿ ಒಟ್ಟು ರೂ.87,000 ದಂಡ ವಿಧಿಸಲಾಗಿದ್ದು, ರೂ.79,000 ದಂಡ ವಸೂಲಿ ಮಾಡಲಾಗಿದೆ. ಒಂದು ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ಕೇರಳದಲ್ಲಿ ಡಿಜಿಟಲ್ ಸೆನ್ಸಸ್ | ಜನರು ತಮ್ಮ ಮಾಹಿತಿಗಳನ್ನು ಸ್ವಯಂ ಆಗಿ ನೀಡಿ

ಮನೆಗಳ ಗಣತಿ ಜುಲೈ 1ರಿಂದ 30ರ ತನಕ

ಕಾಸರಗೋಡು: ಡಿಜಿಟಲ್ ಸೆನ್ಸಸ್‌ನ ಅಂಗವಾಗಿ ಕೇರಳದ ಮನೆಗಳ ಗಣತಿ ಜುಲೈ 1ರಂದು ಆರಂಭಗೊಂಡು 30ರ ತನಕ ಮುಂದುವರಿಯಲಿದೆ. ಇದರ ಪೂರ್ವಭಾವಿಯಾಗಿ ಜೂನ್ 16ರಿಂದ ಮುಂದಿನ 15 ದಿನಗಳ ತನಕ ಜನರು ತಮ್ಮ ಮಾಹಿತಿಗಳನ್ನು ಸ್ವಯಂ ಆಗಿ ನೀಡಲು ಸರಕಾರ ಸೆಲ್ಫ್ ಎನ್ಯುಮರೇಶನ್ ಪೋರ್ಟಲ್ ಸೌಕರ್ಯ ಏರ್ಪಡಿಸಿದೆ. ಇದರಲ್ಲಿ ಜನರು ತಮ್ಮ ಮಾಹಿತಿಗಳನ್ನು ಸ್ವಯಂ ಆಗಿ ನೀಡಬಹುದಾಗಿದೆ.

ಜನಗಣತಿಯ ಮೊದಲ ಹಂತವಾಗಿ ಮನೆಗಳ ಗಣತಿ ಜುಲೈ 1ರಿಂದ30ರತನಕನಡೆಯಲಿದೆ.ಮನೆಗಳಅವಸ್ಥೆಸೌಕರ್ಯಗಳು, ಆಸ್ತಿಗಳು ಇತ್ಯಾದಿ 33 ಪ್ರಶ್ನೆಗಳು ಒಳಗೊಂಡಿರುವ ಮಾಹಿತಿಗಳನ್ನು ಮೊದಲ ಹಂತದಲ್ಲಿ ನಡೆಸಲಾಗುವುದು. ಈ ಪ್ರಕ್ರಿಯೆ ಮುಗಿದ ಬಳಿಕ ದ್ವಿತೀಯ ಹಂತದಲ್ಲಿ 2027 ಫೆಬ್ರವರಿಯಿಂದ ಜನಗಣತಿ ಆರಂಭಗೊಳ್ಳಲಿದೆ. ಸೆನ್ಸಸ್ ಮೆನೇಜ್‌ಮೆಂಟ್ ಆ್ಯಂಡ್ ಮೋನಿಟರಿಂಗ್ ಸಿಸ್ಟಂ (ಸಿಎಂಎಂಎಸ್), ಹೌಸ್ ಲಿಸ್ಟಿಂಗ್ ಬ್ಲೋಕ್ ಕವರಿಂಗ್ (ಎಚ್‌ಎಲ್‌ಸಿ) ಎಂಬೀ ಪೋರ್ಟಲ್‌ಗಳು, ಎಚ್‌ಎಲ್‌ಒಎಫ್ ಎಂಬ ಡಿಜಿಟಲ್ ಸೌಕರ್ಯಗಳನ್ನು ಜನಗಣತಿಯ ಭಾಗವಾಗಿ ಉಪಯೋಗಿಸಲಾಗುವುದೆಂದು ಸೆನ್ಸಸ್ ಆಪರೇಶನ್ ಡೈರೆಕ್ಟರ್ ಹಾಗೂ ಚೀಫ್ ಪ್ರಿನ್ಸಿಪಲ್ ಸೆನ್ಸಸ್ ಆಫೀಸರ್ ಡಾ.ಟಿ.ಮಿತ್ರ ತಿಳಿಸಿದ್ದಾರೆ.

ಸಾರ್ವಜನಿಕ ಆಡಳಿತ ಇಲಾಖೆ ಈ ಗಣತಿಯ ರಾಜ್ಯದ ನೋಡೆಲ್ ಇಲಾಖೆಯಾಗಿ ಕಾರ್ಯ ವೆಸಗಲಿದೆ. ಇದರ ಕಾರ್ಯದರ್ಶಿಯನ್ನು ರಾಜ್ಯ ಮಟ್ಟದ ನೋಡೆಲ್ ಆಫೀಸರ್ ಆಗಿ ನೇಮಿಸಲಾಗಿದೆ. ಇನ್ನು ಜಿಲ್ಲಾಧಿಕಾರಿಗಳು ಇದರ ಆಯಾ ಜಿಲ್ಲೆಗಳ ಪ್ರಿನ್ಸಿಪಲ್ ನೋಡೆಲ್ ಆಫೀಸರ್‌ಗಳಾಗಿ ಸೇವೆ ಸಲ್ಲಿಸಲಿದ್ದಾರೆ. ಗಣತಿ ಕೆಲಸಕ್ಕಾಗಿ ನಿಯೋಜಿಸಲ್ಪಟ್ಟವರಿಗೆ ಆಯಾ ಜಿಲ್ಲೆಗಳ ಕಲೆಕ್ಟರೇಟ್‌ಗಳಲ್ಲಿ ಜಿಲ್ಲಾ ಮಟ್ಟದ ತರಬೇತಿಗಳನ್ನು ನೀಡಲಾಗುವುದು.

ಜನಸಂಖ್ಯಾ ಗಣತಿಗೆ ಸಂಬಂಧಪಟ್ಟ ಕೆಲಸಗಳಿಗೆ ನಿಯೋಜಿತರಾದ ಸರಕಾರಿ ಸಿಬ್ಬಂದಿಗಳಿಗೆ ಮುಂದಿನ 31ರ ತನಕ ವರ್ಗಾವಣೆ ನಡೆಸದೆಂದು ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಡಾ.ಎ.ಜಯತಿಲಕ್ ಆದೇಸೂಚನೆ ಜ್ಯಾರಿಗೊಳಿಸಿದ್ದಾರೆ.

ಕೇರಳದಲ್ಲಿ ಎರಡು ಹಂತವಾಗಿ ಜನಗಣತಿ ನಡೆಸಲಾಗುತ್ತಿದೆ. ಇದರಂತೆ ಮೊದಲ ಹಂತದಲ್ಲಿ ಜನಗಣತಿ ಕರ್ತವ್ಯಕ್ಕಾಗಿ ನಿಯೋಜಿಸಲ್ಪಟ್ಟ ಸಿಬ್ಬಂದಿಗಳು ಮನೆ ಮನೆಗಳಿಗೆ ಸಂದರ್ಶಿಸಿ ಮಾಹಿತಿ ಸಂಗ್ರಹಿಸುವರು. ಇದರ ಹೊಣೆಗಾರಿಕೆಯನ್ನು ಎನ್ಯುಮರೇಟರ್‌ಗಳಿಗೆ ವಹಿಸಿಕೊಡಲಾಗಿದೆ. ಈ ಪ್ರಕ್ರಿಯೆ ಜೂನ್ 16ರಿಂದ 30ರ ತನಕ ಮುಂದುವರಿಯಲಿದೆ. ಈ ಅವಧಿಯಲ್ಲಿ ಎಲ್ಲಾ ಮನೆಯವರು ತಮ್ಮ ಕುಟುಂಬಗಳ ಕುರಿತಾದ ಮಾಹಿತಿಗಳನ್ನು ಎನ್ಯುಮರೇಟರ್‌ಗೆ ನೀಡಬೇಕು. ಇದಕ್ಕಾಗಿ ವಿಶೇಷ ವೆಬ್ ಪೋರ್ಟಲ್‌ನ್ನು ಆರಂಭಿಸಲಾಗಿದೆ. ಈ ಪೋರ್ಟಲ್ ಮೂಲಕ ಜನರು ನೇರವಾಗಿ ಮಾಹಿತಿಗಳನ್ನು ನೀಡಬೇಕಾಗಿದೆ. ಪ್ರತೀ ಮನೆಗಳು,ಅಲ್ಲಿನ ಮೂಲಭೂತ ಸೌಕರ್ಯ, ಆಸ್ತಿಗಳು ಇತ್ಯಾದಿಗಳ ಮಾಹಿತಿಗಳನ್ನು ಮೊದಲ ಹಂತದಲ್ಲಿ ಸಂಗ್ರಹಿಸಲಾಗುವುದು.

ವಾಲಿಬಾಲ್ ಟೂರ್ನಿ: ಎಸ್.ಜೆ.ಇ.ಸಿ. ಮಹಿಳಾ ತಂಡಕ್ಕೆ ರನ್ನರ್-ಅಪ್ ಟ್ರೋಫಿ





ಮಂಗಳೂರು: ಎಸ್.ಜೆ.ಇ.ಸಿ ಮಹಿಳಾ ವಾಲಿಬಾಲ್ ತಂಡವು ಏ. 25ರಂದು ಅಡ್ಯಾರ್‌ನ ಎಸ್.ಸಿ.ಇ.ಎಂನಲ್ಲಿ ನಡೆದ ವಿಟಿಯು ಮಂಗಳೂರು ವಿಭಾಗದ ವಾಲಿಬಾಲ್ ಟೂರ್ನಮೆಂಟ್‌ನಲ್ಲಿ ಭಾಗವಹಿಸಿ ರನ್ನರ್-ಅಪ್ ಟ್ರೋಫಿಯನ್ನು ಪಡೆದುಕೊಂಡಿದೆ.

ತಂಡವು ದೈಹಿಕ ಶಿಕ್ಷಣ ನಿರ್ದೇಶಕಿ (ಪಿಇಡಿ) ವನೀಶಾ ವಿ. ರೋಡ್ರಿಗೆಸ್ ಹಾಗೂ ಸಹಾಯಕ ಪಿಇಡಿ ಸುಧೀರ್ ಅವರಮಾರ್ಗದರ್ಶನದಲ್ಲಿಗಮನಾರ್ಹ ಕೌಶಲ್ಯವನ್ನು ಪ್ರದರ್ಶಿಸಿದೆ.

ಮೂರನೇ ವರ್ಷದ ಸಿಎಸ್‌ಇ ವಿದ್ಯಾರ್ಥಿನಿ ರೇಣಿಕ ಯತೀಶ್ ಅವರು ಟೂರ್ನಮೆಂಟ್‌ನ ಅತ್ಯುತ್ತಮ ಆಲ್‌-ರೌಂಡರ್ ಪ್ರಶಸ್ತಿ ಪಡೆದಿದ್ದಾರೆ.

ಎಸ್.ಜೆ.ಇ.ಸಿ ಸಂಸ್ಥೆಯ ಆಡಳಿತ ಮಂಡಳಿಯವರು ಈ ಅತ್ಯುತ್ತಮ ಸಾಧನೆಯ ಮೂಲಕ ಸಂಸ್ಥೆಗೆ ಕೀರ್ತಿ ತಂದ ತಂಡದ ಸದಸ್ಯರು ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಜಿಲ್ಲಾ ಮಟ್ಟದ 20ನೇ ವಾರ್ಷಿಕ ಅಂತರ್ ಕ್ಲಬ್ ರೋಟರ‍್ಯಾಕ್ಟ್ ರಸಪ್ರಶ್ನೆ ಸ್ಪರ್ಧಾಕೂಟ

ಮಂಗಳೂರು: ರೋಟರ‍್ಯಾಕ್ಟ್ ಕ್ಲಬ್ ಮಂಗಳೂರು ಸಿಟಿ ಸಂಸ್ಥೆಯ ಆಶ್ರಯದಲ್ಲಿ 20ನೇ ವಾರ್ಷಿಕ ಜಿಲ್ಲಾ ಮಟ್ಟದ ಅಂತರ್ ಕ್ಲಬ್ ರೋಟರ‍್ಯಾಕ್ಟ್ ರಸಪ್ರಶ್ನೆ ಸ್ಪರ್ಧಾಕೂಟ ಮೇ 5ರಂದು ಬೆಳಗ್ಗೆ 11ಕ್ಕೆ ನಗರದ ಈಡನ್ ಕ್ಲಬ್ ಸಭಾಂಗಣದಲ್ಲಿ ಜರಗಲಿದೆ. ಸ್ಪರ್ಧಾಕೂಟವು ಕೇವಲ ರೋಟರ‍್ಯಾಕ್ಟ್ ಸಂಸ್ಥೆಯ ವಿಷಯದಲ್ಲಿ ಜರಗಿಸಲಾಗುವುದು. ಈ ಸ್ಪರ್ಧಾಕೂಟದಲ್ಲಿ ಕೇವಲ ರೋಟರ‍್ಯಾಕ್ಟ್ ಸಂಸ್ಥೆಯ ಸದಸ್ಯರು ಯಾವುದೇ ಪ್ರವೇಶ ಶುಲ್ಕ ಪಾವತಿಸದೆ ಉಚಿತವಾಗಿ ಭಾಗವಹಿಸಬಹುದು.

ರೋಟರ‍್ಯಾಕ್ಟ್ ಕ್ಲಬ್‌ಅಧ್ಯಕ್ಷ ಅಕ್ಷಯ್ ರೈ ಅಧ್ಯಕ್ಷತೆ ವಹಿಸಲಿರುವರು. ರೋಟರಿ ಕ್ಲಬ್ ಮಂಗಳೂರು ಸೆಂಟ್ರಲ್ ಸಂಸ್ಥೆ ಅಧ್ಯಕ್ಷ ಭಾಸ್ಕರ್ ರೈ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿರುವರು. ಜಿಲ್ಲಾ ರೋಟರ‍್ಯಾಕ್ಟ್ ಪ್ರತಿನಿಧಿ ಪ್ರಜ್ವಲ್ ಹಾಗೂ ತುಳು ಚಲನಚಿತ್ರ ನಟ ಭೋಜರಾಜ್ ವಾಮಂಜೂರು ಅವರು ಸ್ಪರ್ಧಾ ವಿಜೇತರಿಗೆ ಪ್ರಶಸ್ತಿ, ಬಹುಮಾನ ಹಾಗೂ ಪ್ರಮಾಣ ಪತ್ರಗಳನ್ನು ವಿತರಿಸಲಿರು ವರು ಎಂದು ರೋಟರ‍್ಯಾಕ್ಟ್ ಸಂಸ್ಥೆಯ ಸಭಾಪತಿ ಹಾಗೂ ಸ್ಪರ್ಧಾ ನಿರೂಪಕ ಡಾ. ದೇವದಾಸ್ ರೈ ತಿಳಿಸಿದ್ದಾರೆ.

ದಿ. ಶಾಂತರಾಮ್ ವಾಮಂಜೂರ್ ಅವರು ನಿಷ್ಠಾವಂತ ರೋಟರ‍್ಯಾಕ್ಟ್ ಸದಸ್ಯರಾಗಿದ್ದು ಚುನಾಯಿತ ಅಧ್ಯಕ್ಷರಾಗಿದ್ದರು. 2006ರಲ್ಲಿ ಆಕಸ್ಮಿಕ ರಸ್ತೆ ಅಪಘಾತದುರಂತದಲ್ಲಿ ವಿಧಿವಶರಾಗಿದ್ದರು. ಅವರ ಸ್ಮರಣಾರ್ಥ ರಸಪ್ರಶ್ನಾ ಕೂಟವನ್ನು ಪ್ರತೀ ವರ್ಷಆಯೋಜಿಸಲಾಗುತ್ತಿದೆ. ಹೆಚ್ಚಿನ ಮಾಹಿತಿಗಾಗಿ 98450 81145 ಸಂಪರ್ಕಿಸಬಹುದು.

ಆಳ್ವಾಸ್ ಪತ್ರಿಕೋದ್ಯಮ ವಿಭಾಗದಲ್ಲಿ ವಿಚಾರಸಂಕಿರಣ

ಮಾಧ್ಯಮ ಉದ್ಯೋಗ: ಕೌಶಲಗಳು ಅವಶ್ಯ



ಮೂಡುಬಿದಿರೆ: ಅರ್ಹ ಕೌಶಲಗಳನ್ನು ಹೊಂದಿದ ವಿದ್ಯಾರ್ಥಿಗಳಿಗೆ ಮಾಧ್ಯಮದಲ್ಲಿ ಔದ್ಯೋಗಿಕ ಅವಕಾಶಗಳು ಹೆಚ್ಚಿವೆ. ಆದರೆ, ಸೂಕ್ತ ಶಿಕ್ಷಣ ಹಾಗೂ ತರಬೇತಿಯನ್ನು ಪಡೆದಿರಬೇಕು ಎಂದು ಆಳ್ವಾಸ್ ಸ್ವಾಯತ್ತ ಕಾಲೇಜಿನ ಪ್ರಾಂಶುಪಾಲ ಡಾ.ಕುರಿಯನ್ ಹೇಳಿದರು.

ಆಳ್ವಾಸ್ ಸ್ವಾಯತ್ತ ಕಾಲೇಜಿನ ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ವಿವಿಧ ಕಾಲೇಜುಗಳ ಪದವಿ ವಿದ್ಯಾರ್ಥಿಗಳಿಗೆ ಹಮ್ಮಿ ಕೊಂಡ 'ಡಿಜಿಟಲ್ ಕಾಲಘಟ್ಟದಲ್ಲಿ ಮಾಧ್ಯಮ' ಎಂಬ ವಿಚಾರಸಂಕಿರಣವನ್ನು ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಪ್ರಸ್ತುತ ಔದ್ಯೋಗಿಕ ಬೇಡಿಕೆಗೆ ಅನುಗುಣವಾದ ಶಿಕ್ಷಣವನ್ನು ಪಡೆದರೆ, ಉದ್ಯೋಗದ ಅವಕಾಶ ಹೆಚ್ಚುತ್ತದೆ. ಆಳ್ವಾಸ್ ಕಾಲೇಜಿನಲ್ಲಿ 'ಮಾಧ್ಯಮ' ಶಿಕ್ಷಣವು ಅತ್ಯುತ್ತಮವಾಗಿದ್ದು, ಪ್ರಾಯೋಗಿಕ ಅವಕಾಶಗಳು ವಿಫುಲವಾಗಿವೆ. ಧನಾತ್ಮಕ ಧೋರಣೆಯನ್ನು ಸೃಜಿಸುವಲ್ಲಿ ಆಳ್ವಾಸ್ ಕೊಡುಗೆ ಅನನ್ಯವಾಗಿದೆ ಎಂದರು.

ಮುದ್ರಣ ಮಾಧ್ಯಮ, ಟೆಲಿವಿಷನ್ ಮಾಧ್ಯಮ, ರೇಡಿಯೊ ಹಾಗೂ ಡಿಜಿಟಲ್ ಮಾಧ್ಯಮದ ಪ್ರಾಯೋಗಿಕ ತರಗತಿಗಳನ್ನು ತಜ್ಞರು ನಡೆಸಿಕೊಟ್ಟರು.

ಸಿದ್ಧಕಟ್ಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬನ್ನಡ್ಕ ವಿಶ್ವವಿದ್ಯಾನಿಲಯ ಕಾಲೇಜು, ಮೂಡುಬಿದಿರೆ ಮಹಾವೀರ ಕಾಲೇಜು, ಕಟೀಲು ಎಸ್‌ಡಿಪಿ ಪ್ರಥಮ ದರ್ಜೆ ಕಾಲೇಜು ಹಾಗೂ ಆಳ್ವಾಸ್ ಕಾಲೇಜಿನ ವಿದ್ಯಾರ್ಥಿಗಳು ವಿಚಾರಸಂಕಿರಣದಲ್ಲಿ ಪಾಲ್ಗೊಂಡರು.

ಆಳ್ವಾಸ್ ಸ್ವಾಯತ್ತ ಕಾಲೇಜಿನ ಪರೀಕ್ಷಾಂಗ ಕುಲಸಚಿವ ಡಾ. ನಾರಾಯಣ ಶೆಟ್ಟಿ ಮಾತನಾಡಿ, ಡಿಜಿಟಲ್ ವೇದಿಕೆಗೆ ವಿದ್ಯಾರ್ಥಿಗಳು ಅಪ್‌ಡೇಟ್ ಆಗಬೇಕಾಗಿರುವುದು ಇಂದಿನ ಅನಿವಾರ್ಯತೆ. ಅಂತಹ ಮೂಲಸೌಕರ್ಯ ಹೊಂದಿದ ಕಾಲೇಜಿನಲ್ಲಿ ಶಿಕ್ಷಣ ಪಡೆದೆ, ಉದ್ಯೋಗದ ಸಾಧ್ಯತೆಗಳು ಹೆಚ್ಚು ಎಂದರು.

ವಿಭಾಗದ ಮುಖ್ಯಸ್ಥ ಪ್ರಸಾದ್ ಶೆಟ್ಟಿ ಮಾತನಾಡಿ, ಸಮಕಾಲೀನ ಮಾಧ್ಯಮದ ಅವಶ್ಯಕತೆಗೆ ಅನುಗುಣವಾಗಿ ತರಬೇತಿ ಪಡೆಯಲು ಇರುವ ಅವಕಾಶಗಳ ಬಗ್ಗೆ ತಿಳಿಸಿದರು. ಕಾರ್ಯಕ್ರಮ ಸಂಯೋಜಕ ಹರ್ಷವರ್ಧನ ಪಿ.ಆರ್. ಪ್ರಾಸ್ತಾವಿಕವಾಗಿ ಮಾತನಾಡಿ, ವಿಚಾರಸಂಕಿರಣ ರೂಪುರೇಷೆ ಹಾಗೂ ಅವಶ್ಯಕತೆ ಬಗ್ಗೆ ತಿಳಿಸಿದರು.

ವಿಭಾಗದ ಪ್ರಾಧ್ಯಾಪಕರಾದ ಡಾ.ಶ್ರೀನಿವಾಸ ಹೊಡೆಯಾಲ, ದೀಕ್ಷಿತಾ, ಅಕ್ಷಯ್ ಕುಮಾರ್, ಹನ್ನಾ ಫಾತಿಮಾ ತರಬೇತಿ ನೀಡಿದರು. ವಿದ್ಯಾರ್ಥಿನಿಯರಾದ ರಕ್ಷಿತಾ ಚಪ್ಪರಿಕೆ ಮತ್ತು ಪ್ರೇರಣಾ ಕಾರ್ಯಕ್ರಮ ನಿರೂಪಿಸಿದರು.

ಇಲ್ಲಿ ಮುಖ್ಯ ಪೈಪ್‌ಲೈನ್‌ನಿಂದಲೇ ನೀರು | ಪಂಪ್‌ವೆಲ್‌ನಲ್ಲಿ ಕೃತಕ ನೆರೆಗೆ ಜನರು ಹೈರಾಣ

ಕಂಕನಾಡಿ ವೆಲೆನ್ಸಿಯಾದಲ್ಲಿ ನೀರು ಪೂರೈಕೆ ಯಥೇಚ್ಛ

ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ನಗರದ ಹೆಬ್ಬಾಗಿಲು ಎನಿಸಿಕೊಂಡುವ ಪಂಪ್‌ವೆಲ್ ಸುತ್ತಮುತ್ತ ವ್ಯಾಪಿಸಿಕೊಂಡಿರುವ ಕಂಕನಾಡಿ ವೆಲೆನ್ಸಿಯಾ ವಾರ್ಡ್‌ನಲ್ಲಿ ನೀರಿನ ಪೂರೈಕೆ ಯಥೇಚ್ಛವಾಗಿದೆ.

ಪಂಪ್‌ವೆಲ್, ಕಟಿತಾನಿಯೋ, ರೆಡ್ ಬಿಲ್ಡಿಂಗ್, ಗರೋಡಿ, ನಾಗುರಿ, ಗುಡ್ಡೆತೋಟ, ಅಳಪೆ, ಮಂಜಳಿಕೆ, ಮಜಲು, ಉಜ್ಜೋಡಿ, ವೆಲೆನ್ಸಿಯಾ ಚರ್ಚ್ ಹಾಲ್ ರೋಡ್, ಸುವರ್ಣಲೇನ್, ಬಾಲಿಕಾಶ್ರಮದ ಒಂದು ಭಾಗ ಒಳಗೊಂಡಿರುವ ಈ ವಾರ್ಡ್‌ನ ಬಹುತೇಕ ಪ್ರದೇಶಗಳಿಗೆ ತುಂಬೆಯಿಂದ ನೀರು ಪೂರೈಸುವ ಮುಖ್ಯ ಕೊಳವೆಯಿಂದ ನೀರು ಒದಗಿಸಲಾಗುತ್ತಿದೆ. ಮುಖ್ಯ ಪೈಪ್‌ಲೈನ್‌ನಿಂದ ದಿನದ 24 ಗಂಟೆಯೂ ನೀರು ಸರಬರಾಜು ಆಗುವ ಕಾರಣ ಈ ವಾರ್ಡ್‌ನಲ್ಲಿ ನೀರಿನ ಸಮಸ್ಯೆ ಕಾಡಿಲ್ಲ.

ಗರೋಡಿ ಬಳಿ, ವೆಲೆನ್ಸಿಯಾ ಹಾಲ್ ಹಿಂಭಾಗ ಕೆಲವೊಮ್ಮೆ ನೀರಿನ ಕೊರತೆ ಉಂಟಾಗುತ್ತಿದೆ. ವೆಲೆನ್ಸಿಯಾ ಪ್ರದೇಶಕ್ಕೆ ಬೆಂದೂರ್‌ವೆಲ್ ಟ್ಯಾಂಕ್‌ನಿಂದ ಮಧ್ಯಾಹ್ನ 2.30ರಿಂದ ರಾತ್ರಿವರೆಗೆ ನೀರು ಪೂರೈಕೆ ಆಗುತ್ತಿದೆ. ಮಜಲು ಪರಿಸರಕ್ಕೆ ಮಧ್ಯಾಹ್ನ 3ರಿಂದ ರಾತ್ರಿವರೆಗೆ ಪಡೀಲ್ ಟ್ಯಾಂಕ್‌ನಿಂದ ನೀರು ಒದಗಿಸಲಾಗುತ್ತಿದೆ. ಈ ವಾರ್ಡ್‌ನ ಉಳಿದ ಎಲ್ಲ ಪ್ರದೇಶಗಳಿಗೆ ಅಂದರೆ ಅಳಪೆಯಿಂದ ಪಂಪ್‌ವೆಲ್‌ವರೆಗೆ ತುಂಬೆಯಿಂದ ಆಗಮಿಸುವ ಮುಖ್ಯ ಕೊಳವೆಯಿಂದ ನೀರು ನೀಡಲಾಗುತ್ತಿದೆ. ಮೈನ್ ಲೈನ್‌ನಿಂದ ದಿನದ 24 ಗಂಟೆ ಹೇರಳವಾಗಿ ನೀರು ಸಿಗುತ್ತಿದೆ ಎನ್ನುತ್ತಾರೆ ಸ್ಥಳೀಯರು.

ಕಂಕನಾಡಿ ವೆಲೆನ್ಸಿಯಾ ವಾರ್ಡ್‌ನಲ್ಲಿ ಈ ಬೇಸಿಗೆಯಲ್ಲಿ ಇದುವರೆಗೆ ಟ್ಯಾಂಕರ್ ಮೂಲಕ ನೀರು ಒದಗಿಸುವ ಸನ್ನಿವೇಶ ಸೃಷ್ಟಿಯಾಗಿಲ್ಲ. ಈ ವಾರ್ಡ್‌ನಲ್ಲಿ ಸರಕಾರಿ ಬಾವಿ, ಕೊಳವೆಬಾವಿಗಳು ಇಲ್ಲ.

ಕಂಕನಾಡಿ ವೆಲೆನ್ಸಿಯಾ ವಾರ್ಡ್‌ನಲ್ಲಿ ಜಲಸಿರಿ ಯೋಜನೆ ಕಾಮಗಾರಿಗಳು ಶೇ.70ರಷ್ಟು ಪೂರ್ಣಗೊಂಡಿವೆ. ಪಂಪ್‌ವೆಲ್‌ನಿಂದ ಪಡೀಲು ಹಾಗೂ ಪಂಪ್‌ವೆಲ್‌ನಿಂದ ಎಕ್ಕೂರುವರೆಗೆ ಮುಖ್ಯರಸ್ತೆ ಬದಿಯಲ್ಲಿ ಜಲಸಿರಿ ಪೈಪ್‌ಲೈನ್ ಹಾದುಹೋಗಿದೆ. ಕೆಲವೆಡೆ ಜಲಸಿರಿ ಪೈಪ್‌ಲೈನ್ ಮೂಲಕ ನೀರಿನ ಸಂಪರ್ಕ ಒದಗಿಸಲಾಗಿದೆ.



ಪಂಪ್‌ವೆಲ್- ಕಂಕನಾಡಿ ರಸ್ತೆ ಲೋಕೋಪಯೋಗಿ ಇಲಾಖೆ ಮೂಲಕ ಕಾಂಕ್ರೀಟೀಕರಣಗೊಳ್ಳುತ್ತಿದೆ.

ಕೃತಕ ನೆರೆ ಸಮಸ್ಯೆ

ಮಳೆಗಾಲದಲ್ಲಿ ಒಂದೆರಡು ಗಂಟೆಗಳ ಕಾಲ ನಿರಂತರ ಮಳೆ ಬಂತೆಂದರೆ ಪಂಪ್‌ವೆಲ್‌ನಲ್ಲಿ ಕೃತಕ ನೆರೆ ಸೃಷ್ಟಿಯಾಗಿ ಪಂಪ್‌ವೆಲ್ ಮೇಲ್ಸೇತುವೆಯ ತಳಭಾಗ ಸರೋವರದಂತಾಗುತ್ತದೆ. ನೆರೆ ನೀರಿನ ನಡುವೆ ವಾಹನಗಳು ತೆರಳಬೇಕಾದ ಸಂದಿಗ್ಧ ಸ್ಥಿತಿ ಉಂಟಾಗುತ್ತದೆ. ನೀರಿನ ಮಟ್ಟ ಹೆಚ್ಚಳಗೊಂಡು ಕೆಲವೊಮ್ಮೆ ವಾಹನ ಸಂಚಾರ ಸ್ಥಗಿತಗೊಳ್ಳುತ್ತದೆ. ಪಂಪ್‌ವೆಲ್‌ನಲ್ಲಿ ಕೃತಕ ನೆರೆ ಸೃಷ್ಟಿಯಾದ ಕ್ಷಣಾರ್ಧದಲ್ಲಿ ಮೊಬೈಲ್ ಮೂಲಕ ನೆರೆಯ ದೃಶ್ಯಗಳು ಊರಿಡೀ ವ್ಯಾಪಿಸುತ್ತದೆ. ಪಂಪ್‌ವೆಲ್ ತಗ್ಗು ಪ್ರದೇಶವಾಗಿದ್ದು, ಇಲ್ಲಿನ ತೋಡು ಅಗಲ ಕಿರಿದಾಗಿದೆ. ಸುತ್ತಲಿನ ಎತ್ತರ ಪ್ರದೇಶಗಳ ಮಳೆನೀರು ಪಂಪ್‌ವೆಲ್ ಕಡೆಗೆ ಹರಿದು ಬಂದು ಶೇಖರಣೆಗೊಂಡು ಇಲ್ಲಿ ನೆರೆ ಸೃಷ್ಟಿಯಾಗುತ್ತದೆ.

ಯುಜಿಡಿ ಓವರ್‌ಫ್ಲೋ

ವೆಲೆನ್ಸಿಯಾ ಸುವರ್ಣಲೇನ್, ನೆಕ್ಕರೆಮಾರ್ ಪ್ರದೇಶದಲ್ಲಿ ಡ್ರೈನೇಜ್ ಸಮಸ್ಯೆ ಇದೆ. ಇಲ್ಲಿ ಡ್ರೈನೇಜ್ ಓವರ್‌ಫ್ಲೋ ಆಗಿ ರಾಜಕಾಲುವೆಯಲ್ಲಿ ಕೊಳಚೆ ನೀರು ಹರಿಯುತ್ತಿದೆ. ನೆಕ್ಕರೆಮಾರ್‌ನಲ್ಲಿ ಮಳೆಗಾಲದೊಳಗೆ ಡ್ರೈನೇಜ್ ಕಾಮಗಾರಿ ನಡೆಯದಿದ್ದರೆ ಮಳೆಗಾಲದಲ್ಲಿ ಕೊಳಚೆ ನೀರು ಮನೆಗಳಿಗೆ ನುಗ್ಗುವ ಆತಂಕವಿದೆ.

“ಪಂಪ್‌ವೆಲ್‌ನಲ್ಲಿ ಮಳೆಗಾಲದಲ್ಲಿ ಕೃತಕ ನೆರೆಯಿಂದ ಜನರಿಗೆ ಭಾರಿ ಸಮಸ್ಯೆ ಉಂಟಾಗುತ್ತಿದೆ. 6-7 ವರ್ಷದ ಹಿಂದೆ ಇಲ್ಲಿ ಕೃತಕ ನೆರೆ ಸಮಸ್ಯೆ ಇರಲಿಲ್ಲ. ಫ್ಲೈಓವರ್, ಅಂಡರ್‌ಪಾಸ್ ನಿರ್ಮಾಣಗೊಂಡ ಬಳಿಕ ಸಮಸ್ಯೆ ಉಂಟಾಗಿದೆ. ನಮ್ಮ ಮನೆ 1979ರಲ್ಲಿ ನಿರ್ಮಾಣಗೊಂಡಿದ್ದು, ಕೃತಕ ನೆರೆ ಸಮಸ್ಯೆ ಆರಂಭಗೊಂಡ ಬಳಿಕ ಮನೆಗೆ ನೀರು ನುಗ್ಗುತ್ತಿದೆ. ಮನೆಯೊಳಗೆ ಮೂರು ಅಡಿ ನೀರು ನಿಂತು ಮನೆಯ ಪೀಠೋಪಕರಣಗಳು ಹಾಳಾಗುತ್ತಿವೆ. ಇದರಿಂದಾಗಿ ಮಳೆಗಾಲದಲ್ಲಿ ನಾವು ಬಾಡಿಗೆ ಮನೆಯಲ್ಲಿ ಇರಬೇಕಾದ ಸ್ಥಿತಿ ಒದಗಿದೆ. ಕೃತಕ ನೆರೆ ಸಮಸ್ಯೆಗೆ ಪರಿಹಾರ ಕಲ್ಪಿಸುವಂತೆ ಮಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಸ್ಪಂದನೆ ಇಲ್ಲ. 'ನಿಮ್ಮ ಮನೆಯನ್ನು ತಗ್ಗು ಪ್ರದೇಶದಲ್ಲಿ ನಿರ್ಮಿಸಿದ್ದೀರಿ' ಎಂದು ಮನಪಾ ಇಂಜಿನಿಯರ್‌ಗಳು ಹೇಳುತ್ತಿದ್ದಾರೆ. ನಮ್ಮ ಮನೆ 1979ರಲ್ಲಿ ನಿರ್ಮಿಸಿದ್ದು, ಕೃತಕ ನೆರೆ ಇತ್ತೀಚಿನ ಸಮಸ್ಯೆ. ಪಂಪ್‌ವೆಲ್‌ನ ಕೃತಕ ನೆರೆ ಸಮಸ್ಯೆಗೆ ಮನಪಾ ಅಧಿಕಾರಿಗಳು ಪರಿಹಾರ ಕಲ್ಪಿಸಬೇಕು.

■ ದಿನೇಶ್‌ಚಂದ್ರ, ಪಂಪ್‌ವೆಲ್ ನಿವಾಸಿ



“ನಮ್ಮ ವಾರ್ಡ್‌ಗೆ ಮೈನ್ ಲೈನ್‌ನಿಂದ ನೀರಿನ ಸಂಪರ್ಕ ಇರುವ ಕಾರಣ ನೀರಿನ ಸಮಸ್ಯೆ ಇಲ್ಲ. ಗರೋಡಿ ಬಳಿ ತಿಂಗಳ ಹಿಂದೆ ನೀರಿನ ಸಮಸ್ಯೆ ಕಾಣಿಸಿಕೊಂಡಿತ್ತು. ಪೈಪ್‌ಲೈನ್‌ನಲ್ಲಿ ಉಂಟಾದ ತೊಂದರೆ ಈಗ ಬಗೆಹರಿದಿದೆ. ಪಂಪ್‌ವೆಲ್‌ನಲ್ಲಿ ಕೃತಕ ನೆರೆ ತಡೆಗೆ ಹಲವು ಕ್ರಮ ಕೈಗೊಳ್ಳಲಾಗಿದೆ. ಪಂಪ್‌ವೆಲ್ ಬಳಿ ಎರಡು ಅಡಿಗಳಷ್ಟು ಇದ್ದ ತೋಡನ್ನು 10 ಅಡಿಗಳಿಗೆ ವಿಸ್ತರಣೆ ಮಾಡಲಾಗಿದೆ. ಪಂಪ್‌ವೆಲ್ ಬಳಿ ನಂತೂರು ಕಡೆಯಿಂದ ಆಗಮಿಸುವ ಸರ್ವಿಸ್ ರಸ್ತೆಯಲ್ಲಿರುವ ಸೇತುವೆಯನ್ನು ಎತ್ತರಿಸಲು 45 ಲಕ್ಷ ರೂ. ವೆಚ್ಚದ ಟೆಂಡರ್ ಆಗಿದೆ. ಪಂಪ್‌ವೆಲ್- ಕಂಕನಾಡಿ ರಸ್ತೆ ಲೋಕೋಪಯೋಗಿ ಇಲಾಖೆ ಮೂಲಕ ಕಾಂಕ್ರೀಟೀಕರಣಗೊಳ್ಳುತ್ತಿದೆ. ಪಂಪ್‌ವೆಲ್- ಹಳೆಯ ಪೋಸ್ಟ್ ಆಫೀಸ್ ರಸ್ತೆ ಅಗಲೀಕರಣ ಕೆಲಸ ಪ್ರಾರಂಭವಾಗಿದೆ. ಸುವರ್ಣ ಲೇನ್‌ನಿಂದ ಉಜ್ಜೋಡಿವರೆಗೆ ಡ್ರೈನೇಜ್ ಕೆಲಸ ಆಗಿದ್ದು, ನೆಕ್ಕರೆಮಾರ್‌ನಲ್ಲಿ ಡ್ರೈನೇಜ್ ಕಾಮಗಾರಿ ಟೆಂಡರ್ ಆಗಿದೆ. ಪಂಪ್‌ವೆಲ್- ಪಡೀಲ್ ನಡುವೆ ರಸ್ತೆಯನ್ನು ಸ್ಮಾರ್ಟ್ ಸಿಟಿ ಯೋಜನೆಯಡಿ ವಿಸ್ತರಣೆ, ಕಾಂಕ್ರೀಟ್ ಮೂಲಕ ಅಭಿವೃದ್ಧಿಪಡಿಸಲಾಗಿದೆ.ಇಲ್ಲಿ ಪೈಪ್‌ಲೈನ್, ಡ್ರೈನೇಜ್ ಕಾಮಗಾರಿ ಟೆಂಡರ್ ಹಂತದಲ್ಲಿದೆ. ಪಂಪ್‌ವೆಲ್ -ಪಡೀಲ್ ರಸ್ತೆಗೆ 'ಕಂಕನಾಡಿ ಗರೋಡಿ ಕೋಟಿ -ಚೆನ್ನಯ ರಸ್ತೆ' ಎಂದು ಹೆಸರಿಡಲಾಗಿದೆ. ಪಂಪ್‌ವೆಲ್ - ಎಕ್ಕೂರು ಸರ್ವಿಸ್ ರಸ್ತೆಗೆ ರಾಣಿ ಅಬ್ಬಕ್ಕ ರಸ್ತೆ ಎಂದು ನಾಮಕರಣ ಮಾಡಲಾಗಿದೆ. ಪಂಪ್‌ವೆಲ್‌ನಲ್ಲಿ ಕಲಶ ಮರುಸ್ಥಾಪನೆ ಮಾಡಲಾಗಿದೆ.

■ ಸಂದೀಪ್ ಗರೋಡಿ, ಕಂಕನಾಡಿ ವೆಲೆನ್ಸಿಯಾ ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್

ಮಂಗಳೂರು
ಗುರುವಾರ, 30 ಏಪ್ರಿಲ್ 2026
ಸಂಪುಟ 48, ಸಂಚಿಕೆ 42 ಪುಟಗಳು 12+8
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital
ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಅಭಿವೃದ್ಧಿಗೆ ಹೊಸ ಜೀವನಾಡಿ: ಮೋದಿ | ೦೯ ತಿರುಪತಿಗೆ ನಂದಿನಿ ತುಪ್ಪ | ೦೫ ಅಯೋಧ್ಯೆ ಶಿವದೇಗುಲ ಮೇಲೆ ಧ್ವಜಾರೋಹಣ | ೦೯

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಚಿತ್ರೆ

ದಿನದ ಮಾತು

ಚಿತ್ತಶುದ್ಧಿ ಇಲ್ಲದವರಿಗೆ ಹಿತೋಕ್ತಿ ಹೇಳಿದರೇನು ಪ್ರಯೋಜನ?

▲ ಲೋಕೋಕ್ತಿ

ಗೂಂಡಾ ರಾಜ್‌ಗೆ ಹೆದರದ ಬಂಗಾಳ ಮತದಾರ

ಗುರುತರ

◆ ಸೋಮಶೇಖರ ಸಿ.ಜೆ.

◆ ಪುಟ ೬

ಕಿರುಸುದ್ದಿ

ಮರವಂತೆ ಬೀಚ್ ಬಳಿ ಭೀಕರ ಅಪಘಾತ: ಮೂವರ ದುರ್ಮರಣ

◆ **ಕುಂದಾಪುರ :** ಕಾಲೇಜು ವಿದ್ಯಾರ್ಥಿಗಳಿದ್ದ ಬಸ್ಸೊಂದು ರಸ್ತೆ ಬದಿ ನಿಂತಿದ್ದ ಟ್ಯಾಂಕರ್ ಮತ್ತು ಲಾರಿಗೆ ಡಿಕ್ಕಿ ಹೊಡೆದ ಪರಿಣಾಮ ಬಸ್ಸಿನಲ್ಲಿದ್ದ ಮೂವರು ಸಾವನ್ನಪ್ಪಿದ ದಾರುಣ ಘಟನೆ ತ್ರಾಸಿ ಸಮೀಪದ ಮರವಂತೆ ಬೀಚ್ ಬಳಿ ಬುಧವಾರ ಮಧ್ಯಾಹ್ನ ವೇಳೆ ನಡೆದಿದೆ.

ರಘು ಯಾನೆ ಉಮೇಶ, ರಂಗನಾಥ ಮತ್ತು ಹೇಮಂತ್ ಮೃತಪಟ್ಟ ದುರ್ದೈವಿಗಳು.

ಶಿವಮೊಗ್ಗ ಜಿಲ್ಲೆಯ ಶಂಕರಘಟ್ಟದ ಕುವೆಂಪು ಯೂನಿವರ್ ಸಿಟಿಯ ರಂಬಾಪುರಿ ಕಾಲೇಜಿನ ಅಂತಿಮ ವರ್ಷದ ಬಿಕಾಂ ವಿದ್ಯಾರ್ಥಿಗಳು ಪ್ರವಾಸದ ನಿಮಿತ್ತ ಭಾನುವಾರ ಹೊರಟಿದ್ದು, ದಾಂಡೇಲಿ, ಹೊನ್ನಾವರ ಕಡೆಯಿಂದ ಪ್ರವಾಸ ಮುಗಿಸಿ, ತ್ರಾಸಿ ಮರವಂತೆ ಬೀಚ್ ಬಳಿ ರಾ.ಹೆ.66ರಲ್ಲಿ ಈ ದುರ್ಘಟನೆ ಸಂಭವಿಸಿದೆ.

◆ ಪುಟ ೧೨

ನಿಷ್ಕ್ರಿಯ ಇಪಿಎಫ್ ಖಾತೆ ಸಕ್ರಿಯಕ್ಕಾಗಿ ಇ-ಪ್ರಾಪ್ತಿ

◆ ಪುಟ ೯

ಭಾರತಕ್ಕೆ ಇಂಧನ ರಫ್ತು ಹೆಚ್ಚಳಕ್ಕೆ ಹಾದಿ ಸುಗಮ

◆ ಪುಟ ೯

ಮಾಜಿ ಅಪರಾಧಿ ಈಗ ಹೈಕೋರ್ಟ್ ವಕೀಲ!

◆ ಪುಟ ೯

ಸುಧಾರಣೆ ಹೆಸರಿನಲ್ಲಿ ಧರ್ಮ ಕುಗ್ಗಿಸಲಾಗದು

◆ ಪುಟ ೯

ಅಡಿಕೆ ಕೃಷಿ ಸಮಸ್ಯೆ ಪರಿಹಾರಕ್ಕೆ ಸಭೆ

◆ ಪುಟ ೧೦

653 ಕೋಟಿ ರೂ. ಮೌಲ್ಯದ ಡ್ರಗ್ಸ್ ಪತ್ತೆ

◆ ಪುಟ ೫

ಕುವೆಂಪು ವಿವಿಯಲ್ಲಿ ಎನ್‌ಎಸ್‌ಯುಐ ಗದ್ದಲ

◆ ಪುಟ ೫

ಮತದಾನೋತ್ತರ ಸಮೀಕ್ಷೆ | ಅಸ್ಸಾಂನಲ್ಲಿ ಮತ್ತೆ ಬಿಜೆಪಿ

ತ.ನಾಡಿನಲ್ಲಿ ಡಿಎಂಕೆ, ಕೇರಳದಲ್ಲಿ ಯುಡಿಎಫ್ ಆಡಳಿತ?

ಬಿಜೆಪಿಗೆ ಬಂಗಾಳ?

◆ **ಹೊಸದಿಲ್ಲಿ:** ಇತ್ತೀಚೆಗೆ ನಡೆದ ಐದು ರಾಜ್ಯಗಳ ವಿಧಾನಸಭೆ ಚುನಾವಣೆಯ ಮತದಾನೋತ್ತರ ಸಮೀಕ್ಷೆಗಳು ಹಲವು ಕುತೂಹಲಕರ ಅಂದಾಜುಗಳನ್ನು ನೀಡಿವೆ. ಬಹುತೇಕ ಸಮೀಕ್ಷೆಗಳು ಅಸ್ಸಾಂನಲ್ಲಿ ಬಿಜೆಪಿ ಭರ್ಜರಿ ಜಯ ಸಾಧಿಸುವ ಸಾಧ್ಯತೆಯನ್ನು ಸೂಚಿಸುತ್ತಿದ್ದು, ಪಶ್ಚಿಮ ಬಂಗಾಳದಲ್ಲಿ ಆಡಳಿತಾರೂಢ ಟಿಎಂಸಿಗೆ ಬಿಜೆಪಿ ಕಠಿಣ ಸ್ಪರ್ಧೆ ನೀಡಲಿದ್ದು, ಬಿಜೆಪಿ ಅಧಿಕಾರಕ್ಕೆ ಬರುವ ಸಾಧ್ಯತೆ ಇದೆ ಎಂದು ಹೇಳಿವೆ. ಅದೇ ವೇಳೆ ತಮಿಳುನಾಡಿನಲ್ಲಿ ಡಿಎಂಕೆ ಸರ್ಕಾರ ಮತ್ತೆ ಅಧಿಕಾರಕ್ಕೆ ಬರಬಹುದು ಎಂದು ಅಂದಾಜಿಸಲಾಗಿದೆ. ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ 10 ವರ್ಷಗಳ ನಂತರ ಮತ್ತೆ ಅಧಿಕಾರಕ್ಕೆ ಬರಲಿದೆ ಎಂಬ ನಿರೀಕ್ಷೆಯೂ ವ್ಯಕ್ತವಾಗಿದೆ.

ತ.ನಾಡಿನಲ್ಲಿ ಡಿಎಂಕೆ ಮುನ್ನಡೆ

ತಮಿಳುನಾಡಿನಲ್ಲಿ ಡಿಎಂಕೆ ಮೈತ್ರಿ ಮತ್ತೆ ಅಧಿಕಾರಕ್ಕೆ ಬರಲಿದೆ ಎಂಬ ನಿರೀಕ್ಷೆ ಇದೆ.

- ಪೀಪಲ್ಸ್ ಪಲ್ಸ್ ಪ್ರಕಾರ ಡಿಎಂಕೆ ಮೈತ್ರಿಗೆ 125-145 ಸ್ಥಾನಗಳು, ಎಐಎಡಿಎಂಕೆ-ಬಿಜೆಪಿ ಮೈತ್ರಿಗೆ 65-80 ಸ್ಥಾನಗಳು ಸಿಗಬಹುದು. ಮ್ಯಾಟ್ರಿಜ್ ಡಿಎಂಕೆಗೆ 122-132 ಸ್ಥಾನಗಳನ್ನು ಅಂದಾಜಿಸಿದೆ.
- ಒಟ್ಟು 234 ಸ್ಥಾನಗಳಿರುವ ತಮಿಳುನಾಡಿನಲ್ಲಿ ಬಹುಮತಕ್ಕೆ 118 ಸ್ಥಾನಗಳು ಅಗತ್ಯ.
- ನಟ ವಿಜಯ್ ನಿರೀಕ್ಷೆ ಹುಸಿ: ಈ ಚುನಾವಣೆಯಲ್ಲಿ ನಟ ವಿಜಯ್ ಅವರ ಟಿವಿಕೆ ಪಕ್ಷವು ಕಿಂಗ್‌ನ್ ಆಗಲಿದೆ ಎಂದು ಅಂದಾಜಿಸಲಾಗಿತ್ತು. ಆದರೆ, ಹೆಚ್ಚಿನ ಸಮೀಕ್ಷೆಗಳು ಟಿವಿಕೆಗೆ 2 ರಿಂದ 10 ಸ್ಥಾನಗಳು, 5-8 ಪ್ರತಿಶತ ಮತ ಪಡೆಯಲಿದೆ ಎಂದು ಅಂದಾಜಿಸಿವೆ. ಆಕ್ಸಿಸ್- ಮೈ ಇಂಡಿಯಾ ಸಮೀಕ್ಷೆಗಳು ಮಾತ್ರ ಟಿವಿಕೆ ಪಕ್ಷವು 98-120 ಸ್ಥಾನ ಪಡೆಯಲಿದೆ ಎಂದು ಭವಿಷ್ಯ ನುಡಿದಿದೆ.

ಅಸ್ಸಾಂನಲ್ಲಿ ಬಿಜೆಪಿ ಬಲಿಷ್ಠ

ಅಸ್ಸಾಂನಲ್ಲಿ ಬಿಜೆಪಿ ಮತ್ತು ಅದರ ಮೈತ್ರಿಕೂಟಕ್ಕೆ ಭಾರೀ ಗೆಲುವು ಸಿಗಲಿದೆ ಎಂದು ವಿವಿಧ ಸಮೀಕ್ಷೆಗಳು ಸೂಚಿಸಿವೆ.

- ಆಕ್ಸಿಸ್ ಮೈ ಇಂಡಿಯಾ ಸಮೀಕ್ಷೆ ಬಿಜೆಪಿ ಮೈತ್ರಿಗೆ 88-100 ಸ್ಥಾನಗಳನ್ನು ನೀಡಿದರೆ, ಕಾಂಗ್ರೆಸ್ ಮೈತ್ರಿಗೆ 24-36 ಸ್ಥಾನ ಸಿಗಲಿವೆ ಎಂದು ಅಂದಾಜಿಸಿದೆ.
- ಪೀಪಲ್ಸ್ ಪಲ್ಸ್ 68-72 ಸ್ಥಾನಗಳನ್ನು ಎನ್‌ಡಿಎಗೆ ಮತ್ತು 22-26 ಸ್ಥಾನಗಳನ್ನು ಕಾಂಗ್ರೆಸ್ ಮೈತ್ರಿಗೆ ನೀಡಿದೆ.
- ಮ್ಯಾಟ್ರಿಜ್ ಸಮೀಕ್ಷೆಯ ಪ್ರಕಾರ ಎನ್‌ಡಿಎ 85-95 ಸ್ಥಾನಗಳನ್ನು ಗೆಲ್ಲಬಹುದು. ಅಸ್ಸಾಂ ವಿಧಾನಸಭೆಯಲ್ಲಿ ಒಟ್ಟು 126 ಸ್ಥಾನಗಳಿದ್ದು, ಬಹುಮತಕ್ಕೆ 64 ಸ್ಥಾನಗಳು ಅಗತ್ಯ.

ಕೇರಳದಲ್ಲಿ ಯುಡಿಎಫ್ ಮುನ್ನಡೆ ಸಾಧ್ಯತೆ

ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಗೆಲುವು ಸಾಧಿಸುವ ಸಾಧ್ಯತೆ ಇದೆ.

- ಆಕ್ಸಿಸ್ ಮೈ ಇಂಡಿಯಾ 78-90 ಸ್ಥಾನಗಳನ್ನು ಯುಡಿಎಫ್‌ಗೆ, 49-62 ಸ್ಥಾನಗಳನ್ನು ಎಲ್‌ಡಿಎಫ್‌ಗೆ ಮತ್ತು 0-3 ಸ್ಥಾನಗಳನ್ನು ಎನ್‌ಡಿಎಗೆ ನೀಡಿದೆ.
- ಪೀಪಲ್ಸ್ ಪಲ್ಸ್ ಸಹ ಯುಡಿಎಫ್‌ಗೆ 75-85 ಸ್ಥಾನ ಸಿಗಲಿದೆ ಎಂದು ಅಂದಾಜಿಸಿದೆ.
- ಮ್ಯಾಟ್ರಿಜ್ ಪ್ರಕಾರ, ಯುಡಿಎಫ್ 70-75 ಸ್ಥಾನಗಳನ್ನು ಗೆಲ್ಲಬಹುದು. ಕೇರಳದಲ್ಲಿ ಒಟ್ಟು 140 ಸ್ಥಾನಗಳಿದ್ದು, ಬಹುಮತಕ್ಕೆ 71 ಸ್ಥಾನಗಳು ಬೇಕಾಗಿವೆ.

ಪಶ್ಚಿಮ ಬಂಗಾಳದಲ್ಲಿ ತುರುಸಿನ ಸ್ಪರ್ಧೆ

ದಾಖಲೆಯ ಮತದಾನವಾಗಿರುವ ಪಶ್ಚಿಮ ಬಂಗಾಳದಲ್ಲಿ ತುರುಸಿನ ಸ್ಪರ್ಧೆ ಇದೆ.

- ಪೀಪಲ್ಸ್ ಪಲ್ಸ್ ಪ್ರಕಾರ ಟಿಎಂಸಿ 177-187 ಸ್ಥಾನಗಳನ್ನು ಗೆಲ್ಲಬಹುದು, ಬಿಜೆಪಿ 95-110 ಸ್ಥಾನಗಳನ್ನು ಪಡೆಯಬಹುದು.
- ಆದರೆ, ಮ್ಯಾಟ್ರಿಜ್ ಬಿಜೆಪಿ ಮುನ್ನಡೆ ಸಾಧಿಸಬಹುದು ಎಂದು ಹೇಳಿದ್ದು, 146-161 ಸ್ಥಾನಗಳನ್ನು ಅಂದಾಜಿಸಿದೆ. ಪಿ-ಮಾರ್ಕ್ ಕೂಡ ಬಿಜೆಪಿ 150-175 ಸ್ಥಾನಗಳನ್ನು ಪಡೆಯ ಬಹುದು ಎಂದು ಹೇಳಿದೆ. ಬಂಗಾಳದಲ್ಲಿ ಒಟ್ಟು 294 ಸ್ಥಾನಗಳಿದ್ದು, ಬಹುಮತಕ್ಕೆ 148 ಸ್ಥಾನ ಅಗತ್ಯ.

ಪುದುಚೇರಿಯಲ್ಲಿ ಎನ್‌ಡಿಎ ಮುನ್ನಡೆ

ಪುದುಚೇರಿಯಲ್ಲಿ ಎನ್‌ಡಿಎ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದು ಸಮೀಕ್ಷೆಗಳು ಸೂಚಿಸಿವೆ.

- ಆಕ್ಸಿಸ್ ಮೈ ಇಂಡಿಯಾ 16-20 ಸ್ಥಾನಗಳನ್ನು ಎನ್‌ಡಿಎಗೆ ಮತ್ತು 6-8 ಸ್ಥಾನಗಳನ್ನು ಡಿಎಂಕೆ-ಕಾಂಗ್ರೆಸ್ ಮೈತ್ರಿಗೆ ನೀಡಿದೆ.
- 30 ಸ್ಥಾನಗಳಿರುವ ಈ ವಿಧಾನಸಭೆಯಲ್ಲಿ ಸಣ್ಣ ಪಕ್ಷಗಳಿಗೂ ಕೆಲವು ಸ್ಥಾನಗಳು ಸಿಗಬಹುದು.

ಪ.ಬಂಗಾಳದಲ್ಲಿ ಶೇ.92.47 ದಾಖಲೆಯ ಮತದಾನ ◆ ಪುಟ ೯

ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯಲ್ಲಿ ದುರಂತ

ಆಸ್ಪತ್ರೆ ಕಾಂಪೌಂಡ್ ಕುಸಿದು ಏಳು ಸಾವು



◆ **ಬೆಂಗಳೂರು:** ಬುಧವಾರ ಸಂಜೆ ರಾಜಧಾನಿಯಲ್ಲಿ ಸುರಿದ ಭಾರೀ ಮಳೆ ದುರಂತವನ್ನೇ ಸೃಷ್ಟಿಸಿದೆ. ಶಿವಾಜಿನಗರದ ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದ ಪರಿಣಾಮ ಇಬ್ಬರು ಮಕ್ಕಳು ಸೇರಿ ಏಳು ಮಂದಿ ಮೃತಪಟ್ಟಿದ್ದು, ಏಳು ಜನ ಗಾಯಗೊಂಡಿದ್ದಾರೆ.

ಇನ್ನೊಂದು ಪ್ರಕರಣದಲ್ಲಿ ಯಾರಬ್ ನಗರದ ಸೈಯದ್ ಸೂಫಿಯಾನ್ ಎಂಬ ವಿದ್ಯಾರ್ಥಿ ವಿದ್ಯುತ್ ಶಾಕ್ ತಗುಲಿ ಮೃತಪಟ್ಟಿದ್ದು, ಒಟ್ಟು 8 ಜನ ಅಸುನೀಗಿದ್ದಾರೆ.

ಭಾರೀ ಮಳೆ ಸುರಿಯುತ್ತಿದ್ದ ಸಮಯ ಅಂದರೆ ಸಂಜೆ 5ರ ವೇಳೆಗೆ ಕಾಂಪೌಂಡ್ ಕುಸಿದಿದ್ದು, ಮಳೆಯಿಂದ ಪಾರಾಗಲು ಆಶ್ರಯ ಪಡೆದಿದ್ದ ಹಾಗೂ ವ್ಯಾಪಾರ ಮಾಡುತ್ತಿದ್ದವರನ್ನು ಬಲಿ ಪಡೆದಿದೆ. ಬಟ್ಟೆ ವ್ಯಾಪಾರಿ ಮೊಹಮ್ಮದ್ ಅಬ್ದುಲ್ ಹಕ್(52), ಪಾದರಕ್ಷೆ ವ್ಯಾಪಾರಿ ಫಯಾಜ್ ಅಹಮ್ಮದ್ (39), ವಿದ್ಯಾರ್ಥಿನಿ ಮುಸವೀರ್ ಬೇಗಂ(06), ಕೇರಳ ಮೂಲದ ಲತಾ ಕೆ.ಕೆ. (52), ಸ್ಮಿತಾ (47), ಉತ್ತರ ಪ್ರದೇಶ ಮೂಲದ ವ್ಯಾಪಾರಿ ಸಲಾವುದ್ದೀನ್ ಅನ್ಸಾರಿ(36), ಅಸ್ಸಾಂ ಮೂಲದ ಸ್ಟಿಕರಿಂಗ್ ಕೆಲಸಗಾರ ನಸೀಮುಲ್ಲಾ (19) ಮೃತಪಟ್ಟವರು. ➡ಪುಟ ೪

ಕುಸಿದ ಬೌರಿಂಗ್ ಆಸ್ಪತ್ರೆ ಕಾಂಪೌಂಡ್

ಮಳೆಯಿಂದ ರಕ್ಷಣೆ ಪಡೆಯುತ್ತಿದ್ದ ಪಾದಚಾರಿಗಳು, ಬೀದಿಬದಿ ವ್ಯಾಪಾರಿಗಳು ಹಾಗೂ ಪುಟ್ಟ ಮಕ್ಕಳೂ ಇದ್ದರು. ಸಂಜೆ ಸುಮಾರು 5 ಗಂಟೆಯ ಸುಮಾರಿಗೆ ನಗರದಲ್ಲಿ ಗುಡುಗು, ಸಿಡಿಲು ಹಾಗೂ ಆಲಿಕಲ್ಲುಸಹಿತ ಭಾರೀ ಮಳೆ ಆರಂಭವಾಯಿತು. ಮಳೆಯಿಂದ ಬಚಾವಾಗಲು ಹಾಗೂ ಜತೆಯಲ್ಲಿದ್ದ ಮಕ್ಕಳು ನೆನೆಯಬಾರದು ಎಂಬ ಉದ್ದೇಶದಿಂದ ಪಾದಚಾರಿಗಳು ಮತ್ತು ವ್ಯಾಪಾರಿಗಳು ಬೌರಿಂಗ್ ಆಸ್ಪತ್ರೆಯ ಬೃಹತ್ ಕಾಂಪೌಂಡ್ ಗೋಡೆಯ ಆಶ್ರಯ ಪಡೆದಿದ್ದರು. ಆದರೆ, ಸತತ ಮಳೆಯಿಂದಾಗಿ ಗೋಡೆ ಏಕಾಏಕಿ ಕುಸಿದುಬಿದ್ದಿದೆ.

ಮೃತರ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ

◆ ಪುಟ ೪


ವಾರಾಣಸಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ರೋಡ್ ಶೋ

ಕಾಶಿ ವಿಶ್ವನಾಥನಿಗೆ ಮೋದಿ ಪೂಜೆ

◆ **ವಾರಾಣಸಿ:** ಉತ್ತರಪ್ರದೇಶಕ್ಕೆ ತಮ್ಮ ಎರಡು ದಿನಗಳ ಭೇಟಿಯ ದ್ವಿತೀಯ ದಿನವಾದ ಬುಧವಾರ ಬೆಳಗ್ಗೆ ವಾರಾಣಸಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ರೋಡ್ ಶೋ ನಡೆಸಿದರು. ಕಾಶಿ ವಿಶ್ವನಾಥ ದೇವಾಲಯದಲ್ಲಿ ವೇದಮಂತ್ರ ಪಠಣಗಳ ಮಧ್ಯೆ ಶ್ರೀದೇವರಿಗೆ ಪ್ರಧಾನಿ ಮೋದಿ ಪ್ರಾರ್ಥನೆ ಸಲ್ಲಿಸಿದರು.

ವಾರಾಣಸಿಯ ಬನಾರಸ್ ಲೋಕೋಮೋಟಿವ್ ವರ್ಕ್ಸ್(ಬಿಎಲ್ ಡಬ್ಲ್ಯು)ನಿಂದ ಶುರುವಾದ ರೋಡ್ ಶೋ ಲಹರ್‌ತಾರಾ, ಕಛಾಹ್ರಿ, ಅಂಬೇಡ್ಕರ್ ಚೌರಾಹ, ಚೌಕಾಘಾಟ್, ತೆಲಿಯಾಬಾಗ್, ಲಹುರಾಬಿರ್, ಮೈದಾಜಿನ್ ಮಾರ್ಗವಾಗಿ ಕಾಶಿ ವಿಶ್ವನಾಥಧಾಮ್‌ನಲ್ಲಿ ಸಮಾಪನಗೊಂಡಿತು. ಕಾಶಿ ವಿಶ್ವನಾಥ ದೇವಾಲಯದಲ್ಲಿ ಪ್ರಾರ್ಥನೆ ಮುಗಿಸುತ್ತಲೇ ಸ್ಥಳೀಯರು ಪ್ರಧಾನಿ ಮೋದಿ ಅವರನ್ನು ತ್ರಿಶೂಲ, ಡಮರು ಮತ್ತು ಸಾಂಪ್ರದಾಯಿಕ ಉತ್ತರೀಯ ಪಟ್ಟಿ ನೀಡಿ ಸ್ವಾಗತಿಸಿದರು. ಪ್ರತಿಯಾಗಿ ಪ್ರಧಾನಿ ಮೋದಿ ಜನರಿಗೆ ತಮ್ಮ ಅಭಿನಂದನೆಗಳನ್ನು ಸಲ್ಲಿಸಿದರು.

ಹರ ಹರ ಮಹಾದೇವ್... : ಹರ ಹರ ಮಹಾದೇವ್! ಕಾಶಿ ವಿಶ್ವನಾಥ ದೇವರ ದರ್ಶನ ಮತ್ತು ಪೂಜೆ ಸಲ್ಲಿಸುವ ಅವಕಾಶ ದೊರೆತದ್ದು ನನ್ನ ಭಾಗ್ಯ. ➡ಪುಟ ೪



ಎರಡು ವರ್ಷದಿಂದ ಸಿಗದ ಅನುದಾನ: ಸಿಎಂ ಸಿದ್ದರಾಮಯ್ಯ

ಜಲ್ ಜೀವನ್‌ಗಿಲ್ಲ ಕೇಂದ್ರದ ಹಣ

◆ **ಬೆಂಗಳೂರು:** ಜಲ್ ಜೀವನ್ ಯೋಜನೆಗೆ ಕೇಂದ್ರ ಸರ್ಕಾರ ಆಯವ್ಯಯದಲ್ಲಿ ಅನುದಾನ ಹಂಚಿಕೆ ಮಾಡಿದ್ದರೂ ಕಳೆದ 2 ವರ್ಷಗಳಿಂದ ಕರ್ನಾಟಕಕ್ಕೆ ಅನುದಾನ ಬಿಡುಗಡೆ ಮಾಡಿರುವುದಿಲ್ಲ, ಆದರೂ ರಾಜ್ಯ ಸರ್ಕಾರ ಕೇಂದ್ರದ ಪಾಲಿನ ಅನುದಾನವನ್ನು ಭರಿಸಿ, ಯೋಜನೆ ಅನುಷ್ಠಾನ ಮುಂದುವರಿಯುವಂತೆ ನೋಡಿಕೊಂಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಗೃಹಕಚೇರಿ ಕೃಷ್ಣಾದಲ್ಲಿ ಬುಧವಾರ ಕೇಂದ್ರ ಜಲಶಕ್ತಿ ಸಚಿವಾಲಯ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಜಲ್ ಜೀವನ್ ಮಿಷನ್ 2.0 ಸಂಬಂಧಿಸಿದ ತಿಳುವಳಿಕೆ ಪತ್ರಕ್ಕೆ ಸಹಿ ಹಾಕುವ ಕುರಿತು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್ ಪಾಟೀಲ್ ನೇತೃತ್ವದಲ್ಲಿ ನಡೆದ ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಮಾತನಾಡಿದರು. ➡ಪುಟ ೪



ಜಲ್ ಜೀವನ್ ಮಿಷನ್ ಯೋಜನೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ಕಾಲ ಮಿತಿ ಯೊಳಗೆ ಪೂರ್ಣಗೊಳಿಸಲು ಕರ್ನಾಟಕ ಸಂಪೂರ್ಣವಾಗಿ ಬದ್ಧವಾಗಿದೆ. ಮುಂಗಡ ವೆಚ್ಚದ ಮರುಪಾವತಿಗಳು ಸೇರಿದಂತೆ ಬಾಕಿಯಿರುವ ಎಲ್ಲಾ ಅನುದಾನವನ್ನು ಕೇಂದ್ರ ಸರ್ಕಾರ ಶೀಘ್ರವೇ ಬಿಡುಗಡೆ ಮಾಡಬೇಕು.

■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಮೇ 20ರಿಂದ ಮುಷ್ಕರ

◆ **ಬೆಂಗಳೂರು:** ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ನಡೆದ ಸಾರಿಗೆ ನೌಕರರ ಸಂಧಾನ ಸಭೆ ವಿಫಲವಾಗಿದ್ದು, ಈ ಹಿನ್ನಲೆಯಲ್ಲಿ ಸಾರಿಗೆ ನೌಕರರು ಮೇ 20ರಿಂದ ಮುಷ್ಕರ ನಡೆಸಲು ತೀರ್ಮಾನಿಸಿದ್ದಾರೆ. ಶಾಂತಿನಗರದ ಸಾರಿಗೆ ಇಲಾಖೆಯ ಪ್ರಧಾನ ಕಚೇರಿಯಲ್ಲಿ ಬುಧವಾರ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಾರಿಗೆ ನೌಕರರ ಬೇಡಿಕೆಯನ್ನು ಆಲಿಸಿ, ನಿಮ್ಮ ಅಹವಾಲನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಆದಷ್ಟು ತೀರ್ಮಾನ ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ.ಸರ್ಕಾರಕ್ಕೆ ಸಾರಿಗೆ ನೌಕರರ ಬಗ್ಗೆ ನಿಜವಾದ ಕಾಳಜಿ ಇದ್ದೇ ಇದೆ. ಸಾರಿಗೆ ನೌಕರರಿಗೆ ನಾಲ್ಕು ವರ್ಷ ಮೊದಲೇ 7ನೇ ವೇತನ ಆಯೋಗ ನೇಮಿಸಿ ಶೇ.27.5 ವೇತನ ಹೆಚ್ಚಳ ಘೋಷಿಸಿರುವ ರಾಜ್ಯ ಸರ್ಕಾರವು ಸಾರಿಗೆ ನೌಕರರ ವಿಷಯದಲ್ಲಿ ತಾರತಮ್ಯ ಧೋರಣೆ ಅನುಸರಿಸುತ್ತಿರುವುದು ಸಾರಿಗೆ ನೌಕರರ ಆಕ್ರೋಶಕ್ಕೆ ಕಾರಣವಾಗಿದೆ. ➡ಪುಟ ೪

ರಾಮಲಿಂಗಾರೆಡ್ಡಿ ನೇತೃತ್ವದ ಸಂಧಾನ ಸಭೆ ವಿಫಲ ಹಿನ್ನೆಲೆ


ಕಿದ್ವಾಯಿ ಆಸ್ಪತ್ರೆ ಸಾಧನೆ | ಅತಿದೊಡ್ಡ ಅಸ್ಥಿಮಜ್ಜೆ ಕಸಿ ಘಟಕ

1,092 ರೊಬೊಟಿಕ್ ಶಸ್ತ್ರಚಿಕಿತ್ಸೆ

▸ ನಂದಿನಿ ಎನ್.

◆ **ಬೆಂಗಳೂರು:** ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ರೊಬೊಟಿಕ್ ಯಂತ್ರ ಬಳಸಿಕೊಂಡು ವರ್ಷದಿಂದ ವರ್ಷಕ್ಕೆ ರೊಬೊಟಿಕ್ ಶಸ್ತ್ರಚಿಕಿತ್ಸೆ ಸಂಖ್ಯೆ ಹೆಚ್ಚಾಗುತ್ತಿದ್ದು, ಈವರೆಗೂ ಒಟ್ಟು 1,092 ರೊಬೊಟಿಕ್ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದೆ.

ಕ್ಯಾನ್ಸರ್ ರೋಗಿಗಳಿಗೆ ಮತ್ತು ಬಡ ರೋಗಿಗಳಿಗೆ ಅಸ್ಥಿಮಜ್ಜೆ ಕಸಿ ಚಿಕಿತ್ಸೆ ಸುಲಭವಾಗಿ ಕೈಗೆಟುಕುವಂತೆ ಮಾಡಲಾಗುತ್ತಿದೆ. ಕಿದ್ವಾಯಿ ಸಂಸ್ಥೆಯ ಅಸ್ಥಿಮಜ್ಜೆ ಕಸಿ ಘಟಕವು ತೀವ್ರ ನಿಗಾ ಘಟಕ ಸೇರಿದಂತೆ 14 ಹಾಸಿಗೆಗಳ ಸೌಲಭ್ಯದೊಂದಿಗೆ ಭಾರತದ ಅತಿದೊಡ್ಡ ಅಸ್ಥಿಮಜ್ಜೆ ಕಸಿ ಘಟಕವಾಗಿ ಹೊರಹೊಮ್ಮಿದೆ. ಅಲ್ಲದೆ, ಬಡ ಕ್ಯಾನ್ಸರ್ ರೋಗಿಗಳಿಗೆ ಉಚಿತವಾಗಿ ಅಸ್ಥಿಮಜ್ಜೆ ಕಸಿ ಚಿಕಿತ್ಸೆ ನೀಡುತ್ತಿರುವ ಏಕೈಕ ಸರ್ಕಾರಿ ಆಸ್ಪತ್ರೆಯಾಗಿರುವ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಕ್ಯಾನ್ಸರ್ ಚಿಕಿತ್ಸೆಗಾಗಿ ಇರುವ ಏಕೈಕ ಸ್ವಾಯತ್ತ ಸರ್ಕಾರಿ ಆಸ್ಪತ್ರೆಯಾಗಿದೆ. ಸಂಸ್ಥೆ ಯಲ್ಲಿ ಎಲ್ಲ ಕ್ಯಾನ್ಸರ್ ಪ್ರಕಾರಗಳಿಗೆ ಉತ್ತಮ ಚಿಕಿತ್ಸೆ ನೀಡಲಾಗುತ್ತಿದೆ. ಅದರಲ್ಲೂ ಕ್ಯಾನ್ಸರ್‌ಪೀಡಿತ ಮಕ್ಕಳು ಮತ್ತು ವಯಸ್ಕರಿಗೆ ಉತ್ತಮ ಸೇವೆಯನ್ನು ನೀಡುತ್ತಿದೆ. ➡ಪುಟ ೪



ಅಲ್ಪಾವಧಿಯಲ್ಲೇ ಚೇತರಿಕೆ

ಈ ಅತ್ಯಾಧುನಿಕ ತಂತ್ರಜ್ಞಾನವು ರೋಗಿ ಹಾಗೂ ವೈದ್ಯರಿಗೆ ಸಹಕಾರಿಯಾಗಿದೆ. ಸಣ್ಣದಾಗಿ ರಂಧ್ರ ಮಾಡಿ, ರೋಗಕಾರಕ ಭಾಗವನ್ನು ಮಾತ್ರ ಹೊರತೆಗೆಯಲಾಗುತ್ತದೆ. ಇದರಿಂದ ನಿಖರ ಶಸ್ತ್ರಚಿಕಿತ್ಸೆಯ ಜತೆಗೆ, ರೋಗಿಗಳು ಅಲ್ಪಾವಧಿಯಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ. ಸಾಂಪ್ರದಾಯಿಕ ಶಸ್ತ್ರ ಚಿಕಿತ್ಸಾ ವಿಧಾನದಲ್ಲಿ ದೇಹಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹಾನಿಯಾಗುವ ಜತೆಗೆ, ಶಸ್ತ್ರಚಿಕಿತ್ಸೆ ಹಾಗೂ ರೋಗಿ ಚೇತರಿಸಿಕೊಳ್ಳಲು ಹೆಚ್ಚಿನ ಅವಧಿ ಬೇಕಾಗುತ್ತದೆ.

ಉಪ ಚುನಾವಣೆ: ನಮ್ಮದೇ ಗೆಲುವು

◆ **ವಿಜಯನಗರ:** ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭೆ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ನಿಶ್ಚಿತವಾಗಿದೆ. ಈ ಬಾರಿ ಉಪಚುನಾವಣೆಯ ಫಲಿತಾಂಶದ ಪ್ರಕಟಗೊಂಡ ಬಳಿಕ ಕಾಂಗ್ರೆಸ್ ಪಕ್ಷದಲ್ಲಿ ಅಲ್ಲೋಲಕಲ್ಲೋಲ ಸೃಷ್ಟಿಯಾಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು. ಹೊಸಪೇಟೆಯಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಬೆಂಬಲಿಗರಿಂದ ದೆಹಲಿ ದಂಡಯಾತ್ರೆ ಶುರುವಾಗಿದೆ.

◆ ವಿವರ ಪುಟ ೫

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,51,500(2,47,700) ಅಪರಂಜಿ ಚಿನ್ನ: 15,000(15,170) ಆಭರಣ ಚಿನ್ನ: 13,875(14,025) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 77,496(609↑) ಎನ್‌ಎಸ್‌ಇ 24,177(181↑) $1=₹94.83

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
೦೪

ವರಿಷ್ಠರ ತೀರ್ಮಾನಕ್ಕೆ ಬದ್ಧ: ಸಚಿವ

• **ಬೆಂಗಳೂರು:** ಪಕ್ಷದಲ್ಲಿ ಯಾವುದೇ ಗೊಂದಲವಿಲ್ಲ, ಪಕ್ಷದ ವರಿಷ್ಠರು ವಿಚಾರ ಮಾಡಿ ನಿರ್ಧಾರ ಮಾಡಲಿದ್ದು, ಅವರ ತೀರ್ಮಾನಕ್ಕೆ ನಾವು ತಲೆಬಾಗುತ್ತೇವೆ. ಬಹಿರಂಗವಾಗಿ ನಾನು ಏನು ಹೇಳಲ್ಲ ಎಂದು ಸಚಿವ ಎಂ.ಬಿ. ಪಾಟೀಲ ಹೇಳಿದರು.



ನಗರದಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ನಾಯಕತ್ವ ವಿಚಾರ ಪ್ರತಿದಿನ ಚರ್ಚೆಯಾಗುತ್ತಿದೆ. ಡೇಟ್ ಕೊಡುವಷ್ಟು ದೊಡ್ಡವರು ನಾನಲ್ಲ. ಡೇಟ್ ಕೊಟ್ಟ ಶಾಸಕರ ಬಗ್ಗೆ ಹೈಕಮಾಂಡ್ ಗಮನಿಸುತ್ತೆ. ಜಾರಕಿಹೊಳಿ ಸೇರಿ ಎಲ್ಲರಿಗೂ ಹೈಕಮಾಂಡ್ ಭೇಟಿ ಮಾಡಿ ಚರ್ಚೆ ಮಾಡಲು ಅಧಿಕಾರ ಇದೆ. ನಾನು ವಿಜಯಪುರ ಹೋಗುತ್ತಿದ್ದೇನೆ. ಖರ್ಗೆ ಅವರು ರಾಜ್ಯಕ್ಕೆ ಬಂದಾಗ ಭೇಟಿಯಾಗುತ್ತೇನೆ ಎಂದರು. ದಲಿತ ಸಿಎಂ ಕೂಗಿಗೆ ಹೈಕಮಾಂಡ್ ಉತ್ತರ ನೀಡುತ್ತೆ, ಲಿಂಗಾಯತ ಸಮುದಾಯ ಕೂಡಾ ಬೇಡಿಕೆ ಇಡಬಹುದು ಆದರೆ ಹೈಕಮಾಂಡ್‌ಎಲ್ಲ ತೀರ್ಮಾನ ಮಾಡುತ್ತೆ. ವೀರೇಂದ್ರ ಪಾಟೀಲ್ ಬಳಿಕ ಈ ಬಾರಿ ಲಿಂಗಾಯತ ಸಮುದಾಯ ಈ ಬಾರಿ ಕಾಂಗ್ರೆಸ್ ಪರವಾಗಿ ನಿಂತಿದೆ 35 ಶಾಸಕರು ಗೆದ್ದಿದ್ದೇವೆ ಎಂದರು. ಸತೀಶ್ ಜಾರಕಿಹೊಳಿ ಕೆಪಿಸಿಸಿ ಅಧ್ಯಕ್ಷ ಬೇಡಿಕೆ ಇಟ್ಟಿದ್ದಾರೆ. ಅವರಿಗೆ ಆ ಸಾಮರ್ಥ್ಯ ಇದೆ, ಉತ್ತಮ ಸಂಘಟನೆಗಾರರು. ಸಿದ್ದರಾಮಯ್ಯ ನಾಯಕತ್ವ, ಡಿಕೆಶಿ ಸಂಘಟನೆ ಇದೆ. ನಾಯಕರು ಕಾರ್ಯಕರ್ತರು ಶ್ರಮಪಟ್ಟಿದ್ದಾರೆ. ಬೂತ್ ಏಜೆಂಟ್ ಕೂಡಾ ಶ್ರಮಪಟ್ಟಿದ್ದಾರೆ ಎಂದು ಹೇಳಿದರು.

ಈ ಬಾರಿ ಗಂಭೀರ ಬರ ಬರುವ ಸಾಧ್ಯತೆ ಇದೆ. ಇದಕ್ಕೆ ನಾವು ಸಿದ್ದರಾಗಬೇಕು. ಜುಲೈ ಅಂತ್ಯದವರೆಗೆ ಡ್ಯಾಮ್‌ನಲ್ಲಿ ನೀರು ಇಡಬೇಕಾಗುತ್ತೆ. ಕುಡಿಯುವ ನೀರಿಗೆ ಆದ್ಯತೆ ನೀಡಬೇಕಿದೆ. ಈ ಬಾರಿ ಹೆಚ್ಚು ನೀರು ಉಳಿಸಬೇಕಿದೆ. ನಾನು ಕೂಡ ವಿಜಯಪುರ ಜಿಲ್ಲೆಯಲ್ಲಿ ಸಭೆ ಮಾಡಿದ್ದೇನೆ ಎಂದರು.

ರಾಮ ಬಾಣ



ಶಾಸಕ ಸ್ಥಾನ ಅನರ್ಹತೆಯಲ್ಲಿ ತಾರತಮ್ಯವಿಲ್ಲ: ಖಾದರ್

• **ಬೆಂಗಳೂರು:** ಕೊಲೆ ಆರೋಪದ ಮೇಲೆ ಶಿಕ್ಷೆಗೆ ಒಳಪಟ್ಟಿರುವ ವಿನಯ್ ಕುಲಕರ್ಣಿ ಶಾಸಕ ಅನರ್ಹತೆಯಲ್ಲಿ ಯಾವುದೇ ತಾರತಮ್ಯವಿಲ್ಲ. ನಿಯಮದ ಪ್ರಕಾರ ಯಾರೇ ಶಿಕ್ಷೆಗೆ ಒಳಪಟ್ಟಾಗ ಅನರ್ಹರಾಗುತ್ತಾರೆ. ಅದು ತನ್ನಿಂದತಾನೇ ರದ್ದಾಗಲಿದೆ. ಇಲ್ಲಿ ಬಿಜೆಪಿ, ಕಾಂಗ್ರೆಸ್ ತಾರತಮ್ಯ ಮಾಡಿಲ್ಲ ಎಂದು ಸ್ಪೀಕರ್ ಯು.ಟಿ. ಖಾದರ್ ಹೇಳಿದರು.

ವಿಧಾನಸೌಧದಲ್ಲಿ ಮಾತನಾಡಿದ ಅವರು, ಯಾವುದೇ ಸದಸ್ಯನ ಸದಸ್ಯತ್ವ ರದ್ದು ಮಾಡುವ ಅಧಿಕಾರ ಸ್ಪೀಕರ್‌ಗೆ ಇಲ್ಲ. ವಿಧಾನಸಭೆ ವ್ಯಾಪ್ತಿಯಲ್ಲಿ ಏನಾದ್ರೂ ಆದಾಗ ಮಾತ್ರ ಅದು ಅಧಿಕಾರ ಇದೆ. ಕಾರ್ಯದರ್ಶಿಗೆ ಇದನ್ನ ನೋಡಲು ಹೇಳಿದ್ದೇನೆ. ನಾವು ಮಾಹಿತಿ ಕೊಡಲು ಮಾತ್ರ ಇರೋದು, ಕಾನೂನು ವ್ಯಾಪ್ತಿಯಲ್ಲಿ ಆದೇಶ ಮಾಡಿದಾಗ ತನ್ನಿಂದ ತಾನೇ ರದ್ದು ಆಗಿದೆ ಎಂದರು.

ವಿಜಯಪುರ: ಬಿಸಿಲಿಗೆ ಬಾಲಕ ಸಾವು

• **ವಿಜಯಪುರ:** ರಣಭಯಂಕರ ಬಿಸಿಲಿಗೆ ಓರ್ವ ಬಾಲಕ ಸಾವಿಗೀಡಾದ ಘಟನೆ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಇಂಗಳಗಿ ಗ್ರಾಮದಲ್ಲಿ ನಡೆದಿದೆ ಎನ್ನಲಾಗಿದೆ. ಇಲ್ಲಿನ ಶ್ರೀಶೈಲ ಬಿರಾದಾರ (15) ಮೃತ ಪಟ್ಟ ಬಾಲಕ. ಶ್ರೀಶೈಲ ಬಿರಾದಾರ ಬೇಸಿಗೆ ರಜೆ ಹಿನ್ನೆಲೆ ಬಿಸಿಲಿನಲ್ಲಿ ಆಟ ಆಡಿ ಅನಾರೋಗ್ಯಕ್ಕೆ ತುತ್ತಾಗಿದ್ದು, ಚಿಕಿತ್ಸೆ ಫಲಿಸದೆ ಅಸುನೀಗಿದ್ದಾನೆ ಎಂದು ಹೇಳಲಾಗುತ್ತಿದೆ. 8 ನೇ ತರಗತಿ ಪಾಸಾಗಿದ್ದ ಶ್ರೀಶೈಲ, ತಾಲೂಕು ಮಟ್ಟದ ಕಬಡ್ಡಿ, ಖೋಖೋ ಚಾಂಪಿಯನ್ ಆಗಿದ್ದ. ಮುದ್ದೇಬಿಹಾಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಬಾಲಕ ಶ್ರೀಶೈಲ ಬಿರಾದಾರ ಬಿಸಿಲಿನ ತಾಪದಿಂದ ಸಾವಿಗೀಡಾಗಿಲ್ಲ, ಆತನಿಗೆ ಕ್ಯಾನ್ಸರ್ ಇತ್ತು, ಅದು ಗುಣವಾಗದೇ ಮೃತಪಟ್ಟಿದ್ದಾನೆ ಎಂದು ಡಿಎಚ್ ಒ ಸಂಪತ್ತಕುಮಾರ ಗುಣಾರಿ ತಿಳಿಸಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಜಾತಿಗಳೆಲ್ಲ ನಮ್ಮ ನಮ್ಮ ಮನೆಯ ಒಳಗಡೆ ಇರಲಿ, ಹೊರಗಡೆ ಬಂದಾಗ ನಾವೆಲ್ಲ ಹಿಂದುಗಳೆಂಬ ಒಗ್ಗಟ್ಟು ಬರಲಿ
–ಚಕ್ರವರ್ತಿ ಸೂಲಿಬೆಲೆ
–ಹಿಂದೂ ಎಂಬ ಸುಂದರ ಉದ್ಯಾನವನ ಉಳಿದರೆ ಮಾತ್ರ ಜಾತಿಗಳೆಂಬ ವಿವಿಧ ಪುಷ್ಪಗಳು ಅರಳಿ ಪರಿಮಳ ಬೀರಲು ಸಾಧ್ಯ!

ದಿನ ಭವಿಷ್ಯ

ಮೇಷ ನಿರೀಕ್ಷಿತ ಕೆಲಸ ಪೂರ್ತಿಯಾಗದು. ಕೆಲಸದಲ್ಲಿ ಸಣ್ಣ ಲೋಪ ಉಂಟಾದೀತು. ಮನೆಯಲ್ಲಿ ಸ್ವಲ್ಪ ಕಿರಿಕಿರಿ ಅನುಭವಿಸುವಿರಿ.

ವೃಷಭ ಕೌಟುಂಬಿಕ ಹೊಣೆ ಹೆಚ್ಚಳ. ಹತ್ತಿರದವರೊಬ್ಬರ ವರ್ತನೆ ನಿಮಗೆ ಅಸಹನೆ ತರಲಿದೆ. ಸಂಘರ್ಷ ಬೇಡ, ಹೊಂದಾಣಿಕೆಯ ವರ್ತನೆ ಒಳ್ಳೆಯದು.

ಮಿಥುನ ಅಭದ್ರತೆಯ ಭಾವ ಕಾಡಬಹುದು. ಕೆಲವು ಬೆಳವಣಿಗೆ ಮನಸ್ಸಿಗೆ ಅಹಿತಕಾರಿಯಾದೀತು. ಭಾವುಕ ಸನ್ನಿವೇಶಕ್ಕೆ ಸಾಕ್ಷಿಯಾಗುವಿರಿ.

ಕಟಕ ಸ್ವ–ಪರಾಮರ್ಶೆ ನಡೆಸಿ. ನಿಮ್ಮ ಕೆಲವಾರು ಪ್ರಶ್ನೆಗಳಿಗೆ ಉತ್ತರ ಸಿಗಬಹುದು. ನಿಮ್ಮ ಲೋಪ ಮುಚ್ಚಿ ಹಾಕಲು ಪ್ರಯತ್ನಿಸಬೇಡಿ.

ಸಿಂಹ ಆತ್ಮೀಯರ ಸಂಗಡ ಕಾಲ ಕಳೆಯುತ್ತಾ ಇನ್ನಿತರ ಉದ್ವಿಗ್ನತೆ ಮರೆಯುವಿರಿ. ಆದರೆ ಕೆಲಸ ಬಾಕಿ ಉಳಿಸದಿರಿ. ಅದನ್ನು ಪೂರೈಸಿ. ಬಂಧು ಭೇಟಿ.

ಕನ್ಯಾ ಪ್ರತಿಕೂಲ ಪರಿಸ್ಥಿತಿ ಉದ್ಭವಿಸಿದರೂ ಪಾಸಿಟಿವ್ ಚಿಂತನೆ ಬಿಡಬೇಡಿ. ವಿಳಂಬವಾದರೂ ಉದ್ದೇಶ ಸಾಧಿತವಾಗಲಿದೆ. ಆರ್ಥಿಕ ಪರಿಸ್ಥಿತಿ ತೃಪ್ತಿಕರ.

ತುಲಾ ಬಾಕಿ ಇದ್ದ ಕೆಲಸ ಮುಗಿಸಲು ಗಮನ ಕೊಡಿ. ವ್ಯವಹಾರದಲ್ಲಿ ಸಣ್ಣ ಅಡ್ಡಿ. ಆಪ್ತರ ಜತೆ ಮುನಿಸು ಸಂಭವ. ತಾಳ್ಮೆಯಿಂದ ವ್ಯವಹರಿಸಿ.

ವೃಶ್ಚಿಕ ವೃತ್ತಿಯ ಒತ್ತಡ ಹೆಚ್ಚು. ಹಾಗೆಂದು ಕೌಟುಂಬಿಕ ವ್ಯವಹಾರ ಕಡೆಗಣಿಸಬೇಡಿ. ಕುಟುಂಬಸ್ಥರ ಬೇಡಿಕೆಗೆ ಕಿವಿಗೊಡಿ. ಧನವ್ಯಯ.

ಧನು ಆರಂಭದಲ್ಲಿ ಹಿನ್ನಡೆಯಾಗಿ ಕಂಡ ವಿಷಯ ಬಳಿಕ ನಿಮ್ಮ ಪಾಲಿಗೆ ಒಳಿತು ತಂದೀತು. ಅನಿರೀಕ್ಷಿತ ಧನಲಾಭ. ಹಳೆಯ ಸ್ನೇಹಿತರ ಭೇಟಿ.

ಮಕರ ಹೆಚ್ಚು ಹೊಣೆ– ನಿಮ್ಮ ಮನೆಯಲ್ಲೂ, ವೃತ್ತಿಯಲ್ಲೂ. ಹಿಡಿದ ಕೆಲಸ ಅಚ್ಚುಕಟ್ಟಾಗಿ ಪೂರೈಸಿ. ಟೀಕೆಗೆ ಅಸ್ಪದ ಕೊಡಬೇಡಿ. ವಾಗ್ವಾದ ನಡೆಸದಿರಿ.

ಕುಂಭ ಹರ್ಷದ ದಿನ. ಪ್ರೀತಿಪಾತ್ರರ ಜತೆ ಆತ್ಮೀಯ ಕಾಲಕ್ಷೇಪ. ಹಳೆ ನಿರ್ಧಾರವೊಂದು ಈಗ ಕೆಟ್ಟ ಫಲ ನೀಡಬಹುದು. ಎಚ್ಚರದ ನಡೆಯಿರಲಿ.

ಮೀನ ಎಲ್ಲ ಸುಸೂತ್ರವಾಗಿ ಸಾಗುವುದು. ಆದರೆ ಸಂಗಾತಿ ಜತೆ ಭಿನ್ನಮತ. ಇತರರ ಟೀಕಿಸದಿರಿ. ನಿಮ್ಮ ನಡೆನುಡಿ ಪರಾಮರ್ಶಿಸಿ. ನಿಮ್ಮಲ್ಲೇ ತಪ್ಪಿರಬಹುದು.

ರಾಹುಕಾಲ: 1.30–3.00
ಗುಳಿಕಕಾಲ: 9.00–10.30

ಅದೃಷ್ಟ ಸಂಖ್ಯೆ : 8,3,9,4

ದಕ್ಷಿಣ ಮಧ್ಯ ಕ್ಷೇತ್ರದ ಬೌದ್ಧಿಕ ಪ್ರಮುಖ್ ಪ್ರೊ.ಬಿ.ವಿ.ಶ್ರೀಧರಸ್ವಾಮಿ

ಗೌರವಿಸುವ ಪದ್ಧತಿ ನಮ್ಮದು

• **ದೇವನಹಳ್ಳಿ:** ಜಗತ್ತಿಗೆ ವಿಜ್ಞಾನ ಸೇರಿದಂತೆ ಅನೇಕ ಕೊಡುಗೆಯನ್ನು ನೀಡಿದ ಶ್ರೇಷ್ಠ ಪರಂಪರೆ ನಮ್ಮದು. ಇದರ ಜತೆಗೆ ಬದುಕಿನ ಸಾರ್ಥಕತೆ ಎಲ್ಲಿದೆ ಎಂಬುದನ್ನು ಕಂಡುಕೊಳ್ಳಬೇಕಾಗಿದೆ ಎಂದು ದಕ್ಷಿಣ ಮಧ್ಯ ಕ್ಷೇತ್ರದ ಬೌದ್ಧಿಕ ಪ್ರಮುಖ್ ಪ್ರೊ.ಬಿ.ವಿ.ಶ್ರೀಧರಸ್ವಾಮಿ ಹೇಳಿದರು.

ದೇವನಹಳ್ಳಿಯ ಅನಂತ ವಿದ್ಯಾನಿಕೇತನದಲ್ಲಿ ಸೋಮವಾರ ಸಂಜೆ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತದ ಸಂಘ ಶಿಕ್ಷಾ ವರ್ಗದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಸಂಘದ ಒಂದು ಚಟುವಟಿಕೆಯಲ್ಲಿ ಸಂಘ ಶಿಕ್ಷಾ ವರ್ಗ. 15ದಿನಗಳ ಕಾಲ ನಡೆದ ಈ ಸಂಘ ಶಿಕ್ಷಾ ವರ್ಗದಲ್ಲಿ ತಪಸ್ಸಿನಂತೆ ಸ್ವಯಂಸೇವಕರು ಕಲಿತಿದ್ದಾರೆಂದರು.

ಸಮಾಜ ಮತ್ತು ದೇಶದ ಕುರಿತು ಹಾಗೂ ಸಂಘಟನೆಯ ಕುಶಲತೆಯನ್ನು ಕಲಿತುಕೊಳ್ಳುವರು. ಅದರ ಜತೆಗೆ ರಾಷ್ಟ್ರಭಕ್ತಿಯ ಸಂಸ್ಕಾರವನ್ನು ಜಾಗೃತ ಗೊಳಿಸಿಕೊಳ್ಳುತ್ತಾರೆ. ಸಮಾಜವನ್ನು ಮುನ್ನಡೆಸುವ ವ್ಯಕ್ತಿಗಳ ನಿರ್ಮಾಣ ಕೇಂದ್ರವಾಗಿ ಶಾಖೆಗಳು ನಡೆಯುತ್ತಿವೆಂದು ಹೇಳಿದರು. ಶಾಖೆಯ ಪ್ರಾರ್ಥನೆಯಲ್ಲಿ ತಾಯಿ ಭಾರತೀಯ ಕೆಲಸಕ್ಕಾಗಿ ತನ್ನ ಜೀವನವನ್ನು ಮುಡಿಪಿಡುವಂತಹ ಕಾರ್ಯಕ್ಕೆ ಸಿದ್ಧಗೊಳ್ಳುತ್ತಾರೆ. ಸಂಘಟನೆಗಿಂತ ಉನ್ನತವಾದದ್ದು ಎಂಬ ಭಾವ ಸಂಘಟನೆಯ ಸ್ವಯಂಸೇವಕರಲ್ಲಿ ಮೂಡುತ್ತದೆ. ಈ ಭಾವನೆಯನ್ನು ಸಂತರು ಮಹಂತರು ಸಹಸ್ರಾರು ವರ್ಷಗಳಿಂದ ದೇಶದ ಜನರಲ್ಲಿ ಬೆಳೆಸಿದ್ದಾರೆ. ಅದನ್ನೇ ಸಂಘ ಮುಂದುವರೆಸಿದೆ ಎಂದು ಅಭಿಪ್ರಾಯಪಟ್ಟರು.

ಅನೇಕರು ಜಗತ್ತನ್ನು ಶಕ್ತಿಯ ಬಲದಿಂದ ಜಗತ್ತನ್ನು ಗೆಲ್ಲುವ ಪ್ರಯತ್ನ ಮಾಡಿದರು. ಆದರೆ ಭಾರತ ಇಡೀ ವಿಶ್ವವೇ ಒಂದು ಕುಟುಂಬ ಎಂಬ ವಿಶಾಲ ಭಾವದ ಕಾರಣದಿಂದ ಜಗತ್ತಿನ ಮನಸ್ಸನ್ನು ಗೆಲ್ಲುವ ಕಾರ್ಯ ಮಾಡಿದ್ದೇವೆ. ಜಗತ್ತು ಭಾರತವನ್ನು ಭಕ್ತಿಯಿಂದ ಗೌರವದಿಂದ ಕಾಣಬಹುದಾಗಿದೆ. ಆದರೆ ನಾವು ಜಾತಿಯನ್ನು ಮೀರಿ ಹಿಂದುಗಳು, ಭಾರತೀಯರು ಎಂದು ಹೇಳಿಕೊಳ್ಳುವ ಭಾವ ನಮ್ಮಲ್ಲಿ ಮೂಡಬೇಕು. ನಮ್ಮ ದೇಶದ ಪರಂಪರೆಯ ಮೌಲ್ಯಗಳನ್ನು ಪ್ರಕಟಿಸುವ ಸಮಾಜ ನಮ್ಮದಾಗಬೇಕು. ಹೇಗೆ ಶರೀರದ ಎಲ್ಲಾ ಅಂಗಗಳು ಸಬಲವಾಗಬೇಕೋ, ಜೊತೆಗೆ ಸಮಾಜದ ಎಲ್ಲಾ ವರ್ಗಗಳು ಸಶಕ್ತವಾಗಬೇಕು. ಅವರೆಲ್ಲರಲ್ಲೂ ರಾಷ್ಟ್ರಭಕ್ತಿಯ ಜಾಗರಣವಾಗಬೇಕಿದೆ ಎಂದರು.

ಜಾಗತಿಕ ಸ್ಥಿತಿಯಲ್ಲಿ ಆತ್ಮನಿರ್ಭರವಾಗಬೇಕಿದೆ. ನಮ್ಮ ದೇಶಕ್ಕೆ ಬೇಕಾಗುವ ಎಲ್ಲವನ್ನೂ ನಾವೇ ನಿರ್ಮಿಸಿಕೊಳ್ಳಬೇಕು. ನಮ್ಮಲ್ಲಿ ನಮ್ಮ ಸಹಿ ಇರಬೇಕು, ಮನೆಯಲ್ಲಿ ಸ್ವಭಾಷೆಯನ್ನು ಬಳಸಬೇಕು, ಹುಟ್ಟು ಹಬ್ಬದ ಆಚರಣೆ ನಮ್ಮತನದಿಂದ ಕೂಡಿರಬೇಕು. ಪರಿಸರ ಸಂರಕ್ಷಣೆ, ಪ್ಲಾಸ್ಟಿಕ್ ಬಳಕೆ ನಿಷೇಧ, ಇತರರಿಗೆ ತೊಂದರೆಯಾಗದಂತೆ ನಮ್ಮ ಜೀವನಶೈಲಿ ಇರಬೇಕು. ನಮ್ಮ ಮನೆಯ ಸಾಮಾಜಿಕ ಸಾಮರಸ್ಯವನ್ನು ಸಾರುವ, ನಮ್ಮ ಪರಂಪರೆಯನ್ನು ಮಕ್ಕಳಿಗೆ ತಿಳಿಸುವ ಪರಿವರ್ತನಾ ಕೇಂದ್ರಗಳಾಗಬೇಕು ಎಂದರು.

15 ದಿನಗಳ ಕಾಲ ನಡೆದ ವರ್ಗಗಳ ಬಗ್ಗೆ ವರ್ಗದ ವರ್ಗಾಧಿಕಾರಿ ಮಿಲಿಂದ ಗೋಖಲೆ ಅವರು ಸಾರ್ವಜನಿಕರಿಗೆ ಮಾಹಿತಿ ನೀಡಿದರು. ಹಾಗೂ ಪ್ರಾಂತ ಸಂಘಚಾಲಕ ಜಿ.ಎಸ್.ಉಮಾಪತಿ ಉಪಸ್ಥಿತರಿದ್ದರು. ವರ್ಗದ 350ಕ್ಕೂ ಹೆಚ್ಚು ಶಿಕ್ಷಾರ್ಥಿಗಳಿಂದ ಶಾರೀರಿಕ ಪ್ರದರ್ಶನ ಸೇರಿದಂತೆ ಸಾಹಿತ್ಯ ಮಾರಾಟ ವ್ಯವಸ್ಥೆ ಮಾಡಲಾಯಿತು.



ಭಾರತದಲ್ಲಿ ಬದಲಾವಣೆ ಪರ್ವ

ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಕೈವಾರದ ಧರ್ಮಾಧಿಕಾರಿ ಎಂ.ಆರ್. ಜಯರಾಂ ಮಾತನಾಡಿ, ಪ್ರಪಂಚ ಬದಲಾಗುತ್ತಿದೆ. ಭಾರತವೂ ಬದಲಾವಣೆಯ ಪರ್ವವನ್ನು ಕಾಣುತ್ತಿದೆ. ಪ್ರಪಂಚದಲ್ಲಿ ಧರ್ಮಸ್ಥಾಪನೆಯಾಗಬೇಕಾದರೆ ಭಾರತ ಮಾರ್ಗದರ್ಶನ ಮಾಡಬೇಕು. ನಾವು ಯಾರು, ನಮ್ಮ ಕರ್ತವ್ಯ ಏನು ಎನ್ನುವುದನ್ನು ನಾವು ಅರಿಯಬೇಕು. ನಾವು ನಮ್ಮ ದೇಶದ ಬಗ್ಗೆ ಚಿಂತನೆ ಮಾಡಬೇಕಾದರೆ, ನಮ್ಮ ದೇಶದ ಕೊರತೆಗಳನ್ನು ಮರೆತು ಸಮಭಾವ ಮತ್ತು ಸಾಮರಸ್ಯದ ಮೂಲಕ ನೋಡಬೇಕು. ಆಗ ಮುಂದಿನ ಯಾವುದೇ ಸವಾಲುಗಳನ್ನೂ ತಡೆಯಲು ನಾವು ಸಿದ್ಧರಾಗಿರುತ್ತೇವೆ ಎಂದರು.

ಮೇ 9ಕ್ಕೆ ಬಿಎಸ್‌ವೈ ಅಭಿಮಾನೋತ್ಸವ

ಬಡವರ ಕಷ್ಟಗಳಿಗೆ ಮಿಡಿದ ಮುತ್ಸದ್ಧಿ

• **ವಿಜಯನಗರ:** ರಾಜ್ಯದ ಗುಣಾತ್ಮಕ ಬದಲಾವಣೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ಮಹಾನ್ ನಾಯಕನಿಗೆ ಅಭಿನಂದನೆ ಸಲ್ಲಿಸಲು ಚಿತ್ರದುರ್ಗದಲ್ಲಿ ಮೇ 9ರಂದು ಏರ್ಪಡಿಸಿರುವ ಬಿಎಸ್‌ವೈ ಅಭಿಮಾನೋತ್ಸವಕ್ಕೆ ಪಕ್ಷದ ಕಾರ್ಯಕರ್ತರು ಹಾಗೂ ನಾಡಿನ ಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಅಭೂತಪೂರ್ವವಾಗಿ ಯಶಸ್ವಿಗೊಳಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮನವಿ ಮಾಡಿದರು.

ಬಿಎಸ್‌ವೈ ಅಭಿಮಾನೋತ್ಸವದ ನಿಮಿತ್ತ ಹೊಸಪೇಟೆಯಲ್ಲಿರುವ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಬುಧವಾರ ಏರ್ಪಡಿಸಿದ್ದ ವಿಜಯನಗರ, ಬಳ್ಳಾರಿ, ಕೊಪ್ಪಳ ಜಿಲ್ಲೆಗಳ ಪ್ರಮುಖರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪ ಅವರ 50 ವರ್ಷಗಳ ನಿಸ್ವಾರ್ಥಕತೆಯಿಂದ ಜನ ಸೇವೆಯ ಸಲ್ಲಿಸಿದ್ದಾರೆ. ರಾಜ್ಯದಲ್ಲಿ ಎಲ್ಲಿ ಬಡವರು ಕಣ್ಣೀರು ಹಾಕುತ್ತಿದ್ದಾರೋ ಅಲ್ಲಿ ಯಡಿಯೂರಪ್ಪನವರು ಇರುತ್ತಿದ್ದರು. ರೈತರು ಎಲ್ಲ ಸಂಕಷ್ಟದಲ್ಲಿದ್ದರೂ ಅಲ್ಲಿ ಯಡಿಯೂರಪ್ಪನವರು ಇರುತ್ತಿದ್ದರು. ರಾಜ್ಯದಲ್ಲಿ ಹೋರಾಟ ಮತ್ತು ಪರಿಶ್ರಮಕ್ಕೆ ಯಡಿಯೂರಪ್ಪ ಹೊರತಾಗಿ ಮತ್ತೊಂದು ಹೆಸರಿಲ್ಲ. ಅವರು ಶಾಸಕನಾಗಿ, ವಿಪಕ್ಷ ನಾಯಕನಾಗಿ, ಸಚಿವರಾಗಿ ಹಾಗೂ ಮುಖ್ಯಮಂತ್ರಿ ಅಧಿಕಾರದಲ್ಲಿದ್ದಾಗ ನಾಡಿನ ಪ್ರತಿ ಜಿಲ್ಲೆಗೂ ಒಂದಿಲ್ಲೊಂದು ಕೊಡುಗೆಯನ್ನು ಅವರು ನೀಡಿದ್ದಾರೆ. ಅವರು ಸವೆಸಿದ ರಾಜಕೀಯ ಹಾದಿ, ಕೈಗೊಂಡ ಪ್ರಗತಿ ರಾಜ್ಯದ ಇತಿಹಾದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡುವಂತದ್ದು. ಅಂತಹ ಒಬ್ಬ ಪುಣ್ಯಾತ್ಮ ಹೋರಾಟಗಾರರ 50 ವರ್ಷಗಳ ರಾಜಕೀಯ ಪಯಣವನ್ನು ಅರ್ಥಪೂರ್ಣವಾಗಿ ಆಚರಿಸಿ, ಸಂಭ್ರಮಿಸಲು ಬಿಎಸ್‌ವೈ ಅಭಿಮಾನೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ವಿವರಿಸಿದರು.



ಕಾಶಿ ವಿಶ್ವನಾಥನಿಗೆ ಮೋದಿ ಪೂಜೆ

ಪುಟ 1 ➡ದೇಶದ ಪ್ರತಿ ಪ್ರಜೆಗೂ ನೆಮ್ಮದಿ, ಸಂಪನ್ನತೆ ಮತ್ತು ಆರೋಗ್ಯಪೂರ್ಣ ಬದುಕಿಗಾಗಿ ನಾನು ಭಗವಾನ್ ಬೋಲೆನಾಥನಲ್ಲಿ ಪ್ರಾರ್ಥಿಸಿದೆ. ತಾಯಿ ಅನ್ನಪೂರ್ಣೆ ಮತ್ತು ಗಂಗಾಮಾತೆಯ ದರುಶನದಿಂದ ನನಗೆ ಅನೂಹ್ಯ ಶಾಂತಿ ದೊರೆಯಿತು. ಅಮ್ಮನವರ ಅನುಗ್ರಹವು ಪ್ರತಿಯೊಬ್ಬರಲ್ಲೂ ಧನಾತ್ಮಕ ಶಕ್ತಿ ತುಂಬುವಂತಾಗಲಿ, ಮಗದೊಮ್ಮೆ ಕಾಶಿಯ ಎಲ್ಲಾ ಜನತೆಗೆ ನನ್ನ ನಮನಗಳು ಎಂದು ಪ್ರಧಾನಿ ಮೋದಿ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ಬರೆದಿದ್ದಾರೆ. ಮೋದಿಯವರು ದೇವಾಲಯದಿಂದ ಹೊರಬರುತ್ತಲೇ ಅಪಾರ ಭಕ್ತಸ್ತೋಮದಿಂದ ಹರ ಹರ ಮಹಾದೇವ್, ಜೈ ಶ್ರೀರಾಮ್ ಘೋಷಣೆಗಳು ಮೊಳಗಿದವು. ಪ್ರಧಾನಿಯವರು ಎಲ್ಲರತ್ತ ಪ್ರೀತಿಯಿಂದ ಕೈಬೀಸಿದರು, ವಿನೀತರಾಗಿ ಎಲ್ಲರಿಗೂ ನಮಸ್ಕರಿಸಿದರು.

ಚಿಣ್ಣರೊಂದಿಗೆ ಬೆರೆತ ಪ್ರಧಾನಿ: ವಿಶ್ವನಾಥ ಕಾರಿಡಾರ್‌ನಲ್ಲಿ ಚಿಣ್ಣರ ಜತೆ ಪ್ರಧಾನಿ ಬೆರೆತರು, ಸಂವಾದ ನಡೆಸಿದರು. ವಾರಾಣಸಿಯ ಜನತೆ ಪ್ರಧಾನಿ ಮೋದಿ ಅವರನ್ನು ಕಾಣಲು, ಒಂದು ಕ್ಷಣ ಕಣ್ತುಂಬಿಕೊಳ್ಳಲು ತುದಿಗಾಲಲ್ಲಿದ್ದರು. ಪ್ರಧಾನಿ ರೋಡ್ ಶೋ ನಡೆದ ರಸ್ತೆಯುದ್ದಕ್ಕೂ ಪಕ್ಷದ ಕಾರ್ಯಕರ್ತರು, ಪದಾಧಿಕಾರಿಗಳು, ಸ್ಥಳೀಯ ಜನರು ಅಪಾರ ಸಂಖ್ಯೆಯಲ್ಲಿ ಪ್ರವಾಹದೋಪಾದಿಯಲ್ಲಿ ಸೇರಿದ್ದರೆಂದು ಬಿಜೆಪಿ ಮಾಧ್ಯಮ ಉಸ್ತುವಾರಿ ಅರವಿಂದ ಮಿಶ್ರಾ ಹೇಳಿದ್ದಾರೆ.

ಶಂಖ ಊದಿ ಗುಲಾಬಿ ದಳಗಳ ಸ್ವಾಗತ

ರೋಡ್ ಶೋ ಹಾದಿಯುದ್ದಕ್ಕೂ ಅಲ್ಲಲ್ಲಿ ಸ್ವಾಗತ ಕೇಂದ್ರಗಳನ್ನು ರಚಿಸಲಾಗಿತ್ತು. ಅಭಿಮಾನಿಗಳು, ಕಾರ್ಯಕರ್ತರು, ಸ್ಥಳೀಯ ಜನತೆ ಗುಲಾಬಿದಳ ವೃಷ್ಟಿ, ಡ್ರಮ್‌ವಾದನ ಮತ್ತು ಶಂಖನಾದಗಳಿಂದ ಪ್ರಧಾನಿ ಮೋದಿ ಅವರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಸುಮಾರು 14ಕಿಮೀ ವ್ಯಾಪ್ತಿವರೆಗೆ ನಡೆದ ರೋಡ್ ಶೋ, ನಗರದಲ್ಲಿ ನಡೆದ ಪ್ರಥಮ ಬೃಹತ್ ರೋಡ್ ಶೋ ಎಂದು ಬಿಜೆಪಿ ನಾಯಕರು ಬಣ್ಣಿಸಿದ್ದಾರೆ. ತಮ್ಮ ಲೋಕಸಭಾ ಕ್ಷೇತ್ರ ವಾರಾಣಸಿಗೆ ಭೇಟಿ ಮುಗಿಸಿದ ಬಳಿಕ ಉತ್ತರಪ್ರದೇಶದಲ್ಲಿ ಗಂಗಾ ಎಕ್ಸ್‌ಪ್ರೆಸ್‌ವೇಗೆ ಪ್ರಧಾನಿ ಮೋದಿ ಚಾಲನೆ ನೀಡಿದರು.

ಜಲ್ ಜೀವನ್‌ಗಿಲ್ಲ ಕೇಂದ್ರದ ಹಣ

ಪುಟ 1 ➡ದೇಶದಲ್ಲಿಯೇ ಎರಡನೇ ಅತ್ಯಂತ ಹೆಚ್ಚಿನ ಒಣಭೂಮಿ ಹೊಂದಿರುವ ರಾಜ್ಯವಾದ ಕರ್ನಾಟಕದಲ್ಲಿ ನೀರಿಗಾಗಿ ಪರದಾಟವಿದೆಯಲ್ಲದೆ ಇದರೊಂದಿಗೆ ರಾಜ್ಯದ ಹಲವು ಭಾಗಗಳಲ್ಲಿ ಆರ್ಸೆನಿಕ್ ಹಾಗೂ ಫ್ಲೋರೈಡ್ ಮಿಶ್ರಣದ ಸಮಸ್ಯೆಯಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಗ್ರಾಮೀಣ ಕುಟುಂಬಗಳಿಗೆ ಕುಡಿಯಲು ಯೋಗ್ಯವಾದ ನೀರನ್ನು ಒದಗಿಸುವ ನಿಟ್ಟಿನಲ್ಲಿ ಜಲಮೂಲಗಳ ಸುಧಾರಣೆ ಮತ್ತು ಬೃಹತ್ ನೀರಿನ ಸರಬರಾಜು ವ್ಯವಸ್ಥೆಗೆ ಆದ್ಯತೆ ನೀಡಿದ್ದೇವೆ ಎಂದರು.

1.51 ಲಕ್ಷಕ್ಕೂ ಹೆಚ್ಚು ಮಹಿಳೆಯರಿಗೆ ನೀರಿನ ಗುಣಮಟ್ಟ ಪರೀಕ್ಷೆ ಮಾಡುವ ವಿಧಾನದ ಬಗ್ಗೆ ತರಬೇತಿ ನೀಡುವ ಮೂಲಕ ಸಮುದಾಯದ ಮಾಲೀಕತ್ವವನ್ನು ಸುಭದ್ರಪಡಿಸಲಾಗಿದೆ. 259 ಗ್ರಾಮಗಳಿಗೆ ಈಗಾಗಲೇ 24/7 ನೀರಿನ ಸರಬರಾಜು ಸಾಧಿಸಲಾಗಿದ್ದು, ಈ ಮಿಷನ್‌ಗಿರುವ ಪರಿವರ್ತನಾ ಸಾಮರ್ಥ್ಯವನ್ನು ಸಾಬೀತುಪಡಿಸಿದೆ ಎಂದು ಮುಖ್ಯಮಂತ್ರಿಗಳು ಉಲ್ಲೇಖಿಸಿದರು. ಕುಡಿಯುವ ನೀರಿನ ಕಾಮಗಾರಿಗಳ ಅನುಷ್ಠಾನದಲ್ಲಿ ಕರ್ನಾಟಕ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ ಗುಣಮಟ್ಟವನ್ನು ಕಾಯ್ದುಕೊಂಡಿದೆ. ಈ ಯೋಜನೆಯ ಪ್ರತಿ ಕಾಮಗಾರಿಗಳನ್ನು ಮೂರನೇ ಏಜೆನ್ಸಿ ಮೂಲಕ ಪರಿಶೀಲನೆ ನಡೆಸಲಾಗುತ್ತಿದ್ದು, ಪಾರದರ್ಶಕತೆಗೆ ಒತ್ತು ನೀಡಲಾಗಿದೆ ಎಂದು ತಿಳಿಸಿದರು. ಕೇಂದ್ರ ಸಚಿವ ವಿ.ಸೋಮಣ್ಣ ಅವರು ದೆಹಲಿಯಿಂದ ಸಭೆಯಲ್ಲಿ ಪಾಲ್ಗೊಂಡರು. ಮುಖ್ಯಮಂತ್ರಿಗಳ ಜತೆಗೆ ಸಭೆಯಲ್ಲಿ ಸಚಿವ ಪ್ರಿಯಾಂಕ್ ಖರ್ಗೆ, ಅವರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್, ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಹಾಗೂ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಶೇ.86.93ರಷ್ಟು ಪ್ರಗತಿ

ನಾವು ಇದುವರೆಗೆ 101.31 ಲಕ್ಷ ಗ್ರಾಮೀಣ ಕುಟುಂಬಗಳ ಪೈಕಿ 88.06 ಲಕ್ಷ ಮನೆಗಳಿಗೆ ನಳಸಂಪರ್ಕ ಕಲ್ಪಿಸಿದ್ದು, ಶೇ.86.93 ರಷ್ಟು ಪ್ರಗತಿ ಸಾಧಿಸಿದ್ದೇವೆ. ಈಗಾಗಲೇ ಕೈಗೊಳ್ಳಲಾಗಿರುವ 66,344 ಕಾಮಗಾರಿಗಳ ಪೈಕಿ ಸುಮಾರು 48,789 ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿವೆ. ಇದರಲ್ಲಿ ಗ್ರಾಮಗಳಲ್ಲಿ 28,809 ಕಾಮಗಾರಿಗಳು ಗ್ರಾಮಗಳಲ್ಲಿ ಹಾಗೂ 19,980 ಕಾಮಗಾರಿಗಳು ಶಾಲೆ, ಅಂಗನವಾಡಿಗಳಲ್ಲಿ ಕೈಗೊಳ್ಳಲಾಗಿದ್ದು, ಗ್ರಾಮೀಣ ಮಟ್ಟ ದಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಿದ್ದೇವೆ.

17,554 ಕೋಟಿ ರೂ. ಹೂಡಿಕೆ

ಕಳೆದ 2 ವರ್ಷಗಳ ಅವಧಿಯಲ್ಲಿ ಕೇಂದ್ರ ಸರ್ಕಾರದ ಅಸಹಕಾರದ ನಡುವೆಯೂ, ಜಲ್ ಜೀವನ್ ಯೋಜನೆಗೆ ಕರ್ನಾಟಕ 17,554.63 ಕೋಟಿ ರೂ. ಬಂಡವಾಳ ಹೂಡಿದೆ. ಇದರಲ್ಲಿ ಕೇಂದ್ರದ ಪಾಲಿನ ನಿರೀಕ್ಷೆಯಲ್ಲಿ ಹೂಡಲಾಗಿರುವ 8,880.71 ಕೋಟಿ ರೂ. ಸೇರಿದ್ದು, ಯೋಜನೆಗಳ ಪೂರ್ಣಗೊಳಿಸುವ ನಿಟ್ಟಿನಲ್ಲಿ ನಮ್ಮ ಬದ್ಧತೆಯನ್ನು ತೋರಿಸುತ್ತದೆ. ಯೋಜನೆ ಅನುಷ್ಠಾನದಲ್ಲಿ ರಾಜ್ಯ ಯಾವುದೇ ರಾಜಿ ಮಾಡದೆ, ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆ ನೀಡುತ್ತಿದ್ದರೂ, ಕೇಂದ್ರ ಸರ್ಕಾರ ಅನುದಾನ ಬಿಡುಗಡೆ ಮಾಡಲು ವಿಳಂಬ ಮಾಡುತ್ತಿರುವುದು ದುರದೃಷ್ಟಕರ ಎಂದು ಬೇಸರ ವ್ಯಕ್ತಪಡಿಸಿದರು.

ಮೇ 20ರಿಂದ ಮುಷ್ಕರ

ಪುಟ 1 ➡ಸಚಿವರೊಂದಿಗೆ ನಡೆದ ಸಭೆ ಬಳಿಕ ಸಾರಿಗೆ ನೌಕರರು ಸಭೆ ನಡೆಸಿ ಮುಷ್ಕರ ನಡೆಸಲು ತೀರ್ಮಾನಿಸಿದ್ದಾರೆ.

ನೌಕರರ ಬೇಡಿಕೆ: ಬಾಟಾ ಮತ್ತಿತರ ಭತ್ಯೆಗಳನ್ನು ಹೆಚ್ಚಿಸಬೇಕು, 12 ತಿಂಗಳ ಉಳಿದಿರುವ ಬಾಕಿ ಹಣವನ್ನು ಸೇವೆಯಲ್ಲಿರುವ ಹಾಗೂ ನಿವೃತ್ತ ನೌಕರರಿಗೆ ಪಾವತಿಸಬೇಕು. 26 ತಿಂಗಳ ಬಾಕಿ ಹಣ 1272 ಕೋಟಿ ರೂ.ಒಂದೇ ಕಂತಿನಲ್ಲಿ ಪಾವತಿಸಬೇಕು.

₹450 ಕೋಟಿ ಬಿಡುಗಡೆ

ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ನೌಕರರಿಗೆ 2021 ಜ.1ರಿಂದ 2023 ಫೆ.28ರವರೆಗಿನ 26 ತಿಂಗಳ ವೇತನ ಪರಿಷ್ಕರಣೆ ಬಾಕಿ ಹಣದಲ್ಲಿ ಮೊದಲ ಕಂತಾಗಿ 450 ಕೋಟಿ ರೂ. ಬಿಡುಗಡೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಇದರಲ್ಲಿ ಕೆಎಸ್‌ಆರ್‌ಟಿಸಿ 143 ಕೋಟಿ ರೂ., ಬಿಎಂಟಿಸಿ 137 ಕೋಟಿ ರೂ., ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 87 ಕೋಟಿ ರೂ. ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 81 ಕೋಟಿ ರೂ. ಸೇರಿದಂತೆ ಒಟ್ಟು 140 ಕೋಟಿ ರೂ. ನಾಲ್ಕು ಸಂಸ್ಥೆಯ ಅಧಿಕಾರಿ/ನೌಕರರಿಗೆ ಈ ಅನುದಾನ ವಿತರಣೆಯಾಗಲಿದೆ.

ಮಳೆಗೆ ವ್ಯಕ್ತಿ ಸಾವು

• **ಚಿಕ್ಕನಾಯಕನಹಳ್ಳಿ:** ತಾಲೂಕಿನ ಬಿರುಗಾಳಿ ಮಳೆಗೆ ಮರದ ಕೊಂಬೆ ಬಿದ್ದು ಓರ್ವ ವ್ಯಕ್ತಿ ಹಾಗೂ ಹಸು ಮೃತಪಟ್ಟಿರುವ ಘಟನೆ ವರದಿಯಾಗಿದೆ. ಪಟ್ಟಣವಾಸಿ ಖಾಸಗಿ ಬಸ್ ಮಾಲಿಕ ಪುಟ್ಟಣ್ಣ(68) ಮೃತ ದುರ್ದೈವಿ. ತಾಲೂಕಿನ ಹಾಲುಗೊಣ ಗ್ರಾಮದ ಸುನೀಲ್ ಎಂಬುವರ ತೋಟದಲ್ಲಿದ್ದ ಹಸುವಿನ ಮೇಲೆ ತೆಂಗಿನಮರಬಿದ್ದ ಪರಿಣಾಮ ಹಸು ಸ್ಥಳದಲ್ಲಿಯೇ ಮೃತಪಟ್ಟಿದೆ. ತಾಲ್ಲೂಕಿನ ವಮಲಗೊಂಡನಹಳ್ಳಿ, ಮದನಮಡು, ಚಿಕ್ಕರಾಂಪುರ ಮುಂತಾದೆಡೆ ವಿದ್ಯುತ್ ಕಂಬಗಳು ಜಖಂಗೊಂಡಿದ್ದರೆ, ಹಲವು ಗ್ರಾಮಗಳಲ್ಲಿ ಮನೆಗಳ ಛಾವಣಿ ಹಾರಿಹೋಗಿದೆ ಎಂದು ತಹಸೀಲ್ದಾರ್ ಮಮತಾ ತಿಳಿಸಿದ್ದಾರೆ.

ಸಿಡಿಲು ಬಡಿದು ಎರಡು ಹಸುಗಳ ಸಾವು

• **ದೊಡ್ಡಬಳ್ಳಾಪುರ:** ಮಂಗಳವಾರ ರಾತ್ರಿ ಸುರಿದ ಮಳೆಯಿಂದಾಗಿ ಸಿಡಿಲು ಬಡಿದ ಪರಿಣಾಮ ಎರಡು ಸೀಮೆ ಹಸುಗಳು ಮೃತಪಟ್ಟಿರುವ ಘಟನೆ ತಾಲೂಕಿನ ತೂಬಗೆರೆ ಹೋಬಳಿ ಕಾವಲಹಳ್ಳಿ ಆಂಜನೇಯ ಸ್ವಾಮಿ ದೇವಸ್ಥಾನ ಸಮೀಪ ನಡೆದಿದೆ. ಗಂಟಿಗಾನಹಳ್ಳಿ ಗ್ರಾಮದ ರತ್ನಮ್ಮ ಚಿಕ್ಕ ಹೊನ್ನಪ್ಪ ಅವರು ತಮ್ಮ ಹಸುಗಳನ್ನು ತೋಟದಲ್ಲಿರುವ ಮರದ ಕೆಳಗೆ ಕಟ್ಟಿದ್ದರು. ಮಳೆ ಸಂದರ್ಭದಲ್ಲಿ ಸಿಡಿಲು ಬಡಿದ ಪರಿಣಾಮವಾಗಿ ಸ್ಥಳದಲ್ಲೇ 2 ಹಸುಗಳು ಮೃತಪಟ್ಟಿವೆ. ಈ ಘಟನೆ ಸ್ಥಳೀಯ ರೈತರಿಗೆ ಆತಂಕ ಮೂಡಿಸಿದೆ. ಈ ಹಿನ್ನೆಲೆಯಲ್ಲಿ ಸಂಬಂಧಿತ ಇಲಾಖೆ ತಕ್ಷಣ ಸ್ಪಂದಿಸಿ, ಸಂತ್ರಸ್ತರಿಗೆ ಸೂಕ್ತ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿದರು.

ಆಸ್ಪತ್ರೆ ಕಾಂಪೌಂಡ್ ಕುಸಿದು ಏಳು ಸಾವು

ಪುಟ 1 ➡ಘಟನೆ ನಡೆದ ಕೆಲ ಹೊತ್ತಿ ನಲ್ಲಿಯೇ ಸ್ಥಳಕ್ಕೆ ಭೇಟಿ ನೀಡಿದ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು, ಘಟನೆ ಸಂಪೂರ್ಣ ಮಾಹಿತಿ ಪಡೆದುಕೊಂಡರಲ್ಲದೆ, ಗಾಯಾಳುಗಳ ಆರೋಗ್ಯ ವಿಚಾರಿಸಿದರು. ಘಟನಾ ಸ್ಥಳಕ್ಕೆ ಜಿಬಿಎ ಮತ್ತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನು ಕರೆಸಿ ತೀವ್ರ ತರಾಟೆಗೆ ತೆಗೆದುಕೊಂಡ ಅವರು, ಹಳೆಯ ಗೋಡೆಗಳನ್ನು ಗುರುತಿಸಿ ಕ್ರಮ ಕೈಗೊಳ್ಳಲು ನಿಮಗೇನು ತೊಂದರೆ? ನಿಮ್ಮ ನಡುವೆ ಸಮನ್ವಯದ ಕೊರತೆ ಎದ್ದು ಕಾಣುತ್ತಿದೆ.

5 ಲಕ್ಷ ರೂ. ಪರಿಹಾರ

ಕಾಂಪೌಂಡ್ ಕುಸಿತದಿಂದ ಸಾವನ್ನಪ್ಪಿದ ಏಳು ಮಂದಿಯ ಕುಟುಂಬಗಳಿಗೆ ತಲಾ 5 ಲಕ್ಷ ರೂ. ಪರಿಹಾರವನ್ನು ಮುಖ್ಯಮಂತ್ರಿಗಳು ಸ್ಥಳದಲ್ಲೇ ಘೋಷಿಸಿದ್ದಾರೆ. ಗೋಡೆ ಕುಸಿದು ವ್ಯಾಪಾರಿಗಳು ಹಾಗೂ ಸಾರ್ವಜನಿಕರು ಬಲಿಯಾಗಿದ್ದಾರೆ. ಈ ದುರಂತ ಕುರಿತು ತಕ್ಷಣವೇ ಸಮಗ್ರ ತನಿಖೆ ನಡೆಸಿ ವರದಿ ನೀಡುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಿದ್ದಾರೆ. ಬೌರಿಂಗ್ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗಕ್ಕೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು. ಅವರಿಗೆ ಅತ್ಯುತ್ತಮ ಮತ್ತು ಸಂಪೂರ್ಣ ಉಚಿತ ಚಿಕಿತ್ಸೆ ನೀಡುವಂತೆ ಆಸ್ಪತ್ರೆಯ ಮುಖ್ಯಸ್ಥರಿಗೆ ಸೂಚನೆ ನೀಡಿದ್ದಾರೆ.

ಆಸ್ಪತ್ರೆ ಆವರಣದಲ್ಲಿ ಆಕ್ರಂದನ

ಏಳು ಗಾಯಾಳುಗಳಿಗೆ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಅತ್ತ ಶವಾಗಾರದ ಮುಂದೆ ಜಮಾಯಿಸಿರುವ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ನಮ್ಮ ಕುಟುಂಬಕ್ಕೆ ಆಧಾರವಾಗಿದ್ದವರನ್ನು ಕಳೆದುಕೊಂಡೆವು. ಇನ್ನುಮುಂದೆ ನಮಗ್ಯಾರು ದಿಕ್ಕು ಎಂದು ಸಂಬಂಧಿಕರು ಕಣ್ಣೀರಿಡುತ್ತಿದ್ದರು.

ಸ್ಥಳೀಯರ ಕಣ್ಣೀರು

ಬೌರಿಂಗ್ ಆಸ್ಪತ್ರೆಯ ಈ ಕಾಂಪೌಂಡ್ ಗೋಡೆ ಹಳೆಯದಾಗಿತ್ತು ಮತ್ತು ದುರ್ಬಲಗೊಂಡಿತ್ತು ಎಂದು ಸ್ಥಳೀಯರು ಆರೋಪಿಸಿದ್ದಾರೆ. ಸರಿಯಾದ ನಿರ್ವಹಣೆ ಇಲ್ಲದೆ ಮತ್ತು ಮಳೆಯ ಒತ್ತಡದಿಂದಾಗಿ ಈ ಗೋಡೆ ಕುಸಿದಿದೆ ಎನ್ನಲಾಗಿದೆ. ಕಣ್ಣೆದುರೇ ಆಟವಾಡುತ್ತಿದ್ದ ಮಕ್ಕಳು ಮತ್ತು ವ್ಯಾಪಾರ ಮಾಡುತ್ತಿದ್ದವರು ಜೀವ ಕಳೆದುಕೊಂಡಿದ್ದನ್ನು ಕಂಡು ಸ್ಥಳೀಯರು ಕಣ್ಣೀರಿಟ್ಟರು.

ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ

ಘಟನಾ ಸ್ಥಳಕ್ಕೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಚಿವ ಜಮೀರ್ ಅಹಮ್ಮದ್ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡಿದ್ದಾರೆ. ಕೂಡಲೇ ಇಂತಹ ಶಿಥಿಲ ಕಟ್ಟಡಗಳ ಬಗ್ಗೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದ್ದಾರೆ. ಹಿರಿಯ ಅಧಿಕಾರಿಗಳ ಜತೆ ಸಭೆ ನಡೆಸಿ ಘಟನೆಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಮಳೆಗಾಲದ ಸಂದರ್ಭದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ನಗರದಾದ್ಯಂತ ಇರುವ ದುರ್ಬಲ, ಹಳೆಯ ಗೋಡೆಗಳನ್ನು ಗುರುತಿಸಿ, ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಬಿಎ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.
■ ಸಿದ್ದರಾಮಯ್ಯ, ಮುಖ್ಯಮಂತ್ರಿ

ರಾಜ್ಯ ಸರ್ಕಾರ ಇನ್ನಾದರೂ ಎಚ್ಚೆತ್ತುಕೊಂಡು, ಮಳೆಗೆ ಇನ್ನೊಂದು ಅವಘಡ ಸಂಭವಿಸದಂತೆ ಶಿಥಿಲ ನಿರ್ಮಾಣಗಳ ದುರಸ್ತಿ ಸೇರಿದಂತೆ ಎಲ್ಲ ಅಗತ್ಯ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಬೇಕು.
■ ಬಿ.ವೈ ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

1,092 ರೊಬೊಟಿಕ್ ಶಸ್ತ್ರಚಿಕಿತ್ಸೆ

ಪುಟ 1 ➡ಕಿದ್ವಾಯಿ ಸಂಸ್ಥೆಯಲ್ಲಿ ರೊಬೊಟಿಕ್ ಶಸ್ತ್ರಚಿಕಿತ್ಸಾ ಸೇವೆಗಳನ್ನು 2015ರಲ್ಲಿ ಡಾ ವಿನ್ಸಿ ಕ್ಸಿ ರೊಬೊಟಿಕ್ ಶಸ್ತ್ರಚಿಕಿತ್ಸಾ ವ್ಯವಸ್ಥೆಯ ಸ್ಥಾಪನೆಯೊಂದಿಗೆ ಪ್ರಾರಂಭಿಸಲಾಯಿತು. ಇದನ್ನು ಕಾರ್ಯಾರಂಭ ಮಾಡಿದಾಗಿನಿಂದ ವಿವಿಧ ವಿಶೇಷತೆಗಳಲ್ಲಿ ವ್ಯಾಪಕ ಶ್ರೇಣಿಯ ಪ್ರಮುಖ, ಸಂಕೀರ್ಣ ಮತ್ತು ಕನಿಷ್ಠ ಆಕ್ರಮಣಕಾರಿ ಆಂಕೊಲಾಜಿಕಲ್ ಕಾರ್ಯವಿಧಾನಗಳನ್ನು ನಿರ್ವಹಿಸಲು ಈ ವ್ಯವಸ್ಥೆಯನ್ನು ಅತ್ಯುತ್ತಮವಾಗಿ ಮತ್ತು ವ್ಯಾಪಕವಾಗಿ ಬಳಸಿಕೊಳ್ಳಲಾಗಿದೆ. ರೊಬೊಟಿಕ್ ನೆರವಿನ ಶಸ್ತ್ರಚಿಕಿತ್ಸೆಯ ಪರಿಚಯವು ಶಸ್ತ್ರಚಿಕಿತ್ಸಾ ನಿಖರತೆಯನ್ನು ಗಮನಾರ್ಹವಾಗಿ ಹೆಚ್ಚಿಸಿದೆ. ಆರಂಭದಿಂದ ಈವರೆಗೆ ಒಟ್ಟು 1,092 ರೊಬೊಟಿಕ್ ನೆರವಿನ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದೆ.

ಪ್ರಾಸ್ಟೇಟ್ (ಮೂತ್ರನಾಳ) ಕ್ಯಾನ್ಸರ್, ಗರ್ಭಕಂಠ ಕ್ಯಾನ್ಸರ್, ತಲೆ ಮತ್ತು ಕುತ್ತಿಗೆ ಕ್ಯಾನ್ಸರ್, ಎದೆಗೂಡಿನ ಕ್ಯಾನ್ಸರ್‌ಗಳು ಸೇರಿ ಆಯ್ದ ಕ್ಯಾನ್ಸರ್ ಪ್ರಕರಣಗಳಲ್ಲಿ ರೋಗಿಗಳಿಗೆ ಈ ತಂತ್ರಜ್ಞಾನದ ನೆರವಿನಿಂದ ಶಸ್ತ್ರಚಿಕಿತ್ಸೆ ನಡೆಸಲಾಗುತ್ತಿದೆ.

ರೊಬೊಟಿಕ್ ಶಸ್ತ್ರಚಿಕಿತ್ಸೆಯ ಕಾರ್ಯವಿಧಾನಗಳಲ್ಲಿ ಗಣನೀಯ ಪ್ರಮಾಣವನ್ನು ಆಯುಷ್ಮಾನ್ ಭಾರತ್ –ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಉಚಿತವಾಗಿ ನಡೆಸಲಾಗಿದೆ. ಇದರಿಂದಾಗಿ ಆರ್ಥಿಕವಾಗಿ ಹಿಂದುಳಿದ ರೋಗಿಗಳಿಗೆ ಸುಧಾರಿತ ರೊಬೊಟಿಕ್ ಶಸ್ತ್ರಚಿಕಿತ್ಸೆಯ ಪ್ರಯೋಜನಗಳನ್ನು ವಿಸ್ತರಿಸಲಾಗಿದೆ.
■ ಡಾ. ಟಿ. ನವೀನ್, ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ

ರಾಜ್ಯದಲ್ಲಿ ₹653 ಕೋಟಿ ಮೌಲ್ಯದ ಡ್ರಗ್ಸ್ ಪತ್ತೆ

• ಬೆಂಗಳೂರು: ರಾಜ್ಯ ಸರ್ಕಾರ ಮತ್ತು ಪೊಲೀಸ್ ಇಲಾಖೆಗೆ ಬಹುದೊಡ್ಡ ಸವಾಲಾಗಿ ಪರಿಣಮಿಸಿರುವ ನಿಷೇಧಿತ ಮಾದಕ ವಸ್ತು ಜಾಲದ ವಿರುದ್ಧದ ಕಾರ್ಯಾಚರಣೆ ತೀವ್ರಗೊಂಡಿದ್ದರು, ಕಳೆದ ಮೂರು ವರ್ಷ ನಾಲ್ಕು ತಿಂಗಳ ಅವಧಿಯಲ್ಲಿ ರಾಜ್ಯಾದ್ಯಂತ ಪೊಲೀಸರು ಬರೋಬ್ಬರಿ 653 ಕೋಟಿ ರೂ. ಮೌಲ್ಯದ ಡ್ರಗ್ಸ್ ಪತ್ತೆಹಚ್ಚಿದ್ದು, ಒಟ್ಟು 18,593 ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ.

ರಾಜಧಾನಿ ಬೆಂಗಳೂರು ಮಾದಕ ವಸ್ತು ಮಾರಾಟದ ಕೇಂದ್ರಬಿಂದುವಾಗಿ ಗುರುತಿಸಿಕೊಳ್ಳುತ್ತಿದೆ. 2026ರ ಕೇವಲ ನಾಲ್ಕು ತಿಂಗಳಲ್ಲಿ ಬೆಂಗಳೂರಿನಲ್ಲಿ 130.18 ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ. 2024 ರಿಂದ 2026 ರ ಏಪ್ರಿಲ್ ಅಂತ್ಯದ ವರೆಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟು 25,500 ಕೆ.ಜಿ.ಗೂ ಅಧಿಕ ವಿವಿಧ ಮಾದರಿಯ ಮಾದಕ ವಸ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

2025ರಲ್ಲಿ ಸಿಸಿಬಿ ಪೊಲೀಸರ ಕ್ರಮ: ಪ್ರಸಕ್ತ ವರ್ಷದಲ್ಲಿ ಸಿಸಿಬಿ ಪೊಲೀಸರು ನಡೆಸಿದ ಕಾರ್ಯಾಚರಣೆಗಳಲ್ಲಿ ಗಮನಾರ್ಹ ಯಶಸ್ಸು ಲಭಿಸಿದೆ. ಈ ಅವಧಿಯಲ್ಲಿ ಒಟ್ಟು 71 ಪ್ರಮುಖ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದ್ದು, ಡ್ರಗ್ಸ್ ದಂಧೆಯಲ್ಲಿ ತೊಡಗಿದ್ದ 112 ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತರಲ್ಲಿ 85 ಮಂದಿ ಭಾರತೀಯ ಪ್ರಜೆಗಳಾಗಿದ್ದರೆ, 27 ಮಂದಿ ವಿದೇಶಿ ಪ್ರಜೆಗಳಾಗಿದ್ದಾರೆ. ಈ ಕಾರ್ಯಾಚರಣೆಗಳ ವೇಳೆ ಒಟ್ಟು 170.64 ಕೆ.ಜಿ. ವಿವಿಧ ಮಾದರಿಯ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಜಪ್ತಿ ಮಾಡಲಾದ ಈ ಮಾದಕ ದ್ರವ್ಯಗಳ ಒಟ್ಟು ಅಂದಾಜು ಮೌಲ್ಯ ಬರೋಬ್ಬರಿ 115.49 ಕೋಟಿ ರೂ.ಎಂದು ಅಂದಾಜಿಸಲಾಗಿದೆ.



> ರಾಜ್ಯದಲ್ಲಿ ಒಂದು ದಿನವಾದರೂ ಡ್ರಗ್ಸ್ ಸಿಗದ ರೀತಿಯಲ್ಲಿ ಪೊಲೀಸರು ಕರ್ತವ್ಯ ನಿರ್ವಹಿಸಬೇಕು. ಬೆಂಗಳೂರು ಸೇರಿದಂತೆ ಇಡೀ ರಾಜ್ಯವನ್ನು ಡ್ರಗ್ಸ್ ಮುಕ್ತಗೊಳಿಸುವುದೇ ನಮ್ಮ ಸರ್ಕಾರದ ಗುರಿ. ಡ್ರಗ್ಸ್ ಸಾಗಾಟ, ಉತ್ಪಾದನೆ ಮತ್ತು ಉಪಯೋಗ ಈ ಮೂರೂ ವಿಷಯಗಳ ಬಗ್ಗೆ ಪೊಲೀಸರು ತೀವ್ರ ನಿಗಾ ವಹಿಸಬೇಕು.
> ■ ಡಾ.ಜಿ.ಪರಮೇಶ್ವರ, ಗೃಹ ಸಚಿವ

ಎರಡುವರೆ ವರ್ಷದಲ್ಲಿ 1,167 ಜನ ಗಡೀಪಾರು: ರಾಜ್ಯದಲ್ಲಿ ಕಾನೂನು ಬಾಹಿರ ಚಟುವಟಿಕೆ ಹಾಗೂ ಮಾದಕ ವಸ್ತುಗಳನ್ನು ಮಾರಾಟ ಮಾಡಲು ಮುಂದಾಗಿದ್ದ 1,167 ಜನ ವಿದೇಶಿಗರನ್ನು ಗಡೀಪಾರು ಮಾಡಲಾಗಿದೆ. 2024ರಲ್ಲಿ 339 ವಿದೇಶಿಗರು, 2025ರಲ್ಲಿ 401 ಹಾಗೂ 2026ರ ಏಪ್ರಿಲ್ ಅಂತ್ಯದ ವೇಳೆಗೆ 427 ಜನರನ್ನು ಗಡೀಪಾರು ಮಾಡಲಾಗಿದೆ. ಇದರಲ್ಲಿ 286 ಜನ ಬಾಂಗ್ಲಾದೇಶದವರನ್ನು ಭಾರತದ ಗಡಿ ಪ್ರದೇಶದ ಹತ್ತಿರಕ್ಕೆ ಕರೆದುಕೊಂಡು ಹೋಗಿ ಬಿಡಲಾಗಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ತಿಳಿಸಿದರು.

ವರ್ಷವಾರು ಅಂಕಿ ಅಂಶಗಳ ವಿವರ

- **2023:** 6,767 ಪ್ರಕರಣಗಳು ದಾಖಲಾಗಿದ್ದು, 133.95 ಕೋಟಿ ರೂ. ಮೌಲ್ಯದ 11,257 ಕೆ.ಜಿ ಡ್ರಗ್ಸ್ ಜಪ್ತಿ.
- **2024:** 4,188 ಪ್ರಕರಣಗಳಡಿ 196 ಕೋಟಿ ರೂ. ಮೌಲ್ಯದ 6,066 ಕೆ.ಜಿ ಮಾದಕ ವಸ್ತು ವಶ.
- **2025:** 6,827 ಪ್ರಕರಣಗಳಲ್ಲಿ 287 ಕೋಟಿ ರೂ.ಮೌಲ್ಯದ 7,421 ಕೆ.ಜಿ ಡ್ರಗ್ಸ್ ಪತ್ತೆ.
- **2026 (ಏಪ್ರಿಲ್ ವರೆಗೆ):** 811 ಪ್ರಕರಣ ದಾಖಲಾಗಿದ್ದು, 166.18 ಕೋಟಿ ರೂ. ಮೌಲ್ಯದ 756 ಕೆ.ಜಿ. ಡ್ರಗ್ಸ್ ಜಪ್ತಿ ಮಾಡಲಾಗಿದೆ.

ಪರಿಶೀಲನೆ...



ಬೆಂಗಳೂರಿನಲ್ಲಿ ಬುಧವಾರ ಸಂಜೆ ಬಿರುಗಾಳಿ ಮಳೆಗೆ ಶಿವಾಜಿನಗರ ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿದ ಪ್ರದೇಶಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕಿರುಸುದ್ದಿ

ವಿದ್ಯಾರ್ಥಿ ಆತ್ಮಹತ್ಯೆ: ಮೂವರು ಪೊಲೀಸರ ಅಮಾನತು

• ಧಾರವಾಡ: ಪೊಲೀಸರ ಕಿರುಕುಳದಿಂದ ಬಿಎಸ್ಸಿ ವಿದ್ಯಾರ್ಥಿ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿದ್ಯಾಗಿರಿ ಪೊಲೀಸ್ ಠಾಣೆಯ ಮೂವರು ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ. ಡ್ರಗ್ಸ್ ಡ್ರೈವ್ ವೇಳೆ ಸಿಕ್ಕಿಬಿದ್ದವರಿಂದ ಪೊಲೀಸರು ಹಣ ಪಡೆಯುವುದು ಸಾಬೀತಾಗಿದೆ. ಹೆಡ್ ಕಾನ್ಸ್‌ಟೆಬಲ್ ಚಂದ್ರು ನಡುವಿನಮನಿ, ಕಾನ್ಸ್‌ಟೆಬಲ್‌ಗಳಾದ ಕಿರಣ್ ಡೊಕ್ಕನವರ್ ಹಾಗೂ ಸೈಯದ್ ತಹಶೀಲ್ದಾರ್ ಅಮಾನತುಗೊಂಡ ಠಾಣೆಯ ಸಿಬ್ಬಂದಿ. ಇಲ್ಲಿಯ ಗಿರಿನಗರದ, ಮೂಲತಃ ಬಾಗಲಕೋಟ ಜಿಲ್ಲೆಯ ಆದಿತ್ಯಾ ಮ್ಯಾಗೇರಿ ಆತ್ಮಹತ್ಯೆ ಪ್ರಕರಣದಲ್ಲಿ ಈ ಮೂವರನ್ನು ಅಮಾನತು ಮಾಡಲಾಗಿದೆ. ಗಾಂಜಾ ಸೇವನೆಯ ಆರೋಪದಡಿ ಆದಿತ್ಯಾ ಮ್ಯಾಗೇರಿ ಸೇರಿದಂತೆ ಹತ್ತು ಜನ ವಿದ್ಯಾರ್ಥಿಗಳನ್ನು ವಿದ್ಯಾಗಿರಿ ಠಾಣೆ ಪೊಲೀಸರು ಶನಿವಾರ ವಶಕ್ಕೆ ಪಡೆದಿದ್ದರು. ಆದರೆ, ಗಾಂಜಾ ಸೇವನೆಯ ವರದಿಯಲ್ಲಿ ಗಾಂಜಾ ಸೇವನೆ ಮಾಡಿರಲಿಲ್ಲ ಎಂಬ ವರದಿ ಬಂದಿತ್ತು. ಇಷ್ಟಾಗಿಯೂ ಈ ಪ್ರಕರಣದಿಂದ ಹೊರ ಬರಲು ಪೊಲೀಸರು ಹಣ ಕೇಳಿದ್ದರು. ತಂದೆ ಇಲ್ಲದ ತಾಯಿ ಆಶ್ರಯದಲ್ಲಿದ್ದ ಆದಿತ್ಯಾ ಈ ವಿಚಾರವಾಗಿ ಸೋಮವಾರ ಮನನೊಂದು ಆದಿತ್ಯಾ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದನು. ಪ್ರಕರಣ ಗಂಭೀರವಾಗಿ ಪರಿಗಣಿಸಿದ ಪೊಲೀಸ್ ಇಲಾಖೆ ಮೂವರನ್ನು ಅಮಾನತು ಮಾಡಿದೆ.

ಎಸ್‌ಡಿಎ ಸಿಬ್ಬಂದಿ ಲೋಕಾ ಬಲೆಗೆ

• ಕೊಪ್ಪಳ: ಪ್ರಾದೇಶಿಕ ಸಾರಿಗೆ ಕಚೇರಿಯ ದ್ವಿತೀಯ ದರ್ಜೆ ಸಹಾಯಕ ರಂಜಿತ್ ಎಂಬುವವರು ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಶೋರೂಮ್ ಟ್ರೇಡ್ ಲೈಸೆನ್ಸ್ ನೀಡಲು ಹಣಕ್ಕೆ ಬೇಡಿಕೆಯಿಟ್ಟಿದ್ದ ಈ ಸಿಬ್ಬಂದಿಯನ್ನು ರೆಡ್ ಹ್ಯಾಂಡ್ ಆಗಿ ಹಿಡಿಯಲಾಗಿದೆ. ದೂರುದಾರರಾದ ನಯೀಮ್ ಎಂಬುವವರು ಕುಷ್ಟಗಿ, ಕಾರಟಗಿ ಹಾಗೂ ಹುಲಿಗಿಯಲ್ಲಿ ಹೊಸ ಶೋರೂಮ್‌ಗಳನ್ನು ತೆರೆಯಲು ಪರವಾನಿಗೆ ಕೋರಿ ಮೂರು ತಿಂಗಳ ಹಿಂದೆ ಅರ್ಜಿ ಸಲ್ಲಿಸಿದ್ದರು. ಈ ಪರವಾನಿಗೆ ನೀಡಲು ಎಸ್‌ಡಿಎ ರಂಜಿತ್ ಲಂಚಕ್ಕೆ ಬೇಡಿಕೆಯಿಟ್ಟಿದ್ದರು ಎನ್ನಲಾಗಿದೆ. ನಯೀಮ್ ಅವರು ನೀಡಿದ ದೂರಿನನ್ವಯ ಲೋಕಾಯುಕ್ತ ಪೊಲೀಸರು ಕಾರ್ಯಾಚರಣೆ ನಡೆಸಿದರು. ರಂಜಿತ್ ಅವರು 21 ಸಾವಿರ ರೂಪಾಯಿ ಲಂಚದ ಹಣವನ್ನು ವಿನಯ್ ಎಂಬಾತನ ಕೈಗೆ ನೀಡುವಂತೆ ಸೂಚಿಸಿದಾಗ, ರಾಯಚೂರು ಲೋಕಾಯುಕ್ತ ಡಿವೈಎಸ್‌ಪಿ ಲೋಕೇಶ್ ನೇತೃತ್ವದ ತಂಡ ದಾಳಿ ನಡೆಸಿ ಇಬ್ಬರನ್ನೂ ವಶಕ್ಕೆ ಪಡೆದಿದೆ.

ಯಡಿಯೂರಪ್ಪ ಪರಿಶ್ರಮದ ಮುಖ್ಯಮಂತ್ರಿ: ವಿಜಯೇಂದ್ರ

ಚಿತ್ರದುರ್ಗ: ಬಿಎಸ್.ಯಡಿಯೂರಪ್ಪನವರು ಅದೃಷ್ಟದ ಮುಖ್ಯಮಂತ್ರಿಯಲ್ಲ, ಜನರಿಂದ ಆಯ್ಕೆಯಾದ ಪರಿಶ್ರಮದ ಮುಖ್ಯಮಂತ್ರಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ಹೇಳಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ 50 ವರ್ಷದ ರಾಜಕೀಯ ಜೀವನದ ಹಿನ್ನಲೆಯಲ್ಲಿ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಅಭಿಮಾನೋತ್ಸವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಬುಧವಾರ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿ.ಎಸ್. ಯಡಿಯೂರಪ್ಪನವರು ಅಧಿಕಾರಕ್ಕಾಗಿ ಬಂದವರಲ್ಲ. ಕರ್ನಾಟಕ ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದೇ ತರುತ್ತೇನೆ ಎಂಬ ಹಠದಲ್ಲಿ ರಾಜ್ಯದಲ್ಲಿ ಪ್ರವಾಸ ಮಾಡಿ ಪಕ್ಷವನ್ನು ಅಧಿಕಾರಕ್ಕೆ ತಂದರು ಎಂದರು.

₹136 ಕೋಟಿ ಟೆಂಡರ್, ನಿತ್ಯ 12.5 ಟನ್ ತುಪ್ಪ: ಡಿ.ಕೆ.ಸುರೇಶ್

ತಿರುಪತಿಗೆ ನಂದಿನಿ ತುಪ್ಪ

• ಬೆಂಗಳೂರು: ತಿರುಪತಿಗೆ ನಂದಿನಿ ತುಪ್ಪ ಪೂರೈಕೆಗೆ 136 ಕೋಟಿ ರೂ. ಮೊತ್ತದಲ್ಲಿ ಬಮೂಲ್ ಟೆಂಡರ್ ಪಡೆದಿದ್ದು, ಪ್ರತಿನಿತ್ಯ 12.5 ಟನ್‌ನಂತೆ ಮುಂದಿನ 6 ತಿಂಗಳು ತುಪ್ಪ ಸರಬರಾಜಾಗಲಿದೆ. ಬಮುಲ್ ಒಕ್ಕೂಟ ಟಿಟಿಡಿ ಜೊತೆ ಪ್ರತ್ಯೇಕವಾಗಿ ಒಪ್ಪಂದ ಮಾಡಿಕೊಂಡಿದೆ ಎಂದು ಬಮುಲ್ ಅಧ್ಯಕ್ಷ ಸಂಸದ ಡಿ.ಕೆ. ಸುರೇಶ್ ತಿಳಿಸಿದರು.

ತಿರುಪತಿಗೆ ತುಪ್ಪ ಪೂರೈಕೆ ವಾಹನಗಳಿಗೆ ಹಸಿರು ಬಾವುಟ ತೋರಿ ಬೀಳ್ಕೊಟ್ಟ ನಂತರ ಬಮೂಲ್ ಕಚೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮುಂದಿನ 6 ತಿಂಗಳ ಕಾಲ ತಿರುಮಲ ಸನ್ನಿಧಾನಕ್ಕೆ ಬಮುಲ್‌ನಿಂದ 20 ಲಕ್ಷ ಕೆ.ಜಿ ತುಪ್ಪವನ್ನು ಸರಬರಾಜು ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಸಾಗಾಣಿಕೆಗೆ ಡಿಜಿಟಲ್ ಲಾಕ್ ತಂತ್ರಜ್ಞಾನ ಬಳಸಿಕೊಳ್ಳಲಾಗಿದೆ. ನಾವು ಕೊಟ್ಟ ಪಾಸ್‌ವರ್ಡ್ ಅಲ್ಲಿ ನಮೂದಿಸಿದರೆ ಮಾತ್ರ ತೆರೆಯಬಹುದು. ಗ್ರಾಹಕರಿಗೂ ಸಹ ಇದೆ ರೀತಿ ಗುಣಮಟ್ಟದ ಪದಾರ್ಥ ನೀಡುತ್ತಿದ್ದೇವೆ. ನಂದಿನಿ ಹೆಸರನ್ನು ದುರ್ಬಳಕೆ ಮಾಡಿಕೊಂಡು ಮಾರುಕಟ್ಟೆಯಲ್ಲಿ ಅಕ್ರಮ ಎಸಗುತ್ತಿರುವವರ ವಿರುದ್ಧ ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ. ಈಗಾಗಲೇ ಅಂತಹವರ ವಿರುದ್ಧ ಒಕ್ಕೂಟದಿಂದ ದೂರುಗಳನ್ನು ನೀಡಲಾಗಿದೆ ಎಂದರು.

ನಾವು ಈಗ 1 ಕೋಟಿ ಲೀಟರ್ ಹಾಲಿನ ಸಂಗ್ರಹಣೆ ಮಾಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ವಿಶೇಷ ಹಾಲಿನ ಉತ್ಪನ್ನಗಳನ್ನು ಮಾರುಕಟ್ಟೆಗೆ ತರುವ ಬಗ್ಗೆ ಆಲೋಚನೆಯಿದೆ. ದೇಸಿ ತಳಿ ಹಾಲು, ಕೊಬ್ಬು ರಹಿತ, ಲ್ಯಾಕ್ಟೋಸ್ ಫ್ರೀ, ಪ್ರೋಬಯಾಟಿಕ್ ಮೊಸರು ಹೀಗೆ ಅನೇಕ ಉತ್ಪನ್ನಗಳ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ. ಮಾರುಕಟ್ಟೆಗೆ ಅನುಗುಣವಾಗಿ ನಾವು ನೀಡಬೇಕಿದೆ. ಇದರ ಬಗ್ಗೆ ಒಂದಷ್ಟು ಸಂಶೋಧನೆ ಕೂಡ ನಡೆಸುತ್ತಿದ್ದೇವೆ ಎಂದರು.



ದರ ಏರಿಕೆ ಪ್ರಸ್ತಾವನೆ ಸದ್ಯಕ್ಕಿಲ್ಲ

ಸದ್ಯಕ್ಕೆ ಹಾಲಿನ ದರ ಏರಿಕೆ ಪ್ರಸ್ತಾವನೆ ಇಲ್ಲ. ಹಾಲಿನ ದರ ಮಾರುಕಟ್ಟೆಯಲ್ಲಿ ಎಷ್ಟಿದೆ ಎಂದು ಅಧ್ಯಯನ ಮಾಡಲಾಗುವುದು. ನಮ್ಮಲ್ಲೇ ಒಂದಷ್ಟು ಲೋಪದೋಷಗಳಿವೆ. ಅದನ್ನು ಸರಿಪಡಿಸಲು ಸರ್ಕಾರದ ಮುಂದೆ ಅನುಮತಿ ಕೇಳುತ್ತೇವೆ. ಉತ್ಪನ್ನಗಳ ಪ್ಯಾಕಿಂಗ್ ಸಲಕರಣೆಗಳ ಖರೀದಿ ವೆಚ್ಚ ಹೆಚ್ಚಳವಾಗುತ್ತಿದೆ. ಈ ಬಗ್ಗೆ ಕೆಎಂಎಫ್ ಜೊತೆ ಮಾತನಾಡಿ ಚಿಂತನೆ ಮಾಡುತ್ತೇವೆ. ಖಾಸಗಿಯವರು ಹಾಲಿನ ದರವನ್ನು 2 ರೂಪಾಯಿ ಹೆಚ್ಚಳ ಮಾಡಿದ್ದಾರೆ. ನಾವು ಸರ್ಕಾರದ ಅಧೀನದಲ್ಲಿ ಇರುವ ಕಾರಣಕ್ಕೆ ಇದನ್ನು ಸರ್ಕಾರದ ಗಮನಕ್ಕೆ ತರುತ್ತೇವೆ. ನಾವು ಗುಣಮಟ್ಟದ ಪದಾರ್ಥ ನೀಡಬೇಕು ಎನ್ನುವ ಗುರಿ ಹೊಂದಿದ್ದೇವೆ ಎಂದರು.

ದಿನಕ್ಕೆ 20 ಲಕ್ಷ ಲೀಟರ್ ಹಾಲು ಸಂಗ್ರಹ ಗುರಿ

ಬಮುಲ್‌ನಲ್ಲಿ ಪ್ರತಿನಿತ್ಯ 17.5 ಲಕ್ಷ ಲೀಟರ್ ಹಾಲನ್ನು ಪ್ರತಿನಿತ್ಯ ಶೇಖರಣೆ ಮಾಡಲಾಗುತ್ತಿದೆ. ಈ ವರ್ಷದ ನಮ್ಮ ಗುರಿ 20–21 ಲಕ್ಷ ಲೀಟರ್ ಇದೆ. ಹಾಲಿನ ಹೆಚ್ಚಳಕ್ಕೆ ಉತ್ಪಾದನಾ ಸಂಘಗಳಲ್ಲಿ ವಿಶೇಷ ತರಬೇತಿ ನೀಡಲಾಗುತ್ತಿದೆ. ಹೆಚ್ಚಿನ ಹೆಣ್ಣು ಕರುಗಳೇ ಆಗಬೇಕು ಎಂದು ಕಳೆದ ಜನವರಿಯಿಂದ ಕಾರ್ಯಕ್ರಮ ರೂಪಿಸಿ ಪ್ರತಿಹಂತದಲ್ಲಿಯೂ ಮೂರು ಲಕ್ಷ ಸೀಮನ್ಸ್ ಖರೀದಿ ಮಾಡಿ ರಾಸುಗಳಿಗೆ ಹಾಕಲಾಗುತ್ತಿದೆ. ಹಸುಗಳ ಬೆಳವಣಿಗೆ, ಆರೋಗ್ಯದ ಬಗ್ಗೆ ತರಬೇತಿ ನೀಡಲಾಗುತ್ತಿದೆ ಎಂದರು.

ತಂತ್ರಜ್ಞಾನಕ್ಕೆ ಸಚಿವ ಪರಮೇಶ್ವರ ಚಾಲನೆ

112 ಸೇವೆಯಲ್ಲಿ ಎಐ

• ಬೆಂಗಳೂರು: ಸಿಲಿಕಾನ್ ಸಿಟಿಯ ರಕ್ಷಣಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು ನಗರ ಪೊಲೀಸ್ ಇಲಾಖೆಯು ನಮ್ಮ 112 ಸೇವೆ ಬಹುಭಾಷಾ ಎಐ ವ್ಯವಸ್ಥೆಯನ್ನು ಜಾರಿಗೆ ತಂದಿದೆ.

ಬುಧವಾರ ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ ಈ ಹೊಸ ತಂತ್ರಜ್ಞಾನಕ್ಕೆ ಚಾಲನೆ ನೀಡಿದರು.

ದೇಶದಲ್ಲೇ ಮೊದಲು: 10ಕ್ಕೂ ಹೆಚ್ಚು ಭಾಷೆಗಳಲ್ಲಿ ಲಭ್ಯ: ದೇಶದಲ್ಲಿ ಮೊದಲ ಬಾರಿಗೆ ಇಂತಹ ಸುಧಾರಿತ ವ್ಯವಸ್ಥೆಯನ್ನು ಬೆಂಗಳೂರಿನಲ್ಲಿ ಜಾರಿಗೆ ತರಲಾಗಿದೆ. ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಈ ಸೇವೆಯು ಕನ್ನಡ, ಹಿಂದಿ, ತಮಿಳು, ಮಲೆಯಾಳ, ಮರಾಠಿ, ಅಸ್ಸಾಮಿ ಸೇರಿದಂತೆ ಪ್ರಮುಖ ಭಾರತೀಯ ಭಾಷೆಗಳು ಮಾತ್ರವಲ್ಲದೆ ವಿದೇಶಿ ಭಾಷೆಗಳಾದ ಸ್ಪ್ಯಾನಿಷ್, ಫ್ರೆಂಚ್ ಹಾಗೂ ಅರೇಬಿಕ್‌ನಂತಹ ಭಾಷೆಗಳನ್ನೂ ಒಳಗೊಂಡಿದೆ. ನಗರದಲ್ಲಿ ನೆಲೆಸಿರುವ ಹೊರರಾಜ್ಯದ ವಿದ್ಯಾರ್ಥಿಗಳು, ಉದ್ಯೋಗಿಗಳು ಹಾಗೂ ವಿದೇಶಿ ಪ್ರವಾಸಿಗರಿಗೆ ತುರ್ತು ಸಂದರ್ಭದಲ್ಲಿ ಭಾಷೆಯ ಸಮಸ್ಯೆ ಎದುರಾಗಬಾರದು ಎಂಬ ಉದ್ದೇಶದಿಂದ ಈ ಸ್ವಯಂ ಚಾಲಿತ ಭಾಷಾಂತರ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಗಿದೆ ಎಂದರು. ಈ ವ್ಯವಸ್ಥೆಯಿಂದಾಗಿ ಕರೆ ಮಾಡುವವರ ಮಾಹಿತಿಯನ್ನು ಎಐ ತಂತ್ರಜ್ಞಾನವು ತಕ್ಷಣವೇ ಅರ್ಥೈಸಿ ದಾಖಲಿಸಿ ಕೊಳ್ಳುವುದರಿಂದ, ಪೊಲೀಸರು ಸ್ಥಳಕ್ಕೆ ತಲುಪುವ ಸಮಯ ಗಣನೀಯವಾಗಿ ಕಡಿಮೆಯಾಗಲಿದೆ.



ಐಪಿಎಲ್ ಪಂದ್ಯಗಳ ಯಶಸ್ವಿ ಭದ್ರತೆ

ಇದೇ ವೇಳೆ ನಗರದ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯಾವಳಿಯ ನಿರ್ವಹಣೆಯ ಬಗ್ಗೆಯೂ ಗೃಹ ಸಚಿವರು ಮಾಹಿತಿ ನೀಡಿದರು. ಪಂದ್ಯಗಳ ವೇಳೆ ಯಾವುದೇ ಅಹಿತಕರ ಘಟನೆ ನಡೆಯದಂತೆ 500ಕ್ಕೂ ಹೆಚ್ಚು ಸಿಸಿಟಿವಿ ಮತ್ತು ಡ್ರೋನ್ ಕ್ಯಾಮೆರಾಗಳ ಮೂಲಕ ಎಐ ಆಧಾರಿತ ನಿಗಾ ವಹಿಸಲಾಗಿತ್ತು. ಕ್ಯೂಆರ್ ಕೋಡ್ ಆಧಾರಿತ ಡಿಜಿಟಲ್ ಟಿಕೆಟ್ ಜಾರಿಯಿಂದ ಅಕ್ರಮ ಟಿಕೆಟ್ ಮಾರಾಟಕ್ಕೆ ಕಡಿವಾಣ ಬಿದ್ದಿದೆ. ವಿಶೇಷವಾಗಿ, ಮೆಟ್ರೊ ಸಂಚಾರಕ್ಕೆ ಐಪಿಎಲ್ ಟಿಕೆಟ್ ಬಳಸುವ ಅವಕಾಶದಿಂದಾಗಿ ಪ್ರತಿ ಪಂದ್ಯದಲ್ಲಿ ಸುಮಾರು 19ರಿಂದ 20 ಸಾವಿರ ಪ್ರೇಕ್ಷಕರು ಮೆಟ್ರೊ ಸೇವೆಯ ಲಾಭ ಪಡೆದಿದ್ದಾರೆ ಎಂದು ಅವರು ತಿಳಿಸಿದರು.

ಕೊಪ್ಪ ಗ್ರಾಮದಲ್ಲಿ ಸಾಮಾಜಿಕ ಬಹಿಷ್ಕಾರ

• ಬೆಳಗಾವಿ: ತಾಲೂಕಿನ ಕೊಂಡಸಕೊಪ್ಪ ಗ್ರಾಮದ ಕುರುಬ ಸಮಾಜದ ಕುಟುಂಬವೊಂದರ ಮೇಲೆ ಅದೇ ಸಮಾಜದವರು ಸಾಮಾಜಿಕ ಬಹಿಷ್ಕಾರ ಹಾಕಿದ ಘಟನೆ ನಡೆದಿದ್ದು, ಅಲ್ಲದೇ ಆ ಕುಟುಂಬದ ಜೊತೆ ಮಾತಾಡಿದವರಿಗೆ 5000 ರೂ. ದಂಡ ಹಾಗೂ ಮಾತಾಡಿದವರ ಬಗ್ಗೆ ಮಾಹಿತಿ ಕೊಟ್ಟವರಿಗೆ 1000 ರೂಪಾಯಿ ಬಹುಮಾನ ಘೋಷಣೆ ಮಾಡಲಾಗಿದೆ.

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತವರು ಕ್ಷೇತ್ರದಲ್ಲಿಯೇ ನಡೆದಿರುವ ಘಟನೆ ಭಾರಿ ಚರ್ಚೆಗೆ ಕಾರಣವಾಗಿದೆ. ಕೊಂಡುಸಕೊಪ್ಪ ಗ್ರಾಮದ ಕೆಲ ಪಂಚರು ದೇವಸ್ಥಾನ ಪೂಜೆ ಹಾಗೂ ಪ್ರೀತಿ ವಿಚಾರಕ್ಕೆ ಸಂಬಂಧಿಸಿದಂತೆ ಈ ಕ್ರಮ ಕೈಗೊಂಡಿದ್ದಾರೆ. ಈ ಬಗ್ಗೆ ಮಾತನಾಡಿದ ಆಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿವೆ.

ಗ್ರಾಮದ ಬೀರದೇವರ ಪೂಜಾರಿ ಆಗಿದ್ದ ಈ ಕುಟುಂಬಕ್ಕೆ ಸಹೋದರ ಸಂಬಂಧಿಗಳೇ ಬಹಿಷ್ಕಾರ ಹಾಕಿದ್ದಾರೆ ಎನ್ನಲಾಗುತ್ತಿದೆ. ಜತೆಗೆ ದೇವಾಲಯದ ಪೂಜೆ ವಿಚಾರದಲ್ಲಿ ಪಂಚ ಕಮಿಟಿ ಜೊತೆಗೆ ಭಿನ್ನಾಭಿಪ್ರಾಯ ಮೂಡಿತ್ತು. ದೇವಾಲಯದ ಪೂಜಾರಿ ಹೇಳುವ ಭವಿಷ್ಯಕ್ಕೆ ವಿರೋಧ ವ್ಯಕ್ತಪಡಿಸಿದ್ದರಂತೆ ಈ ಎರಡು ಕಾರಣ ಮುಂದಿಟ್ಟುಕೊಂಡು ಪಂಚ ಕಮಿಟಿಯಿಂದ ಕುಟುಂಬಕ್ಕೆ ಬಹಿಷ್ಕಾರದ ಶಿಕ್ಷೆ ಕೊಟ್ಟಿದ್ದಾರೆ ಎನ್ನುವ ಆರೋಪವಿದೆ.

ಬಹಿಷ್ಕಾರ ಮಾಡಿದ ಕುಟಂಬದ ಮನೆ ಮೇಲೆ ರಾತ್ರಿಯಾದರೆ ಕಲ್ಲುಗಳು ಬೀಳುತ್ತಿವೆಯಂತೆ. ಊರಲ್ಲಿ ಯಾರೂ ಮಾತನಾಡುತ್ತಿಲ್ಲ ಮದುವೆ, ಕಾರ್ಯಕ್ರಮಗಳಿಗೆ ಆಹ್ವಾನ ನೀಡುತ್ತಿಲ್ಲ. ಐದು ವರ್ಷದ ಮಗುವನ್ನೂ ಜನರು ದೂರ ಇಟ್ಟಿದ್ದಾರೆ. ಈ ಸಂಬಂಧ ಪೊಲೀಸರಿಗೆ ದೂರು ನೀಡಲಾಗಿದೆ.

ಈ ಬಗ್ಗೆ ಖುದ್ದಾಗಿ ಕುಟುಂಬದವರು ಹಿರೇಬಾಗೇವಾಡಿ ಠಾಣೆಗೆ 10 ಮಂದಿಯ ವಿರುದ್ಧ ಲಿಖಿತ ದೂರು ನೀಡಿದ್ದಾರೆ. ಆದರೆ, ಇದುವರೆಗೆ ಎಫ್‌ಐಆರ್ ದಾಖಲಾಗಿಲ್ಲ ಎಂದು ಬಹಿಷ್ಕಾರಕ್ಕೆ ಒಳಗಾದ ರೇಣುಕಾ ನರಸೋಬಾ ಸಾಂಬ್ರೇಕರ್ ತಿಳಿಸಿದ್ದಾರೆ.



ಸತ್ಯಕ್ಕೆ ದೂರ

ವಿಠಲ ಕರೆಪ್ಪ ಸಾಂಬ್ರೇಕರ ಅವರನ್ನು ಊರಿನಿಂದ ಹೊರ ಹಾಕಿದ್ದೇವೆಂಬುದು ಸತ್ಯಕ್ಕೆ ದೂರ. ಸುಮಾರು ಗಂಟೆಗಳ ಕಾಲ ಸಭೆ ನಡೆಸಿ ಎಲ್ಲವರನ್ನು ಬಗೆಹರಿಸಲು ಪ್ರಯತ್ನಿಸಿದರೂ ಒಪ್ಪದೇ, ಕಾನೂನು ಹೋರಾಟಕ್ಕೆ ಹೋಗುವುದಾಗಿ ಹೇಳಿದ್ದಾರೆ. ದೇವರ ಕಾರ್ಣಿಕ ನಂಬುವುದಿಲ್ಲ ಎಂದ ಬಳಿಕ ಅಲ್ಲಿ ಹೋಗಬೇಡ ಎಂದಿದ್ದು, ನಿಜ. ಆದರೆ, ಸಮಾಜದಿಂದ ದೂರವಾಗಿಸಿ ದಂಡ ಹಾಕಿರುವ ಮಾತು ಸುಳ್ಳು ಎಂದು ಮಾಜಿ ಮಹಾಪೌರ ಯಲ್ಲಪ್ಪ ಕುರಬರ ಸ್ಪಷ್ಟಪಡಿಸಿದರು.

ಸಿಎಂ ಕುರ್ಚಿಗಾಗಿ ಅಹಿಂದ ಜಪ: ಬಿ. ಶ್ರೀರಾಮುಲು

• ವಿಜಯನಗರ: ಕಾಂಗ್ರೆಸ್ ಸರ್ಕಾರದಲ್ಲಿ ದಿನದಿಂದ ದಿನಕ್ಕೆ ಭಿನ್ನಮತ ಸ್ಫೋಟಗೊಳ್ಳುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕೇವಲ ತಮ್ಮ ಕುರ್ಚಿ ಉಳಿಸಿಕೊಳ್ಳಲು ಮತ್ತೆ 'ಅಹಿಂದ' ಸಮಾವೇಶದ ಕಾರ್ಡ್ ಬಳಸುತ್ತಿದ್ದಾರೆ ಎಂದು ಮಾಜಿ ಸಚಿವ ಬಿ. ಶ್ರೀರಾಮುಲು ಟೀಕಿಸಿದ್ದಾರೆ.



ಹೊಸಪೇಟೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ಅಧಿಕಾರಕ್ಕೆ ಯಾವಾಗ ಕಂಟಕ ಬರುತ್ತದೆಯೋ, ಆಗ ಅವರಿಗೆ ಅಹಿಂದ ವರ್ಗ, ಸಮಾವೇಶ ನೆನಪಾಗುತ್ತದೆ. ದಿಲ್ಲಿಯಲ್ಲಿ ಯಾವ ಪುರುಷಾರ್ಥಕ್ಕೆ ಅಹಿಂದ ಸಮಾವೇಶ ಮಾಡುತ್ತಾರೆ ಎಂದು ಪ್ರಶ್ನಿಸಿದರು. ಮೀಸಲಾತಿ ಸಕ್ಸಸ್ ಆಗಿದೆ ಎಂದು ಪ್ರಿಯಾಂಕ್ ಖರ್ಗೆ ಅವರು ಸಿಹಿ ಹಂಚುತ್ತಿದ್ದಾರೆ. ಆದರೆ ವಾಸ್ತವದಲ್ಲಿ ಜನರಿಗೆ ಮೋಸವಾಗಿದೆ. ಮುಡಾ ಪ್ರಕರಣದಲ್ಲಿ ಸಿಎಂ ಪರ ವಾದಿಸಲು ವಕೀಲರು ದಿಲ್ಲಿಯಿಂದ ಬಂದಿದ್ದರು. ಆದರೆ, ಒಳಮೀಸಲಾತಿ ಕುರಿತ ಹೈಕೋರ್ಟ್ ವಿಚಾರಣೆಗೆ ಸರ್ಕಾರದ ಪರ ವಕೀಲರೇ ಹಾಜರಾಗಿಲ್ಲ. ಪರಿಣಾಮ ಎಸ್ ಸಿ, ಎಸ್ ಟಿ ಜನಾಂಗಕ್ಕೆ ಅನ್ಯಾಯವಾಗಿದೆ. ಹಿರಿಯ ನ್ಯಾಯವಾದಿ ಹಾಗೂ ಕಾಂಗ್ರೆಸ್ ನಾಯಕರಾದ ಎ.ಎಸ್. ಉಗ್ರಪ್ಪ ಅವರು ನನ್ನ ಮಾವ. ಅವರಾದರೂ ಸತ್ಯವನ್ನು ಹೇಳಬೇಕು ಎಂದು ತಾಕೀತು ಮಾಡಿದರು.

ಕಾರು ಹರಿದು ಇಬ್ಬರ ಸಾವು

• ಲಕ್ಷ್ಮೇಶ್ವರ (ಗದಗ): ವಾಯು ವಿಹಾರ ಮಾಡುತ್ತಿದ್ದ ಮೂವರ ಮೇಲೆ ಕಾರು ಹರಿದ ಪರಿಣಾಮ ಇಬ್ಬರು ಸ್ಥಳದಲ್ಲೇ ಮೃತಪಟ್ಟಿರುವ ಭೀಕರ ಘಟನೆ ನಡೆದಿದೆ. ಅಕ್ಕಿಗುಂದ ತಾಂಡಾದಲ್ಲಿ ಶಿಕ್ಷಕ ಸೇವೆ ಸಲ್ಲಿಸುತ್ತಿದ್ದ ಈಶ್ವರ ನಗರದ ಅಶೋಕ ಸರವಿ (51) ಹಾಗೂ ಈಶ್ವರ ನಗರದ ರಿಕ್ಷಾ ಚಾಲಕ ಶಿವಾನಂದ ಹುಲಕೋಟಿ (54) ಮೃತ ದುರ್ದೈವಿಗಳು. ಘಟನೆಯಲ್ಲಿ ಗಾಯಗೊಂಡಿರುವ ಶಿಕ್ಷಕ ಮಂಜುನಾಥ ಚಾಕಲಬ್ಬಿಗೆ ಪಟ್ಟಣದ ಸರಕಾರಿ ಸಮುದಾಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಪರಿಸರ ಪ್ರೇಮಿಗಳಿಂದ ಪ್ರಧಾನಿ ಮೋದಿಗೆ ಪತ್ರ

• ಬೆಂಗಳೂರು: ಸಾರ್ವಜನಿಕ ಭೂಮಿ ಅಥವಾ ಅರಣ್ಯ ಪ್ರದೇಶದಲ್ಲಿ ಮರ ಕಡಿಯುವುದನ್ನು ಜಾಮೀನು ರಹಿತ ಅಪರಾಧವೆಂದು ಪರಿಗಣಿಸಿ ಕಠಿಣ ದಂಡ ವಿಧಿಸಬೇಕು.ಭಾರತವು ಪ್ರಸ್ತುತ ಹವಾಮಾನ ವೈಪರೀತ್ಯದ ಅತ್ಯಂತ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿದ್ದು, ದೇಶದಲ್ಲಿ ತಕ್ಷಣವೇ ಹವಾಮಾನ ತುರ್ತು ಪರಿಸ್ಥಿತಿ ಘೋಷಿಸಿ ಕ್ರಮ ಕೈಗೊಳ್ಳಬೇಕೆಂದು ಪರಿಸರಕ್ಕಾಗಿ ನಾವು ಸಂಘಟನೆ ಮತ್ತು ಪರಿಸರ ಪ್ರೇಮಿಗಳು ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ.

ದೇಶದ ರೈತರು, ಕರಾವಳಿ ನಿವಾಸಿಗಳು ಮತ್ತು ನಗರದ ಬಡವರು ಈಗಾಗಲೇ ಬಿಸಿಗಾಳಿ, ಅನಿಶ್ಚಿತ ಮಳೆ ಹಾಗೂ ಕುಸಿಯುತ್ತಿರುವ ಅಂತರ್ಜಲ ಮಟ್ಟದಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದಾರೆ.ಅರಣ್ಯಗಳು ಕೇವಲ ಸಂರಕ್ಷಣೆಯ ವಸ್ತುವಲ್ಲ, ಅವು ದೇಶದ ಪ್ರಮುಖ ಮೂಲಸೌಕರ್ಯಗಳಾಗಿವೆ. ಅರಣ್ಯಗಳು ಯಾವುದೇ ವಿದ್ಯುತ್ ವ್ಯಯಿಸದೆ ಭೂಮಿಯನ್ನು ತಂಪಾಗಿಸುತ್ತವೆ ಮತ್ತು ಅಂತರ್ಜಲ ಮರುಪೂರಣಕ್ಕೆ ನೆರವಾಗುತ್ತವೆ ಎಂದು ಪತ್ರದಲ್ಲಿ ವಿವರಿಸಲಾಗಿದೆ.

ಕಠಿಣ ಕಾನೂನು: ಸಾರ್ವಜನಿಕ ಭೂಮಿ ಅಥವಾ ಅರಣ್ಯ ಪ್ರದೇಶದಲ್ಲಿ ಮರ ಕಡಿಯುವುದನ್ನು ಜಾಮೀನು ರಹಿತ ಅಪರಾಧವೆಂದು ಪರಿಗಣಿಸಿ ಕಠಿಣ ದಂಡ ವಿಧಿಸಬೇಕು.ಮೂಲಸೌಕರ್ಯ ಅಥವಾ ಗಣಿಗಾರಿಕೆ ಹೆಸರಿನಲ್ಲಿ ಅರಣ್ಯ ನಾಶ ಮಾಡುವುದಕ್ಕೆ ತಕ್ಷಣವೇ ನಿರ್ಬಂಧ ಹೇರಬೇಕು.ನೀಲಗಿರಿ, ಅಕೇಶಿಯಾದಂತಹ ಸಸ್ಯಗಳ ಬದಲಿಗೆ ಸ್ಥಳೀಯ ಜೀವವೈವಿಧ್ಯದ ಮರಗಳನ್ನು ಬೆಳೆಸುವ ಕಡೆಗೆ ಗಮನ ಹರಿಸಬೇಕೆಂದು ಪತ್ರದಲ್ಲಿ ಆಗ್ರಹಿಸಲಾಗಿದೆ.

ವಿದ್ಯಾರ್ಥಿಗಳು ಕುಲಪತಿ ಕಚೇರಿಗೆ ನುಗ್ಗಿ ನಾಮಫಲಕಕ್ಕೆ ಮಸಿ ಬಳಿದು ಆಕ್ರೋಶ

ಕುವೆಂಪು ವಿವಿಯಲ್ಲಿ ಎನ್‌ಎಸ್‌ಯುಐನಿಂದ ಗದ್ದಲ

• ಶಂಕರಘಟ್ಟ: ಕುವೆಂಪು ವಿವಿಯಲ್ಲಿನ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸುವಂತೆ ಒತ್ತಾಯಿಸಿ ಎನ್‌ಎಸ್‌ಯುಐ ಕಾರ್ಯಕರ್ತರು ಬುಧವಾರ ಕುವೆಂಪು ವಿವಿ ಆಡಳಿತ ಕಚೇರಿ ಮುಂದೆ ನಡೆಸಿದ ಪ್ರತಿಭಟನೆಯಲ್ಲಿ ಹಲವು ವಸ್ತುಗಳು ಧ್ವಂಸಗೊಂಡಿವೆ.

ಪ್ರತಿಭಟನೆ ನಡೆಸುತ್ತಿದ್ದ ವೇಳೆ ರೊಚ್ಚಿಗೆದ್ದ ವಿದ್ಯಾರ್ಥಿಗಳು ಕುಲಪತಿ ಕಚೇರಿಗೆ ನುಗ್ಗಿ ನಾಮಫಲಕಕ್ಕೆ ಮಸಿ ಬಳಿದು ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಕುಲಪತಿ ಕಚೇರಿ ಆವರಣಕ್ಕೆ ಪ್ರವೇಶಿಸಿ ಹೂವಿನ ಕುಂಡಗಳು, ಕುರ್ಚಿಗಳನ್ನು ಎತ್ತಿ ಬಿಸಾಕಿ ಪುಡಿಗೈದಿದ್ದಾರೆ. ಈ ವೇಳೆ ಹಲವು ವಸ್ತುಗಳು ಪುಡಿಪುಡಿಯಾಗಿವೆ.

ಕೂಡಲೇ ಸ್ಥಳಕ್ಕೆ ಆಗಮಿಸಿದ ಕುಲಪತಿ ಪ್ರೊ.ಶರತ್ ಅನಂತ ಮೂರ್ತಿ ಅವರಿಗೆ ಘೇರಾವ್ ಹಾಕಿದರು. ವಿವಿ ಅವ್ಯವಸ್ಥೆಗೆ ಇವರೇ ಕಾರಣ ಎಂದು ಕಿಡಿಕಾರಿದರು. ಕುವೆಂಪು ವಿವಿ ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿ ವಿರೋಧಿ ನಡೆ ಅನುಸರಿಸುತ್ತಿದೆ. ವಿದ್ಯಾರ್ಥಿಗಳ ಭವಿಷ್ಯದ ಜೊತೆಗೆ ಚೆಲ್ಲಾಟವಾಡುತ್ತಿದೆ. ಕುಲಪತಿಗಳು ಅಧಿಕಾರ ಸ್ವೀಕರಿಸಿದಾಗಿನಿಂದಲೂ ವಿವಿಯಲ್ಲಿ ಅಧಿಕಾರಿಗಳು ಆಂತರಿಕ ಕಚ್ಚಾಟದಲ್ಲೇ ತೊಡಗಿದ್ದಾರೆ. ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಕಾಳಜಿ ವಹಿಸುತ್ತಿಲ್ಲವೆಂದು ನಂತರ ನಡೆದ ಪ್ರತಿಭಟನೆ ವೇಳೆ ದೂರಿದರು. ಕಳೆದ 5 ತಿಂಗಳ ಹಿಂದೆ ಪರೀಕ್ಷೆ ಬರೆದಿದ್ದ 1, 3 ಮತ್ತು 5ನೇ ಸೆಮಿಸ್ಟರ್‌ಗಳ ಫಲಿತಾಂಶ ಪ್ರಕಟಿಸಿಲ್ಲ. ಇತ್ತೀಚೆಗೆ ನಡೆದ ಪರೀಕ್ಷೆಗಳ ಮೌಲ್ಯಮಾಪನ ಮಾಡಿದ ಉಪನ್ಯಾಸಕರಿಗೆ ಮೌಲ್ಯಮಾಪನದ ಗೌರವಧನ ನೀಡದೇ ಇರುವುದರಿಂದ ಉಪನ್ಯಾಸಕರು ಮೌಲ್ಯಮಾಪನ ಬಹಿಷ್ಕರಿಸಿದ್ದಾರೆ. 3 ವರ್ಷಗಳಿಂದ ಯಾವುದೇ ಪರೀಕ್ಷೆಗಳ ಅಂಕಪಟ್ಟಿ ವಿತರಿಸದೇ ಅಂಕಪಟ್ಟಿಗಳನ್ನು ಮುದ್ರಿಸಲು ಟೆಂಡರ್ ಕರೆಯುವುದಾಗಿ ಹೇಳುತ್ತಲೇ ಬರಲಾಗುತ್ತಿದೆ. ಇದರಿಂದಾಗಿ ಪದವಿ ಪೂರೈಸಿದ ವಿದ್ಯಾರ್ಥಿಗಳು ಮುಂದಿನ ವಿದ್ಯಾಭ್ಯಾಸಕ್ಕೆ ಹೋಗಲು, ಉದ್ಯೋಗ ಕಂಡುಕೊಳ್ಳಲು ಆಗುತ್ತಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಕೂಡಲೇ ರಾಜ್ಯಪಾಲರು ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸುವಂತೆ ಆಗ್ರಹಿಸಿದ್ದಾರೆ. ಎನ್‌ಎಸ್‌ಯುಐನ ಜಿಲ್ಲಾಧ್ಯಕ್ಷ ವಿಜಯ್, ಕಾರ್ಯಾಧ್ಯಕ್ಷ ರವಿ ಕಟಿಕೆರೆ ನಗರಾಧ್ಯಕ್ಷರಾದ ರವಿ ಇದ್ದರು.



ದೂರು ದಾಖಲು: ಕುಲಪತಿ ಪ್ರೊ. ಶರತ್ ಅನಂತಮೂರ್ತಿ

• ಶಿವಮೊಗ್ಗ: ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಬುಧವಾರ ವಿದ್ಯಾರ್ಥಿ ಸಂಘಟನೆ ನಡೆಸಿದ ಪ್ರತಿಭಟನೆ ಹಿಂದೆ ಯಾರೋ ಇದ್ದಾರೆ ಎಂಬ ಶಂಕೆ ಇದೆ. ಇದರ ಬಗ್ಗೆ ದೂರು ದಾಖಲಿಸಲಾಗುವುದು ಎಂದು ಕುವೆಂಪು ವಿವಿ ಕುಲಪತಿ ಪ್ರೊ.ಶರತ್ ಅನಂತಮೂರ್ತಿ ತಿಳಿಸಿದ್ದಾರೆ. ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ನಾನು ಬೇರೊಂದು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾಗ ಕುವೆಂಪು ಶತಮಾನೋತ್ಸವದ ಭವನದಲ್ಲಿ ಇರುವ ನಮ್ಮ ಕಚೇರಿಗೆ ಯಾರೋ ವಿದ್ಯಾರ್ಥಿಗಳು ಅಲ್ಲದ ಕೆಲವರು ಬಂದು ಪಾಟ್‌ಗಳನ್ನು ಒಡೆದಿದ್ದಾರೆ ಎಂದು ಕರೆ ಬಂತು. ನಾನು ಕಚೇರಿಗೆ ಬಂದೆ. ಆಗ ನನಗೆ ಕೆಲವರು ಮುತ್ತಿಗೆ ಹಾಕಿದರು. ನನ್ನನ್ನು ಎಳೆದಾಡಲು ಯತ್ನಿಸಿ ನಂತರ ದಾರಿ ಬಿಟ್ಟರು ಎಂದರು. ಕುವೆಂಪು ವಿಶ್ವವಿದ್ಯಾಲಯದ ಪ್ರವೇಶ ದ್ವಾರದಲ್ಲಿ ಇರುವ ಕುವೆಂಪು ಅವರ ಪ್ರತಿಮೆ ಮುಂದೆ ಪಾಟ್‌ಗಳನ್ನು ಕುಟ್ಟಿ ಕುಟ್ಟಿ ಪುಡಿ ಮಾಡಿದ್ದಾರೆ ಎಂದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿಶ್ವಾಸ

ಉಪಚುನಾವಣೆ: ನಮ್ದೇ ಗೆಲುವು

• ವಿಜಯನಗರ: ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭೆ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ನಿಶ್ಚಿತವಾಗಿದೆ. ಈ ಬಾರಿ ಉಪಚುನಾವಣೆಯ ಫಲಿತಾಂಶದ ಪ್ರಕಟಗೊಂಡ ಬಳಿಕ ಕಾಂಗ್ರೆಸ್ ಪಕ್ಷದಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಯಾಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಹೊಸಪೇಟೆಯಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಬೆಂಬಲಿಗರಿಂದ ದೆಹಲಿ ದಂಡಯಾತ್ರೆ ಶುರುವಾಗಿದೆ. ಸಿದ್ದರಾಮಯ್ಯ ಬಣ ದಿಲ್ಲಿಗೆ ಭೇಟಿ ನೀಡುತ್ತಿದ್ದಂತೆ ಡಿ.ಕೆ. ಶಿವಕುಮಾರ್ ಆಪ್ತರು ದೆಹಲಿಗೆ ಪ್ರಯಾಣ ಬೆಳೆಸುತ್ತಿದ್ದಾರೆ. ಇದು ಕಾಂಗ್ರೆಸ್‌ನಲ್ಲಿ ಉಂಟಾಗಿರುವ ಅಸ್ಥಿರ ವಾತಾವರಣಕ್ಕೆ ಸಾಕ್ಷಿಯಾಗಿದೆ.

ಮೇ 4 ರಂದು ಪ್ರಕಟಗೊಳ್ಳಲಿರುವ ಬಾಗಲಕೋಟೆ ವಿಧಾನಸಭೆ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವು ನಿಶ್ಚಿತವಾಗಿದೆ. ಅದರಂತೆ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮೊದಲ ಬಾರಿಗೆ ಬಿಜೆಪಿ ಗೆಲುವು ಸಾಧಿಸಿ, ಇತಿಹಾಸದಲ್ಲೇ ಮೊದಲ ಬಾರಿಗೆ ಕಮಲ ಅರಳಲಿದೆ.



ಇದರಿಂದ ಕಾಂಗ್ರೆಸ್‌ನಲ್ಲಿ ಅಲ್ಲೋಲ ಕಲ್ಲೋಲ ಉಂಟಾಗಲಿದೆ ಎಂಬ ಮಾತು ಆಡಳಿತಾರೂಢ ಪಕ್ಷದಿಂದಲೇ ಕೇಳಿ ಬರುತ್ತಿದೆ ಎಂದರು.

ರಾಜ್ಯದಲ್ಲಿ ಬಿಜೆಪಿಯನ್ನು ಬೇರು ಮಟ್ಟದಿಂದ ಸಂಘಟಿಸಿದ ಬಿ.ಎಸ್.ಯಡಿಯೂರಪ್ಪ ಅವರಿಗೆ ಪಕ್ಷ ಎಲ್ಲವನ್ನೂ ನೀಡಿ, ಗೌರವಿಸಿದೆ. ಅವರಿಗೆ ಈಗಲೂ ಅದೇ ಗೌರವವಿದೆ. ಅವರನ್ನು ಮೂಲೆ ಗುಂಪು ಮಾಡಲಾಗಿದೆ ಎಂಬುದು ಸತ್ಯಕ್ಕೆ ದೂರವಾದದ್ದು ಎಂದ ಅವರು, ರಾಜ್ಯದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ನಮ್ಮದು ರಾಷ್ಟ್ರೀಯ ಪಕ್ಷ, ವರಿಷ್ಠರು ಕೈಗೊಳ್ಳುವ ತೀರ್ಮಾನಕ್ಕೆ ಬದ್ಧರಿದ್ದೇವೆ ಎಂದಷ್ಟೇ ಹೇಳಿದರು.

ಸಂಪಾದಕೀಯ

ಪ್ರಜಾಪ್ರಭುತ್ವದ ನಿಜವಾದ ಹಬ್ಬ

ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ ಎರಡನೇ ಹಾಗೂ ಅಂತಿಮ ಹಂತದ ಮತದಾನದಲ್ಲಿ ದಾಖಲಾಗಿರುವ ಭಾರೀ ಪ್ರಮಾಣದ ಪಾಲ್ಗೊಳ್ಳಿಕೆ, ಜನತಂತ್ರದ ಜೀವಂತಿಕೆಯನ್ನು ಮತ್ತೊಮ್ಮೆ ನೆನಪಿಸಿದೆ. ಸ್ವಾತಂತ್ರ್ಯಾನಂತರದ ಅತ್ಯಧಿಕ ಮತದಾನವೆಂದು ಚುನಾವಣಾ ಆಯೋಗ ಹೇಳಿರುವುದು ಕೇವಲ ಅಂಕಿಅಂಶವಲ್ಲ. ಅದು ರಾಜ್ಯದ ರಾಜಕೀಯ ಬಿಸಿ, ಜನರ ತೊಡಗಿಸಿಕೊಳ್ಳುವಿಕೆ ಮತ್ತು ಭವಿಷ್ಯದ ಕುರಿತು ಇರುವ ನಿರೀಕ್ಷೆಗಳ ಪ್ರತಿಫಲವೂ ಆಗಿದೆ.

ಈ ಬಾರಿ ಒಟ್ಟು ಮತದಾನದ ಪ್ರಮಾಣವು ಶೇ.92ಕ್ಕೂ ಮೀರಿರುವುದು, ಪ್ರಜಾಪ್ರಭುತ್ವದಲ್ಲಿ ಜನರ ನಂಬಿಕೆ ಇನ್ನೂ ಅಚಲವಾಗಿದೆ ಎಂಬುದನ್ನು ಸೂಚಿಸುತ್ತದೆ. ಆದರೆ ಈ ಅಂಕಿಯ ಹಿಂದೆ ಇರುವ ವಾಸ್ತವಿಕತೆಯನ್ನು ವಿಶ್ಲೇಷಿಸುವುದು ಅಷ್ಟೇ ಮುಖ್ಯ. ಮತದಾನದ ಹೆಚ್ಚಳವನ್ನು ಎಲ್ಲಾ ಪಕ್ಷಗಳು ತಮ್ಮದೇ ರೀತಿಯಲ್ಲಿ ವ್ಯಾಖ್ಯಾನಿಸುತ್ತಿವೆ. ಆಡಳಿತ ಪಕ್ಷಕ್ಕೆ ಇದು ತನ್ನ ಕಲ್ಯಾಣ ರಾಜಕಾರಣದ ಬೆಂಬಲವಾಗಿದ್ದರೆ, ವಿರೋಧ ಪಕ್ಷಕ್ಕೆ ಇದು ಬದಲಾವಣೆಯ ಸಂಕೇತ. ಹೀಗಾಗಿ, ಸಂಖ್ಯೆಗಳ ರಾಜಕಾರಣ ಚುನಾವಣೆಯ ನಂತರವೂ ಮುಂದುವರಿಯಲಿದೆ.

ಇಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್ಐಆರ್) ಪ್ರಕ್ರಿಯೆಯ ಪರಿಣಾಮವನ್ನು ಕಡೆಗಣಿಸಲು ಸಾಧ್ಯವಿಲ್ಲ. ಲಕ್ಷಾಂತರ ಹೆಸರುಗಳು ಪಟ್ಟಿಯಿಂದ ತೆಗೆದುಹಾಕುವ ಮೂಲಕ ಮತಪಟ್ಟಿಗೆ ಜರಡಿ ಹಿಡಿದಿರುವುದು ಶೇಕಡಾವಾರು ಏರಿಕೆಗೆ ಕಾರಣವಾಗಿರಬಹುದು.

ಚುನಾವಣಾ ದಿನದ ಚಿತ್ರಣವು ಸಹ ಬಂಗಾಳದ ಪರಿಚಿತ ರಾಜಕೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸಿದೆ. ಉದ್ದ ಸಾಲುಗಳು, ಸ್ಥಳೀಯ ಮಟ್ಟದ ಉದ್ವಿಗ್ನತೆ, ಆರೋಪ-ಪ್ರತ್ಯಾರೋಪಗಳು ಕಾಣಿಸಿವೆ. ಆದರೂ, ಹಿಂದಿನ ಚುನಾವಣೆಯೊಂದಿಗೆ ಹೋಲಿಸಿದರೆ ವ್ಯಾಪಕ ಹಿಂಸಾಚಾರ ಕಡಿಮೆ ಎನ್ನುವ ಅಂಶ ಗಮನಾರ್ಹ. ಭಾರೀ ಪ್ರಮಾಣದಲ್ಲಿ ಕೇಂದ್ರ ಭದ್ರತಾ ಪಡೆಯ ನಿಯೋಜನೆ ಇದಕ್ಕೆ ಕಾರಣವಾಗಿದೆ. ಇದನ್ನೇ ಅಲ್ಲಿನ ಆಡಳಿತ ಪಕ್ಷ ಪ್ರಮುಖವಾಗಿ ಟೀಕಿಸಿದೆ. ಆದರೆ, ಕೇಂದ್ರ ಚುನಾವಣಾ ಆಯೋಗ ಕೇಂದ್ರ ಪಡೆಗಳ ನಿಯೋಜನೆಯನ್ನು ಸಮರ್ಥನೆಯನ್ನೂ ಮಾಡಿಕೊಂಡಿದೆ.

ಒಟ್ಟಿನಲ್ಲಿ, ಈ ಬಾರಿ ಮತದಾನವು ಎರಡು ಸ್ಪಷ್ಟ ಸಂದೇಶಗಳನ್ನು ನೀಡುತ್ತದೆ. ಮೊದಲನೆಯದು ಜನರು ತಮ್ಮ ಹಕ್ಕನ್ನು ಬಳಸಲು ಉತ್ಸುಕರಿದ್ದಾರೆ. ಎರಡನೆಯದು ಜನತಂತ್ರದ ಪ್ರಕ್ರಿಯೆಯ ಮೇಲಿನ ವಿಶ್ವಾಸ ಉಳಿದಿದ್ದರೂ, ಅದರ ಪಾರದರ್ಶಕತೆ ಮತ್ತು ನ್ಯಾಯತೆಯ ಬಗ್ಗೆ ಪ್ರಶ್ನೆಗಳು ಇನ್ನೂ ಜೀವಂತವಾಗಿವೆ.

ಅಂತಿಮವಾಗಿ, ಫಲಿತಾಂಶ ಏನೇ ಬಂದರೂ, ಈ ಚುನಾವಣೆಯ ಪಾಠ ಸ್ಪಷ್ಟವಾಗಿದೆ. ಪ್ರಜಾಪ್ರಭುತ್ವದ ಬಲವು ಕೇವಲ ಹೆಚ್ಚಿನ ಮತದಾನದಲ್ಲಿಲ್ಲ, ಅದು ಸಮಾನ ಅವಕಾಶ, ನ್ಯಾಯಯುತ ಪ್ರಕ್ರಿಯೆ ಮತ್ತು ಜನರ ನಂಬಿಕೆಯನ್ನು ಉಳಿಸುವಲ್ಲಿ ಇದೆ. ಬಂಗಾಳದ ಈ ಮಹಾಮತದಾನ, ಭಾರತದ ಜನತಂತ್ರಕ್ಕೆ ಮತ್ತೊಂದು ಪರೀಕ್ಷೆಯಾಗಿ ಪರಿಣಮಿಸಿದೆ.

ಸದ್ಯ ಪಂಚರಾಜ್ಯಗಳ ಮತದಾನ ಪ್ರಕ್ರಿಯೆ ಮುಗಿದಿದ್ದು ಮೇ 4ಕ್ಕೆ ಫಲಿತಾಂಶ ಹೊರಬೀಳಲಿದೆ. ಆದರ ನಡುವೆ ಮತಗಟ್ಟೆ ಸಮೀಕ್ಷೆಗಳ ವರದಿಯೂ ಹೊರಬಿದ್ದಿದ್ದು, ಇಲ್ಲಿಂದಲೇ ಲೆಕ್ಕಾಚಾರವೂ ನಡೆಯಲಿದೆ.

ಗೂಂಡಾ ರಾಜ್‌ಗೆ ಹೆದರದ ಬಂಗಾಳ ಮತದಾರ


ಗುರುತರ
ಸೋಮಶೇಖರ ಸಿ.ಜಿ.
sompreethi@gmail.com

ಪ್ರಜಾಪ್ರಭುತ್ವ ಎಂದರೆ ಮತದಾರ ಮಹಾಶಯ ತನ್ನ ಮನಸ್ಸಿನ ಮಾತನ್ನು ಮತಪೆಟ್ಟಿಗೆ ಮೂಲಕ ಹೇಳುವ ಅವಕಾಶ. ಆದರೆ ಪಶ್ಚಿಮ ಬಂಗಾಳದಲ್ಲಿ ಆ ಅವಕಾಶವನ್ನು ಬಲಪ್ರಯೋಗದಿಂದ, ಭಯ ಹುಟ್ಟಿಸುವುದರಿಂದ, ರಕ್ತಪಾತದಿಂದ ಕಿತ್ತುಕೊಳ್ಳಲಾಗುತ್ತಿದೆ ಎಂಬ ಆರೋಪ ಮತ್ತೆ ಮತ್ತೆ ಕೇಳಿಬರುತ್ತಿದೆ. ಈ ಬಾರಿ ಎರಡು ಹಂತಗಳಲ್ಲಿ ನಡೆದ ವಿಧಾನಸಭಾ ಚುನಾವಣೆ ಮತ್ತೊಮ್ಮೆ ಆ ಮಾತನ್ನು ಸಾಬೀತು ಮಾಡಿದೆ.

ಇತಿಹಾಸವನ್ನು ಒಮ್ಮೆ ನೋಡಬೇಕು. ಏಕೆಂದರೆ, ಪಶ್ಚಿಮ ಬಂಗಾಳದ ಚುನಾವಣಾ ಇತಿಹಾಸ ಎಂದಿಗೂ ರಕ್ತಸಿಕ್ತವಾಗಿಯೇ ಇದೆ. ಮೊದಲು ಸಿಪಿಎಂ ಆಳ್ವಿಕೆಯಲ್ಲಿ ನಡೆಯುತ್ತಿದ್ದ ರಾಜಕೀಯ ಹಿಂಸೆ, ನಂತರ ಟಿಎಂಸಿ ಅಧಿಕಾರಕ್ಕೆ ಬಂದ ಮೇಲೆ ಮತ್ತಷ್ಟು ಉಗ್ರ ಸ್ವರೂಪ ತಾಳಿದೆ. ಎನ್‌ಸಿಆರ್‌ಬಿ ದಾಖಲೆಗಳ ಪ್ರಕಾರ, 1999ರಿಂದ 2016ರ ನಡುವೆ ಪ್ರತಿ ವರ್ಷ ಸರಾಸರಿ 20 ರಾಜಕೀಯ ಹತ್ಯೆಗಳು ಪಶ್ಚಿಮ ಬಂಗಾಳದಲ್ಲಿ ನಡೆದಿವೆ. ಇದು ಭಾರತದ ಯಾವ ರಾಜ್ಯಕ್ಕೂ ಹೋಲಿಸಲಾಗದ ದುರ್ದೈವದ ದಾಖಲೆ.

2021ರ ವಿಧಾನಸಭಾ ಚುನಾವಣೆ ಫಲಿತಾಂಶ ಬಂದ ತಕ್ಷಣ ಬಂಗಾಳದಲ್ಲಿ ರಕ್ತದ ಕೋಡಿ ಹರಿಯಿತು. ಬಿಜೆಪಿ ಕಾರ್ಯಕರ್ತರ ಕುಟುಂಬಗಳು ಜೀವ ಭಯದಿಂದ ನೆರೆಯ ಅಸ್ಸಾಮ್‌ನಲ್ಲಿ ಆಶ್ರಯ ಪಡೆದ ಘಟನೆಗಳು ವರದಿಯಾಗಿದ್ದವು. ಇದು ಸ್ವಾತಂತ್ರ್ಯ ಸಿಕ್ಕ ಭಾರತದಲ್ಲಿ ಒಂದು ರಾಜ್ಯದ ಒಳಗೆ ನಡೆದ ನಿರಾಶ್ರಿತ ಪ್ರಕರಣ. ಅದು ರಾಜ್ಯ ಪ್ರಾಯೋಜಿತ ಭಯೋತ್ಪಾದನೆ ಎಂದೂ ಕರೆಯಬಹುದು. 2018ರ ಪಂಚಾಯತ್ ಚುನಾವಣೆಯಲ್ಲಿ ಶೇ.34ರಷ್ಟು ಸ್ಥಾನಗಳಲ್ಲಿ ಟಿಎಂಸಿ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾದರು. ವಿರೋಧ ಪಕ್ಷದ ಅಭ್ಯರ್ಥಿಗಳನ್ನು ನಾಮಪತ್ರ ಸಲ್ಲಿಸದಂತೆ ಬೆದರಿಸಲಾಗಿತ್ತು.

ಹಾಗಂತ, ಬಂಗಾಳದ ರಾಜಕೀಯ ಹಿಂಸೆ 2011ರಲ್ಲಿ ಟಿಎಂಸಿ ಬಂದಾಗ ಶುರುವಾಗಿದ್ದಲ್ಲ. ಸಿಪಿಎಂ ಆಳ್ವಿಕೆಯ 34 ವರ್ಷಗಳಲ್ಲಿ ಕೂಡ ರಾಜಕೀಯ ಹತ್ಯೆ, ಬೂತ್ ಕ್ಯಾಪ್ಚರಿಂಗ್, ವಿರೋಧ ಪಕ್ಷದ ಕಾರ್ಯಕರ್ತರ ಮೇಲೆ ದಮನ ಸಾಮಾನ್ಯ ಸಂಗತಿಯಾಗಿತ್ತು. ನಂದಿಗ್ರಾಮ, ಸಿಂಗೂರ್ ಹೋರಾಟಗಳಲ್ಲಿ ರೈತರ ಮೇಲೆ ಗೋಲಿಬಾರ್ ಮಾಡಿದ ಸರ್ಕಾರವನ್ನು ಸ್ವತಃ ಮಮತಾ ಬ್ಯಾನರ್ಜಿ ವಿರೋಧಿಸಿ ಅಧಿಕಾರಕ್ಕೆ ಬಂದರು. ಆದರೆ ಅಧಿಕಾರ ಸಿಕ್ಕ ಮೇಲೆ ಅದೇ ಹಿಂಸೆಯ ಮಾರ್ಗವನ್ನು ಇನ್ನಷ್ಟು ಸಂಘಟಿತವಾಗಿ ಬಳಸಿಕೊಂಡರು. ಬಂಗಾಳದ ದುರಂತ ಇದೇ. ಒಂದು ಗೂಂಡಾ ಸಂಸ್ಕೃತಿ ಮುಗಿಯಲಿಲ್ಲ, ಮತ್ತೊಂದು ಅದರ ಸ್ಥಾನ ತೆಗೆದುಕೊಂಡಿತು. ಇದರ ನಡುವೆ, ಇಡೀ ಸಿಪಿಎಂ ನಾಶವಾಗಿ ಹೋದರೆ, ಕಾಂಗ್ರೆಸ್ ತನ್ನ ನೆಲೆ ಕಳೆದುಕೊಂಡಿದೆ. ಇಲ್ಲಿ ಟಿಎಂಸಿಗೆ ಪರ್ಯಾಯವಾಗಿ ಬಿಜೆಪಿ ಬೆಳೆಯತೊಡಗಿತು. ಆದರೆ ಇದರ ಹಾದಿಗಳೂ ಸುಲಭವಾಗಿಯೇನೂ ಇಲ್ಲ. ಪಶ್ಚಿಮ ಬಂಗಾಳದ ಈ ರಕ್ತಸಿಕ್ತ ಮತ್ತು ಅಕ್ರಮ ರಾಜಕಾರಣ ಕೊನೆಗಾಣಿಸುವ ವಿಚಾರದಲ್ಲಿ ಅಲ್ಲಿ ಪ್ರಯತ್ನ ನಡೆಯುತ್ತಲೇ ಇದೆ.

ಹಾಗೆಯೇ, ಟಿಎಂಸಿ ರಾಜಕೀಯಕ್ಕೆ ಹೆಚ್ಚು ಪುಷ್ಟಿ ಕೊಟ್ಟದ್ದು ನೆರೆಯ ಬಾಂಗ್ಲಾ ಅಕ್ರಮ ನುಸುಳುಕೋರರು. ಭಾರೀ ಸಂಖ್ಯೆಯಲ್ಲಿ ಸೇರಿಕೊಂಡು, ಕ್ಷೇತ್ರಗಳಲ್ಲಿ ತಮ್ಮ ಓಟುಗಳೇ ಪ್ರಭಾವಿ ಎನ್ನಿಸಿಕೊಳ್ಳುವಷ್ಟು ಬೆಳೆದರು. ಇದನ್ನು ತಪ್ಪಿಸುವ ಸಲುವಾಗಿ ಮತ್ತು ಅಕ್ರಮ ಮತದಾರರನ್ನು ಹೊರಗಟ್ಟುವ ನಿಟ್ಟಿನಲ್ಲಿ ಬಂದದ್ದೇ ಎಸ್‌ಐಆರ್. ಮೊದಲೇ ಹೇಳಿದ ಉದ್ದೇಶ ಒಂದೇ ನಕಲಿ ಮತದಾರರನ್ನು ತೆಗೆದುಹಾಕುವುದು, ನಿಜವಾದ ಫಲಾನುಭವಿ ಎಲ್ಲರ ಹೆಸರೂ ಇರುವಂತೆ ನೋಡಿಕೊಳ್ಳುವುದು. ಆದರೆ ಟಿಎಂಸಿ ಇದನ್ನು ವಿರೋಧಿಸಿ ನ್ಯಾಯಾಲಯದ ಮೆಟ್ಟಿಲು ಹತ್ತಿತು. ಇದರ ಅರ್ಥ ಏನು? ಅಸಲಿ ಮತದಾರ ಪಟ್ಟಿ ಬಯಲಾದರೆ, ತಮ್ಮ ಭದ್ರಕೋಟೆ ಕುಸಿಯಬಹುದು ಎಂಬ ಭಯ ಟಿಎಂಸಿಗಿದೆ ಎಂದೇ ಅರ್ಥ. ಮತದಾರರ ಪಟ್ಟಿ ಶುದ್ಧೀಕರಣವನ್ನೇ ವಿರೋಧಿಸುವ ಪಕ್ಷ ಅಧಿಕಾರದಲ್ಲಿ ಇರಬಾರದು ಇದು ಸ್ಪಷ್ಟ ನೈತಿಕ ನ್ಯಾಯ.

ಟಿಎಂಸಿ ಹಿಂಸಾಚಾರವನ್ನು ಮಾತ್ರ ಅವಲಂಬಿಸಿಲ್ಲ. ರಾಜ್ಯದ ಮುಸ್ಲಿಂ ಮತದಾರರನ್ನು ಒಂದು ಬ್ಲಾಕ್ ಆಗಿ ಒಟ್ಟುಗೂಡಿಸಿ, ಅವರ ಓಲೈಕೆಯ ಮೂಲಕ ಅಧಿಕಾರ ಉಳಿಸಿಕೊಳ್ಳುವ ರಾಜಕಾರಣ ಟಿಎಂಸಿಯ ಮೂಲ ತಂತ್ರ. ರಾಜ್ಯದ ಜನಸಂಖ್ಯೆಯ ಶೇ.27ಕ್ಕೂ ಹೆಚ್ಚು ಮುಸ್ಲಿಂ ಸಮುದಾಯ ಇರುವ ಬಂಗಾಳದಲ್ಲಿ ಈ ಓಲೈಕೆ ಚುನಾವಣಾ ಲೆಕ್ಕಾಚಾರದಲ್ಲಿ ನಿರ್ಣಾಯಕ. ಆದರೆ ಇದರ ಪ್ರತಿಫಲ ಏನು? ಹಿಂದೂ-ಮುಸ್ಲಿಂ ಸಮಾಜಗಳ ನಡುವೆ ಕಂದಕ ಆಳವಾಗಿ ಬಿದ್ದಿದೆ. ಇದು ಅಭಿವೃದ್ಧಿ ರಾಜಕಾರಣವಲ್ಲ, ಒಡೆದಾಳುವ ರಾಜಕೀಯವೆಂದೇ ಹೇಳಬಹುದು.



ಇಷ್ಟೆಲ್ಲಾ ಮಾಡಿದ ಮೇಲೂ ಹಿಂಸಾಚಾರ ನಿಂತಿದೆ ಅಂದರೆ ತಪ್ಪಾದೀತು. ಈ ಬಾರಿಯೂ ರಾಜಕೀಯ ಹಿಂಸಾಚಾರಗಳು ನಡೆದೇ ಇವೆ. ಬಿಜೆಪಿ ಮತಗಟ್ಟೆ ಏಜೆಂಟ್ ಮೊಷಾರಫ್ ಮಿರ್ ಅವರನ್ನು ಕಬ್ಬಿಣದ ರಾಡ್ ಮತ್ತು ಆಯುಧಗಳಿಂದ ಹಲ್ಲೆ ಮಾಡಲಾಯಿತು. ಅವರ ತಲೆಗೆ ಆರು ಹೊಲಿಗೆ ಹಾಕಬೇಕಾಯಿತು. ದಕ್ಷಿಣ 24 ಪರಗಣಾ ಬಸಂತಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿಕಾಶ್ ಸರ್ದಾರ್, 200-250 ಟಿಎಂಸಿ ಗೂಂಡಾಗಳು ತಮ್ಮ ಕಾರಿನ ಮೇಲೆ ದಾಳಿ ಮಾಡಿ ಚಾಲಕನಿಗೆ ಹಲ್ಲೆ ಮಾಡಿದರು ಎಂದು ಆರೋಪಿಸಿದ್ದಾರೆ. ಭಾನ್ಗರ್‌ನಲ್ಲಿ ಐಎಸ್‌ಎಫ್ ಪ್ರತಿನಿಧಿಗಳನ್ನು ಮತಗಟ್ಟೆಯೊಳಕ್ಕೆ ಬಿಡಲಿಲ್ಲ. ಶಾಂತಿಪುರದಲ್ಲಿ ಬಿಜೆಪಿ ಶಿಬಿರ ಕಚೇರಿ ನುಚ್ಚುನೂರಾಯಿತು. ಇಷ್ಟೆಲ್ಲ ಹಿಂಸಾಚಾರ ನಡೆಯುತ್ತಿದ್ದರೂ ಮಮತಾ ಬ್ಯಾನರ್ಜಿ ಬಂಗಾಳದ ಚುನಾವಣೆಗಳು ಯಾವಾಗಲೂ ಶಾಂತಿಯುತ, ಇಲ್ಲಿ ಯಾವ ಗೂಂಡಾರಾಜ್ ಇದೆ? ಎಂದು ಪ್ರಶ್ನಿಸಿ, ಬಿಜೆಪಿ ಚುನಾವಣೆ ಕದ್ದುಕೊಳ್ಳಲು ಕೇಂದ್ರ ಪಡೆಗಳನ್ನು ಬಳಸುತ್ತಿದೆ ಎಂದು ಆರೋಪಿಸಿದರು. ಪಶ್ಚಿಮ ಬಂಗಾಳದಲ್ಲಿ ಆಡಳಿತ ಪಕ್ಷ ವಿರೋಧ ಅಭ್ಯರ್ಥಿಗಳನ್ನು ನಾಮಪತ್ರ ಸಲ್ಲಿಸದಂತೆ ತಡೆದು ಅವಿರೋಧ ಗೆಲ್ಲುವ ಉದ್ದೇಶದಿಂದ ಹಿಂಸೆ ಒಂದು ಸ್ಥಾಪಿತ ತಂತ್ರವಾಗಿ ಬಳಕೆಯಾಗಿದೆ ಎಂಬ ಸಂಶೋಧನಾ ದಾಖಲೆಗಳಿವೆ. ರಾಜ್ಯ ಸರ್ಕಾರದ ಕೃಪಾಶ್ರಯ ಇಲ್ಲದೆ ಇದು ನಡೆಯಲು ಸಾಧ್ಯವೇ ಇಲ್ಲ.

ಮಮತಾ ಸರ್ಕಾರ ಕೇವಲ ಹಿಂಸಾಚಾರ ಮತ್ತು ಓಲೈಕೆ ರಾಜಕಾರಣಕ್ಕೆ ಮಾತ್ರ ಕುಖ್ಯಾತಿ ಪಡೆದಿಲ್ಲ. ಶಿಕ್ಷಕ ನೇಮಕಾತಿ ಹಗರಣದಲ್ಲಿ ಕೋಟ್ಯಂತರ ರೂಪಾಯಿ ಲಂಚ ಪಡೆದ ಆರೋಪ ಸ್ವತಃ ಟಿಎಂಸಿ ಮಂತ್ರಿಗಳ ಮೇಲಿದ್ದು ಸುಪ್ರೀಂ ಕೋರ್ಟ್ ಮಧ್ಯಪ್ರವೇಶ ಮಾಡಬೇಕಾಯಿತು. ಅಂಗನವಾಡಿ ಕಾರ್ಯಕರ್ತೆಯರ ವೇತನದಿಂದ ಹಿಡಿದು ರಾಜ್ಯ ಗ್ರಂಥಾಲಯ ನಿಧಿಯ ವರೆಗೂ ಭ್ರಷ್ಟಾಚಾರ ಹರಡಿದೆ. ರಾಜ್ಯದ ನಿರುದ್ಯೋಗ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಿದೆ. ವ್ಯಾಪಾರ ಉದ್ಯಮ ವ್ಯವಸ್ಥೆ ಹದಗೆಟ್ಟಿದ್ದರಿಂದ ಹೂಡಿಕೆದಾರರು ಬಂಗಾಳ ಬಿಟ್ಟು ಹೋಗಿದ್ದಾರೆ. ಒಂದು ಕಾಲದಲ್ಲಿ ದೇಶದ ಆರ್ಥಿಕ ರಾಜಧಾನಿಯಾಗಿದ್ದ ಕೋಲ್ಕತ್ತಾ ಇಂದು ಹಿಂದುಳಿದ ನಗರವಾಗಿ ಪರಿವರ್ತನೆಯಾಗಿದೆ.

ಕಳೆದ ಒಂದು ವರ್ಷ ಬಂಗಾಳದ ಜನ ಟಿಎಂಸಿ ಸರ್ಕಾರ ನಡೆಸಿದ ಆಡಳಿತ ವೈಫಲ್ಯಗಳನ್ನು ಒಂದೊಂದಾಗಿ ಎದುರಿಸಿದ್ದಾರೆ. ಶಿಕ್ಷಕ ನೇಮಕಾತಿ ಹಗರಣ, ರೇಶನ್ ಭ್ರಷ್ಟಾಚಾರ, ಮತ್ತು ಎಲ್ಲಕ್ಕೂ ಮಿಗಿಲಾಗಿ ಆರ್‌ಜಿ ಕರ್ ವೈದ್ಯ ವಿದ್ಯಾರ್ಥಿನಿ ಅಭಯಾಳ ಮೇಲೆ ನಡೆದ ಅತ್ಯಾಚಾರ-ಹತ್ಯೆ ಈ ಎಲ್ಲ ಪ್ರಕರಣಗಳು ಮಮತಾ ಸರ್ಕಾರದ ವಿರುದ್ಧ ಜನಾಕ್ರೋಶ ಭುಗಿಲೆಬ್ಬಿಸಿದ್ದವು. ಅಭಯಾಳ ತಾಯಿ ರತ್ನಾ ದೇಬ್‌ನಾಥ್ ಈ ಬಾರಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದು, ಅವರ ವಾಹನವನ್ನು ಟಿಎಂಸಿ ಕಾರ್ಯಕರ್ತರು ತಡೆದ ಆರೋಪ ಕೇಳಿಬಂದಿದೆ.

ಬಿಜೆಪಿ ಬಂಗಾಳದಲ್ಲಿ ಕಟ್ಟಿ ನಿಲ್ಲಿಸುತ್ತಿರುವ ಪ್ರತಿರೋಧ ಸಾಮಾನ್ಯವಾದುದಲ್ಲ. ರಾಜ್ಯಾದ್ಯಂತ ನೂರಾರು ಕಾರ್ಯಕರ್ತರ ಪ್ರಾಣ ತೆತ್ತು, ಮನೆಮಾರು ಕಳೆದುಕೊಂಡು ಹೋರಾಡುತ್ತಿರುವ ಕಾರ್ಯಕರ್ತರ ಬಲದ ಮೇಲೆ ಪಕ್ಷ ಬೆಳೆದಿದೆ. 2019ರ ಲೋಕಸಭಾ ಚುನಾವಣೆಯಲ್ಲಿ 18 ಸ್ಥಾನ ಗೆದ್ದು, 2021ರಲ್ಲಿ 77 ಸ್ಥಾನ ಪಡೆದ ಬಿಜೆಪಿ ತ್ವರಿತ ಗತಿಯಲ್ಲಿ ಬಂಗಾಳದ ಮನೆ ಮನ ತಲುಪುತ್ತಿದೆ. ಈ ಬಾರಿ ದಕ್ಷಿಣ ಬಂಗಾಳದ ಟಿಎಂಸಿ ಭದ್ರಕೋಟೆಯಲ್ಲಿ ಬಿಜೆಪಿ ನುಗ್ಗಲು ಪ್ರಯತ್ನ ಮಾಡುತ್ತಲೇ ಇದೆ.

ಬಂಗಾಳದ ಈ ಸ್ಥಿತಿ ಕೇವಲ ಒಂದು ರಾಜ್ಯದ ಆಂತರಿಕ ವಿಚಾರವಲ್ಲ. ಬಾಂಗ್ಲಾದೇಶದ ಗಡಿ ಹಂಚಿಕೊಂಡ ರಾಜ್ಯದಲ್ಲಿ ದಶಕಗಳಿಂದ ಅಕ್ರಮ ನುಸುಳುಕೋರರ ಸಮಸ್ಯೆ ತೀವ್ರವಾಗಿದ್ದು, ಅದನ್ನು ಮತ ಬ್ಯಾಂಕ್‌ಗಾಗಿ ಬಳಸಿಕೊಳ್ಳುತ್ತಿರುವ ಟಿಎಂಸಿ ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ಕೂಡ ಅಪಾಯ. ಸಂಘ ಪರಿವಾರ ಸಂಘಟನೆಗಳ ಮೇಲಿನ ನಿರಂತರ ದಾಳಿ, ದುರ್ಗಾಪೂಜೆ ಮೆರವಣಿಗೆಗೆ ತಡೆ, ರಾಮ ನವಮಿ ಮೆರವಣಿಗೆಯಲ್ಲಿ ಹಿಂಸೆ, ಇವೆಲ್ಲ ಒಂದು ಸಂಘಟಿತ ಕ್ಷೇತ್ರ ದಬ್ಬಾಳಿಕೆಯ ಭಾಗ.

ಕೇಂದ್ರ ಚುನಾವಣಾ ಆಯೋಗ ಸಿಆರ್‌ಪಿಎಫ್ ನಿಯೋಜಿಸಿದ್ದೇ ಪರಿಸ್ಥಿತಿ ಎಷ್ಟು ಗಂಭೀರ ಎಂಬುದರ ಸ್ಪಷ್ಟ ಸಂದೇಶ. ಸ್ವತಂತ್ರ ಮತ್ತು ನ್ಯಾಯಸಮ್ಮತ ಚುನಾವಣೆಗಾಗಿ ಕೇಂದ್ರ ಸಶಸ್ತ್ರ ಪಡೆ ಬೇಕಾಗುವ ಪ್ರಜಾಪ್ರಭುತ್ವ ಆರೋಗ್ಯಕರ ಸ್ಥಿತಿಯಲ್ಲಿಲ್ಲ. ಬಂಗಾಳದ ಮತದಾರ ಭಯ ಕಳೆದುಕೊಂಡು ಮತಪೆಟ್ಟಿಗೆ ಮುಂದೆ ನಿಲ್ಲಲು, ರಾಜ್ಯದಲ್ಲಿ ನಿಜವಾದ ರಾಜಕೀಯ ಪ್ರಜಾಪ್ರಭುತ್ವ ಮರುಸ್ಥಾಪನೆಯಾಗಬೇಕಾಗಿದೆ. ಇಲ್ಲಿ ಯಾರು ಗೆಲ್ಲುತ್ತಾರೆ, ಸೋಲುತ್ತಾರೆ ಎಂಬುದು ಸಂಗತಿಯಲ್ಲ. ರಾಜಕೀಯ ಹಿಂಸೆಗಳು ತಪ್ಪಿ, ಇಲ್ಲೊಂದು ಶಾಂತಿಪೂರ್ಣ ಸಮಾಜ ನಿರ್ಮಾಣವಾಗಬೇಕು. ಅಕ್ರಮ ನಿರಾಶ್ರಿತರನ್ನು ಹೊರಗಟ್ಟಿ, ಸ್ಥಳಿಯರಿಗೇ ಸರ್ಕಾರದ ಫಲಾನುಭವಗಳು ಸಿಗುವಂತೆ ಆಗಬೇಕು.

ದುರ್ಬಲರು ಕೂಡಿ ಒಟ್ಟಾದರೆ....

ಸರ್ವಥಾ ಸಂಹತೈರೇವ ದುರ್ಬಲೈರ್ಬಲವಾನಪಿ ।
ಅಮಿತ್ರಃ ಶಕ್ಯತೇ ಹಂತುಂ ಮಧುಹಾ ಭ್ರಮರೈರಿವ ॥ -ಮಹಾಭಾರತ

ಜೇನುಹುಳುಗಳು ಒಟ್ಟಾಗಿ ಜೇನನ್ನು ಅಳೆಯಲು ಬಂದವರನ್ನು ಮುತ್ತಿ ಕೊಲ್ಲುವಂತೆ ದುರ್ಬಲರೂ ಕೂಡ ಒಗ್ಗಟ್ಟಾಗಿದ್ದರೆ ಮಾತ್ರ ಬಲಿಷ್ಠರನ್ನು ಕೂಡ ಮುರಿದಿಕ್ಕಬಹುದು - ಎಂಬುದು ಶ್ಲೋಕಾರ್ಥ.

ಸಂಘಟನೆಯಲ್ಲಿ ಶಕ್ತಿಯಿದೆ. ವಿಘಟನೆಯಲ್ಲಿ ದುರ್ಬಲತೆಯಿದೆ. ಯಾವುದೇ ಸಮೂಹದ ಶಕ್ತಿಯನ್ನು ಮುರಿಯಲು ವಿಘಟಿಸುವ ತಂತ್ರವನ್ನು ಬಳಸಬೇಕು. ಹೀಗೆ ಮಾಡುವುದರಿಂದ ಶತ್ರುಗಳು ದುರ್ಬಲರಾಗುತ್ತಾರೆ. ಒಂದೊಮ್ಮೆ ಶತ್ರುಗಳು ಒಟ್ಟಾಗಿ ಬಂದರೆ ನಾಲ್ಕಾರು ದಿಕ್ಕಿನಿಂದ ಆಕ್ರಮಣ ಮಾಡಬೇಕು. ಆಗ ಒಂದಾದ ಸೈನ್ಯ ನಾಲ್ಕಾರು ಕಡೆಯ ಆಕ್ರಮಣವನ್ನು ಎದುರಿಸಲು ವಿಭಜಿತಗೊಳ್ಳಬೇಕಾಗುತ್ತದೆ.



1965ರಲ್ಲಿ ಪಾಕಿಸ್ಥಾನ ಭಾರತದ ಮೇಲೆ ಆಕ್ರಮಣ ಮಾಡಿತು. ಆಗ ಲಾಲ್ ಬಹದ್ದೂರ್ ಶಾಸ್ತ್ರಿಯವರು ಪ್ರಧಾನಿಯಾಗಿದ್ದರು. 1950ರಲ್ಲಿ ಚೀನಾ ದೇಶ ಟಿಬೆಟನ್ನು ಆಕ್ರಮಿಸಿಕೊಂಡಾಗ ಆರ್.ಎಸ್.ಎಸ್.ನ ಎರಡನೆ ಸರಸಂಘಚಾಲಕರಾಗಿದ್ದ ಗುರೂಜಿಯವರು 'ಚೀನಾವನ್ನು ನಂಬಬಾರದು, ಅದು ಎಂದಿದ್ದರೂ ಅಪಾಯ' ಎಂದು ಅಂದಿನ ಪ್ರಧಾನಿಯಾದ ನೆಹರೂರವರಲ್ಲಿ ಹೇಳಿದಾಗ 'ನೀವು ಸುಮ್ಮನೇ ಆರೋಪ ಮಾಡುತ್ತೀರಿ. ಸುಳ್ಳನ್ನೇ ಹೇಳುತ್ತೀರಿ. ಚೀನಾ ಭಾರತ ಬಾಯಿ ಬಾಯಿ' ಎಂದು ಹೇಳಿ ಗುರೂಜಿಯವರ ಮಾತನ್ನು ಕಡೆಗಣಿಸಿದರು. ಅದೇ ಚೀನಾ 1962ರಲ್ಲಿ ಭಾರತದ ಮೇಲೆ ಆಕ್ರಮಣ ಮಾಡಿತ್ತು. ಭಾರತ ಸೋಲನ್ನು ಅನುಭವಿಸಿತ್ತು. ಅತ್ಯಂತ ದೊಡ್ಡದಾದ ಹಿಮಾಲಯನ್ ಭೂಭಾಗವನ್ನು ಆಕ್ರಮಿಸಿಕೊಂಡಿತ್ತು.

ಇದರ ಅರಿವಿದ್ದ ಶಾಸ್ತ್ರೀಜಿಯವರು ಪಾಕಿಸ್ತಾನ ಆಕ್ರಮಣ ಮಾಡಿದಾಗ ಗುರೂಜಿಯವರನ್ನು ಕರೆಸಿ ಸಲಹೆ ಕೇಳಿದರು. ಆಗ ಅವರು 'ಶತ್ರುಗಳಿಗೆ ಪ್ರತ್ಯಾಕ್ರಮಣವೇ ಉತ್ತರ. ನಾವು ನಾಲ್ಕು ಕಡೆಗಳಿಂದ ಆಕ್ರಮಣ ಮಾಡಿ ಶತ್ರುಗಳಿಗೆ ಆಘಾತವನ್ನುಂಟು ಮಾಡಬೇಕು' ಅಂದರು. ಅದೇ ತರ ಮಾಡಿದಾಗ ನಮಗೆ ಜಯ ದೊರೆಯಿತು. ಒಟ್ಟಾಗಿ ಆಕ್ರಮಣ, ತಂತ್ರಕ್ಕೆ ಪ್ರತಿತಂತ್ರವೇ ಗೆಲುವಿನ ಗುಟ್ಟು.

ನಾವೆಂದೂ ದುರ್ಬಲರೆಂದುಕೊಳ್ಳಬಾರದು. ದುರ್ಬಲರೂ ಒಟ್ಟಾಗಿ ಮುನ್ನುಗ್ಗಿದರೆ ಜಯವನ್ನು ಪಡೆಯಲು ಸಾಧ್ಯ. ಇತ್ತೀಚೆಗೆ ಬಂಗಾಳದ ಸಂದೇಶಕಾಲಿಯಲ್ಲಿ ನಡೆದ ಘಟನೆ ಇದಕ್ಕೆ ಸಾಕ್ಷಿ. ನಿರಂತರ ತಮ್ಮ ಮೇಲೆ ಅತ್ಯಾಚಾರ ಎಸಗುತ್ತಿದ್ದ ಟಿಎಂಸಿ ಶಾಸಕ ಹಾಗೂ ಅವರ ಸಹಚರರ ಮೇಲೆ ಮಹಿಳೆಯರು ಸಿಡಿದೆದ್ದ ಪರಿಣಾಮವಾಗಿ ಅವನನ್ನು ಬಂಧಿಸಿದರು. ದುರ್ಬಲರು ಎಂದು ಕುಳಿತುಕೊಳ್ಳದೇ ಒಟ್ಟಾದರೆ ಜಯ ಸಾಧ್ಯ. ಬಲಿಷ್ಠರನ್ನೂ ಮಣಿಸಬಹುದು.

ಜೇನು ತೆಗೆಯಲು ಬಂದವನನ್ನು ಮುತ್ತಿ ಸಣ್ಣ ಸಣ್ಣ ಜೇನುಹುಳುಗಳು ಆಕ್ರಮಣವನ್ನು ಮಾಡಿ ಅವನನ್ನೇ ಕೊಲ್ಲುತ್ತವೆ. ಸಂಘಟಿತರಾದಾಗ ಅಂತಹ ಶಕ್ತಿ ಬರುತ್ತದೆ.

ಈಗಂತೂ ಕರ್ನಾಟಕದಲ್ಲಿ ನಿರಂತರ ಹಿಂದುಗಳನ್ನು ತುಳಿಯುವ ಕೆಲಸ ಸಾಗಿದೆ. ಅಲ್ಪಸಂಖ್ಯಾತರನ್ನು ಓಲೈಸುವುದಕ್ಕೆ ಸರಕಾರ ಮುಂದಾಗಿದೆ. ನಾವು ಸುಮ್ಮನೇ ಕುಳಿತರೆ ಪ್ರಯೋಜನವಿಲ್ಲ. ಹಿಂದೂ ಸಮಾಜ ಒಟ್ಟಾಗಿ ಇದನ್ನು ಒಕ್ಕೊರಲಿನಿಂದ ವಿರೋಧಿಸಬೇಕು. ಸಂಘಟಿತ ನಿರ್ಣಯಕ್ಕೆ ಬದ್ಧರಾಗಬೇಕು. ಆಗ ಸರಕಾರವೂ ತಲೆಬಾಗುತ್ತದೆ.

'ಎಲ್ ನಿನೋ'ದಿಂದ ಮಳೆ ಕಡಿಮೆಯಾಗುವುದು ನಿಜವೇ?

'ಎಲ್-ನಿನೋ'ದಿಂದಾಗಿ ಭಾರತದಲ್ಲಿ ಮುಂಗಾರು ದುರ್ಬಲವಾಗಲೇ ಬೇಕೆಂದಿಲ್ಲ. ಮುಂಗಾರು ಮೇಲೆ ಪ್ರಭಾವ ಬೀರುವ ಬೇರೆ ಅಂಶಗಳೂ ಇವೆ.

ದಿನೇಶ

ಭಾರತವು ಈಗ ಬಿಸಿಲ ಧಗೆಯಲ್ಲಿ ಬೇಯುತ್ತಿದೆ. ದೇಶಾದ್ಯಂತ ತಾಪಮಾನ ವಿಪರೀತಕ್ಕೇರಿದೆ. ಉಷ್ಣಹವೆ ಜನರನ್ನು ಕಂಗೆಡಿಸುತ್ತಿದೆ.

ದೇಶದಲ್ಲಿ ಹಲವಾರು ಪ್ರದೇಶಗಳು ಅತಿಯಾದ ಉಷ್ಣತೆಯನ್ನು ದಾಖಲಿಸಿವೆ. ಏಪ್ರಿಲ್ 25ರಂದು ಉತ್ತರಪ್ರದೇಶದ ಪಟ್ಟಣವೊಂದರಲ್ಲಿ ಅತ್ಯಧಿಕ, ಅಂದರೆ 47.4ಡಿಗ್ರಿ ಸೆಲ್ಸಿಯಸ್ ಉಷ್ಣತೆ ದಾಖಲಾಯಿತು. 40 ಡಿಗ್ರಿಯಿಂದ 45 ಡಿಗ್ರಿ ಉಷ್ಣತೆ ಬಹಳಷ್ಟು ನಗರಗಳಲ್ಲಿ ದಾಖಲಾಗಿದೆ.

ಈ ಬಾರಿಯ ಬೇಸಿಗೆಯು ಅವಧಿಗೆ ಮುಂಚಿತವಾಗಿಯೇ ಆಗಮಿಸಿರುವುದಲ್ಲದೆ, ಅತಿ ಉಷ್ಣತೆಯನ್ನು ತುಂಬಿಕೊಂಡು ಜನಜೀವನ ಅಸಹನೀಯಗೊಳಿಸಿರುವುದನ್ನು ಎಲ್ಲರೂ ಅನುಭವಿಸುತ್ತಿದ್ದಾರೆ.

ಅದು ಸಾಲದೆಂಬಂತೆ ಈ ಬಾರಿ 'ಸೂಪರ್ ಎಲ್-ನಿನೋ' ಕುರಿತಂತೆ ಎಲ್ಲೆಡೆ ಮಾತುಗಳು ಕೇಳಿಬರುತ್ತಿವೆ. ಮಾಧ್ಯಮಗಳೂ ಅದನ್ನು ಅತಿರೇಕವಾಗಿ ಪ್ರಚಾರ ಮಾಡುತ್ತಿವೆ. ಎಲ್-ನಿನೋ ಕಾರಣದಿಂದಾಗಿಯೇ ದೇಶದಲ್ಲಿ ಉಷ್ಣಹವೆ ಮತ್ತು ತಾಪಮಾನ ಏರಿಕೆಯಾಗಿದೆ ಎಂಬ ವಾದಗಳೂ ಕೇಳುತ್ತಿವೆ.

ಅತಿ ಉಷ್ಣತೆ, ಎಲ್ ನಿನೋ ಪ್ರಭಾವ ಸೇರಿದ ಮೇಲೆ ಮಳೆಯ ಕುರಿತಂತೆ ಮಾತು ಬರದಿದ್ದೀತೆ? ಎಲ್ ನಿನೋ ಪ್ರಭಾವದಿಂದಾಗಿ ಈ ಬಾರಿ ದೇಶದಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಬಹುದು ಎಂಬ ಮಾತೂ ಎಂದಿನಂತೆ ಚಾಲ್ತಿಯಲ್ಲಿದೆ. ಮಳೆಯ ಕೊರತೆಯಿಂದಾಗಿ ಬರಗಾಲದ ಪರಿಸ್ಥಿತಿ ಬರಬಹುದು, ದೇಶದ ಕೃಷಿಗೆ ಪ್ರತಿಕೂಲವಾಗಬಹುದು, ಆ ಮೂಲಕ ದೇಶದ ಅಭಿವೃದ್ಧಿಗೂ ಹೊಡೆತ ಬೀಳಬಹುದು ಎಂಬಂತಹ ಲೆಕ್ಕಾಚಾರಗಳೂ ನಡೆಯುತ್ತಿವೆ.

ಎಲ್-ನಿನೋ ಪರಿಣಾಮ ಉಂಟಾದಾಗಲೆಲ್ಲ ಭಾರತದಲ್ಲಿ ಮಳೆ ಕಡಿಮೆಯಾಗುತ್ತದೆ, ಮುಂಗಾರು ದುರ್ಬಲವಾಗುತ್ತದೆ ಎನ್ನಲಾಗುತ್ತದೆ. ಇದು ನಿಜವೆ? ಈ ಹಿಂದೆ ಹಲವು ಬಾರಿ ಎಲ್-ನಿನೋ ಕಾರಣದಿಂದ ಮುಂಗಾರು ದುರ್ಬಲವಾಗಿರುವುದು ನಿಜವಾದರೂ ಅದಕ್ಕೆ ವಿರುದ್ಧವಾದ ವಿದ್ಯಮಾನ ಸಂಭವಿಸಿರುವುದೂ ಅಷ್ಟೇ ಸತ್ಯ.

"ಸೂಪರ್ ಎಲ್ ನಿನೋ ಕಾರಣದಿಂದಾಗಿ ತೀವ್ರ ಬರಗಾಲ ಉಂಟಾಗುವುದೆಂದು ಖಾತರಿಯಾಗಿ ಹೇಳುವಂತಿಲ್ಲ. ಬಲವಾದ ಎಲ್-ನಿನೋದಿಂದಾಗಿ ಮಳೆ ಕಡಿಮೆಯಾಗುವ ಸಾಧ್ಯತೆ ಇರುವುದು ನಿಜವಾದರೂ ಅದುವೇ ನಿರ್ಣಾಯಕವಲ್ಲ" ಎನ್ನುತ್ತಾರೆ ಐಐಟಿ ಪ್ರೊಫೆಸರ್ ಪ್ರೀತಾ ದತ್ತಾ ಎಂಬವರು.ಕೆಲ ವರ್ಷಗಳಲ್ಲಿ ಎಲ್ ನಿನೋ ಇದ್ದಾಗಲೂ ಭಾರತದಲ್ಲಿ ಉತ್ತಮ ಮಳೆಯಾಗಿದೆ ಎನ್ನುತ್ತಾರವರು.

ಏನಿದು ಎಲ್-ನಿನೋ ?

ಎಲ್ ನಿನೋ ಎಂಬುದು ಕಾಲಕಾಲಕ್ಕೆ ಕೇಂದ್ರ ಮತ್ತು ಪೂರ್ವ ಪೆಸಿಫಿಕ್ ಸಾಗರದ ಮೇಲ್ಮೈಯಲ್ಲಿ ಉಂಟಾಗುವ ನೀರಿನ ಬಿಸಿಯೇರುವಿಕೆಯ ಪ್ರಕ್ರಿಯೆ. ಇದರಿಂದಾಗಿ ಗಾಳಿಯ ದಿಕ್ಕು ಬದಲಾಗುತ್ತದೆ. ಇದು ದಕ್ಷಿಣ ಅಮೆರಿಕದಿಂದ ಹಿಡಿದು ದಕ್ಷಿಣ ಏಶ್ಯಾದ ತನಕ ಮಳೆಯ ಮೇಲೂ ಪರಿಣಾಮ ಬೀರುತ್ತದೆ.



ಎಲ್ ನಿನೋ ಪರಿಣಾಮವನ್ನು ಸಮುದ್ರದ ನೀರಿನ ಉಷ್ಣತೆಯ ಆಧಾರದಲ್ಲಿ ವಿಂಗಡಿಸಲಾಗಿದೆ. 0.5 ಡಿಗ್ರಿಗಿಂತ ಹೆಚ್ಚಿನದ್ದನ್ನು ದುರ್ಬಲವೆಂದು, 1 ಡಿಗ್ರಿಗಿಂತ ಹೆಚ್ಚಿನದ್ದನ್ನು ಸಾಧಾರಣವೆಂದು, 1.5ಡಿಗ್ರಿಗಿಂತ ಹೆಚ್ಚಿನದ್ದನ್ನು ಬಲಿಷ್ಠವೆಂದು, 2.5ಡಿಗ್ರಿಗಿಂತ ಹೆಚ್ಚಿನದ್ದನ್ನು ಮಹಾಬಲಿಷ್ಠವೆಂದು ಪರಿಗಣಿಸಲಾಗುತ್ತದೆ. ಸುಪರ್ ಎಲ್ ನಿನೋ ಎಂಬುದಾಗಿ ವೈಜ್ಞಾನಿಕವಾಗಿಯೇನೂ ವಿಂಗಡಣೆ ಮಾಡಿಲ್ಲ. ಆದರೆ ಈ ಬಾರಿ ದೇಶದಲ್ಲಿ ವ್ಯಾಪಿಸಿರುವ ಅತಿ ಉಷ್ಣತೆಯ ಕಾರಣದಿಂದಾಗಿ ಕೆಲವರು ಆ ರೀತಿ ಬಣ್ಣಿಸುತ್ತಿದ್ದಾರೆ.

ಎಲ್-ನಿನೋ ಮತ್ತು ಮಳೆ

ಎಲ್-ನಿನೋ ಕಾರಣದಿಂದಾಗಿ ದೇಶದಲ್ಲಿ ಮಳೆ ಕಡಿಮೆಯಾಗಲಿದೆ ಎಂದು ಹೇಳಲಾಗುತ್ತದಾದರೂ ಎಲ್ ನಿನೋ ಮತ್ತು ಮಳೆಗೆ ನೇರ ಸಂಬಂಧವಿಲ್ಲ ಎಂದು ಹವಾಮಾನ ತಜ್ಞರು ಹೇಳುತ್ತಾರೆ. 1950ರಿಂದ ಆರಂಭಿಸಿ ಈವರೆಗೆ 16 ಬಾರಿ ಎಲ್ ನಿನೋ ಉಂಟಾಗಿದ್ದರೂ 7 ಎಲ್ ನಿನೋ ವರ್ಷಗಳಲ್ಲಿ ಮಾತ್ರ ಮಳೆಯು ಕಡಿಮೆಯಾಗಿತ್ತು. ಉಳಿದ ಸಂದರ್ಭಗಳಲ್ಲಿ ವಾಡಿಕೆಯಷ್ಟೇ ಮಳೆ ಸುರಿದಿತ್ತು. 1982, 1997 ಮತ್ತು 2015ರಲ್ಲಿ ಎಲ್-ನಿನೋ ಅತ್ಯಂತ ಬಲಿಷ್ಠವಾಗಿತ್ತು. 1982 ಮತ್ತು 20157ರಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾದುದು ನಿಜವಾದರೂ, 1997ರಲ್ಲಿ ಮಳೆಯು ವಾಡಿಕೆಯಯಷ್ಟೇ ಬಂದಿತ್ತು ಹಾಗೂ ದೇಶವು ಬರಗಾಲದ ಪರಿಸ್ಥಿತಿ ಎದುರಿಸಿರಲಿಲ್ಲ ಎನ್ನುತ್ತಾರೆ ತಜ್ಞರು.

1997ರಲ್ಲಿ ಮುಂಗಾರು ದುರ್ಬಲವಾಗದಿರಲು ಮುಖ್ಯ ಕಾರಣವೆಂದರೆ ಅತ್ತ ಎಲ್ ನಿನೋ ಜತೆಗೇ ಇತ್ತ ಹಿಂದೂ ಮಹಾಸಾಗರದಲ್ಲಿ ಉಂಟಾದ ಬಲಿಷ್ಠ ಪಾಸಿಟಿವ್ ಡೈಪೋಲ್. ಆ ಮೂಲಕ ಎಲ್ ನಿನೋ ಪರಿಣಾಮವು ನಗಣ್ಯವಾಯಿತು. ಹಾಗಾಗಿ ಮುಂಗಾರು ಮಾರುತವು ಯಾವುದೇ ಒಂದು ಅಂಶದಿಂದಷ್ಟೇ ನಿರ್ಧರಿಸಲ್ಪಡುವುದಿಲ್ಲ. ಇನ್ನೂ ಹಲವಾರು ವಿಷಯಗಳು ಮುಂಗಾರು ದುರ್ಬಲತೆ ಯಾ ಪ್ರಭಾವವನ್ನು ನಿರ್ಧರಿಸುತ್ತವೆ.

ಎಲ್ ನಿನೋ ನಗಣ್ಯಗೊಳಿಸುವ 'ಐಒಡಿ'

ಭಾರತದ ಮುಂಗಾರಿನ ಮೇಲೆ ಕೇವಲ ಎಲ್ ನಿನೋ ಪರಿಣಾಮ ಬೀರುವುದಲ್ಲ. ಇನ್ನೂ ಕೆಲವು ವಿಷಯಗಳು ಪ್ರಭಾವ ಬೀರುತ್ತವೆ. ಹಿಂದೂ ಮಹಾಸಾಗರದಲ್ಲಿ ಎಲ್‌ನಿನೋ ದಂತೆಯೆ ಉಂಟಾಗುವ ಉಷ್ಣತೆಯ ಬದಲಾವಣೆಯು ಎಲ್ ನಿನೋ ಪರಿಣಆಮವನ್ನು ಹಿಂದಕ್ಕೆ ತಳ್ಳಿ ಉತ್ತಮ ಮಳೆಗೆ ಕಾರಣವಗುವುದೂ ಇದೆ. 'ಹಿಂದೂ ಮಹಾಸಾಗರ ಡೈಪೋಲ್' (ಐಒಡಿ) ಎಂಬ ಈ ಪ್ರಕ್ರಿಯೆಯನ್ನು 'ಹಿಂದೂ ಮಹಾಸಾಗರದ ಎಲ್ ನಿನೋ' ಎಂದೂ ಕರೆಯುವುದಿದೆ. ಹಿಂದೂ ಮಹಾಸಾಗರ ಡೈಪೋಲ್‌ನಿಂದಾಗಿ ಬದಲಾಗುವ ಸಾಗರದ ಉಷ್ಣತೆಯ ಪ್ರಮಾಣ ಮತ್ತು ಅದು ಉಂಟಾಗುವ ಸಮಯಸಂದರ್ಭ ಕೂಡಾ ಮುಂಗಾರಿನ ಮೇಲೆ ಪರಿಣಾಮ ಬೀರುವುದು.

ಹಿಂದೂ ಮಹಾಸಾಗರ ಡೈಪೋಲ್ ಉಂಟಾದರೆ ದಕ್ಷಿಣ ಭಾರತ ಮತ್ತು ಕೇಂದ್ರ ಭಾರತಕ್ಕೆ ಉತ್ತಮ ಮಳೆಯಾಗಲಿದೆ ಎಂದು ಪರಿಣತರು ಹೇಳುತ್ತಾರೆ.

ಸದ್ಯದ ಪರಿಸ್ಥಿತಿಯಲ್ಲಿ ಐಒಡಿ ಉಂಟಾಗುವ ಸಾಧ್ಯತೆ ಹೆಚ್ಚಿದೆ ಎನ್ನುತ್ತಾರವರು. ಹಿಂದೂ ಮಹಾಸಾಗರದ ಪಶ್ಚಿಮ ಭಾಗವು ಪೂರ್ವ ಭಾಗಕ್ಕಿಂತ ಹೆಚ್ಚು ಉಷ್ಣತೆ ಹೊಂದಿರುವುದು ಇದನ್ನು ಸೂಚಿಸುತ್ತದೆ ಎನ್ನುತ್ತಾರೆ.

ಅದೇರೀತಿ, ತೇವಾಂಶವನ್ನು ಹೊತ್ತು ತರುವ 'ಸೋಮಾಲಿ ಜೆಟ್' ಎಂಬ ಕಡಿಮೆ ಸ್ತರದ ಗಾಳಿ ಕೂಡಾ ಮುಂಗಾರಿನ ಮೇಲೆ ಪ್ರಭಾವ ಬೀರುವುದು. ಈ ಪರಿಣಾಮವು ಭಾರತೀಯ ಉಪಖಂಡವನ್ನು ಎಷ್ಟು ತೇವಾಂಶವು ತಲುಪುತ್ತದೆ ಎಂಬುದನ್ನು ನಿರ್ಧರಿಸುತ್ತದೆ.

ಪುಣೆಯ ಹವಾಮಾನ ಸಂಸ್ಥೆಯು ಇನ್ನೂ ಒಂದು ಸಂಶೋಧನೆಯ ಅಂಶವನ್ನು ಹೊರಗೆಡವಿದೆ. ಎಲ್ ನಿನೋ ಮತ್ತು ಮುಂಗಾರು ನಡುವಿನ ಸಂಬಂಧವು ದೇಶಾದ್ಯಂತ ಒಂದೇ ತೆರನಾಗಿರುವುದಿಲ್ಲ. ದಕ್ಷಿಣ ಭಾರತ, ಮಧ್ಯ ಭಾರತ ಮತ್ತು ಉತ್ತರ ಭಾರತದ ಮೇಲೆ ವಿಭಿನ್ನ ರೀತಿಯ ಪರಿಣಾಮ ಬೀರುತ್ತದೆ ಎಂದು ಹೇಳಿದೆ.

'ಸೂಪರ್ ಎಲ್ ನಿನೋ' ಖಾತರಿಯೇನಲ್ಲ

ಈ ವರ್ಷದ ಮಧ್ಯಭಾಗದಲ್ಲಿ ಸೂಪರ್ ಎಲ್ ನಿನೋ ವಕ್ಕರಿಸಬಹುದು ಎಂದು ಹೇಳಲಾಗುತ್ತದಾದರೂ ಅದು ಪೂರ್ಣ ಖಾತರಿಯಲ್ಲ ಎಂದೂ ಹವಾಮಾನ ತಜ್ಞರು ನುಡಿಯುತ್ತಾರೆ.

ಎಲ್ ನಿನೋ ಬರುವ ಸಂಕೇತಗಳೇನೋ ಬಲವಾಗಿವೆ.ಆದರೆ ಕೆಲವೊಮ್ಮೆ ಅದು ದಿಕ್ಕು ತಪ್ಪುವುದೂ ಇದೆ. ಸಮುದ್ರದ ಗತಿ ಯಾವತ್ತೂ ಸ್ಥಿರವಲ್ಲ. ಅನಿರೀಕ್ಷಿತ ಬದಲಾವಣೆಗಳು ಉಂಟಾಗುವುದು ಸಹಜ. ಹಠಾತ್ತನೆ ಬೀಸುವ ಗಾಳಿ, ಸಾಗರದ ಮೇಲಿನ ಇನ್ನಿತರ ಕೆಲವು ಅಂಶಗಳು ಎಲ್ ನಿನೋವನ್ನು ದುರ್ಬಲಗೊಳಿಸುವ ಸಾಧ್ಯತೆಗಳೂ ಇವೆ. ವಿಶ್ವದ ಇನ್ನಿತರ ಸಾಗರಗಳಲ್ಲಿನ ಬೆಳವಣಿಗೆಗಳೂ ಎಲ್ ನಿನೋ ಮೇಲೆ ಪರಿಣಾಮ ಬೀರುವುದಿದೆ.

ಹಾಗಾಗಿಯೇ ಕೆಲವರು ಈಗಲೇ 'ಎಲ್ ನಿನೋ'ದ ಕುರಿತಂತೆ ಪ್ರಳಯಕಾರಿಯಾಗಿ ಮಾತನಾಡುವುದು ತರವಲ್ಲವೆಂದು ಎಚ್ಚರಿಸುತ್ತಿದ್ದಾರೆ.

"ಕೇವಲ ಎಲ್ ನಿನೋ ಆಧರಿಸಿ ದೇಶದ ಮಳೆಯನ್ನು ನಿರ್ಧರಿಸುವುದು ತರವಲ್ಲ. ಸ್ಥಳೀಯ ಮಳೆಯ ಸ್ವರೂಪ, ಅದನ್ನು ಪ್ರಭಾವಿಸುವ ಸ್ಥಳೀಯ ಅಂಶಗಳನ್ನು ಆಧರಿಸಿ ಮಳೆಯ ಭವಿಷ್ಯ ನುಡಿಯಬೇಕು. ಅಲ್ಲೂ ದೀರ್ಘಾವಧಿಯ ಅಂದಾಜು ನಿರ್ಧರಿಸುವ ಬದಲಾಗಿ ಅಲ್ಪಾವಧಿಗೆ ಮಳೆಯ ಅಂದಾಜು ಲೆಕ್ಕ ಹಾಕಬೇಕು" ಎಂದು ಹವಾಮಾನ ತಜ್ಞರೊಬ್ಬರು ಎಚ್ಚರಿಸುತ್ತಾರೆ.

ಪತ್ರ ಮಿತ್ರ

ರಾಜಕಾರಣವೆಂದರೆ ಹಾಗೆಯೆ...

ಕೆಲದಿನಗಳ ಹಿಂದೆ ಹೊಸದಿಗಂತದ ಸಂಪಾದಕೀಯವು 'ಪದಬಳಕೆ ಮತ್ತು ರಾಜಕಾರಣದ ಸಭ್ಯತೆ' ವಿಷಯದ ಮೇಲೆ ಬೆಳಕು ಚೆಲ್ಲಿದೆ. ಹೌದು, ರಾಜಕಾರಣಿ, ರಾಜಕೀಯ ಎಂಬುದೆಲ್ಲ ಈಗ ಯಾವುದೇ ಸಾಮಾನ್ಯ ಎನ್ನುವ ಸಂಗತಿಗಳಿಗೆ ಹೊರತಾದವು ಎಂಬಂತೆ ಪರಿಗಣಿಸಲ್ಪಡುತ್ತಿದೆ. ರಾಜಕಾರಣಿ ಎಂಬ ಬಿರುದು ಹೊತ್ತಮೇಲೆ, ಅವರನ್ನು ಯಾರೂ ಪ್ರಶ್ನಿಸುವಂತೆಯೂ ಇಲ್ಲ ಎಂಬಂತಾಗಿದೆ. ಇದೇಕೆ ಹೀಗೆ? ಅಂದರೆ, ಅದಿರುವುದೇ ಹಾಗೆ!

ನಮ್ಮ ರಾಜಕಾರಣಿಗಳು ಬಳಸುವ ಭಾಷೆ ಹಾಗೆಯೆ. ಯಾವಾಗ, ಯಾರಿಗೆ ಬೇಕಾದರೂ, ಏನನ್ನಾದರೂ ಹೇಳಬಹುದು. ಅದೊಂದು ರೀತಿ ಅವರ ವಿಶೇಷಾಧಿಕಾರ. ಅದನ್ನು ಪ್ರಶ್ನಿಸುವಂತೆ ಇಲ್ಲ. ಆ ರಾಜಕಾರಣಿ ಅದೆಷ್ಟೇ ಹಿರಿಯವನಾಗಲಿ ಅಥವಾ ಕಿರಿಯವನಾಗಲಿ, ಅವನಾಡುವ ಮಾತನ್ನು ಅಲ್ಲಗಳೆಯಲೇ ಬಾರದು. ಕಾಂಗ್ರೆಸ್ ಹಿರಿಯ ನಾಯಕ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ದೇಶದ ಪ್ರಧಾನಿಯನ್ನೇ 'ಭಯೋತ್ಪಾದಕ' ಎಂದು ಟೀಕಿಸಿರುವುದು ಅದಕ್ಕೆ ನೂತನ ನಿದರ್ಶನ. ಪ್ರಾಯಶಃ, ಖರ್ಗೆಯವರಿಗೆ ಈ ಪದದ ನಿಜವಾದ ಅರ್ಥವೇ ತಿಳಿದಿಲ್ಲ ಅನ್ನಬೇಕೋ ಅಥವಾ ಟೀಕೆ ಮಾಡುವ ಭರದಲ್ಲಿ ಪ್ರಜ್ಞೆ ತಪ್ಪಿರಬಹುದೋ ಎಂಬುದೇ ಅರ್ಥವಾಗುತ್ತಿಲ್ಲ.

ಮಲ್ಲಿಕಾರ್ಜುನ ಖರ್ಗೆ ಅತ್ಯಂತ ಹಿರಿಯ ಕಾಂಗ್ರೆಸ್ ನಾಯಕ. ತೀರಾ ದಮನಿತ ವರ್ಗದಿಂದ ಮೇಲೆ ಬಂದವರು. ಭಾರತದ ಸಂವಿಧಾನದ ಪೂರಾ ಅರಿವೂ ಇದ್ದಂಥವರು.ಸಂಪಾದಕೀಯದಲ್ಲಿ ಹೇಳಿದಂತೆ ಅವರು ಬೆಂಕಿಯಿಂದ ಅರಳಿಬಂದ ಮುಖಂಡರು. ಯಾವ ಸಮಯದಲ್ಲಿ ಯಾವ ರೀತಿ ಮಾತಾಡಬೇಕು, ಮಾತಾಡುವಾಗ ಯಾವ ಯಾವ ಪದಗಳ ಬಳಕೆ ಆಗಕೂಡದು ಎಂಬೆಲ್ಲ ಅರಿವಿರುವವರು. ಇಷ್ಟಾಗಿಯೂ ಪ್ರಧಾನಿಯನ್ನು 'ವಿಷಸರ್ಪ', 'ಭಯೋತ್ಪಾದಕ' ಎಂದೆಲ್ಲ ಹೇಳಿರುವ ಹಿಂದೆ ಏನೋ ಒಂದು ಅನಿವಾರ್ಯತೆ ಇದ್ದಿರಬಹುದೆ ? ಅವರು ಬಳಸಿದ ಪದಗಳೆಲ್ಲ ಅವರ ಸ್ವಂತದ್ದಾಗಿರದೆ, ಇನ್ಯಾರನ್ನೋ ಓಲೈಸಲು ಈ ರೀತಿ ಬಳಸಿದ್ದಾಗಿರಬಹುದೆ ? ಇಂದು ಅವರು ಹೆಸರಿಗಷ್ಟೇ ಎಐಸಿಸಿ ಅಧ್ಯಕ್ಷ. ಮಾಡುವ ಕೆಲಸಗಳೆಲ್ಲ ಇನ್ನಾರದೋ ಆಣತಿಯಂತೆ ಎಂಬುದು ರಹಸ್ಯವೇನಲ್ಲ. ಟೀಕೆ ಆರೋಗ್ಯಪೂರ್ಣವಾಗಿರಬೇಕು ಎಂಬ ಜ್ಞಾನವಿದ್ದೂ ಯಾಕಿಷ್ಟು ಬದಲಾವಣೆ ಅಂತ ಕೇಳಿದರೆ ಅನಿವಾರ್ಯತೆ!? ಅಸಹಾಯಕತೆಯೋ, ತನ್ನ ಸ್ಥಾನ ಉಳಿಸಿಕೊಳ್ಳುವ ವ್ಯರ್ಥ ಪ್ರಯತ್ನವೋ, ಒಟ್ಟಾರೆ ಇಂತಹ ಕೆಲ ಪದಗಳನ್ನು ಬಳಸಿ ಕಾಂಗ್ರೆಸ್ ಅಧಿನಾಯಕನನ್ನು ಮೆಚ್ಚಿಸಲು ಯತ್ನಿಸುತ್ತಿರುವುದಂತೂ ಸತ್ಯ.

ಬಳಿಕ, ತಾನು ಹೇಳಿದ್ದನ್ನು ತಪ್ಪಾಗಿ ಅರ್ಥೈಸಲಾಗಿದೆ, ನಾನು ಹಾಗೆ ಹೇಳಲೇ ಇಲ್ಲ ಎನ್ನುವುದೆಲ್ಲ ರಾಜಕೀಯದ ಗಿಲೀಟಿನ ಮಾತುಗಳು. ಆದರಲ್ಲಿ ತಪ್ಪೊಪ್ಪಿಗೆಯ, ಪಶ್ಚಾತ್ತಾಪದ ಸೋಂಕೇ ಇಲ್ಲ.

-ಶಂಕರನಾರಾಯಣ ಭಟ್, ಮಾಡಗೇರಿ

ಸ್ವಾಗತಾರ್ಹ

ಶಾಲೆಗಳಲ್ಲಿ ಪತ್ರಿಕೆ ಓದುವ ಅಭ್ಯಾಸವನ್ನು ಕಡ್ಡಾಯಗೊಳಿಸಿರುವ ಸರ್ಕಾರದ ಕ್ರಮವು ಸ್ತುತ್ಯಾರ್ಹವಾಗಿದೆ. ಇಂದಿನ ಡಿಜಿಟಲ್ ಯುಗದಲ್ಲಿ ಸ್ಕ್ರೀನ್ ಟೈಮ್ ಹೆಚ್ಚಾಗಿ ಮಕ್ಕಳ ಏಕಾಗ್ರತೆ ಮತ್ತು ಸೃಜನಶೀಲತೆ ಸುಮಾರು 40% ರಷ್ಟು ಕ್ಷೀಣಿಸುತ್ತಿರುವ ಸಂದರ್ಭದಲ್ಲಿ ಮುದ್ರಿತ ಮಾಧ್ಯಮದತ್ತ ಮಕ್ಕಳನ್ನು ಸೆಳೆಯುವುದು ಬೌದ್ಧಿಕ ಕ್ರಾಂತಿಗೆ ಮುನ್ನುಡಿಯಾಗಲಿದೆ. ದಿನಕ್ಕೆ ಕನಿಷ್ಠ 20 ನಿಮಿಷ ಪತ್ರಿಕೆ ಓದುವುದರಿಂದ ವಿದ್ಯಾರ್ಥಿಗಳಲ್ಲಿ ಭಾಷಾ ಪ್ರೌಢಿಮೆ ಹೆಚ್ಚುವುದಲ್ಲದೆ ದೇಶ-ವಿದೇಶಗಳ ವಿದ್ಯಮಾನಗಳ ಬಗ್ಗೆ ಆಳವಾದ ಜ್ಞಾನ ಲಭಿಸುತ್ತದೆ.

ಈ ಯೋಜನೆಯನ್ನು ಇನ್ನಷ್ಟು ಪರಿಣಾಮಕಾರಿಗೊಳಿಸಲು ಶಾಲೆಗಳಲ್ಲಿ ಸುದ್ದಿ ಸಂಶ್ಲೇಷಣೆ ಸಂವಾದಗಳನ್ನು ಏರ್ಪಡಿಸುವುದು ಮತ್ತು ಪತ್ರಿಕೆಯಲ್ಲಿನ ಕ್ಲಿಷ್ಟ ಪದಗಳನ್ನು ಬಳಸಿ ಮಕ್ಕಳೇ ಸ್ವತಃ ಶಬ್ದ ಭಂಡಾರ, ಗೋಡೆ ಪತ್ರಿಕೆ ಸಿದ್ಧಪಡಿಸುವಂತಹ ನವೀನ ಕ್ರಮಗಳನ್ನು ಅಳವಡಿಸಿಕೊಳ್ಳಬಹುದು. ಅಲ್ಲದೆ ಲೇಖನಗಳ ವಿಮರ್ಶೆ ಮಾಡುವ ಮೂಲಕ ಮಕ್ಕಳಲ್ಲಿ ವಿಮರ್ಶಾತ್ಮಕ ಚಿಂತನೆ ಬೆಳೆಸಲು ಸಾಧ್ಯವಿದೆ. ಪತ್ರಿಕೆಯ ಓದು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದ ಮಾರ್ಗವಾಗಲಿ.

-ಡಾ. ವಿಜಯಕುಮಾರ್, ರಾಯಚೂರು

ಅಶ್ಲೀಲ ಕುಣಿತಕ್ಕೆ ತಡೆ

ಶಾಲೆಗಳಲ್ಲಿ ಅಶ್ಲೀಲ ಹಾಡುಗಳಿಗೆ ಮಕ್ಕಳು ನರ್ತಿಸುವಂತೆ ಮಾಡುವುದಕ್ಕೆ ಸರಕಾರವು ನಿಷೇಧ ಹೇರಿರುವುದು ಅತ್ಯಂತ ಸೂಕ್ತ ಕ್ರಮವಾಗಿದೆ. ಹಾಡಿನ ಹೆಸರಿನಲ್ಲಿ ಅಸಭ್ಯ ಪದಪ್ರಯೋಗ, ನೃತ್ಯದ ಹೆಸರಿನಲ್ಲಿ ಅಂಗಾಂಗ ಕುಣಿತ ಮುಂತಾದವು ಹೆಚ್ಚು ಪ್ರಚಾರ ಪಡೆಯುತ್ತಿರುವ ಈ ಸನ್ನಿವೇಶದಲ್ಲಿ ಸರಕಾರವು ಶಾಲಾ ಮಕ್ಕಳಿಂದ ಇಂತಹ ಅಸಭ್ಯ ಹಾಡುಗಳಿಗೆ ಅಶ್ಲೀಲ ಕುಣಿತವನ್ನು ನಿರ್ಬಂಧಿಸಲು ಹೊರಟಿರುವುದು ಶ್ಲಾಘನೀಯ ಕ್ರಮವಾಗಿದೆ.

ಶಾಲಾ ಕಾಲೇಜುಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಇಂತಹ ಅಶ್ಲೀಲ ಕುಣಿತಗಳ ಪ್ರಸಂಗಗಳು ಹೆಚ್ಚುತ್ತಿವೆ. ಸಿನಿಮಾ ಹಾಡುಗಳಿಗೆ ಮೈಕುಣಿಸುವುದು ಕಾಣುತ್ತಿದೆ. ಬಹುತೇಕ ಬಾರಿ ಪುಟ್ಟ ಮಕ್ಕಳಿಗೆ ಈ ಹಾಡುಗಳ ಅರ್ಥವೂ ತಿಳಿದಿರುವುದಿಲ್ಲ, ತಾವು ಮಾಡುವ ಕುಣಿತವು ಅಸಭ್ಯವಾದುದೆಂದೂ ತಿಳಿದಿರುವುದಿಲ್ಲ. ಅವರು ಸಿನಿಮಾದ ಕುಣಿತಗಳನ್ನು ಅನುಕರಿಸುತ್ತಾರಷ್ಟೆ. ಆದರೆ ಶಾಲಾಕಾಲೇಜುಗಳ ಶಿಕ್ಷಕ ವೃಂದದವರಿಗಾದರೂ ಇಂತಹ ಅಶ್ಲೀಲ ಹಾಡು, ಕುಣಿತಗಳು ಸಲ್ಲದು ಎಂಬ ಅರಿವಿರಬೇಕಲ್ಲವೆ. ಆದರೆ ಅಂತಹ ಜಾಗೃತಿ ಇರುವಂತೆ ತೋರುತ್ತಿಲ್ಲ. ಹಾಗಾಗಿ ಸರಕಾರವೇ ಇಂತಹ ಕ್ರಮಕ್ಕೆ ಮುಂದಾಗಿರುವುದು ಸ್ತುತ್ಯ ಕ್ರಮ.

-ಚಿದಾನಂದ ರಾವ್, ಕುಂದಾಪುರ

ಖಂಡನೀಯ

ಸಿಇಟಿ ಪರೀಕ್ಷೆಯ ವೇಳೆ ವಿದ್ಯಾರ್ಥಿಗಳ ಜನಿವಾರವನ್ನು ಕಿತ್ತು ತೆಗೆದ ಘಟನೆಯು ವರದಿಯಾಗಿರುವುದು ಅತ್ಯಂತ ಖಂಡನೀಯ. ಬೆಂಗಳೂರು ಮತ್ತು ಚಿಕ್ಕಾಬಳ್ಳಾಪುರದಲ್ಲಿ ಇಂತಹ ಘಟನೆಗಳು ನಡೆದಿವೆ. ಇದು ಪರೀಕ್ಷಾ ನಿಯಮಗಳನ್ನು ಅನುಸರಿಸಿ ನಡೆಸಿರುವ ಕೃತ್ಯ ಎನ್ನುವುದಕ್ಕಿಂತಲೂ ಬ್ರಾಹ್ಮಣ ದ್ವೇಷದಿಂದಲೇ ನಡೆದಿರುವ ಕೃತ್ಯ ಎನ್ನುವುದು ಸುಸ್ಪಷ್ಟ. ಪೂರ್ವಗ್ರಹ ಪೀಡಿತರಾದ ಕೆಲವು ಸಿಬ್ಬಂದಿಗಳು ಜನಿವಾರವನ್ನು ಕಿತ್ತಿರುವುದು ನಿಚ್ಚಳವಾಗಿದೆ. ದುರಂತವೆಂದರೆ ಕೆಲವು ಕುತ್ಸಿತ ಮತಿಗಳು ಇಂತಹ ಕುಕೃತ್ಯವನ್ನೂ ಸಮರ್ಥಿಸುತ್ತಿದ್ದಾರೆ. ಬೇರೆ ಜಾತಿ ಧರ್ಮಗಳವರ ಧಾರ್ಮಿಕ ಸಂಕೇತಗಳನ್ನು ತೆಗೆಸುವ ಧೈರ್ಯ ತೋರಿಯಾರೆ? ಸರಕಾರವು ಇಂತಹ ನಡೆಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು.

-ಮಹದೇವಪ್ಪ, ಮೈಸೂರು







1926ರ ವೈಶಾಖ ಶುಕ್ಲ ಚತುರ್ದಶಿ ಯಂದು ಅವರ ಜನನ. ಈ ವರ್ಷ ಇಂದು ಈ ಮಿತಿ ಇದೆ

ಹೊ. ವೆ. ಶೇಷಾದ್ರಿ ಶತಾಬ್ದಿ ಸಂಸ್ಮರಣ



▸ ಗ. ಕೃ. ವೆಂಕಟೇಶಮೂರ್ತಿ

ಶೇಷಾದ್ರಿಗಳು ಬದುಕಿದ್ದರೆ ಪಂಚಾಂಗದ ಪ್ರಕಾರ ಅವರಿಗೆ ಇದೇ ವೈಶಾಖ ಶುಕ್ಲ ಚತುರ್ದಶಿ, ಶ್ರೀ ನರಸಿಂಹ ಜಯಂತಿಯಂದು(ಏಪ್ರಿಲ್ 20, 2026) "ಶರದ: ಶತಮ್" (ನೂರು ವರ್ಷ) ತುಂಬುತ್ತಿತ್ತು. ಕ್ಯಾಲೆಂಡರ್ ಪ್ರಕಾರ ಅವರು ಹುಟ್ಟಿದ್ದು ಮೇ 26, 1926. ಸರಿ ಸುಮಾರು ಸಂಘ ಜನ್ಮದ ಒಂದು ವರ್ಷದ ನಂತರ.

ಕರ್ನಾಟಕದ ಸಂಘದ ಓರ್ವ ಕಾರ್ಯಕರ್ತರಾಗಿದ್ದ ಅವರು ಸಂಘದ ಅತ್ಯುಚ್ಚ ಪದವಿಗೂ ಏರಬಲ್ಲ ಸಾಮರ್ಥ್ಯ ಪಡೆದು ತ್ರಿವಿಕ್ರಮನಂತೆ ಬೆಳೆದರು. ಆದರೆ ತಮ್ಮ ಆರೋಗ್ಯ ಕಾರಣವನ್ನು ಮುಂದು ಮಾಡಿ ಅವರೇ ಸ್ವತಃ ಆ ಸ್ಥಾನವನ್ನು ನಿರಾಕರಿಸಿದಂತಹ ಉದಾಹರಣೆ ಇತರ ಸಂಘ ಸಂಸ್ಥೆಗಳಲ್ಲಿ ಸಿಗಲಾರದು.

ವ್ಯಾಸರಿಗೆ ಗಣೇಶನಂತೆ, ಸಾಕ್ರಟೀಸ್‌ಗೆ ಪ್ಲೇಟೋನಂತೆ ಹಾಗೂ ಪೂಜನೀಯ ಗುರೂಜಿಯವರಿಗೆ ಅವರು ಲಿಪಿಕಾರರಾಗಿದ್ದು ಈಗ ಇತಿಹಾಸ.

ಗುರೂಜಿಯವರ ಬೌದ್ಧಿಕ್ ಅಥವಾ ಬೈಠಕ್ ಗಳು ಹೆಚ್ಚಾಗಿ ಹಿಂದಿಯಲ್ಲಿ ಇರುತ್ತಿದ್ದವು. ಪ್ರಾರಂಭದಲ್ಲಿ ಗುರೂಜಿಯವರ ಬೌದ್ಧಿಕ ಅನ್ನು ರಿಲೇ ರೇಸ್ ನಂತೆ ಐದು ಜನ ವೃತ್ತಾಕಾರದಲ್ಲಿ ಕುಳಿತು ಒಬ್ಬರ ನಂತರ ಒಬ್ಬರು ಬರೆದುಕೊಳ್ಳುತ್ತಿದ್ದರು. ಆಮೇಲೆ ಅದನ್ನು ಆಗ ಇದ್ದ ಭೂತಾಕಾರದ ಟೇಪ್ ರೆಕಾರ್ಡರ್ ನಲ್ಲಿ, ಅಷ್ಟೇನೂ ತಾಂತ್ರಿಕ ಜ್ಞಾನ ಮುಂದುವರೆಯದಿದ್ದ ಕಾಲದಲ್ಲಿ, ಕೇಳಿ ವಿಷಯ ವಿಂಗಡಣೆ ಮಾಡಿ, ಮೊದಲು ಇಂಗ್ಲಿಷ್ ನಲ್ಲಿ ಬರೆದು ಗುರೂಜಿಯವರಿಂದಲೇ "ಸೈ" ಅನ್ನಿಸಿಕೊಂಡವರು ಶೇಷಾದ್ರಿಗಳು! ವೇದಗಳನ್ನು, ಪುರಾಣಗಳನ್ನು ವಿಂಗಡಿಸಿದ ವ್ಯಾಸರ ಕಾರ್ಯದೊಡನೆ ಹೋಲಿಸಬಹುದಾದ ಕಾರ್ಯ ಅದಾಗಿತ್ತು! ಶೇಷಾದ್ರಿಗಳ ವ್ಯಕ್ತಿತ್ವದ ವಿಶ್ಲೇಷಣೆ ಈ ಲೇಖನದ ಉದ್ದೇಶವಲ್ಲ. ಅದು ಸಾಧ್ಯವೂ ಇಲ್ಲ, ಸಾಧುವೂ ಅಲ್ಲ. ಕೇವಲ ಅವರೊಡನೆ ನನ್ನ ಒಡನಾಟದ ಕೆಲವು ಪ್ರಸಂಗಗಳ ಝಲಕು, ಶತಾಬ್ದಿ ಸಂಸ್ಮರಣೆ ರೂಪದಲ್ಲಿ ಇಲ್ಲಿದೆ.

ಪ್ರತಿ ಅಕ್ಷರಕ್ಕೂ ಇದೆ ಸೌಂದರ್ಯ !



ಅದು 1972. ತಿಪಟೂರಿನಲ್ಲಿ ನಡೆದಿತ್ತು ಸಂಘ ಶಿಕ್ಷಾ ವರ್ಗ. ನಾನಾಗ ದ್ವಿತೀಯ ವರ್ಷದ ಸಂಘ ಶಿಕ್ಷಾ ವರ್ಗ ಮುಗಿಸಿದ್ದೆ. ತಿಪಟೂರಿನ ವರ್ಗದ ಬೌದ್ಧಿಕ ವಿಭಾಗದಲ್ಲಿ ಪ್ರಬಂಧಕನಾಗಿ ಕೆಲಸ ಮಾಡುತ್ತಿದ್ದೆ. ನನಗೆ ನೆನಪಿರುವಂತೆ ವರ್ಗದ ಸಮಾರೋಪ ಸಮಾರಂಭದಲ್ಲಿ ಮಾನ್ಯ ಬಾಬಾ ಸಾಹೇಬ ಆಪಟೆ ಅವರಿದ್ದರು. ಅಷ್ಟು ಹೊತ್ತಿಗಾಗಲೇ ನಾನು ನನ್ನ ದುಂಡಕ್ಷರದಿಂದ ಖ್ಯಾತಿ ಪಡೆದಿದ್ದೆ. ಕಾರ್ಯಕ್ರಮದ ಘಟನಾವಳಿಗಳನ್ನು ಹಿಂದಿಯಲ್ಲಿ ಬರೆದು ವೇದಿಕೆಯ ಮೇಲೆ ಇಡುವ ಕೆಲಸ ನನ್ನ ಪಾಲಿಗೆ ಬಂತು. ನಾನು ಆಗ ಹಿಂದಿಯ ಲ " ಎಂಬ ಅಕ್ಷರವನ್ನು ಬರೆಯುವಾಗ, 3 ಎಂಬ ಅಂಕೆಯನ್ನು ಮಲಗಿರುವಂತೆ ಬರೆದು ಅದರ ಮೇಲೆ ಗೆರೆ ಎಳೆಯುತ್ತಿದ್ದೆ. ನಾನು ಬರೆದ ಕರಡು ಪ್ರತಿಯನ್ನು ನೋಡಿದ ಶೇಷಾದ್ರಿಗಳು " 'ಲ' ದ ಮೊದಲನೇ ಉಬ್ಬನ್ನು ದೊಡ್ಡದಾಗಿ ತುಂಬಿಕೊಂಡಿರುವಂತೆ ಬರೆದು, ಎರಡನೆಯದನ್ನು ಚಿಕ್ಕದಾಗಿರುವಂತೆ ಬರೆದರೆ ಚೆನ್ನಾಗಿರುತ್ತದೆ" ಎಂದು ಹೇಳಿ ಬರೆದು ತೋರಿಸಿದರು. "ಪ್ರತಿ ಅಕ್ಷರಕ್ಕೂ ಒಂದು ಸೌಂದರ್ಯವಿರುತ್ತದೆ" ಎಂದು ನನಗೆ ಅರಿವಾದುದೇ ಆಗ. ಹೀಗೆ ನನ್ನಲ್ಲಿ ಬೀಜಾಂಕುರ ಆದ "ಅಕ್ಷರಗಳ ಸೌಂದರ್ಯ ಪ್ರಜ್ಞೆಯು" ಬೃಹದಾಕಾರವಾಗಿ ಬೆಳೆದು, ನಾನೀಗ ಕನ್ನಡ ಮತ್ತು ಇಂಗ್ಲಿಷ್ ನಲ್ಲಿ ಕೈಬರಹದ ಕುರಿತು ಪುಸ್ತಕಗಳನ್ನು ಬರೆದಿದ್ದೇನೆ, ಯೂಟ್ಯೂಬ್ ವಿಡಿಯೋಗಳನ್ನು ಮಾಡಿದ್ದೇನೆ.

ಅಕ್ಷರಗಳ ಸೌಂದರ್ಯಕ್ಕಾಗಿ ಅವರು ನೀಡುತ್ತಿದ್ದ ಒಂದು ಟಿಪ್, ಈಗಲೂ ನನಗೆ ನೆನಪಿದೆ ? " ಸೊನ್ನೆಯನ್ನು ದೊಡ್ಡದಾಗಿ ಬರೆದರೆ, ಅದು ದುಂಡಾಗಿರುವ ಸಂಭವ ಕಡಿಮೆ. ಚಿಕ್ಕದಾಗಿ ಬರೆದರೆ ಅದು ದುಂಡಾಗಿರುವಂತೆ ಬರೆಯುವುದು ಸುಲಭ" ಕೇಶವಕೃಪಾದಲ್ಲಿ ಮಾನನೀಯ ಯಾದವರಾವ್ ಜೋಶಿ ಯವರ ಕೈಬರಹ (ಹಿಂದಿ, ಮರಾಠಿ ಅಥವಾ ಇಂಗ್ಲಿಷ್) ಅಷ್ಟಕ್ಕಷ್ಟೇ. ಅವರು ಕೆಲವು ಬಾರಿ ತಾವು ಬರೆದುದನ್ನೇ ಓದಲಾಗದೆ ಸಾನಂದ ಗಣೇಶರಿಗೆ "ಸಾನಂದ, ನಾನು ಇದು ಏನು ಬರೆದಿದ್ದೇನೆ ಅಂತ ಸ್ವಲ್ಪ ಓದಿ ಹೇಳು" ಎಂದು ಕೇಳುತ್ತಿದ್ದರು!. ಯಾದವರಾಯರ ಕುರಿತು ಅತ್ಯಂತ ಪೂಜ್ಯ ಭಾವ ಹೊಂದಿದ್ದರೂ ಶೇಷಾದ್ರಿಗಳು, ಅವರನ್ನೂ ಕಿಚಾಯಿಸುವುದರಲ್ಲಿ ರಿಯಾಯಿತಿ ತೋರುತ್ತಿರಲಿಲ್ಲ. ತಮಾಷೆಯಾಗಿ ಅವರು ಸಾನಂದರಿಗೆ ಹೇಳುತ್ತಿದ್ದರು "ಸಾನಂದ, ಅವರು (ಯಾದವರಾಯರು) ಯಾವ ಭಾಷೆಯಲ್ಲಿ ಬರೆದಿದ್ದಾರೆ ಅಂತ ಮೊದಲು ಕೇಳಿ ಬಿಡಪ್ಪ!".

ನನ್ನ ಗೂಗ್ಲಿಗೆ ಅವರ ಸಿಕ್ಸರ್!

ಸ್ವಯಂಸೇವಕನಾಗಿ ನಾನು ಅವರ ಮೊಟ್ಟಮೊದಲ ಬೈಠಕ್ ನಲ್ಲಿ ಭಾಗವಹಿಸಿದ್ದು ಶಿವಮೊಗ್ಗದಲ್ಲಿ. ನಾನಾಗ ಸಹ್ಯಾದ್ರಿ ಕಾಲೇಜು ವಿದ್ಯಾರ್ಥಿ. ಅದು 1968 ಇರಬಹುದು. ಬಿ. ಹೆಚ್. ರಸ್ತೆಯ ಒಂದು ಸಭಾಂಗಣದಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆಂದೇ ನಡೆದ ಬೈಠಕ್ ಅದು. ಸುಮಾರು 80 ವಿದ್ಯಾರ್ಥಿಗಳು ಸೇರಿದ್ದಿರಬಹುದು. ಶೇಷಾದ್ರಿಗಳು ಅಂದಿನ ವಿಷಯವಾದ "ಯುವಕರಿಗೆ ಸಂಘದ ಬಗ್ಗೆ ಆಕರ್ಷಣೆ ಏಕೆ? " ಎಂಬುದನ್ನು ಮಂಡನೆ ಮಾಡಿ, ಒಬ್ಬೊಬ್ಬರದೇ ಪ್ರತಿಕ್ರಿಯೆ ಕೇಳುತ್ತಿದ್ದರು. ಇಬ್ಬರು ಅಥವಾ ಮೂರು ಯುವಕರು ತಮ್ಮ ವಿಚಾರವನ್ನು ಹೇಳಿದ್ದಿರಬಹುದು. ಆಗ ನಾನು ಎದ್ದು ನಿಂತೆ. ನನ್ನ ಮನಸ್ಸಿನಲ್ಲಿ "ಆಕರ್ಷಣೆ" ಎಂದರೆ ಆಯಸ್ಕಾಂತವು ಕಬ್ಬಿಣದ ಚೂರುಗಳನ್ನು ಆಕರ್ಷಿಸಿದಾಗ ಅವು ತುಪತುಪನೇ ಬಂದು ಅಂಟಿಕೊಳ್ಳುವಂತೆ ಎಂದಿತ್ತು. ನಾನು ಹೇಳಿದೆ "ಸಂಘದಲ್ಲಿ ಅಂತಹ ಆಕರ್ಷಣೆ ಏನೂ ಇಲ್ಲ!". ವಿಷಯವನ್ನೇ ಪೂರ್ತಿ ನಿರರ್ಥಕಗೊಳಿಸಿ, ಶೇಷಾದ್ರಿಗಳನ್ನೇ ಅವಕ್ಕಾಗಿಸ ಬಹುದಾಗಿದ್ದ "ಗೂಗ್ಲಿ" ಇದಾಗಿತ್ತು. ಶೇಷಾದ್ರಿಗಳು ಕಿಂಚಿತ್ತೂ ವಿಚಲಿತರಾಗಲಿಲ್ಲ. ಅವರ ಸಮಯ ಪ್ರಜ್ಞೆ (ಪ್ರೆಸೆನ್ಸ್ ಆಫ್ ಮೈಂಡ್) ಅದ್ಭುತ ! " ಸರಿಯಪ್ಪಾ , ಹೇಳು. 'ಸಂಘದಲ್ಲಿ ಏನೂ ಆಕರ್ಷಣೆ ಇಲ್ಲ. ಇದಕ್ಕೆ ನಾನೇ ಸಾಕ್ಷಿ. ನಾನು ಸಂಘದ ಬೈಠಕ್‌ಗೆ ಬಂದಿದ್ದೀನಿ ನೋಡಿ' ಅಂತ ಎಲ್ಲರಿಗೂ ಹೇಳಿ ಬಿಡಪ್ಪ" ಅಂದರು ಶೇಷಾದ್ರಿಗಳು. ಬೌಂಡರಿ ಆಚೆ ಅಲ್ಲ, ಸ್ಟೇಡಿಯಂ ಆಚೆಗೇ ಬೀಳುವಂತೆ ಕ್ರಿಸ್ ಗೇಲ್ ಹೊಡೆದ ಸಿಕ್ಸರ್ ನಂತೆ ಸಿಡಿದ ಈ ಮಾತಿನಿಂದ ನಾನು ಮಂಕಾಗಿಬಿಟ್ಟೆ !





ಒಂದು ಲೇಖನಕ್ಕೆ ಪ್ರೇರಣೆಯಾದ ಆ ಮಾತು

ನಾನು 1970 – 71 ರಲ್ಲಿ, ಒಂದು ವರ್ಷ ಕೇಶವ ಕೃಪಾದಲ್ಲಿದ್ದೆ. ನನ್ನ ಕೈಬರಹ ದುಂಡಾಗಿದ್ದುದರಿಂದ ನನಗೆ ಸಾಕಷ್ಟು ಬರೆಯುವ ಕೆಲಸ ಸಿಗುತ್ತಿತ್ತು. ಶೇಷಾದ್ರಿಗಳು ಉತ್ಥಾನಕ್ಕಾಗಿ ಪೆನ್ಸಿಲ್ ನಲ್ಲಿ ಬರೆದ ಲೇಖನಗಳ ಅಂದವಾದ ಪ್ರತಿ ತಯಾರಿಸಿ ಕೊಡಬೇಕಾಗುತ್ತಿತ್ತು. ಶೇಷಾದ್ರಿಗಳ ಕೈಬರಹ ಸುಂದರವಾಗಿಯೇ ಇತ್ತು. ಆದರೆ ಅವರ ಲೇಖನದ ಕರಡು ಪ್ರತಿಯಲ್ಲಿ ಸಾಕಷ್ಟು ತಿದ್ದುಪಡಿ ಇರುತ್ತಿತ್ತು. ಹಾಗೂ ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗಾಯಿಸಬೇಕಾದ ಪದಗಳು ಹಾಗೂ ವಾಕ್ಯಗಳು, ಬಾಣದ ಗುರುತಿನಿಂದ ಸೂಚಿಸಲ್ಪಡುತ್ತಿದ್ದವು. ಶೇಷಾದ್ರಿಗಳು ತಾವು ಉಪಯೋಗಿಸುವ ಒಂದೊಂದು ಪದವನ್ನೂ ಅಳೆದೂ ತೂಗಿ ಉಪಯೋಗಿಸುತ್ತಿದ್ದರು.



ಗುರೂಜಿಯವರ ವಿಚಾರಗಳ ಸಂಗ್ರಹವಾದ "ಬಂಚ್ ಆಫ್ ಥಾಟ್ಸ್" ಅನ್ನು ಹಿರಿಯ ಕನ್ನಡ ಲೇಖಕರೊಬ್ಬರು ಕನ್ನಡಕ್ಕೆ ಭಾಷಾಂತರಿಸಿದ್ದರು. ಆ ಭಾಷಾಂತರವನ್ನು ಶೇಷಾದ್ರಿಗಳು ಮತ್ತು ಶಿವರಾಮು ಒಟ್ಟಿಗೆ ಕುಳಿತು, ಒಂದೊಂದೇ ವಾಕ್ಯ ಹಾಗೂ ಪದಗಳ ಕುರಿತು ವಿಮರ್ಶೆ ಮಾಡಿ, ತಿದ್ದುತ್ತಿದ್ದರು. ಅದರ ಅಂದವಾದ, ಮುದ್ರಣಕ್ಕೆ ಕಳಿಸುವ ಪ್ರತಿಯನ್ನು ತಯಾರಿಸುವ ಕೆಲಸವು ನನ್ನ ಪಾಲಿಗೇ ಬಂದಿತ್ತು. ಅದರಲ್ಲಿ ಎಷ್ಟು ನನ್ನ ತಲೆಯೊಳಗೆ ಇಳಿದಿದೆಯೋ ಗೊತ್ತಿಲ್ಲ, ಆದರೆ ನಾನು "ಚಿಂತನಗಂಗಾ" ಪುಸ್ತಕ ಮುದ್ರಣಕ್ಕೆ ಹೋಗುವ ಇಡೀ ಪ್ರತಿಯನ್ನು ನನ್ನ ಕೈಬರಹದಲ್ಲೇ ಬರೆದಿದ್ದೇನೆ . (ಇಂದಿನಂತೆ ಆಗ "ವಾಯ್ಸ್ ಟು ಟೆಕ್ಸ್ಟ್" ಇರಲಿಲ್ಲ !)

ಸದಾ ಕೆಲಸದ ಒತ್ತಡದಲ್ಲಿರುತ್ತಿದ್ದ ಶ್ರೀ ಅಜಿತ್ ಕುಮಾರರ ಅನೇಕ ಲೇಖನಗಳ ಅಂದವಾದ ಪ್ರತಿ ಮಾಡುವುದೂ ನನ್ನ ಕೆಲಸವೇ ಆಗಿತ್ತು. ಮಾನನೀಯ ಶ್ರೀ ಯಾದವರಾವ್ ಜಿ ಯವರು ಇಂಗ್ಲಿಷ್ ಅಥವಾ ಹಿಂದಿಯಲ್ಲಿ ಬರೆಯುತ್ತಿದ್ದ ಪತ್ರಗಳನ್ನು ನಾನು ಸುಂದರವಾಗಿ ಬರೆದುಕೊಡುತ್ತಿದ್ದೆ. ನನಗೆ ಚೆನ್ನಾಗಿ ನೆನಪಿದೆ. ಅವರು ಹೇಳುತ್ತಿದ್ದರು "ಇಷ್ಟು ಸುಂದರವಾದ ಅಕ್ಷರಗಳ ಪತ್ರಕ್ಕೆ ಸಹಿ ಮಾಡಲು ನನಗೆ ನಾಚಿಕೆ ಆಗುತ್ತದೆ ಎಂದು !"

ಆಗ ಚೆನ್ನೇನಹಳ್ಳಿ ಯಲ್ಲಿ ಜನ ಸೇವಾ ವಿದ್ಯಾ ಕೇಂದ್ರದ ಕಟ್ಟಡ ನಿರ್ಮಾಣ ಆಗುತ್ತಿತ್ತು. ರಾಜ್ಯದ ಮೂಲೆ ಮೂಲೆಗಳಿಂದ ಮತ್ತು ಹೊರಗಿನಿಂದಲೂ ಬ್ಯಾಂಕ್ ಚೆಕ್ ರೂಪದಲ್ಲಿ ದಾನ ಬರುತ್ತಿತ್ತು. ಪ್ರತಿದಿನ ಸುಮಾರು 20 – 30 ಚೆಕ್ ಗಳು ಇರುತ್ತಿದ್ದವು. ನಾನು ಮತ್ತು ಈಗ ಉಡುಪಿಯಲ್ಲಿರುವ ಶ್ರೀ ಹರಿದಾಸ್ ನಾಯಕ್ (ಆಗ ಅವರು ಪ್ರಚಾರಕ್) ಸೇರಿ ಚೆಕ್ ಗಳನ್ನು ಬ್ಯಾಂಕಿಗೆ ಪ್ರೆಸೆಂಟ್ ಮಾಡಲು ಚಲನ್ ಗಳನ್ನು ಬರೆಯುತ್ತಿದ್ದೆವು. ಬರೆಯುವುದು ಹೆಚ್ಚಾಗಿ ಕೆಲವು ಬಾರಿ ಬೆನ್ನು ನೋವು ಕಾಣಿಸಿಕೊಳ್ಳುತ್ತಿತ್ತು.

ಇಷ್ಟೆಲ್ಲಾ ಪುರಾಣ ಏಕೆ ಎಂದು ನಿಮಗೆ ಖಂಡಿತಾ ಅನ್ನಿಸಿರುತ್ತದೆ. ಆದರೆ ಮುಂದಿನ ಕಥನಕ್ಕೆ ಇದು ಕೇವಲ ಪೀಠಿಕೆ ಅಷ್ಟೇ.

1971 ರ ಜೂನ್ ತಿಂಗಳಲ್ಲಿ ನನ್ನನ್ನು ಗೌರಿಬಿದನೂರಿಗೆ ಸಂಘ ಕಾರ್ಯಕ್ಕಾಗಿ ನಿಯೋಜನೆ ಮಾಡಲಾಯಿತು. ನನಗಾಗಿ ಕೇಶವಕೃಪಾದಲ್ಲಿ ಒಂದು ಪುಟ್ಟ ಬೀಳ್ಕೊಡುಗೆ ಕಾರ್ಯಕ್ರಮ ಇಟ್ಟುಕೊಂಡಿದ್ದರು. ಇದು ನಡೆದಿದ್ದು ಈಗ ಕೇಶವ ಕೃಪಾದಲ್ಲಿ ಅಭಿಲೇಖಾಗಾರದ ಕೊಠಡಿ ಆಗಿರುವ, ಆದರೆ ಹಿಂದೆ ಶೇಷಾದ್ರಿಗಳದ್ದಾಗಿದ್ದ ಕೊಠಡಿಯಲ್ಲಿ. ಆ ದಿನ ಶೇಷಾದ್ರಿಗಳು ಪ್ರವಾಸದಲ್ಲಿದ್ದರು. ಅಂದು ಇದ್ದ ಪ್ರಮುಖರೆಂದರೆ ಶ್ರೀ ಅಜಿತ್ ಕುಮಾರ್. ಒಂದಿಷ್ಟು ತಿನಿಸು, ಸಿಹಿ ಸೇವನೆ ಆದಮೇಲೆ ಲೋಕಾಭಿರಾಮವಾಗಿ ಮಾತನಾಡುತ್ತಾ "ಈಗ ನೀನು ಕಾರ್ಯಕ್ಷೇತ್ರಕ್ಕೆ ಹೋಗುತ್ತಿದ್ದೆಯಲ್ಲ, ಹೊರಡುವ ಮುನ್ನ ಏನಾದರೂ ಸಂದೇಶ ನೀಡು" ಎಂದು ಎಲ್ಲರೂ ನನ್ನನ್ನು ಒತ್ತಾಯಿಸಿದರು. ನಾನು ಲಘು ಧಾಟಿಯಲ್ಲೇ ತಮಾಷೆಗಾಗಿ "ನಾವು ಸಂಘದ ಕೆಲಸ ಚೆನ್ನಾಗಿ ಮಾಡಬೇಕು ಎಂದಿದ್ದರೆ ನಮ್ಮ ಕೈಬರಹ ದುಂಡಾಗಿರ ಬಾರದು!" ಎಂದು ಹೇಳಿದೆ. ಹಿನ್ನೆಲೆಯ ಅರಿವಿದ್ದ ಅಲ್ಲಿನ ಎಲ್ಲರೂ ಘೊಳ್ಳೆಂದು ನಕ್ಕರು.





ಈ ನನ್ನ ಸಂದೇಶವು, ಈಗಿನ ಭಾಷೆಯಲ್ಲಿ ಹೇಳುವುದಾದರೆ, ತುಂಬಾ "ವೈರಲ್" ಆಯಿತು. ಅದು ಶೇಷಾದ್ರಿಗಳ ಕಿವಿಗೂ ಬಿತ್ತು. ಅವರು ಆ ವಿಷಯವಾಗಿಯೇ ಸಾಕಷ್ಟು ಚಿಂತಿಸಿ, ಒಂದು ಲೇಖನವನ್ನೇ ಬರೆದರು "ವರವೇ ಶಾಪವಾದಾಗ ". ದುಂಡಾಗಿ ಅಕ್ಷರ ಬರೆಯುವ ಅಥವಾ ಇನ್ನೂ ಯಾವುದೇ "ವರ" ವೂ ಸಂಘ ಕಾರ್ಯಕ್ಕೆ ಪೂರಕವಾಗದಿದ್ದರೆ "ಶಾಪ" ಆಗಬಹುದು ಎಂಬುದೇ ಆ ಲೇಖನದ ಸಾರಾಂಶ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಯಾರೋ ಆಡಿದ ಮಾತೊಂದು ಶೇಷಾದ್ರಿಗಳ ಲೇಖನದ "ವಸ್ತು" ಆಗುತ್ತಿತ್ತು !

ಸಾಹಿತ್ಯ ಕೇಸರಿ, ಸಾಹಿತ್ಯಕ್ಕೇ ಸರಿ

1973 ರಲ್ಲಿ ನಾನು ನಾಗಪುರದ ತೃತೀಯ ವರ್ಷದ ಶಿಕ್ಷಣವನ್ನು ಮುಗಿಸಿ ಗೌರಿಬಿದನೂರಿಗೆ ಹಿಂತಿರುಗಿದ್ದೆ. ಅಂದಿನ ಅವಿಭಜಿತ ಕೋಲಾರ ಜಿಲ್ಲೆಯ ಜಿಲ್ಲಾ ಬೈಠಕ್ ಚಿಕ್ಕಬಳ್ಳಾಪುರದ ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನದಲ್ಲಿ ನಡೆದಿತ್ತು. ಮಾನವೀಯ ಶ್ರೀ ಶೇಷಾದ್ರಿಗಳು ಬೈಠಕ್ ತೆಗೆದುಕೊಂಡಿದ್ದರು. ಅಷ್ಟು ಹೊತ್ತಿಗೆ, ನಾನು "ನುಡಿದಂತೆ ನಡೆದವನ ಅಡಿಗೆನ್ನ ನಮನ" ಎಂಬ ಡಾಕ್ಟರ್ ಜಿ ಯವರ ಕುರಿತು ಬರೆದ ಗೀತೆ, ವಿಕ್ರಮದಲ್ಲಿ ಯುಗಾದಿಯ ದಿನವೇ ಪ್ರಕಟವಾಗಿತ್ತು. "ಪ್ರಜಾಮತ" ಎಂಬ ಆಗಿನ ವಾರಪತ್ರಿಕೆಯಲ್ಲಿ ನಾನು ಬರೆದ "ಓದೋ ಹಾಗೆ ಮಾಡೋದು ಹೇಗೆ?" ಎಂಬ ಲೇಖನ ಪ್ರಕಟವಾಗಿತ್ತು. ಶೇಷಾದ್ರಿಗಳ ಉತ್ಥಾನದ ಅಂಕಣ 'ಪರಿಪ್ರಶ್ನ' ಕ್ಕೆ ನಾನು ಕೇಳಿದ ಎರಡು ಮೂರು ಪ್ರಶ್ನೆಗಳಿಗೆ ಶೇಷಾದ್ರಿಗಳ ಉತ್ತರ ಪ್ರಕಟವಾಗಿತ್ತು. ಜಿಲ್ಲಾ ಬೈಠಕ್ ನ ಕಡೆಯ ಹಂತದಲ್ಲಿ ನನ್ನನ್ನು ಎದ್ದು ನಿಲ್ಲಲು ಹೇಳಿ "ಇವರು 'ಸಾಹಿತ್ಯ ಕೇಸರಿ', 'ಸಾಹಿತ್ಯಕ್ಕೇ ಸರಿ' (ಅಂದರೆ ಸಂಘ ಕಾರ್ಯಕ್ಕೆ ಸೂಕ್ತವಲ್ಲವೇ? ನನಗೆ ಗೊತ್ತಿಲ್ಲ!). ಆದ್ದರಿಂದ ಇವರು ಇನ್ನು ಮುಂದೆ ಕೇಶವಕೃಪಾಗೆ ಬಂದಿರುತ್ತಾರೆ" ಎಂದು ಪ್ರಕಟಿಸಿದರು.

ನನ್ನಲ್ಲಿನ ಲೇಖನ ಕಲೆ ಗುರುತಿಸಿದ್ದ ಶೇಷಾದ್ರಿಗಳ ಗುಣಗ್ರಾಹಕತೆ ಮತ್ತು ಅದನ್ನು ಪ್ರಕಟಿಸಿದ ಶೇಷಾದ್ರಿಗಳ ವಿಶೇಷ ಹಾಸ್ಯ ಶೈಲಿ ಇಲ್ಲಿ ಗಮನಾರ್ಹ.



ನಾನೂ ಮೂರು ಪತ್ರ ಬರೆಯಬೇಕೆಂದಿದ್ದೇನೆ

1973ರಲ್ಲಿ ನಾಗಪುರದ ತೃತೀಯ ವರ್ಷದ ಶಿಕ್ಷಣ ಮುಗಿಸಿ, ಗೌರಿಬಿದನೂರಿಗೆ ಹೋಗುವ ಮೊದಲು ಎರಡು ದಿನ ನಾನು ಕೇಶವ ಕೃಪಾದಲ್ಲೇ ಇದ್ದೆ. ಆ ದಿನಗಳಲ್ಲಿ ಶೇಷಾದ್ರಿಗಳಿಗೆ ಅನಾರೋಗ್ಯ ಕಾಡುತ್ತಿತ್ತು. ಅವರು ಒಂದು ದಿನ ಕೇಶವಕೃಪಾದಲ್ಲೇ ಅತ್ತಿಂದಿತ್ತ ಓಡಾಡುತ್ತಿದ್ದರು.

" ಹೇಗಿದ್ದೀರಿ ಶೇಷಾದ್ರಿಗಳೇ? " ಎಂದು ಒಬ್ಬ ಹಿರಿಯ ಕಾರ್ಯಕರ್ತರು ಅವರ ಯೋಗಕ್ಷೇಮ ವಿಚಾರಿಸಿದರು.

" ನಾನೂ ಮೂರು ಪತ್ರಗಳನ್ನು ಬರೆಯಬೇಕೆಂದಿದ್ದೇನೆ!" ಥಟ್ಟನೆ ಹೇಳಿದರು ಶೇಷಾದ್ರಿಗಳು.

ಹಿನ್ನೆಲೆ : ಆಗ ತಾನೇ ಪೂಜನೀಯ ಗುರೂಜಿ ನಿಧನರಾಗಿದ್ದರು. ತಮ್ಮ ಸಾವನ್ನು ಮೊದಲೇ ನಿರೀಕ್ಷಿಸಿದ್ದ ಗುರೂಜಿ, ಮೂರು ಪತ್ರಗಳನ್ನು ಬರೆದು, ತಮ್ಮ ಸಾವಿನ ನಂತರ ಅವನ್ನು ತೆರೆಯಬೇಕೆಂದು ಸೂಚಿಸಿದ್ದರು. ಆ ಮೊದಲ ಪತ್ರದಲ್ಲಿ, ಮುಂದಿನ ಸರಸಂಘಚಾಲಕರ ನಿಯುಕ್ತಿ, ಎರಡನೇ ಪತ್ರದಲ್ಲಿ ತಮಗೆ ಯಾವ ಸ್ಮಾರಕವೂ ಬೇಡ ಎಂಬ ನಿರಾಕರಣೆ ಮತ್ತು ಮೂರನೇ ಪತ್ರದಲ್ಲಿ ತಮ್ಮ ಮಾತುಕತೆಯಿಂದ ಯಾರಿಗಾದರೂ ನೋವಾಗಿದ್ದರೆ ಕ್ಷಮಾಯಾಚನೆ ಇದ್ದವು. ಶೇಷಾದ್ರಿಗಳ ಹಾಸ್ಯ ಪ್ರಜ್ಞೆ ಯಾವ ಮಟ್ಟದಲ್ಲಿ ಇರುತ್ತಿತ್ತು ಎಂಬುದಕ್ಕೆ ಥಟ್ಟನೆ ಅವರ ಬಾಯಿಂದ ಹೊರಬಂದ ಉದ್ಗಾರವೇ ಸಾಕ್ಷಿ. ನಾನು ಇನ್ನೂ ಹಲವಾರು ಪ್ರಸಂಗಗಳನ್ನು ಪೋಣಿಸುತ್ತಾ ಹೋದರೆ ಲೇಖನ ತುಂಬಾ ದೀರ್ಘವಾದೀತು. "ಅತಿ ಸರ್ವತ್ರ ವರ್ಜಯೇತ್" ಅಲ್ಲವೇ?





ಹುದ್ದೆಗಳ ಪದನಾಮ ಬದಲಾವಣೆ: ರೈಲ್ವೆ ಮಂಡಳಿ ಆದೇಶ

ಮಂಗಳೂರು: ಭಾರತೀಯ ರೈಲ್ವೆಯ ಸ್ಟೇಷನ್ ಮಾಸ್ಟರ್ ಮತ್ತು ಸ್ಟೇಷನ್ ಸೂಪರಿಂಟೆಂಡೆಂಟ್ ಹುದ್ದೆಗಳ ಪದನಾಮವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸ್ಟೇಷನ್ ಮ್ಯಾನೇಜರ್ ಎಂದು ಮರುನಾಮಕರಣ ಮಾಡಿ ರೈಲ್ವೆ ಮಂಡಳಿ ಆದೇಶ ಹೊರಡಿಸಿದೆ. ರೈಲ್ವೆ ಮಂಡಳಿಯ ಆದೇಶದನ್ವಯ ಈ ಬದಲಾವಣೆ ಮಾಡಲಾಗಿದ್ದು, ವೇತನ ಶ್ರೇಣಿ ಲೆವೆಲ್–7ರಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳನ್ನು ಡೆಪ್ಯುಟಿ ಸ್ಟೇಷನ್ ಮ್ಯಾನೇಜರ್ ಎಂದು ಮತ್ತು ಲೆವೆಲ್–8ರಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳನ್ನು ಸ್ಟೇಷನ್ ಮ್ಯಾನೇಜರ್ ಎಂದು ಬದಲಾಯಿಸಲಾಗಿದೆ. ಆದರೆ, ಈ ಬದಲಾವಣೆಯು ಅಧಿಕಾರಿಗಳ ಪ್ರಸ್ತುತ ಕರ್ತವ್ಯಗಳು, ಜವಾಬ್ದಾರಿಗಳು ಅಥವಾ ವೇತನ ರಚನೆಯಲ್ಲಿ ಯಾವುದೇ ಬದಲಾವಣೆ ತರುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಆಲ್ ಇಂಡಿಯಾ ಸ್ಟೇಷನ್ ಮಾಸ್ಟರ್ಸ್ ಅಸೋಸಿಯೇಷನ್ ಈ ನಿರ್ಧಾರವನ್ನು ಸ್ವಾಗತಿಸಿದೆ. ಸಂಘಟನೆಯ ಪ್ರಧಾನ ಕಾರ್ಯದರ್ಶಿ ಶರದ್ ಚಂದ್ರ ಪುರೋಹಿತ್ ಈ ಬಗ್ಗೆ ಮಾತನಾಡಿ, ಇದು ಸ್ಟೇಷನ್ ಮಾಸ್ಟರ್‌ಗಳ ಘನತೆ ಮತ್ತು ಗೌರವಕ್ಕೆ ಸಂದ ಐತಿಹಾಸಿಕ ಜಯ. ವಲಯ ಮಟ್ಟದಲ್ಲಿ ಜನರಲ್ ಮ್ಯಾನೇಜರ್ ಇರುವಂತೆ, ನಿಲ್ದಾಣದ ಮಟ್ಟದಲ್ಲಿ ಸ್ಟೇಷನ್ ಮ್ಯಾನೇಜರ್ ಎಂಬ ಪದನಾಮವು ಆಡಳಿತಾತ್ಮಕವಾಗಿ ಹೆಚ್ಚು ತರ್ಕಬದ್ಧವಾಗಿದೆ. ಈ ಹಿಂದೆ ಸಂಘಟನೆಯ ನಿರಂತರ ಹೋರಾಟದ ಫಲವಾಗಿ ಯುನಿಫಾರ್ಮ್ ಭತ್ಯೆ, ನೈಟ್ ಡ್ಯೂಟಿ ಭತ್ಯೆ ಮತ್ತು ಸಹಾಯಕ ಸ್ಟೇಷನ್ ಮಾಸ್ಟರ್ ಹುದ್ದೆ ರದ್ಧತಿಯಂತಹ ಪ್ರಮುಖ ಕಾರ್ಯಗಳನ್ನು ಮಾಡಲಾಗಿತ್ತು. ಈ ಮಹತ್ವದ ಬದಲಾವಣೆಗಾಗಿ ಅಸೋಸಿಯೇಷನ್ ರೈಲ್ವೆ ಮಂಡಳಿಗೆ ಕೃತಜ್ಞತೆ ಸಲ್ಲಿಸಿದೆ.

ನಿಷೇಧಾಜ್ಞೆ ಜಾರಿ

ಮಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆ – 2 ರ ಪರೀಕ್ಷೆಗಳು ಏ. 30 ರಿಂದ ಮೇ 13 ರವರೆಗೆ ಮಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ನಡೆಯಲಿದ್ದು, ಪರೀಕ್ಷಾಕೇಂದ್ರಗಳಲ್ಲಿ ಯಾವುದೇ ಕಾನೂನು ಬಾಹಿರ ಚಟುವಟಿಕೆ, ಅಹಿತಕರ ಘಟನೆಗಳು ನಡೆಯದಂತೆ ಮತ್ತು ಪರೀಕ್ಷೆಗಳನ್ನು ಶಾಂತಿಯುತವಾಗಿ, ಸುಸೂತ್ರವಾಗಿ ನಡೆಸುವ ನಿಟ್ಟಿನಲ್ಲಿ ಮುಂಜಾಗೃತಾ ಕ್ರಮವಾಗಿ ಪರೀಕ್ಷಾ ಕೇಂದ್ರಗಳ 200 ಮೀಟರ್ ಸುತ್ತಮುತ್ತಲಿನ ವ್ಯಾಪ್ತಿಯ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಿ ನಿಷೇಧಾಜ್ಞೆ ಜಾರಿಗೊಳಿಸಿ ಉಪಪೊಲೀಸ್ ಆಯುಕ್ತ ಮಿಥುನ್ ಹೆಚ್.ಎನ್. ಆದೇಶಿಸಿದ್ದಾರೆ.

ಪುತ್ತೂರು ಮಾರುಕಟ್ಟೆ ಧಾರಣೆ

29-04-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	445 - 475
ಚೋಲ್ ಅಡಿಕೆ	525 - 550
ಡಬಲ್ ಚೋಲ್	525 - 550
ಹೊಸ ಪಟೋರ	355 - 405
ಹಳೆ ಪಟೋರ	375 - 405
ಹೊಸ ಉಳ್ಳಿ	120 - 290
ಹಳೆ ಉಳ್ಳಿ	110 - 290
ಹೊಸ ಕೋಕಾ	325 - 345
ಹಳೆ ಕೋಕಾ	325 - 345
ಹೊಸ ಕರಿಗೋಟು	245 - 275
ಹಳೆ ಕರಿಗೋಟು	245 - 275
ಹಸಿ ಕೊಕ್ಕೋ	70 - 100
ಒಣ ಕೊಕ್ಕೋ	270 - 310

ಕಾಳುಮೆಣಸು ಧಾರಣೆ

ಕಾಳುಮೆಣಸು	450 - 685

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	242.50
ಆರ್‌ಎಸ್‌ಎಸ್ 2	210.00
ಸ್ಕ್ರಾಪ್ 1	148.00
ಸ್ಕ್ರಾಪ್ 2	139.00

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಧನಲಕ್ಷ್ಮೀ (ನಂ.DL-50) ಡ್ರಾ ಏಪ್ರಿಲ್ 29ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
DY 442449 (MALAPPURAM)

Consolation Prize Rs.5,000/-
DN 442449 DO 442449 DP 442449 DR 442449
DS 442449 DT 442449 DU 442449 DV 442449
DW 442449 DX 442449 DZ 442449

2nd Prize Rs.30,00,000/- [30 Lakhs]
DT 435276 (IRINJALAKUDA)

3rd Prize Rs.5,00,000/- [5 Lakhs]
DU 375023 (KOTTAYAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
0386 0399 0409 0572 0871 2094 2463 2773 3403 4599
5433 6101 6394 6724 6911 7426 8237 8444 8579

5th Prize Rs.2,000/-
1905 2816 3608 4179 6639 8220

6th Prize Rs.1,000/-
1015 1155 1179 1236 1878 2715 3543 3562 3564 4003
4233 5114 5731 6119 6277 6291 6550 7219 7251 7308
8217 8367 8800 9449 9634

7th Prize Rs.500/-
0040 0118 0134 0194 0220 0415 0436 0439 0455 0544
0670 0731 0821 0830 0889 1336 1494 2177 2192 2413
2549 2630 2801 3139 3307 3343 3386 3491 3964 4083
4311 4413 4638 4683 4707 4890 4945 4949 5032 5212
5272 5343 5643 5766 5912 6076 6084 6194 6203 6287
6336 6460 6534 6645 6730 6848 7095 7250 7323 7381
7438 7571 7627 7663 7900 8092 8283 8527 8542 8558
8768 8993 9139 9212 9800 9992

8th Prize Rs.200/-
0095 0193 0240 0465 0493 0777 0883 0963 0994 1034
1153 1181 1263 1382 1390 1547 1733 1753 1826 1959
2027 2183 2273 2310 2618 2704 2795 2884 3043 3268
3363 3409 3699 4166 4606 4862 4887 4939 4959 5050
5147 5149 5178 5179 5407 5418 5569 5592 5625 5642
5777 5936 6080 6156 6173 6391 6416 6507 6590 6892
6953 6966 6982 7011 7031 7151 7181 7226 7369 7422
7455 7631 7636 7640 7888 7903 8001 8118 8151 8180
8429 8460 8491 8620 8630 8781 9148 9243 9361 9601
9753 9777 9827 9894 9901 9922

9th Prize Rs.100/-
0096 0274 0288 0312 0373 0468 0529 0533 0606 0968
1063 1211 1224 1276 1329 1343 1391 1438 1454 1488
1507 1519 1543 1555 1572 1593 1613 1642 1657 1709
2041 2150 2160 2312 2324 2329 2349 2397 2516 2691
2729 2812 2873 3063 3122 3238 3289 3504 3587 3643
3662 3693 3706 3754 3763 3898 3986 3996 4015 4076
4193 4412 4419 4513 4523 4566 4582 4583 4626 4796
4996 5076 5099 5198 5222 5223 5267 5316 5329 5402
5499 5551 5693 5820 5897 5909 6178 6266 6294 6351
6362 6410 6466 6600 6686 6695 6714 6807 6814 6827
7083 7207 7265 7270 7532 7870 7905 7994 8067 8099
8163 8190 8303 8397 8690 8699 8727 8743 8774 8795
8796 8838 9026 9065 9120 9377 9407 9459 9564 9621
9622 9686 9709 9733 9806 9829 9951 9969



ಪ್ರಧಾನಿ ನರೇಂದ್ರ ಮೋದಿ ಅವರು ವಾರಾಣಸಿಯ ಕಾಶಿ ವಿಶ್ವನಾಥ ದೇವಾಲಯಕ್ಕೆ ಭೇಟಿ ನೀಡಿದ ವೇಳೆ ತ್ರಿಶೂಲ ಮತ್ತು ಡಮರು ಹಿಡಿದುಕೊಂಡಿರುವ ಕ್ಷಣ.

ತ.ನಾಡಿನಲ್ಲಿ ಡಿಎಂಕೆ, ಕೇರಳದಲ್ಲಿ ಯುಡಿಎಫ್, ಪುದುಚೇರಿಯಲ್ಲಿ ಎನ್‌ಡಿಎಗೆ ಅಧಿಕಾರ

ಬಿಜೆಪಿ ತೆಕ್ಕೆಗೆ ಬಂಗಾಳ, ಅಸ್ಸಾಂ

ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ವಿಧಾನಸಭೆ ಚುನಾವಣೆ ಮುಗಿದಿದ್ದು, ಮೇ 4ರಂದು ಅಧಿಕೃತವಾಗಿ ಫಲಿತಾಂಶ ಹೊರಬೀಳಲಿದೆ. ಅದಕ್ಕೂ ಮುನ್ನ ಮತದಾನೋತ್ತರ ಸಮೀಕ್ಷೆಗಳ ಭವಿಷ್ಯ ಬಹಿರಂಗವಾಗಿದ್ದು, ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ. ತಮಿಳುನಾಡಿನಲ್ಲಿ ಡಿಎಂಕೆ ಮೈತ್ರಿಕೂಟ ಮತ್ತೆ ಅಧಿಕಾರಕ್ಕೆ ಬರಲಿದೆ. ಆದರೆ, ಕೇರಳದಲ್ಲಿ ಈ ಬಾರಿ ಆಡಳಿತಾರೂಢ ಎಲ್‌ಡಿಎಫ್‌ಗೆ ಸೋಲಾಗಲಿದ್ದು, ಯುಡಿಎಫ್ ಗೆಲುವು ಸಾಧಿಸಲಿದೆ ಎಂದು ಸಮೀಕ್ಷೆಗಳು ಭವಿಷ್ಯ ನುಡಿದಿವೆ.

ಪ.ಬಂಗಾಳ

ದೇಶದ ಗಮನ ಸೆಳೆದಿರುವ ಪಶ್ಚಿಮ ಬಂಗಾಳದಲ್ಲಿ ಈ ಬಾರಿ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದು ಹಲವು ಸಮೀಕ್ಷೆಗಳು ಹೇಳಿವೆ. ಆಡಳಿತಾರೂಢ ಟಿಎಂಸಿ ನಾಲ್ಕನೇ ಬಾರಿಗೆ ಅಧಿಕಾರಕ್ಕೇರುವ ಕನಸು ನುಚ್ಚುನೂರಾಗಲಿದೆ ಎಂದು ಅಂದಾಜಿಸಲಾಗಿದೆ.





ಪೋಲ್ ಆಫ್ ಎಕ್ಸಿಟ್
ಬಿಜೆಪಿ- 143
ಟಿಎಂಸಿ- 144
ಕಾಂಗ್ರೆಸ್- 5
ಪಿ ಮಾರ್ಕ್
ಬಿಜೆಪಿ- 150-175
ಟಿಎಂಸಿ- 118-138
ಕಾಂಗ್ರೆಸ್- ಸಿಪಿಐ- 0
ಮ್ಯಾಟ್ರೀಜ್
ಬಿಜೆಪಿ- 146-161
ಟಿಎಂಸಿ- 125-140
ಕಾಂಗ್ರೆಸ್- ಸಿಪಿಐ- 0
ಪೀಪಲ್ಸ್ ಪಲ್ಸ್
ಬಿಜೆಪಿ- 95-110
ಟಿಎಂಸಿ- 178-189
ಕಾಂಗ್ರೆಸ್- 1-3
ಚಾಣಕ್ಯ ಸ್ಟ್ರಾಟರ್ಜಿ
ಬಿಜೆಪಿ- 150-160
ಟಿಎಂಸಿ- 130-140
ಕಾಂಗ್ರೆಸ್- ಸಿಪಿಐ- 0
ಪೋಲ್ ಡೈರಿ
ಬಿಜೆಪಿ- 142-171
ಟಿಎಂಸಿ- 99-127
ಕಾಂಗ್ರೆಸ್- 3-5
ಸಿಪಿಐ- 2-3

ಕೇರಳ

ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸಿಪಿಐಎಂ ನೇತೃತ್ವದ ಎಲ್‌ಡಿಎಫ್ ಅನ್ನು ಸೋಲಿಸಿ ಅಧಿಕಾರಕ್ಕೆ ಬರಲಿದೆ. ಕಾಂಗ್ರೆಸ್‌ಗೆ ಇದು ಆಶಾಭಾವನೆ ಮೂಡಿಸಿದರೆ, ಎಡಪಕ್ಷಗಳಿಗೆ ನಿರಾಸೆ ಮೂಡುವ ಸಾಧ್ಯತೆ ಇದೆ.

ಆ್ಯಕ್ಸಿಸ್ ಮೈ ಇಂಡಿಯಾ
ಎಲ್‌ಡಿಎಫ್- 49-62
ಯುಡಿಎಫ್- 78-90
ಬಿಜೆಪಿ ಮೈತ್ರಿ- 0-3
ಪೋಲ್ ಆಫ್ ಎಕ್ಸಿಟ್
ಎಲ್‌ಡಿಎಫ್- 90
ಯುಡಿಎಫ್- 77
ಬಿಜೆಪಿ ಮೈತ್ರಿ- 2
ಪಿ-ಮಾರ್ಕ್
ಎಲ್‌ಡಿಎಫ್- 62-69
ಯುಡಿಎಫ್- 71-79
ಬಿಜೆಪಿ ಮೈತ್ರಿ- 1-4
ಮ್ಯಾಟ್ರಿಜ್
ಎಲ್‌ಡಿಎಫ್- 60-65
ಯುಡಿಎಫ್- 70-75
ಬಿಜೆಪಿ ಮೈತ್ರಿ- 3-5
ಪೀಪಲ್ಸ್ ಪಲ್ಸ್
ಎಲ್‌ಡಿಎಫ್- 55-65
ಯುಡಿಎಫ್- 75-85
ಬಿಜೆಪಿ ಮೈತ್ರಿ- 0-3





ಅಸ್ಸಾಂ

ಅಸ್ಸಾಂನಲ್ಲಿ ಸಿಎಂ ಹಿಮಂತ ಬಿಸ್ವಾ ಶರ್ಮಾ ಅವರ ನೇತೃತ್ವದಲ್ಲಿ ಮತ್ತೊಮ್ಮೆ ಭರ್ಜರಿಯಾಗಿ ಬಿಜೆಪಿ ಅಧಿಕಾರಕ್ಕೆ ಬರಲಿದೆ.



ಆ್ಯಕ್ಸಿಸ್ ಮೈ ಇಂಡಿಯಾ
ಬಿಜೆಪಿ ಮೈತ್ರಿ- 88-100
ಕಾಂಗ್ರೆಸ್? ಮೈತ್ರಿ- 24-36
ಇತರೆ- 0-3
ಪೋಲ್ ಆಫ್ ಎಕ್ಸಿಟ್
ಬಿಜೆಪಿ ಮೈತ್ರಿ- 88
ಕಾಂಗ್ರೆಸ್ ಮೈತ್ರಿ- 27
ಇತರೆ- 6
ಜೆಪಿಸಿ ಸಮೀಕ್ಷೆ
ಬಿಜೆಪಿ ಮೈತ್ರಿ- 88-101
ಕಾಂಗ್ರೆಸ್ ಮೈತ್ರಿ- 23-33
ಇತರೆ- 2-5
ಪಿ- ಮಾರ್ಕ್
ಬಿಜೆಪಿ ಮೈತ್ರಿ- 82-94
ಕಾಂಗ್ರೆಸ್ ಮೈತ್ರಿ- 30-40
ಇತರೆ- 1-5
ಪೀಪಲ್ಸ್ ಪಲ್ಸ್
ಬಿಜೆಪಿ ಮೈತ್ರಿ- 68-72
ಕಾಂಗ್ರೆಸ್ ಮೈತ್ರಿ- 22-26
ಇತರೆ- 7-15
ಪೋಲ್ ಡೈರಿ
ಕಾಂಗ್ರೆಸ್ ಮೈತ್ರಿ- 15-26
ಬಿಜೆಪಿ ಮೈತ್ರಿ- 86-101
ಇತರೆ- 3-7

ಪುದುಚೇರಿ

ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ಈಗಿರುವ ಎನ್‌ಡಿಎ ಸರ್ಕಾರವೇ ಮತ್ತೆ ಅಧಿಕಾರಕ್ಕೆ ಬರಲಿದೆ ಎಂಬುದು ಸಮೀಕ್ಷೆಗಳ ಭವಿಷ್ಯ.

ಆ್ಯಕ್ಸಿಸ್ ಮೈ ಇಂಡಿಯಾ
ಬಿಜೆಪಿ ಮೈತ್ರಿ- 16-20
ಕಾಂಗ್ರೆಸ್ ಮೈತ್ರಿ- 6-8
ಇತರೆ 3-7
ಪೋಲ್ ಆಫ್ ಎಕ್ಸಿಟ್
ಬಿಜೆಪಿ ಮೈತ್ರಿ- 17
ಕಾಂಗ್ರೆಸ್ ಮೈತ್ರಿ- 9
ಇತರೆ- 3



ಪೀಪಲ್ಸ್ ಪಲ್ಸ್ ಸಮೀಕ್ಷೆ
ಬಿಜೆಪಿ ಮೈತ್ರಿ- 16-19
ಕಾಂಗ್ರೆಸ್ ಮೈತ್ರಿ- 10-12
ಇತರೆ 1-2 ಸ್ಥಾನ

ತಮಿಳುನಾಡು

ತಮಿಳುನಾಡಿನಲ್ಲಿ ಸಿಎಂ ಎಂ.ಕೆ. ಸ್ಟಾಲಿನ್ ನೇತೃತ್ವದಲ್ಲಿ ಡಿಎಂಕೆ ಮತ್ತೆ ಅಧಿಕಾರಕ್ಕೆ ಬಲಿದೆ. ದೊಡ್ಡ ಮಟ್ಟದಲ್ಲಿ ಹವಾ ಎಬ್ಬಿಸಿದ್ದ ನಟ ವಿಜಯ್ ಅವರ ಟಿವಿಕೆ ಪಕ್ಷವು ಸಾಧಾರಣ ಸಾಧನೆ ಮಾಡಲಿದೆ.



ಪೋಲ್ ಆಫ್ ಎಕ್ಸಿಟ್
ಡಿಎಂಕೆ ಮೈತ್ರಿ- 137
ಎಐಡಿಎಂಕೆ ಮೈತ್ರಿ-75
ಟಿವಿಕೆ- 17
ಪಿ-ಮಾರ್ಕ್
ಡಿಎಂಕೆ ಮೈತ್ರಿ- 125-145
ಎಐಡಿಎಂಕೆ ಮೈತ್ರಿ- 65-85
ಟಿವಿಕೆ- 16-26
ಮ್ಯಾಟ್ರಿಜ್
ಡಿಎಂಕೆ ಮೈತ್ರಿ- 122-132
ಎಐಡಿಎಂಕೆ ಮೈತ್ರಿ- 87-110
ಟಿವಿಕೆ- 10-12
ಪೀಪಲ್ಸ್ ಪಲ್ಸ್
ಡಿಎಂಕೆ ಮೈತ್ರಿ- 125-145
ಎಐಡಿಎಂಕೆ ಮೈತ್ರಿ- 65-80
ಟಿವಿಕೆ- 18-24
ಚಾಣಕ್ಯ ಸ್ಟ್ರಾಟರ್ಜಿ
ಡಿಎಂಕೆ ಮೈತ್ರಿ- 145-160
ಎಐಡಿಎಂಕೆ ಮೈತ್ರಿ- 50-65
ಟಿವಿಕೆ-0

ಬಂಗಾಳದಲ್ಲಿ ಶೇ.92 ದಾಖಲೆ ಮತ

ಕೋಲ್ಕತ್ತಾ: ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ಎರಡನೇ ಹಾಗೂ ಅಂತಿಮ ಹಂತದಲ್ಲಿ ಸುಮಾರು ಶೇ.91.66 ಮತದಾನವಾಗಿದೆ. ಮೊದಲ ಹಂತದಲ್ಲಿ ಶೇ.93.19 ಮತದಾನವಾಗಿತ್ತು. ಆ ಮೂಲಕ ಒಟ್ಟಾರೆ ಎರಡೂ ಹಂತಗಳಲ್ಲಿ ಸುಮಾರು ಶೇ.92.47 ದಾಖಲೆಯ ಮತದಾನವಾಗಿದೆ. ಇದು ಸ್ವಾತಂತ್ರ್ಯಾನಂತರದ ರಾಜ್ಯದ ಇತಿಹಾಸದಲ್ಲೇ ಅತ್ಯಧಿಕ ಮತದಾನವೆಂದು ಚುನಾವಣಾ ಆಯೋಗ ತಿಳಿಸಿದೆ.

ಈ ಚುನಾವಣೆ ಮಮತಾ ಬ್ಯಾನರ್ಜಿ ಅವರ ಆಡಳಿತ ಮುಂದುವರಿಯುತ್ತದೆಯೇ ಅಥವಾ ಬಿಜೆಪಿ ಪ್ರಾಬಲ್ಯ ಪಡೆಯುತ್ತದೆಯೇ ಎಂಬುದನ್ನು ನಿರ್ಧರಿಸುವ ಮಹತ್ವದ ಕದನವಾಗಿದೆ. ವಿಶೇಷವಾಗಿ ದಕ್ಷಿಣ ಬಂಗಾಳದ 142 ಕ್ಷೇತ್ರಗಳಲ್ಲಿ ನಡೆದ ಮತದಾನವು ರಾಜಕೀಯವಾಗಿ ನಿರ್ಣಾಯಕವಾಗಿದ್ದು, ಕೋಲ್ಕತ್ತಾ ಸೇರಿದಂತೆ ಹಲವು ಪ್ರಮುಖ ಪ್ರದೇಶಗಳಲ್ಲಿ ಉತ್ಸಾಹಭರಿತ ಮತದಾನ ಕಂಡುಬಂದಿತು. ಭವಾನಿಪುರ ಕ್ಷೇತ್ರದಲ್ಲಿ ಮಮತಾ ಬ್ಯಾನರ್ಜಿ ಮತ್ತು ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ನಡುವಿನ ಸ್ಪರ್ಧೆ ವಿಶೇಷ ಗಮನ ಸೆಳೆದಿತು.

ಈ ಕ್ಷೇತ್ರದಲ್ಲಿ ಶೇ.87 ಮತದಾನ ದಾಖಲಾಗಿದ್ದು, ಹಿಂದಿನ ಚುನಾವಣೆಗೆ ಹೋಲಿಸಿದರೆ ಹೆಚ್ಚಾಗಿದೆ. ಇಬ್ಬರೂ ನಾಯಕರು ಪರಸ್ಪರ ಆರೋಪ-ಪ್ರತ್ಯಾರೋಪಗಳನ್ನು ಮಾಡುತ್ತಾ, ಚುನಾವಣೆಯ ನಿಷ್ಠೆ ಮತ್ತು ಪಾರದರ್ಶಕತೆ ಬಗ್ಗೆ ಪ್ರಶ್ನೆಗಳನ್ನು ಎತ್ತಿದರು. ರಾಜ್ಯದ ವಿವಿಧ ಭಾಗಗಳಲ್ಲಿ ಕೆಲವು ಉದ್ವಿಗ್ನ ಘಟನೆಗಳು, ಘರ್ಷಣೆಗಳು ನಡೆದಿದ್ದರೂ, ಹಿಂದಿನ ಚುನಾವಣೆಗಳಿಗೆ ಹೋಲಿಸಿದರೆ ಇದು ಕಡಿಮೆ ಹಿಂಸಾತ್ಮಕವಾಗಿತ್ತು.

ಇವಿಎಂಗೆ ಟೇಪ್; ಸತ್ಯವಾದರೆ ಮರು ಮತದಾನ: ಇವಿಎಂಗಳಲ್ಲಿ ಟೇಪ್ ಅಥವಾ ಮಸಿ ಬಳಸಿ ತೊಂದರೆ ಮಾಡಲಾಗಿದೆ ಎಂಬ ಆರೋಪಗಳು ಸತ್ಯವೆಂದು ತೋರಿದರೆ ಆ ಮತಗಟ್ಟೆಗಳಲ್ಲಿ ಮರು ಮತದಾನ ನಡೆಸಲಾಗುವುದು ಎಂದು ಪಶ್ಚಿಮ ಬಂಗಾಳದ ಮುಖ್ಯ ಚುನಾವಣಾಧಿಕಾರಿ ಮನೋಜ್ ಅಗರ್ವಾಲ್ ತಿಳಿಸಿದ್ದಾರೆ.

ಅಭಿವೃದ್ಧಿಗೆ ಹೊಸ ಜೀವನಾಡಿ

ಹರ್ದೋಯಿ/ಲಕ್ನೋ: ಪರಿವರ್ತನಾತ್ಮಕ ಮೂಲಸೌಕರ್ಯ ಯೋಜನೆಯಾಗಿರುವ ಗಂಗಾ ಎಕ್ಸ್‌ಪ್ರೆಸ್‌ವೇ ಉತ್ತರಪ್ರದೇಶದ ಅಭಿವೃದ್ಧಿಗೆ ಹೊಸ ಜೀವನಾಡಿ ಎಂದು ಪ್ರಧಾನಿ ಮೋದಿ ಬಣ್ಣಿಸಿದ್ದಾರೆ.

ಮೀರತ್‌ನ್ನು ಪ್ರಯಾಗರಾಜ್‌ಗೆ ಸಂಪರ್ಕಿಸುವ ಗಂಗಾ ಎಕ್ಸ್‌ಪ್ರೆಸ್ ವೇಗೆ ಚಾಲನೆ ನೀಡಿ ಮಾತನಾಡಿ, ಸಹಸ್ರಾರು ವರ್ಷಗಳಿಂದ ಗಂಗಾ ಮಾತೆ ಉತ್ತರ ಪ್ರದೇಶ ಮತ್ತು ಇಡೀ ರಾಷ್ಟ್ರದ ಜೀವನಾಡಿಯಾಗಿರುವಂತೆ, ಇದೇ ಗಂಗೆಯ ಸಮೀಪದಿಂದ ಹಾದು ಹೋಗುವ ಎಕ್ಸ್‌ಪ್ರೆಸ್‌ವೇಯು ಆಧುನಿಕ ಪ್ರಗತಿ ಯುಗದಲ್ಲಿ ಬೆಳವಣಿಗೆಯ ಹೊಸ ಇಂಜಿನ್ ಆಗಲಿದೆ ಎಂದರು.

ಎಕ್ಸ್‌ಪ್ರೆಸ್‌ವೇ ವ್ಯಾಪಾರ, ಕೃಷಿ, ಲಾಜಿಸ್ಟಿಕ್ಸ್ ಉದ್ದಿಮೆ ರಂಗಗಳಲ್ಲಿ ಹೊಸ ಅವಕಾಶಗಳ ಸೃಜಿಸಲಿದೆ. ಇದೊಂದು ಹೈಸ್ಪೀಡ್ ರೋಡ್ ಅಷ್ಟೇ ಅಲ್ಲ, ಹೊಸ ಅವಕಾಶಗಳು, ಹೊಸ ಕನಸುಗಳು ಮತ್ತು ಹೊಸ ಸಾಧ್ಯತೆಗಳಿಗೆ ಗೇಟ್‌ವೇ ಆಗಿದೆ. ಸುಧಾರಿತ ಲಾಜಿಸ್ಟಿಕ್‌ಗಳು, ಮಾರುಕಟ್ಟೆ ಅವಕಾಶಗಳು ರೈತರ ಆದಾಯ ವರ್ಧನೆಗೆ ಪೂರಕವಾಗಲಿದೆ.

ಉತ್ಪಾದನಾ ರಂಗ, ಸೆಮಿಕಂಡಕ್ಟರ್‌ಗಳು, ರಕ್ಷಣಾ ಉತ್ಪಾದನಾ ರಂಗ ಮತ್ತು ಉದಯೋನ್ಮುಖ ತಂತ್ರಜ್ಞಾನ ರಂಗಗಳಲ್ಲಿ ಹೂಡಿಕೆಗಳ ಮುಖೇನ ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗುವ ನಿಟ್ಟಿನಲ್ಲಿ ಹೆಜ್ಜೆ ಹಾಕಿರುವ ಉತ್ತರ ಪ್ರದೇಶದ ಬೃಹತ್ ಆರ್ಥಿಕ ಮಹತ್ವಾಕಾಂಕ್ಷೆಯ ಸಾಕಾರಕ್ಕೆ ಪ್ರಸ್ತುತ ಯೋಜನೆಯು ಪೂರಕವಾಗಲಿದೆ ಎಂದು ಪ್ರಧಾನಿ ವಿಶ್ವಾಸ ವ್ಯಕ್ತಪಡಿಸಿದರು.

ಉತ್ತರಪ್ರದೇಶವೀಗ 5 ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳ ಸಹಿತ 21 ವಿಮಾನ ನಿಲ್ದಾಣಗಳನ್ನು ಒಳಗೊಂಡಿದೆ. ಸದ್ಯವೇ ತಲೆ ಎತ್ತಲಿರುವ ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಎಕ್ಸ್‌ಪ್ರೆಸ್‌ವೇ ಕಾರಿಡಾರ್‌ಗೆ ಸಂಬಂಧಪಟ್ಟಂತೆ ಸಂಪರ್ಕ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲಿದೆ ಎಂದರು. ಉತ್ತರಪ್ರದೇಶದ ಕೈಗಾರಿಕಾ ಬೆಳವಣಿಗೆ ಭಾರತದ ಪಾಲಿಗೆ ನಿರ್ಣಾಯಕ ಬಲವಾಗಿ ಪರಿಣಮಿಸಿದೆ. ಬ್ರಹ್ಮೋಸ್ ಕ್ಷಿಪಣಿಗಳಂತಹ ಕ್ಷಿಪಣಿ ತಯಾರಿ ಸಹಿತ ರಾಜ್ಯದ ರಕ್ಷಣಾ ಕಾರಿಡಾರ್‌ನ ಸಾಧನೆ ಗಮನಾರ್ಹವೆಂದು ಮೋದಿ ಪ್ರಶಂಸಿಸಿದರು.

ಕಿರುಸುದ್ದಿ

ಬಸ್ ಅಪಘಾತ: ಆರು ಮಂದಿ ಸಾವು


ಗಾಂಧಿನಗರ: ಅಹಮದಾಬಾದ್-ಉದಯಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ಖಾಸಗಿ ಬಸ್ ಇಕೋ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಆರು ಮಂದಿ ಮೃತಪಟ್ಟಿದ್ದು,ಎಂಟು ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಚಿಕಿತ್ಸೆಗಾಗಿ ಗಂಭೋಯಿ ಮತ್ತು ಹಿಮ್ಮತ್‌ನಗರ ಸಿವಿಲ್ ಆಸ್ಪತ್ರೆಗಳಿಗೆ ಸ್ಥಳಾಂತರಿಸಲಾಗಿದೆ. ಜಿಲ್ಲೆಯ ಹಿಮ್ಮತ್‌ನಗರದ ಜವಾನ್‌ಗಢ್ ಪಾಟಿಯಾದಲ್ಲಿ ವೇಗವಾಗಿ ಬಂದ ಖಾಸಗಿ ಬಸ್, ಹಿಂದಿನಿಂದ ಇಕೋ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಈ ಅಪಘಾತ ಸಂಭವಿಸಿದೆ.

ರಾಣಾ ಪೌರತ್ವ ವಾಪಸ್: ಪ್ರಕ್ರಿಯೆ ಆರಂಭಿಸಿದ ಕೆನಡಾ

ಒಟ್ಟಾವಾ: 26/11ರ ಮುಂಬೈ ಭಯೋತ್ಪಾದಕ ದಾಳಿ ಮಾಸ್ಟರ್ ಮೈಂಡ್ ತಹವ್ವೂರ್ ಹುಸೇನ್ ರಾಣಾ ಅವರ ಪೌರತ್ವವನ್ನು ಹಿಂಪಡೆಯುವ ಪ್ರಕ್ರಿಯೆಯನ್ನು ಕೆನಡಾ ಸರ್ಕಾರ ಪ್ರಾರಂಭಿಸಿದೆ. ಈ ಮೂಲಕ ಹಿಂದಿನ ಜಸ್ಟಿನ್ ಟ್ರುಡೊ ಸರ್ಕಾರದ ಅವಧಿಯಲ್ಲಿ ಹದಗೆಟ್ಟಿದ್ದ ಭಾರತದೊಂದಿಗಿನ ಸಂಬಂಧಗಳನ್ನು ಮರುಹೊಂದಿಸಲು ಕೆನಡಾ ಪ್ರಯತ್ನಿಸುತ್ತಿದೆ. ಕೆನಡಾದ ಪ್ರಧಾನಿ ಮಾರ್ಕ್ ಕಾರ್ನಿ ಭಾರತಕ್ಕೆ ಭೇಟಿ ನೀಡುವ ಮುನ್ನ ಈ ಕ್ರಮ ಕೈಗೊಳ್ಳಲಾಗಿದೆ.

ಭಾರತಕ್ಕೆ ಇಂಧನ ರಫ್ತು ಹೆಚ್ಚಳಕ್ಕೆ ಹಾದಿ ಸುಗಮ

ಅಬುಧಾಬಿ: ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ತೈಲ ರಫ್ತು ಮಾಡುವ ರಾಷ್ಟ್ರಗಳ ಒಕ್ಕೂಟವಾದ ಒಪೆಕ್‌ನಿಂದ(ಒಪಿಇಸಿ) ಹೊರಬಂದಿದೆ. ಮೇ 1ರಿಂದ ಜಾರಿಗೆ ಬರುವಂತೆ,



ಹಬ್ಶಾನ್-ಫುಜೈರಾ ಪೈಪ್‌ಲೈನ್ ಮೂಲಕ ಭಾರತಕ್ಕೆ ಹೆಚ್ಚಿನ ಪ್ರಮಾಣದ ಕಚ್ಚಾ ತೈಲವನ್ನು ರಫ್ತು ಮಾಡಲು ಮತ್ತು ರಾಷ್ಟ್ರೀಯ ತೈಲ ಉತ್ಪಾದನೆಯನ್ನು ವಿಸ್ತರಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಸುಮಾರು 60 ವರ್ಷಗಳ ಒಕ್ಕೂಟದ ಸದಸ್ಯತ್ವವನ್ನು ಕೊನೆಗೊಳಿಸಿರುವ ಯುಎಇ, ಇನ್ನು ಮುಂದೆ ಒಪೆಕ್ ವಿಧಿಸುವ ಉತ್ಪಾದನಾ ಮಿತಿಗಳನ್ನು ಪಾಲಿಸುವುದಿಲ್ಲ. ಇದರಿಂದ ದೇಶವು ತನ್ನ ತೈಲ ಉತ್ಪಾದನೆಯನ್ನು ದಿನಕ್ಕೆ ಹತ್ತು ಲಕ್ಷ ಬ್ಯಾರೆಲ್‌ಗಳಷ್ಟು ಹೆಚ್ಚಿಸಲು ಸಾಧ್ಯವಾಗಲಿದ್ದು, ಒಟ್ಟು ಐದು ದಶಲಕ್ಷ ಬ್ಯಾರೆಲ್‌ಗಳ ಗುರಿಯತ್ತ ಸಾಗಲಿದೆ. ಅಬುಧಾಬಿ ನ್ಯಾಷನಲ್ ಆಯಿಲ್ ಕಂಪನಿಯು (ಎಡಿಎನ್‌ಒಸಿ) ನಿಗದಿತ ಅವಧಿಗಿಂತ ಮುಂಚಿತವಾಗಿ ಈ ಗುರಿ ತಲುಪಲು 150 ಬಿಲಿಯನ್ ಡಾಲರ್ ಹೂಡಿಕೆ ಮಾಡಿದೆ.

ಯುಎಇ, 406 ಕಿಮೀ ಉದ್ದದ ಹಬ್ಶಾನ್-ಫುಜೈರಾ ಪೈಪ್‌ಲೈನ್ ಮೂಲಕ, ಅಪಾಯಕಾರಿ ಹಾರ್ಮುಜ್ ಜಲಸಂಧಿಯನ್ನು ಬಳಸದೆಯೇ ತೈಲ ರಫ್ತು ಮಾಡಬಹುದಾಗಿದೆ. ತನ್ನ ಒಟ್ಟು ತೈಲ ಆಮದಿನ ಶೇ.10ರಷ್ಟು ಪಾಲನ್ನು ಯುಎಇಯಿಂದ ಪಡೆಯುವ ಭಾರತಕ್ಕೆ, ಈ ಮಾರ್ಗ ಪ್ರಾದೇಶಿಕ ಉದ್ವಿಗ್ನತೆಗಳ ನಡುವೆಯೂ ಸುರಕ್ಷಿತ ತೈಲ ಪೂರೈಕೆಯನ್ನು ಖಾತ್ರಿಪಡಿಸುತ್ತದೆ.

ನಿಷ್ಕ್ರಿಯ ಇಪಿಎಫ್ ಖಾತೆ ಸಕ್ರಿಯಕ್ಕಾಗಿ ಇ- ಪ್ರಾಪ್ತಿ

ಹೊಸದಿಲ್ಲಿ: ನಿಷ್ಕ್ರಿಯವಾಗಿರುವ ಭವಿಷ್ಯ ನಿಧಿ ಖಾತೆಗಳನ್ನು ಸಕ್ರಿಯಗೊಳಿಸುವುದಕ್ಕಾಗಿ ಆಧಾರ್ ಆಧಾರಿತ ಪೋರ್ಟಲ್ ಇ-ಪ್ರಾಪ್ತಿಗೆ ಇಪಿಎಫ್‌ಒ ಚಾಲನೆ ನೀಡಿದೆ. ಹಳೆ ಇಪಿಎಫ್ ಖಾತೆಗಳನ್ನು ಗುರುತಿಸುವುದು, ಯುಎಎನ್ ಲಿಂಕಿಂಗ್ ಮತ್ತು ಅವುಗಳಿಗೆ ಮರುಜೀವ ನೀಡುವ ಡಿಜಿಟಲ್ ವೇದಿಕೆಯಾಗಿದೆ ಇ-ಪ್ರಾಪ್ತಿ.

ಪ್ರಸ್ತುತ ಪೋರ್ಟಲ್, ಪಿಎಫ್ ಸದಸ್ಯರಿಗೆ ತಮ್ಮ ಹಳೆ ಪಿಎಫ್ ಖಾತೆಗಳನ್ನು ಸುರಕ್ಷಿತವಾಗಿ ಮರಳಿ ಹೊಂದಲು ಅಗತ್ಯ ಆಧಾರ್ ಆಧಾರಿತ ದೃಢೀಕರಣ ಕಾರ್ಯ ವಿಧಾನವನ್ನು ಒದಗಿಸುವುದು. ಪಿಎಫ್ ಹಳೆ ಖಾತೆಗಳು ಯುಎಎನ್ ಲಿಂಕ್ ಹೊಂದಿರುವುದಿಲ್ಲ. ಸದಸ್ಯರು ತಮ್ಮ ಸದಸ್ಯ ಪ್ರೊಫೈಲ್‌ನ್ನು ಕ್ರಮಬದ್ಧಗೊಳಿಸಿದ ನಂತರ ಯುಎಎನ್ ಲಿಂಕಿಂಗ್, ಖಾತೆಯ ಪುನಶ್ಚೇತನ ಸಾಧ್ಯವಾಗುವುದು. ಆರಂಭಿಕ ಹಂತದಲ್ಲಿ ಪೋರ್ಟಲ್ ಪಿಎಫ್ ಸದಸ್ಯರ ಮೆಂಬರ್ ಐಡಿ ಆಧಾರಿತವಾಗಿ, ಮೆಂಬರ್ ಐಡಿಗಳನ್ನು ಹೊಂದಿರುವ ಅಪಾರ ಸಂಖ್ಯೆ ಸದಸ್ಯರಿಗೆ ತಕ್ಷಣದ ಸೌಲಭ್ಯ ಕೊಡಿಸಲು ನೆರವಾಗುವುದು.

ಇನ್ನು ಹಳೆ ಮೆಂಬರ್ಸ್ ಐಡಿಗಳನ್ನು ಪಡೆಯಲು ವಿಫಲರಾಗಿರುವ ಸದಸ್ಯರಿಗೆ ಇದನ್ನು ಕೊಡಿಸಲು ಇ-ಪ್ರಾಪ್ತಿ ನೆರವಾಗುವುದು. ಇ-ಪ್ರಾಪ್ತಿ ಪೋರ್ಟಲ್ ಮಾನವ ಮಧ್ಯಪ್ರವೇಶ ಸಾಧ್ಯತೆಗಳನ್ನು ಕಡಿಮೆ ಮಾಡಲಿದೆ, ದಾಖಲೀಕರಣಗಳನ್ನು ಕಡಿಮೆ ಮಾಡುವುದು ಮತ್ತು ದಕ್ಷತೆ ಹಾಗೂ ಪಾರದರ್ಶಿತ್ವಕ್ಕೆ ಆದ್ಯತೆ ನೀಡಲಿದೆ. ಇಪಿಎಫ್‌ಒ 2025-26ರಲ್ಲಿ 8.31ಕೋಟಿ ಪಿಎಫ್ ಅರ್ಜಿಗಳನ್ನು ಇತ್ಯರ್ಥಪಡಿಸಿದೆ. 2024-25ರಲ್ಲಿ ಈ ಸಂಖ್ಯೆ 6.01ಕೋಟಿಗೆ ಸೀಮಿತವಿತ್ತು. ಈ ಪೈಕಿ 5.51ಕೋಟಿ ಅರ್ಜಿಗಳು ಮುಂಗಡ ಅಥವಾ ಭಾಗಶ: ಪಿಎಫ್ ಹಣ ಪಡೆಯುವುದಕ್ಕೆ ಸಂಬಂಧಿಸಿದವುಗಳು.

ಅಯೋಧ್ಯೆ ಶಿವ ದೇಗುಲ ಮೇಲೆ ಧ್ವಜಾರೋಹಣ

ಅಯೋಧ್ಯೆ: ಶ್ರೀ ರಾಮ ಮಂದಿರದ ಆವರಣದಲ್ಲಿರುವ ಶಿವ ಮಂದಿರದ ಮೇಲೆ ಧಾರ್ಮಿಕ ವಿಧಿವಿಧಾನಗಳ ಮೂಲಕ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಧ್ವಜಾರೋಹಣ ನೆರವೇರಿಸಿದರು.



ಧ್ವಜಾರೋಹಣದ ಬಳಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಯೋಗಿ ಆದಿತ್ಯನಾಥ್, ಜನರು ನನ್ನ ಎಲ್ಲಿ ನೋಡಿದರು ಜಯ ಶ್ರೀ ರಾಮ, ಜಯ ಶ್ರೀ ರಾಮ ಎಂದು ಹೇಳುತ್ತಾರೆ. ಶ್ರೀ ರಾಮ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದುಕೊಂಡಿದ್ದಾರೆ ಎಂದರು. ಶ್ರೀ ರಾಮ ಭಾರತವನ್ನು ಉತ್ತರದಿಂದ ದಕ್ಷಿಣಕ್ಕೆ ಬೆಸೆದರೆ, ಶ್ರೀ ಕೃಷ್ಣ ಪೂರ್ವದಿಂದ ಪಶ್ಚಿಮಕ್ಕೆ ಮತ್ತು ಶಿವ ಭಾರತದ ಕೊನೆ ಕೊನೆಯಲ್ಲಿ ಕಾಣಬಹುದು ಎಂದರು. ಸಂಜೆ 5 ಗಂಟೆಗೆ ಅಯೋಧ್ಯೆಗೆ ಆಗಮಿಸಿದ ಯೋಗಿ ಮೊದಲು ಹನುಮಾನ ಮಂದಿರದ ದರ್ಶನವನ್ನು ಪಡೆದ ನಂತರ ಶ್ರೀ ರಾಮಲಲಾ ಹಾಗೂ ಶಿವ ಮಂದಿರದ ದರ್ಶನ ಹಾಗೂ ವಿಶೇಷ ಪೂಜೆ ಸಲ್ಲಿಸಿ ವೇದಿಕೆಯ ಕಡೆಗೆ ಹೊರಟು ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಪ್ರಧಾನಕಾರ್ಯದರ್ಶಿಯಾದ ಚಂಪತರಾಯ್, ಟ್ರಸ್ಟಿಗಳಾದ ಅನಿಲ ಮಿಶ್ರಾ, ಕೃಷ್ಣ ಮೋಹನ್, ವಿಶ್ವ ಹಿಂದೂ ಪರಿಷತ್ ಕೇಂದ್ರಿಯ ಕಾರ್ಯದರ್ಶಿ ಗೋಪಾಲ್ ಜಿ, ಹಾಗೂ ಸಂಘ ಪರಿವಾರದ ಪ್ರಮುಖರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಭಾರತ-ಲಂಕಾ ಜಂಟಿ ನೌಕಾಭ್ಯಾಸ ಸಂಪನ್ನ

ಹೊಸದಿಲ್ಲಿ: ಕೊಲಂಬೊ ಕರಾವಳಿಯಲ್ಲಿ ನಡೆದ ದ್ವಿಪಕ್ಷೀಯ ನೌಕಾ ತಾಲೀಮಿನ ಭಾಗವಾಗಿ ಭಾರತ ಮತ್ತು ಶ್ರೀಲಂಕಾದ ನೌಕಾಪಡೆಗಳ ಸಿಬ್ಬಂದಿಗಳು ಆಳ ಸಮುದ್ರದ ಡೈವ್‌ಗಳನ್ನು ನಡೆಸಿದ್ದಾರೆ. ಈ ಮೂಲಕ ಉಭಯ ದೇಶದ ನೌಕಾಪಡೆ ನೀರೊಳಗಿನ ಹುಡುಕಾಟ, ಪಾರುಗಾಣಿಕಾ ಮತ್ತು ರಕ್ಷಣಾ ಕಾರ್ಯಾಚರಣೆಗಳಲ್ಲಿ ಜಂಟಿ ಸಾಮರ್ಥ್ಯಗಳನ್ನು ಹೆಚ್ಚಿಸಿದರು. ಭಾರತ ಮತ್ತು ಶ್ರೀಲಂಕಾ ಕೊಲಂಬೊದಲ್ಲಿ ಏ.21-28ರಿಂದ ನಡೆಸಲಾದ ಡೈವೆಕ್ಸ್ ಎಂಬ ದ್ವಿಪಕ್ಷೀಯ ಡೈವಿಂಗ್ ತಾಲೀಮಿನ ನಾಲ್ಕನೇ ಆವೃತ್ತಿಯ ಮೂಲಕ ತಮ್ಮ ಬೆಳೆಯುತ್ತಿರುವ ಕಡಲ ಪಾಲುದಾರಿಕೆಯನ್ನು ಪುನರುಚ್ಚರಿಸಿದವು. ಹಿಂದು ಮಹಾಸಾಗರ ಪ್ರದೇಶದಲ್ಲಿ ಸಮನ್ವಯವನ್ನು ಬಲಪಡಿಸುವಾಗ, ಎರಡೂ ನೌಕಾಪಡೆಗಳ ಡೈವರ್‌ಗಳು 55 ಮೀಟರ್‌ಗಿಂತ ಹೆಚ್ಚು ಆಳ ಸಮುದ್ರದ ಡೈವ್‌ಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಿದರು. ನೀರೊಳಗಿನ ಹುಡುಕಾಟ, ಪಾರುಗಾಣಿಕಾ ಮತ್ತು ರಕ್ಷಣಾ ಕಾರ್ಯಾಚರಣೆಗಳಲ್ಲಿ ಜಂಟಿ ಸಾಮರ್ಥ್ಯಗಳನ್ನು ಹೆಚ್ಚಿಸಿದರು ಎಂದು ಭಾರತೀಯ ನೌಕಾಪಡೆಯ ವಕ್ತಾರರು ತಿಳಿಸಿದ್ದಾರೆ.

ಶಬರಿಮಲೆ ಪ್ರವೇಶ ಕುರಿತಂತೆ ವಿಚಾರಣೆ | ಸುಪ್ರೀಂಕೋರ್ಟ್‌ನಿಂದ ಮಹತ್ವದ ಅಭಿಪ್ರಾಯ

ಸುಧಾರಣೆ ಹೆಸರಿನಲ್ಲಿ ಧರ್ಮವನ್ನು ಕುಗ್ಗಿಸಲಾಗದು

ಹೊಸದಿಲ್ಲಿ: ಸುಧಾರಣೆ ಎಂಬ ಹೆಸರಿನಲ್ಲಿ ಧರ್ಮವನ್ನು ನಾಶಪಡಿಸಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಹಾಗೆಯೇ, ಧಾರ್ಮಿಕ ನಂಬಿಕೆ ಹಾಗೂ ಮನಸ್ಸಿನ ವಿಷಯಗಳನ್ನು ನ್ಯಾಯಾಂಗ ಚರ್ಚೆಗೆ ಒಳಪಡಿಸಲು ಸಾಧ್ಯವಿಲ್ಲವೆಂದು ಕೋರ್ಟ್ ಹೇಳಿದೆ.

ಮಹಿಳೆಯರ ಮೇಲಿನ ಭೇದಭಾವ ಸೇರಿದಂತೆ ವಿವಿಧ ಧಾರ್ಮಿಕ ಪ್ರಶ್ನೆಗಳ ವಿಚಾರಣೆಯನ್ನು ನಡೆಸುತ್ತಿರುವ ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠ, ದೀರ್ಘಕಾಲದಿಂದ ರೂಪುಗೊಂಡ ಕೆಲವು ಆಚರಣೆಗಳು ಧರ್ಮದ ಅವಿಭಾಜ್ಯ ಅಂಗಗಳಾಗಿ ಪರಿಗಣಿಸಲ್ಪಟ್ಟಿವೆ ಎಂದು ಅಭಿಪ್ರಾಯಪಟ್ಟಿತು. ಮುಖ್ಯ ನ್ಯಾ.ಸೂರ್ಯಕಾಂತ್ ನೇತೃತ್ವದ ಪೀಠವು ವಿಚಾರಣೆ ವೇಳೆ, ಧಾರ್ಮಿಕ ಸ್ವಾತಂತ್ರ್ಯದ ವಿಚಾರಗಳಲ್ಲಿ ಸಮಾನತೆ ತತ್ವವನ್ನು ಅನ್ವಯಿಸುವಾಗ, ಅದು ಆ ಧರ್ಮದ ಮೂಲ ಆಚರಣೆಗಳನ್ನು ಸಂಪೂರ್ಣವಾಗಿ ನಿರಾಕರಿಸುವ ಮಟ್ಟಕ್ಕೆ ಹೋಗಬಹುದೇ ಎಂಬ ಪ್ರಶ್ನೆ ಎತ್ತಿತು.

ಪೀಠವು ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ಸಂಬಂಧಿಸಿದ ಸಂವಿಧಾನಿಕ ಆಶಯವನ್ನು ಉಲ್ಲೇಖಿಸಿ, ರಾಜ್ಯವು ಕಾನೂನು ರೂಪಿಸದಿದ್ದರೆ ನ್ಯಾಯಾಂಗವು ಕ್ರಮೇಣ ಸಮಾನತೆ ತತ್ವವನ್ನು ಜಾರಿಗೊಳಿಸಬಹುದೇ ಎಂಬುದರ ಬಗ್ಗೆ





ಚರ್ಚಿಸಿತು. ಈ ಸಂದರ್ಭದಲ್ಲಿ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರು, ವಿವಿಧ ರಾಜ್ಯಗಳು ವಿವಾಹ ಮತ್ತು ವಾರಸುದಾರಿಕೆ ಹಕ್ಕುಗಳನ್ನು ನಿಯಂತ್ರಿಸಲು ತಮ್ಮದೇ ನಿಯಮಗಳನ್ನು ಜಾರಿಗೆ ತಂದಿರುವುದನ್ನು ಉಲ್ಲೇಖಿಸಿ, ಸಮಾಜ ಸಿದ್ಧವಾಗುವಾಗ ಸಂಸತ್ತು ಏಕರೂಪ ನಾಗರಿಕ ಸಂಹಿತೆಯನ್ನು ತರಲಿದೆ ಎಂದು ಹೇಳಿದರು.

ವಿಚಾರಣೆ ವೇಳೆ ಹಿರಿಯ ವಕೀಲರು, ವ್ಯಕ್ತಿಗಳಿಗೆ ಸಂವಿಧಾನ ನೀಡಿರುವ ಧಾರ್ಮಿಕ ಸ್ವಾತಂತ್ರ್ಯವು ಧಾರ್ಮಿಕ ಸಂಸ್ಥೆಗಳ ಹಕ್ಕಿಗಿಂತ ಮೇಲು ಎಂಬುದಾಗಿ ವಾದಿಸಿದರು. ಆದರೆ ನ್ಯಾಯಮೂರ್ತಿಗಳು, ಶತಮಾನಗಳಿಂದ ನಡೆದು ಬಂದ ಆಚರಣೆಗಳನ್ನು ಏಕಾಏಕಿ ಪ್ರಶ್ನಿಸುವುದು ಸೂಕ್ತವೇ ಎಂಬ ಪ್ರಶ್ನೆಯನ್ನು ಮುಂದಿಟ್ಟರು. ಕೆಲವು ಆಚರಣೆಗಳು ಕಾಲಕ್ರಮೇಣ ಧರ್ಮದ ಮೂಲಭೂತ ಅಂಶಗಳಾಗಿ ರೂಪುಗೊಂಡಿರುವುದರಿಂದ, ಇತಿಹಾಸವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲು ಸಾಧ್ಯವಿಲ್ಲ ಎಂದು ಪೀಠ ಅಭಿಪ್ರಾಯಪಟ್ಟಿತು.

ನ್ಯಾ. ನಾಗರತ್ನ ಅವರು, ಸುಧಾರಣೆ ಹೆಸರಿನಲ್ಲಿ ಧರ್ಮವನ್ನು ಖಾಲಿ ಮಾಡಬಾರದು ಎಂದು ಎಚ್ಚರಿಕೆ ನೀಡಿದರು. ಶತಮಾನಗಳಿಂದ ನಡೆದುಬಂದ ಆಚರಣೆಗಳನ್ನು ಸಂಪೂರ್ಣವಾಗಿ ತೆರೆಯುವುದು ಧರ್ಮದ ಅಸ್ತಿತ್ವವನ್ನೇ ಹಾನಿಗೊಳಿಸಬಹುದು ಎಂದರು. ಇದೇ ವೇಳೆ, ಧಾರ್ಮಿಕ ಆಚರಣೆಗಳು ಮಹಿಳೆಯರ ಹಕ್ಕುಗಳಿಗೆ ಹಾನಿಯಾಗಿದ್ದರೆ ಪರಿಹಾರವೇನು ಎಂಬ ಪ್ರಶ್ನೆಯನ್ನೂ ವಕೀಲರು ಎತ್ತಿದರು.

ಇದಲ್ಲದೆ, ದೇವಾಲಯ ಪ್ರವೇಶ ಹಕ್ಕಿನ ವಿಚಾರದಲ್ಲಿ ಭಕ್ತ ಹಾಗೂ ಭಕ್ತರಲ್ಲದವರ ನಡುವಿನ ವ್ಯತ್ಯಾಸವನ್ನು ಪರಿಗಣಿಸುವ ಅಗತ್ಯವಿದೆ ಎಂಬ ಅಭಿಪ್ರಾಯವೂ ವ್ಯಕ್ತವಾಯಿತು. ದೀರ್ಘಕಾಲದಿಂದ ರೂಢಿಯಾದ ಆಚರಣೆಗಳನ್ನು ಏಕಾಏಕಿ ಪ್ರಶ್ನಿಸುವುದರಿಂದ ಉಂಟಾಗುವ ಪರಿಣಾಮಗಳನ್ನೂ ಪೀಠ ಗಮನಿಸಿತು.

ಮಾಜಿ ಅಪರಾಧಿ ಈಗ ಹೈ ವಕೀಲ!

ಚೆನ್ನೈ: ರಾಜೀವ್ ಗಾಂಧಿ ಹತ್ಯೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸಿ ಬಿಡುಗಡೆಯಾಗಿದ್ದ ಎ.ಜಿ. ಪೇರಾರಿವಾಲನ್ ಸೋಮವಾರ ತಮಿಳುನಾಡು ಮತ್ತು ಪುದುಚೇರಿ ಬಾರ್ ಕೌನ್ಸಿಲ್‌ನಲ್ಲಿ ವಕೀಲರಾಗಿ ನೋಂದಾಯಿಸಿ ಕೊಂಡಿದ್ದಾರೆ. 54 ವರ್ಷದ ಪೇರಾರಿವಾಲನ್ ಏಪ್ರಿಲ್ 27 ರಂದು ಅಧಿಕೃತವಾಗಿ ಕಪ್ಪು ಕೋಟ್ ಧರಿಸಿದರು. ಈ ಸಮಾರಂಭದಲ್ಲಿ ಮದ್ರಾಸ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಸುಶ್ರುತ್ ಅರವಿಂದ್ ಧರ್ಮಾಧಿಕಾರಿ ಅವರು ಭಾಗವಹಿಸಿದ್ದರು. ಬಾರ್ ಕೌನ್ಸಿಲ್ ಅಧ್ಯಕ್ಷ ಪಿ.ಎಸ್. ಅಮಲ್‌ರಾಜ್ ಮತ್ತು ಉಪಾಧ್ಯಕ್ಷ ಎಸ್. ಪ್ರಭಾಕರನ್ ಉಪಸ್ಥಿತರಿದ್ದರು. ವಕೀಲ ಸಿ.ಕೆ. ಚಂದ್ರಶೇಖರ್ ನೋಂದಣಿ ಪ್ರಕ್ರಿಯೆಯನ್ನು ಮಂಡಿಸಿದರೆ, ಕೆ. ಬಾಲು ಪ್ರಮಾಣ ವಚನ ಬೋಧಿಸಿದರು.

ಪೇರಾರಿವಾಲನ್ ಬೆಂಗಳೂರಿನ ಡಾ. ಬಿ.ಆರ್. ಅಂಬೇಡ್ಕರ್ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಮುಗಿಸಿದ್ದಾರೆ. ಅವರು 2025ರಲ್ಲಿ ಅಖಿಲ ಭಾರತ ಬಾರ್ ಪರೀಕ್ಷೆಯಲ್ಲಿ (ಎಐಬಿಇ) ಉತ್ತೀರ್ಣರಾಗಿದ್ದಾರೆ. ಇವರ ಕಾನೂನು ವೃತ್ತಿಯ ಮೂಲಕ ಕೈದಿಗಳಿಗೆ ಕಾನೂನು ನೆರವು ನೀಡಲು ಬಯಸಿದ್ದಾರೆ.

ಕಿರುಸುದ್ದಿ

ಕಲ್ಲಾಡಿ ಮಾಡದಲ್ಲಿ ಧ್ವಜಸ್ತಂಭದ ಪ್ರತಿಷ್ಠಾ ಬ್ರಹ್ಮಕಲಶಾಭಿಷೇಕ, ಕಾಲಾವಧಿ ನೇಮೋತ್ಸವ

ಮಂಗಳೂರು: ಇರಾ ಗ್ರಾಮದ ಶ್ರೀ ಅರಸು ಕುರಿಯಾಡಿತ್ತಾಯ ಮೂವರು ದೈವಂಗಳ ಕಲ್ಲಾಡಿ ಮಾಡದಲ್ಲಿ ನೂತನವಾಗಿ ನಿರ್ಮಿಸಿದ ಶಾಶ್ವತ ಧ್ವಜಸ್ತಂಭದ ಪ್ರತಿಷ್ಠಾ ಬ್ರಹ್ಮಕಲಶಾಭಿಷೇಕ ಹಾಗೂ ಅಶ್ವತ್ಥ ಕಟ್ಟೆಗಳ ಅಶ್ವತ್ಥೋಪನಯನ ಮತ್ತು ಕಾಲಾವಧಿ ನೇಮೋತ್ಸವ ಏ.29ರಂದು ಆರಂಭವಾಗಿದ್ದು, ಮೇ 5ರವರೆಗೆ ಬ್ರಹ್ಮಶ್ರೀ ಬಡಾಜೆಬೀಡು ಗೋಪಾಲಕೃಷ್ಣ ತಂತ್ರಿ ಅವರ ಪೌರೋಹಿತ್ಯದಲ್ಲಿ ನಡೆಯಲಿದೆ. ಏ.30ರಂದು ಬೆಳಗ್ಗೆ ಗಣಪತಿ ಹೋಮ, ನಾಗತಂಬಿಲ ನಡೆಯಲಿದೆ. ಸಂಜೆ ಬ್ರಹ್ಮಕಲಶಾಧಿವಾಸ, ಧ್ವಜಸ್ತಂಭದ ಅಧಿವಾಸ, ಸಂಜೆ 6.30ಕ್ಕೆ ಬಾವಬೀಡಿನಿಂದ ಕಿರುವಾಳು ಕಲ್ಲಾಡಿ ಮಾಡಕ್ಕೆ ಆಗಮಿಸಲಿದೆ. ಮೇ 1ರಂದು ಬೆಳಗ್ಗೆ ಅರಸು ಕುರಿಯಾಡಿತ್ತಾಯ ಮೂವರು ದೈವಂಗಳಿಗೆ ಬ್ರಹ್ಮಕಲಶಾಭಿಷೇಕ, ಬೆಳಗ್ಗೆ 10.35ಕ್ಕೆ ಧ್ವಜಸ್ತಂಭದ ಪ್ರತಿಷ್ಠಾ ಬ್ರಹ್ಮಕಲಶಾಭಿಷೇಕ ನಡೆಯಲಿದೆ. ಮಧ್ಯಾಹ್ನ 12.05ಕ್ಕೆ ಅಶ್ವತ್ಥ ಕಟ್ಟೆಗಳ ಅಶ್ವತ್ಥೋಪನಯನ ವಿವಾಹ ನಡೆಯಲಿದೆ. ಮೇ 2ರಂದು ಸಂಜೆ ಧ್ವಜಾರೋಹಣ, ರಾತ್ರಿ 9ಕ್ಕೆ ಶ್ರೀ ದೈವಂಗಳ ನೇಮ, ಮೇ 3ರಂದು ರಾತ್ರಿ 9ಕ್ಕೆ ಶ್ರೀ ಅರಸು ಕುರಿಯಾಡಿತ್ತಾಯ ದೈವದ ನೇಮ, ಮೇ 4ರಂದು ರಾತ್ರಿ 9 ಗಂಟೆಗೆ ಶ್ರೀ ದೈವಂಗಳಿಗೆ ಕೆರೆ ದೀಪೋತ್ಸವ, ಮೇ 5ರಂದು ಸಂಜೆ ಶ್ರೀ ಜುಮಾದಿ ಬಂಟ ದೈವಗಳ ನೇಮ, ಸಂಜೆ 6ಕ್ಕೆ ಚೆಂಡು, ರಾತ್ರಿ 9.30ಕ್ಕೆ ಶ್ರೀ ದೈವಂಗಳ ವಲಸರಿ ನೇಮ ಆಗಿ ಧ್ವಜಾವರೋಹಣ ನಡೆಯಲಿದೆ ಎಂದು ಕ್ಷೇತ್ರದ ಪ್ರಕಟಣೆ ತಿಳಿಸಿದೆ.

ನೀಟ್ ಪರೀಕ್ಷೆ: ನಿಷೇಧಾಜ್ಞೆ ಜಾರಿ

ಮಂಗಳೂರು: 2026ನೇ ಸಾಲಿನ ನೀಟ್ (ಯುಜಿ) ಪರೀಕ್ಷೆಯು ಮೇ 3ರಂದು ಮಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ 18 ಕೇಂದ್ರಗಳಲ್ಲಿ ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಪರೀಕ್ಷಾ ಕೇಂದ್ರದ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಪೊಲೀಸ್ ಉಪ ಆಯುಕ್ತ ಮಿಥುನ್ ಎಚ್.ಎಸ್ ಆದೇಶ ಹೊರಡಿಸಿದ್ದಾರೆ. ಪರೀಕ್ಷೆಗಳು ನಡೆಯುವ ಸಂದರ್ಭದಲ್ಲಿ ಯಾವುದೇ ಕಾನೂನು ಬಾಹಿರ ಚಟುವಟಿಕೆ, ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ. ಪರೀಕ್ಷೆಗಳು ಸುಸೂತ್ರವಾಗಿ ನಡೆಯುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪರೀಕ್ಷೆ ನಡೆಯುವ ಕೇಂದ್ರದ 200 ಮೀಟರ್ ಸುತ್ತಲಿನ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ ಎಂದವರು ತಿಳಿಸಿದ್ದಾರೆ.

ಕಾಡಾನೆ ದಾಳಿಗೆ ಹಸು ಬಲಿ

ಮಡಿಕೇರಿ: ಕಾಡಾನೆ ದಾಳಿಗೆ ಸಿಲುಕಿ ಗರ್ಭಿಣಿ ಹಸುವೊಂದು ಬಲಿಯಾಗಿರುವ ಘಟನೆ ಕುಶಾಲನಗರ ತಾಲೂಕಿನ ನೆಲ್ಯಹುದಿಕೇರಿ ಗ್ರಾಮದ ನಾಲ್ಕನೇ ವಿಭಾಗದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಶೇಖರ್ ಅವರ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದ ಎಂಟು ತಿಂಗಳ ಗರ್ಭಿಣಿ ಹಸುವನ್ನು ಕಾಡಾನೆ ತುಳಿದು ಕೊಂದು ಹಾಕಿದೆ. ಘಟನೆಯ ಮಾಹಿತಿ ತಿಳಿದ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ. ಹೈನುಗಾರಿಕೆಯನ್ನು ನಂಬಿ ಜೀವನ ನಡೆಸುತ್ತಿರುವ ರೈತ ಕುಟುಂಬಕ್ಕೆ ತಕ್ಷಣ ಸೂಕ್ತ ಪರಿಹಾರ ನೀಡುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಅತ್ತೂರು ಮೂಡ್ರಗುತ್ತು ಕುಟುಂಬಿಕರು, ಕೆಮ್ರಾಲ್, ಸುರಗಿರಿ ದೇವಸ್ಥಾನದ ಬಳಿ.
2. ಸುಭಾಷ್ ಶೆಟ್ಟಿ, ಉಳ್ಳೂರು ಪಡುಮನೆ, ಪಡುಬಿದ್ರಿ ಪಾದೆಬೆಟ್ಟು, ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವಠಾರ.
3. ಸುಂದರ ಪೂಜಾರಿ, 'ವಸುಧಾ ನಿಲಯ', ಗೋಳ್ತಮಜಲು, ಶ್ರೀ ಗಣೇಶ್ ಭಜನಾ ಮಂದಿರ ಕಲ್ಲಡ್ಕ.
4. ಪದ್ಮ ಪೂಜಾರಿ ಮತ್ತು ಮಕ್ಕಳು, ನೂಯಿ ಮನೆ, ಬಡಕೋಡಿ, ಪಡಂಗಡಿ, ಬೆಳ್ತಂಗಡಿ (ತಾ).
5. ಬಿ. ರಾಜೇಶ್ ಎಲ್. ನಾಯಕ್, ಪತ್ನಿ ಮತ್ತು ಸಹೋದರರು, ಶ್ರೀ ಸತ್ಯನಾರಾಯಣ ಲಂಚ್ ಹೋಂ, ಬಿ.ಸಿ.ರೋಡ್ – ಶ್ರೀ ರಕ್ತೇಶ್ವರೀ ದೇವಿ ದೇವಸ್ಥಾನ ವಠಾರ.
6. ವರುಣ್ ಮೇಲಾಂಟ, ಸೆಂಚುರಿ ಎಥೋಸ್, ಸಹಕಾರ ನಗರದ ಎದುರು ಬೆಂಗಳೂರು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
7. ಶ್ರೀಧರ ಶೆಟ್ಟಿ, 'ದೇವಿ ಪ್ರಸಾದ್', ಹರಿಯಾಳ ಪೇಟೆ, ಮಾಣಿಲ, ಕಲ್ಲಮುಂಡ್ಕೂರು.

ಶ್ರೀ ಧರ್ಮಸ್ಥಳ ಮೇಳ
11ನೇ ಉಳ್ಳೂರಿನಲ್ಲಿ
ಶ್ರೀಮತಿ ಗಿರಿಜಾ, ಶ್ರೀ ಆನಂದ ಗಾಣಿಗ ಮತ್ತು ಮಕ್ಕಳು
ಶ್ರೀ ನಾಗಾನಂದ ಕಾಕ್ತೋಟ ಮನೆ

ಶ್ರೀ ಸಾಲಿಗ್ರಾಮ ಮೇಳ
ಕಿರಿಮಂಜೇಶ್ವರದಲ್ಲಿ- **ಸ್ವಪ್ನ ಮಂಟಪ**

ಶ್ರೀ ಪೆರ್ಡೂರು ಮೇಳ
ಕಾಲ್ತೋಡುವಿನಲ್ಲಿ
ಇಂದ್ರಜಿತು, ಭೀಷ್ಮ ವಿಜಯ

ಶ್ರೀ ಹನುಮಗಿರಿ ಮೇಳ
ಕೊರ್ಡಾಡಿ –ಅಂಪಾರಿನಲ್ಲಿ

ಶ್ರೀ ಪಾವಂಜೆ ಮೇಳ
ಕಿನ್ನಿಗೋಳಿಯಲ್ಲಿ- **ಶ್ರೀ ದೇವಿ ಮಹಾತ್ಮೆ**

ಮಹಿಳಾ ಮೀಸಲಾತಿ ಮಸೂದೆಯ ಸೋಲಿಗೆ ಕಾರಣವಾದ ವಿಪಕ್ಷಗಳ ವಿರುದ್ಧ ಬಿಜೆಪಿ ಕಾಸರಗೋಡು ಜಿಲ್ಲಾ ಸಮಿತಿ ಪ್ರತಿಭಟನೆ

ದೇಶದ ಜನತೆಗೆ ಪ್ರತಿಪಕ್ಷಗಳ ದ್ರೋಹ: ರಂಜಿತ್

ಕಾಸರಗೋಡು: ಮಹಿಳಾ ಮೀಸಲಾತಿ ಮಸೂದೆಯನ್ನು ವಿರೋಧಿಸುವ ಮೂಲಕ ಹೆಚ್ಚಿನ ಪ್ರತಿನಿಧಿಗಳನ್ನು ಪಡೆಯಬಹುದಾಗಿದ್ದ ದಕ್ಷಿಣ ಭಾರತದ ರಾಜ್ಯಗಳ ಜನರಿಗೆ ಕಾಂಗ್ರೆಸ್, ಸಿಪಿಎಂ ಸೇರಿದಂತೆ ದೇಶದ ಪ್ರತಿಪಕ್ಷಗಳು ಮೋಸ ಮಾಡಿವೆ. ಕಾಂಗ್ರೆಸ್ ಸಹಿತ ವಿರೋಧ ಪಕ್ಷಗಳು ಈ ಮಸೂದೆಯನ್ನು ಶಾಶ್ವತವಾಗಿ ತಡೆಯಲು ಸಾಧ್ಯವಿಲ್ಲ ಎಂದು ಬಿಜೆಪಿ ಕೇರಳ ರಾಜ್ಯ ಕಾರ್ಯದರ್ಶಿ ಕೆ.ರಂಜಿತ್ ಹೇಳಿದ್ದಾರೆ.

ಮಹಿಳಾ ಮೀಸಲಾತಿ ಮಸೂದೆಯ ಸೋಲಿಗೆ ಕಾರಣವಾದ ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳ ವಿರುದ್ಧ ಬಿಜೆಪಿ ಕಾಸರಗೋಡು ಜಿಲ್ಲಾ ಸಮಿತಿಯು ಹೊಸ ಬಸ್ ನಿಲ್ದಾಣದ ಪರಿಸರದಲ್ಲಿ ಬುಧವಾರ ಸಂಜೆ ಆಯೋಜಿಸಿದ್ದ ಪ್ರತಿಭಟನಾ ಸಾರ್ವಜನಿಕ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈ ಮಸೂದೆ ಅಂಗೀಕಾರವಾಗಿದ್ದರೆ ಕೇರಳಕ್ಕೆ 30 ಮಂದಿ ಲೋಕಸಭಾ ಸಂಸದರು ಸಿಗುತ್ತಿದ್ದರು. ಮಸೂದೆಯ ಸೋಲಿನಿಂದಾಗಿ ರಾಜ್ಯದ ಸಂಸದರ ಸ್ಥಾನಗಳ ಸಂಖ್ಯೆಯು ಪ್ರಸ್ತುತವಿರುವ 20ರಿಂದ ಕಡಿಮೆಯಾಗುವ ಸಾಧ್ಯತೆಯಿದೆ. ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸುವಲ್ಲಿ ಯಾವುದೇ ರಾಜಕೀಯ ಆಸಕ್ತಿ ಇಲ್ಲ. 2026ರಲ್ಲಿ ಜನಗಣತಿ ಪೂರ್ಣಗೊಂಡ ನಂತರ ಕ್ಷೇತ್ರ ವಿಂಗಡಣೆಯನ್ನು ಅದರ ಆಧಾರದ ಮೇಲೆ ತಕ್ಷಣವೇ ಮಾಡಬೇಕು. ಅದರ ನಂತರ ಮಹಿಳಾ ಮೀಸಲಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಿದರೆ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಶೇಕಡಾ 33ರಷ್ಟು ಮೀಸಲಾತಿಯನ್ನು ಜಾರಿಗೆ ತರಲು ಸಾಧ್ಯವಾಗುತ್ತಿರಲಿಲ್ಲ. ಆದಕ್ಕಾಗಿಯೇ ಈ ಮಸೂದೆಯನ್ನು ವಿಳಂಬವಿಲ್ಲದೆ ಸಂಸತ್ತಿನಲ್ಲಿ ಮಂಡಿಸಲಾಯಿತು. ಶಾಬಾನೋ ಪ್ರಕರಣ ಮತ್ತು ತ್ರಿವಳಿ ತಲಾಖ್ ಸೇರಿದಂತೆ ಕಾಂಗ್ರೆಸ್‌ನ ಮಹಿಳಾ ವಿರೋಧಿ ನಿಲುವುಗಳು ಹಿಂದೆಯೂ ಸ್ಪಷ್ಟವಾಗಿದ್ದವು ಎಂದು ಅವರು ಗಮನ ಸೆಳೆದರು.

370ನೇ ವಿಧಿಯನ್ನು ರದ್ದುಪಡಿಸುವುದು ಮತ್ತು ತೆರಿಗೆ ಸುಧಾರಣೆಗಳ ಅನುಷ್ಠಾನ ಸೇರಿದಂತೆ ಐತಿಹಾಸಿಕ ಸುಧಾರಣೆಗಳಲ್ಲಿ ಒಂದಾಗಬೇಕಿದ್ದ ಮಸೂದೆಯನ್ನು ವಿರೋಧ ಪಕ್ಷಗಳು ಸೋಲಿಸಿವೆ ಮತ್ತು ಇದಕ್ಕಾಗಿ ಅವರು ಭಾರೀ ಬೆಲೆ ತೆರಬೇಕಾಗುತ್ತದೆ ಎಂದು ಕೆ.ರಂಜಿತ್ ತಿಳಿಸಿದ್ದಾರೆ.

ಪ್ರತಿಭಟನಾ ಸಭೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ರಾಷ್ಟ್ರೀಯ ಪರಿಷತ್ ಸದಸ್ಯೆ ಪ್ರಮೀಳಾ ಸಿ.ನಾಯ್ಕ್, ರಾಜ್ಯ ಸಮಿತಿ ಸದಸ್ಯರಾದ ಸವಿತಾ ಟೀಚರ್, ಕೋಳಾರು ಸತೀಶ್ಚಂದ್ರ ಭಂಡಾರಿ, ಜಿಲ್ಲಾ ಕೋಶಾಧಿಕಾರಿ ವೀಣಾ ಅರುಣ್ ಶೆಟ್ಟಿ, ಜಿಲ್ಲಾ ಉಪಾಧ್ಯಕ್ಷೆ ಎಚ್.ಆರ್.ಸುಕನ್ಯಾ, ಕಾರ್ಯದರ್ಶಿಗಳಾದ ಪುಷ್ಪಾ ಗೋಪಾಲನ್, ಪ್ರಮೀಳಾ ಮಜಲ್, ಅಶ್ವಿನಿ ಕೆ.ಎಂ., ಮಧೂರು ಗ್ರಾಮ ಪಂಚಾಯತ್ ಅಧ್ಯಕ್ಷೆ ಸುಜ್ಞಾನಿ ಎಸ್. ಶ್ಯಾನುಭೋಗ್, ಬೆಳ್ಳೂರು ಗ್ರಾಮ ಪಂಚಾಯತ್ ಅಧ್ಯಕ್ಷೆ ಮಾಲಿನಿ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಕೆ.ಎಸ್.ರಮಣಿ, ಜಯಂತಿ ಶೆಟ್ಟಿ, ಎ.ವೇಲಾಯುಧನ್, ಅನಿತಾ ಆರ್.ನಾಯ್ಕ್, ಪ್ರೇಮಲತಾ ಎಸ್. ಮುಂತಾದವರು ಮಾತನಾಡಿದರು.



ಬೃಹತ್ ಪ್ರತಿಭಟನಾ ಮೆರವಣಿಗೆ
ಕಾಸರಗೋಡು ತಾಳಿಪಡ್ಪು ಮೈದಾನದಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆಯಲ್ಲಿ ನೂರಾರು ಮಂದಿ ಮಹಿಳೆಯರು ಭಾಗವಹಿಸಿದ್ದರು. ಕಾಸರಗೋಡು ಹೊಸ ಬಸ್ ನಿಲ್ದಾಣ ಪರಿಸರದಲ್ಲಿ ಮೆರವಣಿಗೆಯು ಜನಸಾಗರವಾಗಿ ಸಮಾಪ್ತಿಯಾಯಿತು.

ವಿರೋಧ ಪಕ್ಷಗಳ ಬೂಟಾಟಿಕೆ ಮುಖ ಬಯಲಾಗಿದೆ

ರಾಷ್ಟ್ರದ ವಿರೋಧ ಪಕ್ಷಗಳ ಮಹಿಳಾ ಪರ ನಿಲುವು ಕೇವಲ ಮಾತಿನಲ್ಲಿ ಮಾತ್ರ ಸೀಮಿತವಾಗಿದ್ದು, ಸಂಸತ್ತಿನಲ್ಲಿ ಮಹಿಳಾ ಮೀಸಲಾತಿಯನ್ನು ವಿರೋಧಿಸುವ ಮೂಲಕ ಅವರ ಬೂಟಾಟಿಕೆ ಬಯಲಾಗಿದೆ ಎಂದು ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಹೇಳಿದ್ದಾರೆ. ಸ್ವಚ್ಛ ಭಾರತ್, ಜನ್ ಧನ್ ಖಾತೆ ಮತ್ತು ಮುದ್ರಾ ಯೋಜನೆಯಂತಹ ಯೋಜನೆಗಳ ಮೂಲಕ ಮಹಿಳೆಯರ ಕಲ್ಯಾಣವನ್ನು ಖಚಿತಪಡಿಸಿದ ನರೇಂದ್ರ ಮೋದಿ ಸರಕಾರದ ಅತ್ಯುತ್ತಮ ನೀತಿಗಳಲ್ಲಿ ಮಹಿಳಾ ಮೀಸಲಾತಿ ಒಂದಾಗುತ್ತಿತ್ತು. ಬಿಜೆಪಿ ಹೊರತುಪಡಿಸಿ ಇತರ ರಾಜಕೀಯ ಪಕ್ಷಗಳಲ್ಲಿರುವ ಸಾಮಾನ್ಯ ಮಹಿಳಾ ನಾಯಕಿಯರು ಉನ್ನತ ಹುದ್ದೆಗಳನ್ನು ತಲುಪಲು ಸಾಧ್ಯವಾಗುವುದಿಲ್ಲ. ಲೋಕಸಭೆ ಮತ್ತು ವಿಧಾನಸಭೆಯಲ್ಲಿ ಗೆಲ್ಲುವ ಅವಕಾಶವಿರುವ ಸ್ಥಾನಗಳನ್ನು ಕೂಡಾ ವಿರೋಧ ಪಕ್ಷಗಳು ಮಹಿಳೆಯರಿಗೆ ನೀಡುವುದಿಲ್ಲ ಎಂದು ಎಂ.ಎಲ್.ಅಶ್ವಿನಿ ಗಮನ ಸೆಳೆದರು.

ರಾಜ್ಯ ಮುಖ್ಯ ಕಾರ್ಯದರ್ಶಿಗೆ ಕಿಶೋರ್ ಕುಮಾರ್ ಪುತ್ತೂರು ಮನವಿ

ರಾಜ್ಯ ಬಜೆಟ್‌ನಲ್ಲಿ ಘೋಷಿಸಿದ ಖಾಲಿ ಹುದ್ದೆಗಳ ಭರ್ತಿ ಪ್ರಕ್ರಿಯೆ ಪ್ರಾರಂಭಿಸಿ

ಪುತ್ತೂರು: ರಾಜ್ಯ ಸರ್ಕಾರವು 2026–27ನೇ ಸಾಲಿನ ಬಜೆಟ್‌ನಲ್ಲಿ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಸುಮಾರು 56,432 ಖಾಲಿ ಹುದ್ದೆಗಳನ್ನು ಭರ್ತಿಗೊಳಿಸುವುದಾಗಿ ಘೋಷಿಸಿದ್ದು ಇದುವರೆಗೂ ಈ ಬಗ್ಗೆ ಯಾವುದೇ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸದ ಕಾರಣ ಮತ್ತು ಮಂಗಳೂರಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಪ್ರಾದೇಶಿಕ ಕಚೇರಿ ಸ್ಥಾಪಿಸುವಂತೆ ಕರ್ನಾಟಕ ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಅವರು ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

ಮನವಿಯಲ್ಲಿ ಪ್ರಮುಖವಾಗಿ, ಸದರಿ ಹುದ್ದೆಗಳ ಭರ್ತಿ ಪ್ರಕ್ರಿಯೆಯನ್ನು ಶೀಘ್ರವಾಗಿ ಆರಂಭಿಸಿ, ಪಾರದರ್ಶಕ ಹಾಗೂ ಕಾಲಮಿತಿಯೊಳಗೆ ಪೂರ್ಣಗೊಳಿಸುವುದು ಅತ್ಯಂತ ಅಗತ್ಯವಾಗಿದ್ದು, ಇದರಿಂದ ನಿರುದ್ಯೋಗ ಸಮಸ್ಯೆಗೆ ಪರಿಹಾರ ದೊರೆಯುವುದರ ಜೊತೆಗೆ ಸರ್ಕಾರದ ಇಲಾಖೆಗಳ ಕಾರ್ಯಕ್ಷಮತೆ ಹೆಚ್ಚಳವಾಗುತ್ತದೆ. ಕರ್ನಾಟಕ ಕರಾವಳಿಯ ಭಾಗವಾದ ದಕ್ಷಿಣ ಕನ್ನಡ, ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರತಿಭಾವಂತ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದು, ಸರ್ಕಾರಿ ಉದ್ಯೋಗದ ನೇಮಕಾತಿಯ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗುತ್ತಿದ್ದಾರೆ. ಆದರೂ ಕರ್ನಾಟಕ ಲೋಕಸೇವಾ ಆಯೋಗದ ಎಲ್ಲಾ ಪ್ರಮುಖ ಕಾರ್ಯಗಳು ಬೆಂಗಳೂರು ಕೇಂದ್ರಿತವಾಗಿರುವುದರಿಂದ, ಕರಾವಳಿ ಭಾಗದ ಅಭ್ಯರ್ಥಿಗಳಿಗೆ ಪ್ರಯಾಣ ಹಾಗೂ ಇತರ ಸೌಲಭ್ಯಗಳಲ್ಲಿ ಅನಾನುಕೂಲ ಉಂಟಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಕೆಪಿಎಸ್‌ಸಿ ಪ್ರಾದೇಶಿಕ ಕಚೇರಿಯನ್ನು ಮಂಗಳೂರಿನಲ್ಲಿ ಸ್ಥಾಪಿಸುವುದರಿಂದ ಕರಾವಳಿ ಭಾಗದ ಯುವಜನರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಈ ಎರಡೂ ಕ್ರಮಗಳು ರಾಜ್ಯದ ಆಡಳಿತ ವ್ಯವಸ್ಥೆಯನ್ನು ಬಲಪಡಿಸುವುದರ ಜೊತೆಗೆ ಯುವಜನರಿಗೆ ಉದ್ಯೋಗಾವಕಾಶಗಳನ್ನು ವಿಸ್ತರಿಸುವಲ್ಲಿ ಮಹತ್ವದ ಪಾತ್ರ ವಹಿಸುವುದರಿಂದ ಮೇಲ್ಕಂಡ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಿ ತ್ವರಿತವಾಗಿ ಕ್ರಮ ಕೈಗೊಳ್ಳಬೇಕು ಎಂದು ಕಿಶೋರ್ ಕುಮಾರ್ ಪುತ್ತೂರು ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಕಳೆದ ಡಿಸೆಂಬರ್‌ನಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ ಶಾಸಕರು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳು ಮತ್ತು ನೇಮಕಾತಿಯ ವಿವರವನ್ನು ಒದಗಿಸುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಚುಕ್ಕೆ ಗುರುತಿಲ್ಲದ ಪ್ರಶ್ನೆಯ ಮೂಲಕ ಕೇಳಿದಾಗ, ರಾಜ್ಯದ 43 ವಿವಿಧ ಇಲಾಖೆಗಳಲ್ಲಿ ಸುಮಾರು 2,84,881 ಹುದ್ದೆಗಳು ಖಾಲಿ ಇರುವುದಾಗಿ ತಿಳಿದು ಬಂದಿತ್ತು. ಈ ಹುದ್ದೆಗಳನ್ನು ಭರ್ತಿಗೊಳಿಸುವಂತೆ ಶಾಸಕರು ಮುಖ್ಯ ಕಾರ್ಯದರ್ಶಿಯವರಿಗೆ ಮನವಿಯನ್ನು ನೀಡಿದ್ದರು. ರಾಜ್ಯ ಸರ್ಕಾರವು 2026–27 ನೇ ಸಾಲಿನ ಬಜೆಟ್‌ನಲ್ಲಿ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಸುಮಾರು 56,432 ಖಾಲಿ ಹುದ್ದೆಗಳನ್ನು ಪ್ರಸ್ತುತ ವರ್ಷ ಭರ್ತಿಗೊಳಿಸುವುದಾಗಿ ಘೋಷಿಸಿತ್ತು.



ವಿದೇಶಿ ಪ್ರವಾಸಗಳಲ್ಲಿ 20,000 ರುಪಾಯಿಗಳವರೆಗೆ ದರ ಕಡಿತ !

ಅಡಿಗಾಸ್‌ನಿಂದ ಬಂಪರ್ ಕೊಡುಗೆ ಪ್ರವಾಸಿಗರಿಗೆ ಭಾರಿ ಡಿಸ್ಕೌಂಟ್ ಆಫರ್!

ಅಡಿಗಾಸ್ ಯಾತ್ರಾ

ಬೆಂಗಳೂರು: ರಾಜ್ಯದ ಪ್ರತಿಷ್ಠಿತ ಟ್ರಾವೆಲ್ ಸಂಸ್ಥೆಯಾದ ಅಡಿಗಾಸ್ ಯಾತ್ರಾ ಇದೀಗ ತನ್ನ ಪ್ರವಾಸಿಗರಿಗೆ ಬಂಪರ್ ರಿಯಾಯಿತಿಯ ವಿಶೇಷ ಕೊಡುಗೆಯನ್ನು ಘೋಷಿಸಿದೆ. ವಿದೇಶ ಪ್ರವಾಸದಲ್ಲಿ ಅದ್ದೂರಿ, ಅತ್ಯಾಧುನಿಕ ಸೌಲಭ್ಯಗಳು, ಪುಷ್ಕಳ ಊಟೋಪಚಾರ ಮತ್ತು ಅದ್ಭುತ ಪ್ರವಾಸಿ ಅನುಭವವನ್ನು ಕಟ್ಟಿಕೊಡುವುದರಲ್ಲಿ ಸದಾ ಮುಂದಿರುವ ಅಡಿಗಾಸ್ ಯಾತ್ರಾ, ತನ್ನ ಅಂತಾರಾಷ್ಟ್ರೀಯ ಪ್ರವಾಸಗಳ ದರಗಳಲ್ಲಿ ಭಾರಿ ರಿಯಾಯಿತಿಯನ್ನು ಪ್ರಕಟಿಸಿದೆ.

ಸಂಸ್ಥೆಯ ನಮ್ಮ ಗ್ಯಾರಂಟಿ ಯೋಜನೆಯ ಅಡಿಯಲ್ಲಿ, ಎಲ್ಲ ವಿದೇಶಿ ಪ್ರವಾಸಗಳಿಗೆ 2000 ದಿಂದ ಗರಿಷ್ಠ 20,000 ರುಪಾಯಿಗಳವರೆಗೆ ಡಿಸ್ಕೌಂಟ್ ದರದ ಅನುಕೂಲವನ್ನು ಪ್ರವಾಸಿಗರು ಪಡೆಯಬಹುದು.

ಒಂದು ವೇಳೆ ಅಂತಾರಾಷ್ಟ್ರೀಯ ಪ್ರವಾಸದಲ್ಲಿ ಗರಿಷ್ಠ ಡಿಸ್ಕೌಂಟ್ ಅನ್ನು ಬಳಸದಿದ್ದರೆ, ದೇಶೀಯ ಪ್ರವಾಸದಲ್ಲಿ ಅದರ ಜೊತೆಗೆ 5,000 ರುಪಾಯಿಗಳ ಹೆಚ್ಚುವರಿ ಕೊಡುಗೆಯನ್ನೂ ಯಾವುದೆ ಸ್ವದೇಶಿ ಅಥವಾ ವಿದೇಶಿ ಪ್ರವಾಸಗಳಲ್ಲಿ ರಿಯಾಯತಿ ಪಡೆಯಬಹುದು!

ಅಡಿಗಾಸ್ ಯಾತ್ರಾ ಸೀಮಿತ ಅವಧಿಗೆ ಈ ಕೊಡುಗೆಯನ್ನು ನೀಡುತ್ತಿದ್ದು, ಕೂಡಲೇ ಇದರ ಪ್ರಯೋಜನವನ್ನು ಪಡೆಯುವಂತೆ ಸಂಸ್ಥೆಯ ಸ್ಥಾಪಕರಾದ ಕೆ. ನಾಗರಾಜ ಅಡಿಗ ಅವರು ಪ್ರವಾಸಿಗರಿಗೆ ಮನವಿ ಮಾಡಿದ್ದಾರೆ.

ಕಳೆದೊಂದು ವರ್ಷದಿಂದೀಚೆಗೆ ನಾನಾ ಜಾಗತಿಕ ಬಿಕ್ಕಟ್ಟು, ರುಪಾಯಿ ಮೌಲ್ಯ ಕುಸಿತ, ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಇರಾನ್–ಅಮೆರಿಕ ಯುದ್ಧ ಸೇರಿದಂತೆ ಹಲವು ಕಾರಣಗಳಿಂದ ಅಂತಾರಾಷ್ಟ್ರೀಯ ಪ್ರವಾಸೋದ್ಯಮ ದುಬಾರಿಯಾಗಿದೆ. ಹೀಗಿದ್ದರೂ, ಪ್ರವಾಸಿಗರಿಗೆ ದೇಶ– ವಿದೇಶಗಳ ಸಂದರ್ಶನ, ಮೋಜು–ಮಸ್ತಿಯ ಸಮೃದ್ಧ ಅನುಭವಕ್ಕೆ ತೊಂದರೆಯಾಗಬಾರದು ಎಂಬ ಕಾರಣಕ್ಕೆ ಅಡಿಗಾಸ್ ಯಾತ್ರಾ ಈ ವಿಶೇಷ ಡಿಸ್ಕೌಂಟ್ ಆಫರ್ ಅನ್ನು ನೀಡುತ್ತಿದೆ. ಸೀಮಿತ ಅವಧಿಗೆ ಲಭ್ಯವಿರುವ ಈ ಕೊಡುಗೆಯನ್ನು ಪ್ರವಾಸಿಗರು ಬಳಸಿಕೊಳ್ಳಬೇಕು ಎಂದು ಕೆ. ನಾಗರಾಜ ಅಡಿಗ ಅವರು ತಿಳಿಸಿದ್ದಾರೆ.

ಯಾವೆಲ್ಲ ದೇಶಗಳಿಗೆ ಆಫರ್ ಲಭ್ಯ: ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಇಂಗ್ಲೆಂಡ್, ಯುರೋಪ್, ಸಿಂಗಾಪೂರ,ಮಲೇಷ್ಯ, ಥಾಯ್ಲೆಂಡ್, ಸೌತ್ ಆಫ್ರಿಕಾ, ವಿಯೆಟ್ನಾಂ, ಕಾಂಬೋಡಿಯಾ, ಬಾಲಿ, ಶ್ರೀಲಂಕಾ, ನೇಪಾಳ–ಮುಕ್ತಿನಾಥ, ಕೈಲಾಸ ಮಾನಸ ಸರೋವರ ಯಾತ್ರಾಗೆ ರಿಯಾಯಿತಿಯ ಪ್ರಯೋಜನವನ್ನು ಪಡೆಯಬಹುದು.

ಅಡಿಗಾಸ್ ಯಾತ್ರಾ ಈ ಹಿಂದಿನಿಂದಲೂ ಪ್ರವಾಸಿಗರಿಗೆ ಒದಗಿಸುವ ಸೇವೆಗಳ ಗುಣಮಟ್ಟದಲ್ಲಿ ಯಾವುದೇ ರಾಜಿಯನ್ನು ಮಾಡುವುದಿಲ್ಲ. ಪ್ರವಾಸಿಗರೇ ಪ್ರಭುಗಳು ಎನ್ನುತ್ತಾರೆ ನಾಗರಾಜ ಅಡಿಗರು. ವಿದೇಶಿ ಪ್ರವಾಸದಲ್ಲಿ ವೈಭವಯುತ ತಾರಾ ಹೋಟೆಲ್ ಗಳಲ್ಲಿ ವಾಸ್ತವ್ಯ, ಶ್ರೇಷ್ಠ ಮತ್ತು ವೈವಿಧ್ಯಮಯ ಊಟೋಪಚಾರಗಳು, ವಿಶ್ವವಿಖ್ಯಾತ ತಾಣಗಳಲ್ಲಿ ಪ್ರವಾಸಿ ಟಿಕೆಟ್ ದುಬಾರಿಯಾಗಿದ್ದರೂ, ಬಿಡದೆ ಪ್ರವಾಸಿಗರಿಗೆ ಒದಗಿಸಿ ಅದ್ಭುತ ಪ್ರವಾಸದ ಅನುಭವಗಳನ್ನು ಕಟ್ಟಿಕೊಡುವುದರಲ್ಲಿ ಅಡಿಗಾಸ್ ಯಾತ್ರಾ ಮನೆಮಾತಾಗಿದೆ. ಹಾಗಿದ್ದರೆ ಈಗಲೇ ತ್ವರೆ ಮಾಡಿ, ಭಾರಿ ಡಿಸ್ಕೌಂಟ್ ಆಫರ್ ಅನ್ನೂ ನಿಮ್ಮದಾಗಿಸಿ!

ಆಸಕ್ತರು ಹೆಚ್ಚಿನ ಮಾಹಿತಿಗೆ ನೇರವಾಗಿ ನಮ್ಮ ಎಲ್ಲ ಕಚೇರಿಗಳನ್ನು ಅಥವಾ ದೂರವಾಣಿ 080–26616678 / 7022259008 / 9449478944 ಸಂಪರ್ಕಿಸಿ ಅಥವಾ ನಮ್ಮ ವೆಬ್ಸೈಟ್ www. adigasyatra.com ವನ್ನು ಸಂದರ್ಶಿಸಬೇಕೆಂದು ವ್ಯವಸ್ಥಾಪಕ ಆಶಾ ಎನ್ ಅಡಿಗ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಡಿಕೆ ಕೃಷಿ ಸಮಸ್ಯೆ ಪರಿಹಾರಕ್ಕೆ ಶೀಘ್ರ ಸಮಾಲೋಚನಾ ಸಭೆ: ಕ್ಯಾ. ಬ್ರಿಜೇಶ್ ಚೌಟ

ಗುತ್ತಿಗಾರು: ಅಡಿಕೆಯಲ್ಲಿ ಎಲೆ ಚುಕ್ಕೆ ರೋಗ ನಿರ್ವಹಣೆ ಮಾಹಿತಿ ಮತ್ತು ಸಂವಾದ

ಸುಬ್ರಹ್ಮಣ್ಯ: ಅಡಿಕೆ ಬೆಳೆಗೆ ಇಂದು ವಿವಿಧ ಸಮಸ್ಯೆ ಇದೆ. ಈ ಸಮಸ್ಯೆಗಳ ಬಗ್ಗೆ ಕ್ರಿಯಾ ಯೋಜನೆಯ ಸಹಿತ ಚರ್ಚೆ ನಡೆಸಬೇಕಿದೆ. ಅಡಿಕೆಯ ವಿವಿಧ ರೋಗಗಳು, ಅಡಿಕೆಯ ಮಾರುಕಟ್ಟೆ ಸಮಸ್ಯೆ ಸೇರಿದಂತೆ ಇತರ ಸಮಸ್ಯೆಗಳ ಬಗ್ಗೆ ಚರ್ಚಿಸಲು ಅಡಿಕೆ ಬೆಳೆಯುವ ಪ್ರದೇಶದ ಶಾಸಕರನ್ನು ಸೇರಿಸಿಕೊಂಡು ಸಮಾಲೋಚನಾ ಸಭೆ ನಡೆಸಲಾಗುವುದು ಎಂದು ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಹೇಳಿದರು.

ಗುತ್ತಿಗಾರಿನ ಸಹಕಾರಿ ಸಂಘದ ದೀನ್ ದಯಾಳ್ ರೈತ ಸಭಾಭವನದಲ್ಲಿ ಸಿ.ಪಿ.ಸಿ.ಆರ್.ಐ., ಕಾಸರಗೋಡು ಮತ್ತು ಗುತ್ತಿಗಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಶ್ರಯದಲ್ಲಿ ಬುಧವಾರ ನಡೆದ 'ಅಡಿಕೆಯಲ್ಲಿ ಎಲೆ ಚುಕ್ಕೆ ರೋಗ ನಿರ್ವಹಣೆ ಕುರಿತು ಮಾಹಿತಿ ಮತ್ತು ಸಂವಾದ ಕಾರ್ಯಕ್ರಮ' ಉದ್ಘಾಟಿಸಿ ಅವರು ಮಾತನಾಡಿದರು. ಅಡಿಕೆ ರೋಗ ನಿಯಂತ್ರಣದಲ್ಲಿ ವಿಜ್ಞಾನಿಗಳು ಈಗಾಗಲೇ ಮಾಡಿರುವ ಪ್ರಾತ್ಯಕ್ಷಿಕೆಯ ತೋಟದ ಫಲಿತಾಂಶದ ನಂತರ ಕ್ರಿಯಾ ಯೋಜನೆಯ ಅಗತ್ಯವಿದೆ. ಇದಕ್ಕಾಗಿ ಸಮುದಾಯದ ಸಹಭಾಗಿತ್ವ ಅಗತ್ಯ ಇದೆ. ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಪ್ರತ್ಯೇಕ ಸಭೆ ನಡೆಸಲಾಗುವುದು. ಇಂದು ಕೃಷಿ ಸ್ಮಾರ್ಟ್ ಆಗಬೇಕಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಿಪಿಸಿಆರ್‌ಐ ನಿರ್ದೇಶಕ ಡಾ.ಕೆ.ಬಿ. ಹೆಬ್ಬಾರ್ ಮಾತನಾಡಿ, ಅಡಿಕೆ ಬೆಳೆಗೆ ತಗುಲಿದ ಎಲೆಚುಕ್ಕಿ ರೋಗ ನಿಯಂತ್ರಣಕ್ಕೆ ಸಾಮೂಹಿಕವಾಗಿ ಕ್ರಮಗಳ ಅಗತ್ಯವಿದೆ. ಸಮುದಾಯ ಮಟ್ಟದಲ್ಲಿ ನಿಯಂತ್ರಣ ಕ್ರಮಗಳ ಅಳವಡಿಕೆ ಬೇಕಾಗಿದೆ. ಇದಕ್ಕಾಗಿ ಈಗಾಗಲೇ ಮಾದರಿ ತೋಟಗಳನ್ನು ಮಾಡಲಾಗುತ್ತಿದೆ. ಇದೇ ಮಾದರಿಯಲ್ಲಿ ಇತರ ಕಡೆಯೂ ಕೃಷಿಕರು ಅಳವಡಿಕೆ ಮಾಡಿದರೆ ರೋಗ ನಿಯಂತ್ರಣ ಸಾಧ್ಯವಿದೆ. ಹೀಗಾಗಿ ಕೃಷಿಕರು–ಸಂಸ್ಥೆಗಳು ಹಾಗೂ ವಿಜ್ಞಾನಿಗಳು ಜೊತೆಯಾಗಿ ಕೆಲಸ ಮಾಡಬೇಕಾಗಿದೆ ಎಂದರು.

ಸಿಪಿಸಿಆರ್‌ಐ ಕಾಸರಗೋಡು ಕ್ಯೂಆರ್‌ಟಿ ಅಧ್ಯಕ್ಷ ಡಾ.ಟಿ. ಜಾನಕಿರಾಮ್, ಕ್ಯಾಂಪ್ಕೋ ಅಧ್ಯಕ್ಷ ಸತೀಶ್ಚಂದ್ರ, ಗುತ್ತಿಗಾರು ಪ್ರಾ.ಕೃ.ಪ.ಸ. ಸಂಘದ ಅಧ್ಯಕ್ಷ ಜಯಪ್ರಕಾಶ್ ಮೊಗ್ರ, ಅಖಿಲ ಭಾರತ ಅಡಿಕೆ ಬೆಳೆಗಾರ ಸಂಘದ ಅಧ್ಯಕ್ಷ ಮಹೇಶ್ ಪುಚ್ಚಪ್ಪಾಡಿ ವೇದಿಕೆಯಲ್ಲಿದ್ದರು.

ವಿಜ್ಞಾನಿ ಡಾ. ವಿನಾಯಕ ಹೆಗ್ಡೆ ಎಲೆ ಚುಕ್ಕೆ ರೋಗ ನಿರ್ವಹಣೆ ಕುರಿತು ಮಾಹಿತಿ ನೀಡಿದರು. ಕೃಷಿಕರಾದ ಸುಬ್ರಹ್ಮಣ್ಯ ಪ್ರಸಾದ್ ಚಣಿಲ ಹಾಗೂ ಗಿರೀಶ್ ಗೌಡ ನಡುಗಲ್ಲು ಅಭಿಪ್ರಾಯ ವ್ಯಕ್ತಪಡಿಸಿದರು. ವಿಜ್ಞಾನಿ ಡಾ. ಭವಿಷ್ಯ ಸ್ವಾಗತಿಸಿ, ವಂದಿಸಿದರು.



ತೋಟಕ್ಕೆ ಭೇಟಿ
ಚಣಿಲದ ಎಲೆಚುಕ್ಕಿ ರೋಗ ನಿರ್ವಹಣಾ ಪ್ರಾತ್ಯಕ್ಷಿಕೆ ತೋಟದ ಸುಬ್ರಹ್ಮಣ್ಯ ಪ್ರಸಾದ್ ಅವರ ಕೃಷಿ ಕ್ಷೇತ್ರಕ್ಕೆ ಸಂಸದರು ಭೇಟಿ ನೀಡಿದರು. ಅಲ್ಲದೆ, ವಿಜ್ಞಾನಿಗಳು ಭೇಟಿ ನೀಡಿ ಪರಿಶೀಲಿಸಿ ಕೃಷಿಕರಿಗೆ ಸೂಕ್ತ ಮಾರ್ಗದರ್ಶನ ನೀಡಿದರು.

54ನೇ ವರ್ಷದ ಉಚಿತ ಸಾಮೂಹಿಕ ವಿವಾಹ ವೈಭವ | ವರನಿಗೆ ಧೋತಿ, ಶಾಲು, ವಧುವಿಗೆ ಸೀರೆ, ಮೂಗುತಿ, ರವಿಕೆ ಕಣ ವಿತರಣೆ

ಧರ್ಮಸ್ಥಳದಲ್ಲಿ 106 ಜೊತೆ ವಧು-ವರರು ದಾಂಪತ್ಯ ಜೀವನಕ್ಕೆ ಪಾದಾರ್ಪಣೆ

ಧರ್ಮಸ್ಥಳ: ನಾಡಿನ ಪವಿತ್ರ ಕ್ಷೇತ್ರ ಧರ್ಮಸ್ಥಳದಲ್ಲಿ ಬುಧವಾರ ಸಂಜೆ ಗಂಟೆ 6.40 ರ ಗೋಧೂಳಿ ಲಗ್ನ ಸುಮುಹೂರ್ತದಲ್ಲಿ ಅಮೃತವರ್ಷಿಣಿ ಸಭಾಭವನದಲ್ಲಿ ನಡೆದ 54ನೇ ವರ್ಷದ ಉಚಿತ ಸಾಮೂಹಿಕ ವಿವಾಹ ಸಮಾರಂಭದಲ್ಲಿ 106 ಜೊತೆ ವಧೂ–ವರರು ದಾಂಪತ್ಯ ಜೀವನಕ್ಕೆ ಪಾದಾರ್ಪಣೆ ಮಾಡಿದರು.

ಬುಧವಾರ ಬೆಳಿಗ್ಗೆ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಹಾಗೂ ಕುಟುಂಬದವರು ವರನಿಗೆ ಧೋತಿ, ಶಾಲು ಹಾಗೂ ವಧುವಿಗೆ ಸೀರೆ, ಮೂಗುತಿ ಮತ್ತು ರವಿಕೆ ಕಣ ವಿತರಿಸಿದರು.

ಸಂಜೆ 5 ಗಂಟೆಗೆ ವಧೂ–ವರರನ್ನು ಭವ್ಯ ಮೆರವಣಿಗೆಯಲ್ಲಿ ದೇವಸ್ಥಾನದ ಬಳಿಯಿಂದ ಅಮೃತವರ್ಷಿಣಿ ಸಭಾಭವನಕ್ಕೆ ಕರೆದುಕೊಂಡು ಹೋಗಲಾಯಿತು. ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಹಾಗೂ ಗಣ್ಯ ಅತಿಥಿಗಳು ಮಂಗಳಸೂತ್ರ ವಿತರಿಸಿದರು.

ಗಂಟೆ 6.40 ರ ಗೋಧೂಳಿ ಲಗ್ನ ಸುಮುಹೂರ್ತದಲ್ಲಿ ವೇದಘೋಷ, ಮಂಗಳವಾದ್ಯ, ಹಾರ ವಿನಿಮಯ, ಮಂತ್ರಾಕ್ಷತೆಯೊಂದಿಗೆ ವಧುವಿಗೆ ಮಂಗಳಸೂತ್ರ ಧಾರಣೆ ಮಾಡಲಾಯಿತು.

ಸಭಾ ಕಾರ್ಯಕ್ರಮ

ಸಮಾರಂಭದ ಅಧ್ಯಕ್ಷತೆ ವಹಿಸಿದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಮಾತನಾಡಿ, ನೂತನ ದಂಪತಿಗಳು ಪರಸ್ಪರ ನಂಬಿಕೆ, ಪ್ರೀತಿ–ವಿಶ್ವಾಸದೊಂದಿಗೆ ಹೊಂದಾಣಿಕೆಯಿಂದ ಸಾರ್ಥಕ ಜೀವನ ನಡೆಸಬೇಕು ಎಂದು ಸಲಹೆ ನೀಡಿ ಆಶೀರ್ವದಿಸಿದರು.

ಧರ್ಮಸ್ಥಳದಲ್ಲಿ ಆರಂಭಿಸಿದ ಉಚಿತ ಸಾಮೂಹಿಕ ವಿವಾಹ ಯೋಜನೆಯನ್ನು ಸರ್ಕಾರ ಹಾಗೂ ಇತರ ಮಠ–ಮಂದಿರಗಳು ಮಾದರಿಯಾಗಿ ಸ್ವೀಕರಿಸಿ ಅನುಸರಿಸುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದ ಅವರು, ಬೇರೆ ಕಡೆಗಳಲ್ಲಿ ನಡೆಸುವ ಉಚಿತ ಸಾಮೂಹಿಕ ವಿವಾಹ ಸಮಾರಂಭಕ್ಕೆ ಇನ್ನು ಮುಂದೆ ಧರ್ಮಸ್ಥಳದಿಂದ ಮಂಗಳಸೂತ್ರ ಕೊಡಲಾಗುವುದಿಲ್ಲ. ಏಕೆಂದರೆ, ಹೀಗೆ ಕೊಟ್ಟರೆ ಬೇರೆ ಕಡೆಗಳಲ್ಲಿಯೂ ಧರ್ಮಸ್ಥಳದ ವತಿಯಿಂದ ಸಾಮೂಹಿಕ ವಿವಾಹ ಏರ್ಪಡಿಸುತ್ತಾರೆ ಎಂಬ ತಪ್ಪು ಕಲ್ಪನೆ ಜನರಲ್ಲಿ ಮೂಡಿಬರುತ್ತದೆ. ಧರ್ಮಸ್ಥಳದಿಂದ ತಾಳಿ ಕೊಡುತ್ತಾರೆ ಎಂದಾಗ ಜನರು ಕ್ಷೇತ್ರಕ್ಕೆ ಬರುವ ಬದಲು ಅಲ್ಲೇ ಮದುವೆಯಾಗಲು ನಿರ್ಧರಿಸುತ್ತಾರೆ ಎಂದರು.

ಮೆಸ್ಕಾಂ ಅಧ್ಯಕ್ಷ ಕೆ. ಹರೀಶ್ ಕುಮಾರ್ ಶುಭಾಶಂಸನೆ ಮಾಡಿ, ಮದುವೆ ಎಂಬುದು ಪ್ರತಿಯೊಬ್ಬರ ಬದುಕಿನಲ್ಲಿ ಬದಲಾವಣೆಯ ಪರ್ವವಾಗಿದ್ದು ಧರ್ಮಸ್ಥಳದಿಂದ ನಡೆಸುವ ಬಹುಮುಖಿ ಸಮಾಜ ಸೇವಾ ಕಾರ್ಯಗಳಲ್ಲಿ ಉಚಿತ ಸಾಮೂಹಿಕ ವಿವಾಹ ಅತ್ಯಂತ ಪವಿತ್ರ ಹಾಗೂ ಪುಣ್ಯದಾಯಕ ಸೇವೆಯಾಗಿದೆ. ಸರ್ಕಾರ ಹಾಗೂ ಅನೇಕ ಮಠ–ಮಂದಿರಗಳು ಕೂಡಾ ಧರ್ಮಸ್ಥಳದ ಮಾದರಿ ಅನುಸರಿಸುತ್ತಿರುವುದು ಶ್ಲಾಘನೀಯವಾಗಿದೆ ಎಂದರು.

ಶಾಸಕ ಹರೀಶ್ ಪೂಂಜ ಮಾತನಾಡಿ, ಪೂಜ್ಯ ಹೆಗ್ಗಡೆ ದಂಪತಿಯ ಸಾರ್ಥಕ ಬದುಕೇ ಎಲ್ಲರಿಗೂ ಪ್ರೇರಕ ಶಕ್ತಿ ಹಾಗೂ ಮಾರ್ಗದರ್ಶಿಯಾಗಿದೆ ಎಂದು ಹೇಳಿ ನೂತನ ದಂಪತಿಗಳಿಗೆ ಶುಭ ಹಾರೈಸಿದರು.

ವಿಧಾನಪರಿಷತ್ ಸದಸ್ಯ ಕೆ. ಪ್ರತಾಪಸಿಂಹ ನಾಯಕ್ ಉಪಸ್ಥಿತರಿದ್ದರು. ಹೇಮಾವತಿ ವೀ. ಹೆಗ್ಗಡೆ, ಡಿ. ಹರ್ಷೇಂದ್ರ ಕುಮಾರ್, ಶರ್ಮಿಳಾ ವೇದಿಕೆಯಲ್ಲಿ ಇದ್ದರು. ಬೆಂಗಳೂರಿನಲ್ಲಿರುವ ಕ್ಷೇಮವನದ ಸಿ.ಇ.ಓ. ಶ್ರದ್ಧಾ ಅಮಿತ್ ಸ್ವಾಗತಿಸಿದರು. ಪೂಜ್ಯ ಹೆಗ್ಗಡೆಯವರ ಆಪ್ತಕಾರ್ಯದರ್ಶಿ ಎ.ವಿ. ಶೆಟ್ಟಿ ಧನ್ಯವಾದವಿತ್ತರು. ಸಂಪತ್ ಕುಮಾರ್ ರೈ ಮತ್ತು ಶ್ರೀನಿವಾಸ ರಾವ್ ಧರ್ಮಸ್ಥಳ ಕಾರ್ಯಕ್ರಮ ನಿರ್ವಹಿಸಿದರು.



ಸುಶ್ರಾವ್ಯ ಶೋಭಾನೆ ಹಾಡಗಳೊಂದಿಗೆ ವಧೂ–ವರರಿಗೆ ಆರತಿ ಹಾಗೂ ಮಂಗಲದ್ರವ್ಯಗಳನ್ನು ವಿತರಣೆ ಮಾಡಲಾಯಿತು. ದಾಂಪತ್ಯ ದೀಕ್ಷೆಯ ಬಳಿಕ ನೂತನ ದಂಪತಿಗಳಿಗೆ ಧರ್ಮಸ್ಥಳದ ವತಿಯಿಂದ ಉಡುಗೊರೆ ನೀಡಿ ಶುಭ ಹಾರೈಸಲಾಯಿತು. ಬಳಿಕ ನೂತನ ದಂಪತಿಗಳು ದೇವರ ದರ್ಶನ ಮಾಡಿ, ಅನ್ನಪೂರ್ಣ ಭೋಜನಾಲಯದಲ್ಲಿ ಮದುವೆ ಊಟ ಮಾಡಿ ಊರಿಗೆ ಪ್ರಯಾಣಿಸಿದರು.

ಆರೆಂಜ್ ಕ್ಯಾಪ್ — ವೈಭವ್ (ರಾಜಸ್ಥಾನ) 400 ರನ್

ಪರ್ಪಲ್ ಕ್ಯಾಪ್ — ಮಾಲಿಂಗಾ (ಹೈದರಾಬಾದ್) 15 ವಿಕೆಟ್



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	8	6	1	1	13	+1.043
ಆರ್‌ಸಿಬಿ	8	6	2	0	12	+1.919
ರಾಜಸ್ಥಾನ	9	6	3	0	12	+0.617
ಹೈದರಾಬಾದ್	8	5	3	0	10	+0.815
ಗುಜರಾತ್	8	4	4	0	8	-0.475
ಚೆನ್ನೈ	8	3	5	0	6	-0.121
ದಿಲ್ಲಿ	8	3	5	0	6	-1.060
ಕೆಕೆಆರ್	8	2	5	1	5	-0.751
ಮುಂಬೈ	7	2	5	0	4	-0.736
ಲಖನೌ	8	2	6	0	4	-1.106

ಇಂದು ಅಹಮದಾಬಾದ್‌ನಲ್ಲಿ ಜಿಟಿ–ಆರ್‌ಸಿಬಿ | ಗೆಲುವಿನ ಹಳಿಗೆ ಮರಳಲು ಜಿಟಿ ಯತ್ನ | ಆರ್‌ಸಿಬಿಗೆ ಆತ್ಮವಿಶ್ವಾಸ

ಟೈಟಾನ್ಸ್ ಸವಾಲಿಗೆ ಬೆಂಗಳೂರು ಸಿದ್ಧ

ಅಹಮದಾಬಾದ್: ಗೆಲುವಿನ ಹಾದಿಯಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ಗೆಲುವಿನೋಟ ಮುಂದುವರಿಸುವುದಕ್ಕೆ ಸಜ್ಜಾಗಿದೆ. ದಿಲ್ಲಿ ತಂಡದ ಮೇಲೆ ಪ್ರಾಬಲ್ಯ ಸಾಧಿಸಿದ ನಂತರ ಇದೀಗ ಗುಜರಾತ್ ಟೈಟಾನ್ಸ್ ತಂಡವನ್ನು ಎದುರಿಸಲಿದೆ. ತವರಿನ ಎಲ್ಲಾ ಲೀಗ್ ಪಂದ್ಯಗಳನ್ನು ಮುಗಿಸಿಕೊಂಡಿರುವ ಬೆಂಗಳೂರು ಅತಿಥಿಯಾಗಿ ಅಹಮದಾಬಾದ್‌ನಲ್ಲಿ ಆಡಲಿದೆ.

ಚೆನ್ನೈ ವಿರುದ್ಧ ಗೆಲುವು ಸಾಧಿಸಿರುವ ಗುಜರಾತ್‌ಗೆ ಗೆಲುವೇ ಉಳಿಗಾಲವಾಗಿದೆ. ಅರ್ಧದಷ್ಟು ಐಪಿಎಲ್‌ನಲ್ಲಿ ಗೆಲುವು ಮತ್ತು ಸೋಲುಗಳನ್ನು ಸಮಾನವಾಗಿ ಕಂಡಿರುವ ಗಿಲ್ ಪಡೆ ಪ್ಲೇಆಫ್ ಖಾತರಿ ಪಡೆದಿಲ್ಲ. ಮುಖ್ಯವಾಗಿ ರನ್‌ರೇಟ್ ವಿಚಾರದಲ್ಲಿ ಹಿನ್ನಡೆ ಅನುಭವಿಸಿದೆ. ಚೆನ್ನೈ ತಂಡವನ್ನು ಸೋಲಿಸಿದ್ದಾದರೂ, ಉಳಿದ ಪಂದ್ಯಗಳಲ್ಲಿ ಗೆಲ್ಲಬೇಕಿರುವುದು ಅನಿವಾರ್ಯ. ಈಗಿನ ಪಂದ್ಯಗಳಲ್ಲಿ ಕಮಾಲ್ ಮಾಡಬೇಕಿರುವುದು ಅತ್ಯವಶ್ಯಕ.

ಇತ್ತ ಬೆಂಗಳೂರು ಗೆಲುವಿನ ಹಾಸಿಗೆ ಮೇಲೆ ನಡೆಯುತ್ತಿದೆ. ಹಿಂದಿನ ತವರು ಪಂದ್ಯಗಳಲ್ಲಿ ದಿಲ್ಲಿ ವಿರುದ್ಧ ಹೊರತುಪಡಿಸಿ ಎಲ್ಲಾ ಪಂದ್ಯಗಳಲ್ಲಿ ಗೆದ್ದಿದೆ. ತವರಲ್ಲದ ಪಂದ್ಯಗಳಲ್ಲಂತೂ ಪರಾಕ್ರಮ ಸಾಧಿಸಿರುವ ಬೆಂಗಳೂರು ಅಂಕಪಟ್ಟಿಯಲ್ಲಿ ಎರಡನೇ ಸ್ಥಾನ ಹೊಂದಿದೆ. ಇನ್ನೂ ಒಂದಿಷ್ಟು ಪಂದ್ಯಗಳಲ್ಲಿ ಗೆದ್ದರೆ ಸಾಕು ಪ್ಲೇಆಫ್‌ಗೆ ಲಗ್ಗೆ ಹಾಕಲಿದೆ. ಆದಾಗ್ಯೂ ಮೊದಲೆರಡು ಸ್ಥಾನದ ಗುರಿಗಾಗಿ ಬೆಂಗಳೂರು ಗೆಲುವಿನ ಹಾದಿಯಲ್ಲಿರುವುದೇ ಸೂಕ್ತ. ಎರಡೂ ತಂಡಗಳ ಹೊಡೆದಾಟದಲ್ಲಿ ಗೆದ್ದವರಿಗೆ ಲಾಭ ಸಿಗುವುದರಿಂದ ಪಂದ್ಯ ಕುತೂಹಲಕಾರಿಯಾಗಿರಲಿದೆ.

ಆರ್‌ಸಿಬಿ ಪ್ರಾಬಲ್ಯ: ದಿಲ್ಲಿ ಕ್ಯಾಪಿಟಲ್ಸ್ ತಂಡದ ಮೇಲೆ ಹರಿಹಾಯ್ದ ಬೆಂಗಳೂರು ವಿಶ್ವಾಸದಲ್ಲಿದೆ. ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಅಬ್ಬರಿಸಿರುವುದೇ ವಿಶೇಷ. ಮುಖ್ಯವಾಗಿ ಸ್ವಿಂಗ್ ಕಿಂಗ್, ಭುವನೇಶ್ವರ್ ಕುಮಾರ್, ವೇಗಿ ಜೋಶ್ ಹ್ಯಾಜೆಲ್ವುಡ್ ಭರ್ಜರಿ ಬೌಲಿಂಗ್‌ನೊಂದಿಗೆ ಮಿಂಚಿರುವುದು ತಂಡಕ್ಕೆ ಬಲ, ಅನುಭವ ಮತರ್ತು ವಿಶ್ವಾಸ ತಂದಿದೆ. ಒತ್ತಡದ ಪರಿಸ್ಥಿತಿಯಲ್ಲಿ ಆರ್‌ಸಿಬಿ ಬೌಲರ್‌ಗಳು ಉತ್ತಮ ಪ್ರದರ್ಶನ ನೀಡುವಲ್ಲಿ ಈ ಬಾರಿ ಯಶಸ್ವಿಯಾಗಿದ್ದು ವಿಶೇಷ. ಟೈಟಾನ್ಸ್ 200+ ಸ್ಕೋರ್ ಮಾಡಿದ್ದರೂ, ಸುಯಶ್, ಭುವನೇಶ್ವರ್ ಕುಮಾರ್ ಮತ್ತು ಹ್ಯಾಜೆಲ್ವುಡ್ ಜತೆಗೂಡಿ ಡೆತ್ ಓವರ್‌ಗಳಲ್ಲಿ ಸಂಘಟಿತ ಪ್ರದರ್ಶನ ನೀಡುವ ಮೂಲಕ ಟೈಟಾನ್ಸ್ ಇನ್ನೂ ದೊಡ್ಡ ಸ್ಕೋರ್ ಮಾಡದಂತೆ ನೋಡಿಕೊಂಡರು. ದಿಲ್ಲಿ ವಿರುದ್ಧದ ಪಂದ್ಯದಲ್ಲಿ ಬ್ಯಾಟಿಗರನ್ನು ಮೊದಲಿನಿಂದಲೂ ಕಟ್ಟಿಹಾಕಿದರು. ಈ ಆವೃತ್ತಿಯಲ್ಲಿ ಆರ್‌ಸಿಬಿ ಬ್ಯಾಟಿಂಗ್ ಶೈಲಿಯನ್ನೇ ಬದಲಾಯಿಸಿಕೊಂಡಿದೆ. ಕೊಹ್ಲಿ(351), ಪಡಿಕ್ಕಲ್(242), ಪಾಟಿದಾರ್(238) ರನ್‌ಗಳನ್ನು ಈಗಾಗಲೇ ಹೊಡೆದಿದ್ದಾರೆ. ಮುಖ್ಯವಾಗಿ ಚೇಸಿಂಗ್‌ನಲ್ಲಿ ಆರ್‌ಸಿಬಿ ಬಲಾಢ್ಯ.

ಗುಜರಾತ್‌ಗೆ ಗೆಲುವಿನ ಹಂಬಲ: ಇತ್ತ ಚೆನ್ನೈ ತಂಡವನ್ನು ಸೋಲಿಸಿರುವ ಗುಜರಾತ್ ಗೆಲುವಿನ ಆಕಾಂಕ್ಷೆ ಹೊಂದಿದೆ. ಹಿಂದಿನ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡಿದರೂ ಮುಂಬೈ ವಿರುದ್ಧದ ಸೋಲಿನಿಂದ ಹೊರಬರಲಾಗಿಲ್ಲ. ರನ್‌ರೇಟ್ ವಿಚಾರದಲ್ಲಿ ಕುಗ್ಗಿರುವ ಗುಜರಾತ್‌ಗೆ ಗೆಲುವಿನ ಹಾದಿಗೆ ಮರಳುವುದೊಂದೇ ಹಾದಿಯಾಗಿದೆ. ಶುಭಮನ್ ಗಿಲ್ (330), ಸಾಯಿ ಸುದರ್ಶನ್(322), ಜಾಸ್ ಬಟ್ಲರ್(270) ರನ್ ಗಳಿಸಿದ್ದಾರೆ. ಬ್ಯಾಟಿಂಗ್‌ನಲ್ಲಿ ಪ್ರಬಲ ಪಡೆಯನ್ನು ಹೊಂದಿರುವ ಗುಜರಾತ್, ರಬಾಡ, ಕೃಷ್ಣ ರಶೀದ್ ಬೌಲಿಂಗ್‌ನಲ್ಲಿ ಮಿಂಚಿದ್ದಾರೆ. ಸ್ಪಿನ್ ವಿಭಾಗವನ್ನುಮಾನವ್ ಸುತಾರ್ ಇನ್ನಷ್ಟು ಗಟ್ಟಿಗೊಳಿಸಿದ್ದಾರೆ. ಹಿಂದಿನ ಪಂದ್ಯಗಳಲ್ಲಿ ಅವರು ಪ್ರಮುಖ ಬ್ಯಾಟರ್‌ಗಳ ವಿಕೆಟ್ ಪಡೆದಿದ್ದಾರೆ.

ಪಿಚ್ ರಿಪೋರ್ಟ್: ಅಹಮದಾಬಾದ್‌ನಲ್ಲಿರುವ ನರೇಂದ್ರ ಮೋದಿ ಕ್ರೀಡಾಂಗಣವು ಸಮತೋಲಿತ ವಿಕೆಟ್‌ಗಳನ್ನು ಹೊಂದಿದೆ ಮತ್ತು ಸ್ಪರ್ಧೆಯ ಎರಡೂ ಅಂಶಗಳಿಗೆ ಸಮಾನವಾಗಿ ಸಹಾಯ ಮಾಡಿದೆ. ಈ ಸ್ಥಳವು ಈ ಋತುವಿನಲ್ಲಿ ಇಲ್ಲಿಯವರೆಗೆ ಮೂರು ಮುಖಾಮುಖಿಗಳನ್ನು ಆಯೋಜಿಸಿದೆ, ಮತ್ತು ಅವುಗಳಲ್ಲಿ ಎರಡು ತಂಡಗಳು ಒಟ್ಟು ಮೊತ್ತವನ್ನು ಉಳಿಸಿಕೊಳ್ಳಲು ಅನುಕೂಲಕರವಾಗಿವೆ. ಜಿಟಿ–ಆರ್‌ಸಿಬಿ ಘರ್ಷಣೆಯ ಸಮಯದಲ್ಲಿಯೂ ಈ ಪ್ರವೃತ್ತಿ ಮುಂದುವರಿಯುವ ಸಾಧ್ಯತೆಯಿದೆ ಮತ್ತು ಈ ಋತುವಿನ ಹಿಂದಿನ ಪಂದ್ಯಗಳ ಫಲಿತಾಂಶಗಳನ್ನು ನೋಡಿದರೆ 220–230 ಕ್ಕಿಂತ ಹೆಚ್ಚಿನ ಮೊತ್ತವನ್ನು ಗೆಲುವಿನ ಮೊತ್ತವೆಂದು ಪರಿಗಣಿಸಬಹುದು.





ಮುಖಾಮುಖಿ
- ಪಂದ್ಯಗಳು:7
- ಆರ್‌ಸಿಬಿ: 4
- ಗುಜರಾತ್: 3

ಸಂಭಾವ್ಯ ತಂಡಗಳು

ಆರ್‌ಸಿಬಿ: ರಜತ್ ಪಾಟಿದಾರ್ (ನಾಯಕ), ವಿರಾಟ್ ಕೊಹ್ಲಿ, ದೇವದತ್ ಪಡಿಕ್ಕಲ್, ಫಿಲ್ ಸಾಲ್ಟ್, ಜಿತೇಶ್ ಶರ್ಮ, ಕೃಣಾಲ್ ಪಾಂಡ್ಯ, ಸ್ವಪ್ನಿಲ್ ಸಿಂಗ್, ಟಿಮ್ ಡೇವಿಡ್, ರೊಮಾರಿಯೊ ಶೆಫರ್ಡ್, ಜೇಕಬ್ ಬೆಥೆಲ್, ಜೋಶ್ ಹ್ಯಾಜೆಲ್ವುಡ್, ಭುವನೇಶ್ವರ್ ಕುಮಾರ್, ನುವಾನ್ ತುಷಾರ, ರಾಸಿಖ್ ಸಲಾಂ, ವೆಂಕಟೇಶ್ ಅಯ್ಯರ್, ಅಭಿನಂದನ್ ಸಿಂಗ್, ಸುಯಶ್ ಶರ್ಮ, ಜೇಕಬ್ ಡಫಿ, ಸಾತ್ವಿಕ್ ದೇಸ್ವಾಲ್, ಮಂಗೇಶ್ ಯಾದವ್, ಜೋರ್ಡನ್ ಕಾಕ್ಸ್, ವಿಕಿ ಓಸ್ವಾಲ್, ವಿಹಾನ್ ಮಲ್ಹೋತ್ರಾ, ಕಾನಿಷ್ಕ್ ಚೌಹಾಣ್.

ಗುಜರಾತ್ ಟೈಟಾನ್ಸ್: ಶುಭಮನ್ ಗಿಲ್, ಸಾಯಿ ಸುದರ್ಶನ್, ಜೋಸ್ ಬಟ್ಲರ್, ವಾಷಿಂಗ್ಟನ್ ಸುಂದರ್, ಶಾರುಖ್ ಖಾನ್, ರಶೀದ್ ಖಾನ್, ರಾಹುಲ್ ತೆವಾಟಿಯಾ, ಕಗಿಸೊ ರಬಾಡ, ಮೊಹಮ್ಮದ್ ಸಿರಾಜ್, ಪ್ರಸಿದ್ಧ್ ಕೃಷ್ಣ ಅರ್ಷದ್ ಖಾನ್, ಜೇಸನ್ ಹೋಲ್ಡರ್, ಅಶೋಕ್ ಶರ್ಮ, ಮಾನವ್ ಸುಥರ್, ದಾಸುನ್ ಶಣಕ, ಅನುಜ್ ರಾವತ್, ಸಾಯಿ ಕಿಶೋರ್, ಜಯಂತ್ ಯಾದವ್, ಲುಕ್ ವುಡ್.

ಕಿರುಸುದ್ದಿ

ವೇಟ್‌ಲಿಫ್ಟಿಂಗ್: ಭಾರತಕ್ಕೆ ಮತ್ತಷ್ಟು ಪದಕ

ಹೊಸದಿಲ್ಲಿ: ಜೂನಿಯರ್ ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್ ಮತ್ತು ಯುನಿವರ್ಸಲ್ ಕಪ್ ಕೂಟಗಳಲ್ಲಿ ಭಾರತ ಉತ್ತಮ ಪ್ರದರ್ಶನ ನೀಡುತ್ತಿದ್ದು, ವಿವಿಧ ವೇಟ್‌ಲಿಫ್ಟರ್‌ಗಳು ಪೋಡಿಯಂ ಫಿನಿಶ್ ಮಾಡಿದ್ದಾರೆ. ಮಂಗಳವಾರವೇ ಪದಕ ಬೇಟೆ ಶುರು ಮಾಡಿದ್ದ ಭಾರತೀಯರು, ಬುಧವಾರದಂದು ಮತ್ತಷ್ಟು ಪ್ರಮುಖ ಪದಕ ಗೆದ್ದಿದ್ದಾರೆ. ಬೆಲ್ಲಾನಾ ಹರಿಕಾ 69 ಕೆಜಿ ವಿಭಾಗದಲ್ಲಿ ಚಿನ್ನದ ಪದಕ ಗೆದ್ದು ದಿನದಾಟದ ಪ್ರಾಬಲ್ಯ ಶುರು ಮಾಡಿದರು. ಮುಂದೆ ಕಾರುಂಗಿ ತರಂಗಿನಿ 63 ಕೆಜಿ ವಿಭಾಗದ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದರು. ಮುಂದುವರಿಸಿದ ಭೂಮಿಕಾ 63ಕೆಜಿ ವಿಭಾಗದಲ್ಲೇ ಬೆಳ್ಳಿ ಪದಕ ಗೆದ್ದರು. ಯುನಿವರ್ಸಲ್ ಕಪ್ ಕೂಟದಲ್ಲಿ ಅಭಿಷೇಕ್ ನಿಪನ್ 88 ಕೆಜಿ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದು ಮಿಂಚಿದ್ದಾರೆ.

ಶ್ರೀಲಂಕಾ ಕ್ರಿಕೆಟ್‌ಗೆ ಸರ್ಕಾರಿ ಆಡಳಿತ

ಕೊಲಂಬೋ: ಅಧ್ಯಕ್ಷ ಶಮ್ಮಿ ಸಿಲ್ವಾ ಮತ್ತು ಆಡಳಿತ ಮಂಡಳಿ ರಾಜೀನಾಮೆ ಸಲ್ಲಿಸಿದ ನಂತರ ಶ್ರೀಲಂಕಾ ಕ್ರಿಕೆಟ್ ಸಂಸ್ಥೆಯನ್ನು ಅಲ್ಲಿನ ಸರ್ಕಾರ ಕೈಗೆತ್ತಿಕೊಂಡಿದೆ. ಅಂದರೆ ಇನ್ನು ಮುಂದೆ ಶ್ರೀಲಂಕಾ ಕ್ರಿಕೆಟ್ ಸಂಸ್ಥೆಯನ್ನು ಅಲ್ಲಿನ ಸರ್ಕಾರ ಮುನ್ನಡೆಸಲಿದೆ. ಹಣಕಾಸು ವಿಚಾರದಲ್ಲಿ ವಿವಾದಗಳಾದ ನಂತರ ಈ ಹಿಂದೆ ಶ್ರೀಲಂಕಾ ಅಧ್ಯಕ್ಷ ಅನುರಾ ಕುಮಾರಾ ನೈತಿಕ ಹೊಣೆ ತೆಗೆದುಕೊಂಡು ರಾಜೀನಾಮೆ ಸಲ್ಲಿಸುವಂತೆ ಸೇಲ್ವಾ ಹಾಗೂ ತಂಡಕ್ಕೆ ಎಚ್ಚರಿಸಿದರು. ಅದರಂತೆ ಮಂಗಳವಾರದಂದು ಎಲ್ಲಾ ಪದಾಧಿಕಾರಿಗಳು ರಾಜೀನಾಮೆ ಸಲ್ಲಿಸಿದ್ದರು. ಬುಧವಾರದಂದು ಶ್ರೀಲಂಕಾ ಸರ್ಕಾರ ಕ್ರಿಕೆಟ್ ಸಂಸ್ಥೆ ಮೇಲೆ ಎಲ್ಲಾ ರೀತಿಯ ಅಧಿಕಾರ ಪಡೆಯಿತು. ಅದಕ್ಕೆ ಅನುಗುಣವಾಗಿ 1973ರ ಕ್ರೀಡಾ ಕಾನೂನು ಸಂಖ್ಯೆ 25 ರ ಸೆಕ್ಷನ್ 31 ಮತ್ತು 34 ರ ಅಡಿಯಲ್ಲಿ ಅವರಿಗೆ ನೀಡಲಾದ ಅಧಿಕಾರಗಳ ಅಡಿಯಲ್ಲಿ, ಶ್ರೀಲಂಕಾ ಕ್ರಿಕೆಟ್‌ನ ಎಲ್ಲಾ ಆಡಳಿತಾತ್ಮಕ ಕಾರ್ಯಗಳನ್ನು ತಾತ್ಕಾಲಿಕವಾಗಿ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದ ಅಡಿಯಲ್ಲಿ ತರಲಾಗುತ್ತದೆ ಎಂದು ಕ್ರೀಡಾ ಸಚಿವ ಸುನಿಲ್ ಕುಮಾರ ಗಮಗೆ ಅವರ ಪ್ರಕಟಣೆ ತಿಳಿಸಿದೆ. ಅಸ್ತಿತ್ವದಲ್ಲಿರುವ ಪದಾಧಿಕಾರಿಗಳ ರಾಜೀನಾಮೆಗಳನ್ನು ಅಂಗೀಕರಿಸಲಾಗಿದೆ ಎಂದು ಗಮಗೆ ತಿಳಿಸಿದ್ದಾರೆ.

ಗಾಲ್ಫರ್ ವಿಜಯ್ ನಿಧನ

ಲಖನೌ: ಭಾರತದ ಗಾಲ್ಫರ್ ವಿಜಯ್ ಕುಮಾರ್ ಹೃದಯಾಘಾತದಿಂದ ನಿಧನರಾದರು. ಅವರಿಗೆ 57 ವಯಸ್ಸಿತ್ತು. ಲಖನೌ ಮೂಲದ ಅವರು, ಬುಧವಾರದಂದು ಕೊನೆ ಉಸಿರೆಳೆದರು. 2022ರ ಚಳಿಗಾಲದ ಇಂಡಿಯನ್ ಓಪನ್ ಗೆದ್ದಿದ್ದ ಅವರು, ನಾಲ್ಕು ಬಾರಿ ಆರ್ಡರ್ ಆಫ್ ಮೆರಿಟ್ ಚಾಂಪಿಯನ್‌ಶಿಪ್ ಅನ್ನೂ ಗೆದ್ದಿದ್ದಾರೆ. 1988ರಲ್ಲಿ ವೃತ್ತಿಪರ ಗಾಲ್ಫ್‌ಗೆ ಪದಾರ್ಪಣೆ ಮಾಡಿದ ವಿಜಯ್ ದೇಶಿ ಸ್ಪರ್ಧೆಗಳಲ್ಲಿ ಮಿಂಚಿದರು. 90ರ ದಶಕ ಅನ್ನುವಷ್ಟರಲ್ಲಿ ಅವರು ಅತ್ಯುತ್ತಮ ಆಟಗಾರರಲ್ಲಿ ಒಬ್ಬರಾದರು. 2002ರಲ್ಲಿ ವಿಜಯ್ ಇಂಡಿಯನ್ ಓಪನ್ ಗೆದ್ದರು. ಮುಂದೊಂದು ದಿನ ಆಲ್ಫರೆಡ್ ದುನ್ಹಿಲ್ ಕಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು.

ವ್ಯಾಪಿಂಗ್: ಪರಾಗ್‌ಗೆ ದಂಡ?

ಚಂಡೀಗಢ: ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್)ನಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ತಂಡದ ನಾಯಕ ರಿಯಾನ್ ಪರಾಗ್ ಡ್ರೆಸ್ಸಿಂಗ್ ರೂಮ್‌ನಲ್ಲಿ ವ್ಯಾಪಿಂಗ್ ಮಾಡಿದ್ದು, ಭಾರತ ಕ್ರಿಕೆಟ್ ಮಂಡಳಿಯಿಂದ ಶಿಸ್ತು ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ. ಮಂಗಳವಾರ ನಡೆದ ಪಂಜಾಬ್ ವಿರುದ್ಧದ ಪಂದ್ಯದಲ್ಲಿ ರಾಜಸ್ಥಾನ ಭರ್ಜರಿ ಗೆಲುವು ದಾಖಲಿಸಿತು. ಈ ಗೆಲುವಿನ ನಂತರ ರಿಯಾನ್ ಪರಾಗ್ ಡ್ರೆಸ್ಸಿಂಗ್ ರೂಮ್‌ನಲ್ಲಿ ವ್ಯಾಪಿಂಗ್(ಇ–ಸಿಗರೇಟ್) ಸೇವಿಸಿರುವ ವಿಡಿಯೋ ಸೆರೆಯಾಗಿದೆ. ಪರಿಣಾಮ ಬಿಸಿಸಿಐನಿಂದ ದಂಡ ಬೀಳುವ ಸಾಧ್ಯತೆ ಇದೆ. ಐಪಿಎಲ್ ಹಾಗೂ ಕ್ರಿಕೆಟ್ ಮಾನದಂಡ ಪ್ರಕಾರ ವ್ಯಾಪಿಂಗ್ ಅಪರಾಧವಾಗಿದ್ದು, 5 ಲಕ್ಷ ರೂ.ದಿಂದ ನಿಷೇಧದ ವರೆಗೂ ಶಿಕ್ಷೆ ಇರುತ್ತವೆ. ಐಪಿಎಲ್ ಪಂದ್ಯದ ವೇಳೆ ಡ್ರೆಸ್ಸಿಂಗ್ ರೂಮ್ ಅಥವಾ ಮೈದಾನದಲ್ಲಿ ಮಾಡುವುದು ಕೂಡ ಅಪರಾಧವಾಗಿದೆ.

ರಿಕೆಲ್ಟನ್ ಶತಕ: ಮುಂಬೈ 243/5

ಮುಂಬೈ: ಮುಂಬೈ ಮೈದಾನದಲ್ಲಿ ಮೆರೆದಾಡಿದ ರಯಾನ್ ರಿಕೆಲ್ಟನ್ ಹೈದರಾಬಾದ್ ಪಡೆಯನ್ನು ದಂಡಿಸಿದ್ದು, ಹಾರ್ದಿಕ್ ಪಡೆ ದೊಡ್ಡ ಮೊತ್ತ ನಿರ್ಮಿಸಿತು. ಬದಲಾದ ಬ್ಯಾಟಿಂಗ್ ಪಡೆಯೊಂದಿಗೆ ಮೈದಾನಕ್ಕಿಳಿದ ಮುಂಬೈ ಇಂಡಿಯನ್ಸ್ ರಯಾನ್ ರಿಕೆಲ್ಟನ್ ಶತಕದ ನೆರವಿನಿಂದ 20 ಓವರ್‌ಗಳಲ್ಲಿ 243/5 ಬಾರಿಸಿದೆ.

ರಿಕೆಲ್ಟನ್ ಐಪಿಎಲ್‌ನಲ್ಲಿ ತಮ್ಮ ಮೊದಲನೇ ಶತಕ ಬಾರಿಸಿದರು. ಕೇವಲ 55 ಬಾಲ್ ಎದುರಿಸಿರುವ ಅವರು, 123★ ರನ್ ಬಾರಿಸಿದರು. ಇದರಲ್ಲಿ 10 ಬೌಂಡರಿ 8 ಸಿಕ್ಸರ್ ಸೇರಿವೆ. ಇವರ ಬ್ಯಾಟಿಂಗ್‌ಗೆ ಜ್ಯಾಕ್ಸ್, ಹಾರ್ದಿಕ್ ಸಾಥ್ ಸಿಕ್ಕ ನಂತರ ಮುಂಬೈ ಅಬ್ಬರಿಸಿತು.

ಅಬ್ಬರದ ಆರಂಭ: ಟಾಸ್ ಗೆದ್ದ ಮುಂಬೈ ಇಂಡಿಯನ್ಸ್ ಅಚ್ಚರಿಯ ನಡೆಯಲ್ಲಿ ಬ್ಯಾಟಿಂಗ್ ಆಯ್ದುಕೊಂಡಿತು. ಅದರಂತೆ ವಿಲ್ ಜ್ಯಾಕ್ಸ್ ಹಾಗೂ ರಯಾನ್ ರಿಕೆಲ್ಟನ್ ಅವರ ಆಟದೊಂದಿಗೆ ಭರ್ಜರಿ ಆರಂಭ ಪಡೆಯಿತು. ರಯಾನ್ ರಿಕೆಲ್ಟನ್ ಅಬ್ಬರಕ್ಕೆ ಹೈದರಾಬಾದಿನ ಬೌಲರ್‌ಗಳು ತತ್ತರಿಸಿದರು. ಶುರುವಿನಲ್ಲಿ ಅವರ ಅಬ್ಬರಕ್ಕೆ ವಿಲ್ ಜ್ಯಾಕ್ಸ್ ಅವರ ಸಾಥ್ ಸಿಕ್ಕಿತು. ಇಬ್ಬರೂ ಹೈದರಾಬಾದ್‌ನ ಎಲ್ಲಾ ಯೋಜನೆಗಳನ್ನು ವಿಫಲಗೊಳಿಸಿದರು. ರಿಕೆಲ್ಟನ್ ಅರ್ಧಶತಕದತ್ತ ಸಾಗಿದರು. ವಿಲ್ ಜ್ಯಾಕ್ಸ್ ಕೂಡ ಬಾನಿನೆತ್ತರದ ಸಿಕ್ಸರ್‌ಗಳನ್ನು ಬಾರಿಸಿ ಸೆಟ್ ಆದರು. ಪವರ್‌ಪ್ಲೇ ಮುಕ್ತಾಯಕ್ಕೆ ಮುಂಬೈ 78 ರನ್ ಗಳಿಸಿತು.



ವೇಗದ ಶತಕ ದಾಖಲೆ

ಮುಂಬೈನಲ್ಲಿ 44 ಬಾಲ್‌ಗಳಲ್ಲಿ ಶತಕ ಬಾರಿಸಿರುವ ರಯಾನ್ ದಾಖಲೆಯೊಂದನ್ನು ಮಾಡಿದರು. ವೇಗದ ಶತಕ ಬಾರಿಸುವ ವಿಚಾರದಲ್ಲಿ ಮಿಂಚಿದ ಅವರು, ಮುಂಬೈ ಪರ ಅತಿ ವೇಗದ ಶತಕ ಬಾರಿಸಿದ ಆಟಗಾರ ಅನಿಸಿಕೊಂಡರು. ಇವರಿಗೂ ಮುನ್ನ ಈ ಸಾಧನೆ ಸನತ್ ಜಯಸೂರ್ಯ ಅವರ ಹೆಸರಲ್ಲಿತ್ತು. ಅವರು 45 ಬಾಲ್‌ಗಳಲ್ಲಿ ಶತಕ ಬಾರಿಸಿದ್ದರು.

ರಿಕೆಲ್ಟನ್ ಅಬ್ಬರ

23 ಬಾಲ್‌ಗಳಲ್ಲಿ ರಿಕೆಲ್ಟನ್ ಅರ್ಧಶತಕ ಬಾರಿಸಿದರು. ಇದು ಅವರ ಐಪಿಎಲ್‌ನ ಅತಿ ವೇಗದ ಅರ್ಧಶತಕವಾಗಿದೆ. ಪವರ್‌ಪ್ಲೇ ಮುಗಿದ ನಂತರವೂ ಇವರಿಬ್ಬರ ಅಬ್ಬರ ಮುಂದುವರಿದಿತ್ತು. ತಂಡದ ಮೊತ್ತ 93 ರನ್‌ಗಿದ್ದಾಗ 46(22ಎ, 5 ಬೌ, 3ಸಿ) ಗಳಿಸಿದ್ದ ವಿಲ್ ಜ್ಯಾಕ್ಸ್ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ಸೂರ್ಯ ಕೂಡ 5 ರನ್ ಮಾತ್ರಕ್ಕೆ ವಿಕೆಟ್ ಒಪ್ಪಿಸಿದರು.

ನಮನ್ ಧಿರ್ ಸಿಂಗಲ್‌ಗಳ ಮೂಲಕ ಸೆಟ್ ಆದರೆ ಇತ್ತ ರಿಕೆಲ್ಟನ್ ಅಬ್ಬರ ಬ್ಯಾಟಿಂಗ್ ಮುಂದುವರಿಸಿದರು. ಬಾನಿನೆತ್ತರದ ಸಿಕ್ಸರ್, ಅಬ್ಬರದ ಬೌಂಡರಿಗಳನ್ನು ಬಾರಿಸಿದ ಅವರು, 44 ಬಾಲ್ ಮಾತ್ರದಲ್ಲಿ ಶತಕ ಬಾರಿಸಿದರು. ನಮನ್ 22 ರನ್‌ಗೆ ವಿಕೆಟ್ ಒಪ್ಪಿಸಿದರು. ಅಲ್ಲಿಗೆ ಮಧ್ಯಮ ಓವರ್‌ಗಳು ಮುಕ್ತಾಯಗೊಂಡವು. ಮುಂಬೈ ಈ ಓವರ್‌ಗಳಲ್ಲಿ 124 ರನ್ ಗಳಿಸಿತು. ಡೆತ್ ಓವರ್‌ಗಳಲ್ಲಿ ಪಾಂಡ್ಯ ಆರ್ಭಟ ಶುರುವಾಯಿತು.

ಇಷ್ಟು ಪಂದ್ಯಗಳಲ್ಲಿ ಹಿನ್ನಡೆ ಅನುಭವಿಸಿದ್ದ ಹಾರ್ದಿಕ್ ಪಾಂಡ್ಯ ಆವೃತ್ತಿಯಲ್ಲಿ ಇದೇ ಮೊದಲ ಬಾರಿಗೆ ಅಬ್ಬರದ ಬ್ಯಾಟಿಂಗ್ ಮಾಡಿದರು. 2 ಬೌಂಡರಿ, 2 ಸಿಕ್ಸರ್‌ಗಳೊಂದಿಗೆ 31 ರನ್ ಮಾಡಿ ವಿಕೆಟ್ ಒಪ್ಪಿಸಿದರು. ಇತ್ತ ರಯಾನ್ ಮಾತ್ರ ಶತಕದ ನಂತರವೂ ಅಬ್ಬರದ ಬ್ಯಾಟಿಂಗ್ ಮಾಡಿದರು. ತಿಲಕ್ ವರ್ಮಾ ವಿಕೆಟ್ ಒಪ್ಪಿಸಿದರು. ಕೊನೆಯ ಓವರ್‌ನಲ್ಲಿ ಮತ್ತೆ ಮಿಂಚಿದ ರಿಕೆಲ್ಟನ್ ಪಂದ್ಯದ ಸ್ಕೋರ್ 240 ಅನ್ನು ದಾಟಿಸಿದರು. ಮುಂಬೈ ಡೆತ್ ಓವರ್‌ನಲ್ಲಿ 44 ರನ್ ಗಳಿಸಿತು.

ಟಿಟಿ: ಭಾರತಕ್ಕೆ ಭರ್ಜರಿ ಗೆಲುವು

ಹೊಸದಿಲ್ಲಿ: ಭಾರತೀಯ ಪುರುಷರ ತಂಡವು ವಿಶ್ವ ತಂಡ ಟೇಬಲ್ ಟೆನಿಸ್ ಚಾಂಪಿಯನ್‌ಶಿಪ್‌ನಲ್ಲಿ ತನ್ನ ಅಭಿಯಾನವನ್ನು ಗೆಲುವಿನೊಂದಿಗೆ ಆರಂಭಿಸಿ ಟ್ಯುನೀಷಿಯ ವಿರುದ್ಧ 3–0 ಅಂತರದ ಸುಲಭ ಜಯ ಸಾಧಿಸಿದೆ. ಮಹಿಳಾ ತಂಡಕ್ಕೆ ಉಗಾಂಡಾ ತಂಡ ಹಾಜರಾಗದ ಕಾರಣ ವಾಕ್‌ಓವರ್ ಲಭಿಸಿದೆ.

ಮನೂಷ್ ಶಾ, ಮನವ್ ಠಕ್ಕರ್ ಹಾಗೂ ಹರ್ಮೀತ್ ದೇಸಾಯಿ ಭಾರತದ ಪರ ಉತ್ತಮ ಪ್ರದರ್ಶನ ನೀಡಿದರು. ಮನೂಷ್ ಶಾ ಆರಂಭಿಕ ಪಂದ್ಯದಲ್ಲಿ ವಾಸ್ಸಿಂ ಎಸ್ಸಿದ್ ವಿರುದ್ಧ 3–1 ಅಂತರದ ಜಯ ಸಾಧಿಸಿ ತಂಡಕ್ಕೆ ಮುನ್ನಡೆ ತಂದರು. ನಂತರ ಮನವ್ ಠಕ್ಕರ್ ಮತ್ತು ಹರ್ಮೀತ್ ದೇಸಾಯಿ ಇಬ್ಬರೂ 3–0 ಅಂತರದ ಸುಲಭ ಜಯ ದಾಖಲಿಸಿದರು.

ಠಕ್ಕರ್ ಅಬ್ಬರ: ವಿಶ್ವ ರ್‍ಯಾಂಕಿಂಗ್‌ನಲ್ಲಿ ಮೂವತ್ತೆಂಟನೇ ಸ್ಥಾನದಲ್ಲಿರುವ ಠಕ್ಕರ್, ಯೂಸೆಫ್ ಐಡ್ಲಿ ವಿರುದ್ಧ 11–3, 11–3, 11–3 ಅಂಕಗಳ ಅಂತರದಲ್ಲಿ ಏಕಪಕ್ಷೀಯ ಗೆಲುವು ಸಾಧಿಸಿದರು. ಕೊನೆಯ ಪಂದ್ಯದಲ್ಲಿ ದೇಸಾಯಿ, ಅಬೂಬಕರ್ ಬೋರಾಸ್ ವಿರುದ್ಧ 11–5, 11–4, 11–8 ಅಂತರದಲ್ಲಿ ಗೆದ್ದು ಭಾರತಕ್ಕೆ ಸಂಪೂರ್ಣ ಜಯ ತಂದುಕೊಟ್ಟರು. ಮೊದಲ ಹಂತದ ಏಳನೇ ಗುಂಪಿನಲ್ಲಿ ಭಾರತ ತಂಡ ಅಗ್ರಸ್ಥಾನಕ್ಕೇರಿದೆ. ಈ ಗುಂಪಿನಲ್ಲಿ ಸ್ಲೋವಾಕಿಯಾ ಹಾಗೂ ಗ್ವಾಟೆಮಾಲಾ ತಂಡಗಳೂ ಸೇರಿವೆ. ಇದಕ್ಕೂ ಮೊದಲು ಮಹಿಳಾ ತಂಡಕ್ಕೆ ಉಗಾಂಡಾ ವಿರುದ್ಧದ ಪಂದ್ಯದಲ್ಲಿ 3–0 ಅಂತರದ ವಾಕ್‌ಓವರ್ ಲಭಿಸಿತು. ಪುರುಷರಂತೆ ಮಹಿಳಾ ತಂಡವೂ ಇದೇ ಹಂತದಲ್ಲಿ ಸ್ಪರ್ಧಿಸುತ್ತಿದೆ. ಅಗ್ರ ತಂಡಗಳು ಹಾಗೂ ಆತಿಥೇಯ ಇಂಗ್ಲೆಂಡ್ ಮೊದಲ ಹಂತದ ಎ ವಿಭಾಗದಲ್ಲಿ ಆಡುತ್ತಿದ್ದರೆ, ಉಳಿದ ತಂಡಗಳು ಬಿ ವಿಭಾಗದಲ್ಲಿ ಸ್ಪರ್ಧಿಸುತ್ತಿವೆ.



ಕ್ರೀಡಾ ಪ್ರಾಧಿಕಾರದಿಂದ ಸಹಾಯ

CÜÄÜÊÜá«æÃQÃàvÝ±ÝÃ PÝÃÜÊÜâaÝf¿á®...Ñ±...
WÝXÊÜáÓÜñÜÍ ÜÓÜÖÝ¿áJ ÜXÔ æÔ ÜoeñaæÊÜáñÜá¤
»ÝWÜÊÜ×ÓÜáÈPæWÝXñaæãÝñÜºPÜáRÓææÜáæÊÜÃÜá±ÝÀá
ÊÜáigãÃÜáÊÜÞvÜÇÝX æ¸æWÜÜÜäÄ®ÜÈÉÃÝÑóà¿á
ñÜÃÜ¸æàßÃÜ ÜÝÚPÜáeqàÇ..x®ÜÈÉ æàñÜÃÜ¸æà£
ÎÃÜÊÜäBÁãàiÓÜÇÝÀáñÜáÄ æàÄà£ñÜívÜWÜÜÜ
»ÝWÜÊÜ×ÓÜáÈPæWæÓÜÖÝ¿áÊÝWÜÄáþææÝÇ.. pæÓ..
¶æÜÄæÜæÐÜ°..WæÓÜÊÜÞÃÜÄÜÃÜÖÜÃÜ±ÝÀáWÜÐæÜÜc
ÖÜ| ¹vÜáWÜvæ ÊÜÞvÜÇÝX¨æ.

ತಂಡ ಮಾದರಿಯ ಪಂದ್ಯದಲ್ಲಿ ಹೋಪ್ ಉಳಿಸಿದ ಕನ್ನಡಿಗ

ಥಾಮಸ್ ಕಪ್: ಆಯುಷ್‌ಗೆ ಜಯ

ಹೊಸದಿಲ್ಲಿ: ಭಾರತದ ಥಾಮಸ್ ಕಪ್ ಗುಂಪು ಹಂತದ ಅಂತಿಮ ಪಂದ್ಯದಲ್ಲಿ ಚೀನಾ ವಿರುದ್ಧ ಆಯುಷ್ ಶೆಟ್ಟಿ ಬುಧವಾರ ಮಹತ್ವದ ಜಯ ಸಾಧಿಸಿ ತಂಡದ ಆಸೆ ಜೀವಂತವಾಗಿರಿಸಿದ್ದಾರೆ. ಆಯುಷ್ ಶೆಟ್ಟಿ ಚೀನಾದ ವಿಶ್ವ ಕ್ರಮಾಂಕ 15 ಆಟಗಾರ ವೆಂಗ್ ಹಾಂಗ್ ಯಾಂಗ್ ವಿರುದ್ಧ 17–21, 21–13, 21–15 ಅಂಕಗಳಿಂದ 70 ನಿಮಿಷಗಳ ಹೋರಾಟದ ಪಂದ್ಯದಲ್ಲಿ ಗೆಲುವು ಸಾಧಿಸಿದರು. ಈ ಫಲಿತಾಂಶದ ಬಳಿಕ ಐದು ಪಂದ್ಯಗಳ ಸರಣಿಯಲ್ಲಿ ಚೀನಾ 2–1 ಮುನ್ನಡೆ ಕಾಯ್ದುಕೊಂಡಿದೆ.ಇದಕ್ಕೂ ಮೊದಲು ನಡೆದ ಡಬಲ್ಸ್ ಪಂದ್ಯದಲ್ಲಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ, ಲಿಯಾಂಗ್ ವೇಯ್ ಕಾಂಗ್ ಮತ್ತು ವಾಂಗ್ ಚಾಂಗ್ ವಿರುದ್ಧ 13–21, 21–13, 24–26 ಅಂತರದಲ್ಲಿ ಹೋರಾಟದ ಸೋಲು ಅನುಭವಿಸಿತು. ಆರಂಭಿಕ ಸಿಂಗಲ್ಸ್ ಪಂದ್ಯದಲ್ಲಿ ಲಕ್ಷ್ಯ ಸೇನ್ ವಿರುದ್ಧ ಲಿ ಶಿ ಫೆಂಗ್ 21–19, 8–21, 21–12 ಅಂಕಗಳಿಂದ ಗೆದ್ದು ಚೀನಾಕ್ಕೆ ಮುನ್ನಡೆ ತಂದಿದ್ದರು. ಭಾರತ ಈಗಾಗಲೇ ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಪಡೆದಿದ್ದರೂ, ಚೀನಾ ವಿರುದ್ಧದ ಉತ್ತಮ ಪ್ರದರ್ಶನ ಮುಂದಿನ ಹಂತಕ್ಕೆ ಆತ್ಮವಿಶ್ವಾಸ ಹೆಚ್ಚಿಸಲಿದೆ. ಇದೀಗ ಉಳಿದಿರುವ ಪಂದ್ಯಗಳಲ್ಲಿ ಎಚ್‌ಎಸ್ ಪ್ರಣಯ್ ಹಾಗೂ ಎಂ. ಅರ್ಜುನ್ ಹರಿಹರನ್ ಅಮ್ಸಕರುನನ್ ಡಬಲ್ಸ್ ಜೋಡಿ ಭಾರತದ ಪರ ಹೋರಾಟ ತಿರುಗಿಸುವ ಹೊಣೆ ಹೊತ್ತಿದ್ದಾರೆ.



ಶೆಟ್ಟಿ ಪರಾಕ್ರಮ

ಆಯುಷ್ ಶೆಟ್ಟಿ ಮೊದಲಿನಿಂದಲೂ ಉತ್ತಮ ಪ್ರದರ್ಶನ ನೀಡಿದರು. ಆರಂಭಿಕ ಸೆಟ್‌ನಲ್ಲಿ ಎದುರಾಳಿ ಹಾಂಗ್ ಯಾಂಗ್ ಭಾರೀ ಮುನ್ನಡೆ ಸಾಧಿಸಿದರು. ಶೆಟ್ಟಿ ಎದುರುತ್ತರ ಕೊಟ್ಟರೂ ಮೊದಲ ಸೆಟ್ ಎದುರಾಳಿ ಪಾಲಾಯಿತು. ಎರಡನೇ ಸೆಟ್‌ನಲ್ಲಿ ಕಂಬ್ಯಾಕ್ ಮಾಡಿದ ಆಯುಷ್ ಹಿಡಿತದೊಂದಿಗೆ ಗೆಲುವು ಸಾಧಿಸಿದರು. ಅಲ್ಲಿಗೆ ಸ್ಕೋರ್ 17–21, 21–13 ಇತ್ತು. ಅಂತಿಮ ಸೆಟ್‌ನಲ್ಲೂ ಶೆಟ್ಟಿ ಉತ್ತಮ ಪ್ರದರ್ಶನ ನೀಡಿದರು. ಅಲ್ಲೂ 21–15 ರಿಂದ ಗೆದ್ದು ಮುನ್ನಡೆ ತಂದರು.

ಹೊಸ ಸವಾಲುಗಳ ಮೇಲೆ ಗಮನ: ಆ್ಯಂಡಿ

ಅಹಮದಾಬಾದ್: ಹಿಂದಿನ ವರ್ಷವನ್ನು ಹಿಂದೆ ಬಿಟ್ಟು ಈ ಸೀಸನ್‌ನ ಹೊಸ ಸವಾಲುಗಳ ಮೇಲೆ ಗಮನ ಹರಿಸಿದ್ದೇವೆ. ಆಟಗಾರರು ಈ ಪ್ರಯಾಣವನ್ನು ಆನಂದಿಸುತ್ತಿದ್ದಾರೆ. ಗುರುವಾರದ ಪಂದ್ಯ ಮತ್ತೊಂದು ಉತ್ತಮ ಸವಾಲಾಗಿರಲಿದೆ, ಎಂದು ಆರ್‌ಸಿಬಿ ತಂಡದ ಪ್ರಧಾನ ಕೋಚ್ ಆ್ಯಂಡಿ ಫ್ಲವರ್ ಹೇಳಿದರು.

ಗೆಲುವು–ಸೋಲಿನ ಸಮತೋಲನದ ಬಗ್ಗೆ ಮಾತನಾಡಿದ ಅವರು, ಗೆಲುವು ಅಥವಾ ಸೋಲು ಯಾವುದನ್ನೂ ಹೆಚ್ಚು ಹೆಚ್ಚಾಗಿ ತೆಗೆದುಕೊಳ್ಳಬಾರದು. ಪ್ರತಿಯೊಂದು ಪಂದ್ಯವೂ ಹೊಸ ಸವಾಲು ನಾವು ಅದನ್ನೇ ಗಮನದಲ್ಲಿಟ್ಟುಕೊಂಡಿದ್ದೇವೆ, ಎಂದರು. ತಂಡದ ಬಲಗಳ ಕುರಿತು ಫ್ಲವರ್, ಪವರ್‌ಪ್ಲೇ ಅವಧಿಯಲ್ಲಿ ವಿಕೆಟ್ ಪಡೆಯುವಲ್ಲಿ ನಾವು ಉತ್ತಮವಾಗಿದ್ದೇವೆ. ಜೊತೆಗೆ ಬ್ಯಾಟಿಂಗ್‌ನಲ್ಲಿ ಆಳವಿದ್ದು ತಂಡಕ್ಕೆ ಆತ್ಮವಿಶ್ವಾಸ ನೀಡುತ್ತಿದೆ, ಎಂದರು.

ನರೇಂದ್ರ ಮೋದಿ ಕ್ರೀಡಾಂಗಣದ ಪರಿಸ್ಥಿತಿಗಳ ಬಗ್ಗೆ, ಯಾವುದೇ ಪರಿಸ್ಥಿತಿಗೂ ನಾವು ಸಿದ್ಧ. ವಿಭಿನ್ನ ಮೈದಾನಗಳಲ್ಲಿ ಪರಿಣಾಮಕಾರಿಯಾಗಿ ಆಡಬಲ್ಲ ದಾಳಿ ನಮ್ಮಲ್ಲಿದೆ. ಬ್ಯಾಟಿಂಗ್ ಘಟಕವೂ ಯಾವುದೇ ಪರಿಸ್ಥಿತಿಯಲ್ಲಿ ಉತ್ತಮ ಪ್ರದರ್ಶನ ನೀಡಬಲ್ಲದು, ಎಂದು ತಿಳಿಸಿದರು. ನಮ್ಮ ಸ್ಥಾನವನ್ನು ಕಾಯ್ದುಕೊಳ್ಳುವುದಕ್ಕಿಂತ ಪ್ರತಿಯೊಂದು ಪಂದ್ಯವನ್ನೂ ಧೈರ್ಯದಿಂದ ಎದುರಿಸುವುದು ಮುಖ್ಯ. ಅನಿಶ್ಚಿತತೆಯನ್ನು ಸ್ವೀಕರಿಸಿ ಆಕ್ರಮಣಕಾರಿ ಮನೋಭಾವದಿಂದ ಆಡಬೇಕು, ಎಂದರು.

ಅನುಭವ ಸಂಪನ್ನ ಸ್ವಿಂಗ್ ಬೌಲರ್‌ಗಳು, ವಿಶ್ವದರ್ಜೆಯ ವೇಗದ ಬೌಲರ್ ಹ್ಯಾಜೆಲ್ವುಡ್ ಹಾಗೂ ವಿಭಿನ್ನ ಕೌಶಲ್ಯಗಳ ಸ್ಪಿನ್ನರ್‌ಗಳು ನಮ್ಮಲ್ಲಿದ್ದಾರೆ. ಈ ವೈವಿಧ್ಯತೆ ವಿಭಿನ್ನ ಹಂತಗಳಲ್ಲಿ ನಮಗೆ ಸಹಕಾರಿಯಾಗುತ್ತದೆ, ಎಂದು ಹೇಳಿದರು. ತಂಡದ ನಾಯಕ ರಜತ್ ಪಾಟೀದಾರ್ ಬಗ್ಗೆ ಪ್ರಶಂಸಿಸಿದ ಫ್ಲವರ್, ಅವರು ತಂಡವನ್ನು ಅತ್ಯುತ್ತಮವಾಗಿ ಮುನ್ನಡೆಸುತ್ತಿದ್ದಾರೆ. ಸುತ್ತಲಿನ ಬೆಂಬಲದೊಂದಿಗೆ ಒಳ್ಳೆಯ ವಾತಾವರಣ ನಿರ್ಮಿಸಿದ್ದಾರೆ ಎಂದರು. ಈಗಾಗಲೇ ಉತ್ತಮ ಫಾರ್ಮ್ ಮತ್ತು ಸ್ಪಷ್ಟ ಮನೋಭಾವದೊಂದಿಗೆ ಸಾಗುತ್ತಿರುವ ಆರ್‌ಸಿಬಿ, ಗುಜರಾತ್ ಟೈಟನ್ಸ್ ವಿರುದ್ಧ ಮತ್ತೊಮ್ಮೆ ಗೆದ್ದು ತನ್ನ ಗೆಲುವಿನ ಸರಣಿಯನ್ನು ಮುಂದುವರಿಸಲು ಎದುರುನೋಡುತ್ತಿದೆ.



ಪದಬಂಧ

ರಾಜಾ ಸಂಗಮೇಶ ಹಿರೇಮಠ



5969

ಎಡದಿಂದ ಬಲಕ್ಕೆ
1.ಮಧ್ಯಾಹ್ನವನ್ನು ಹೀಗೂ ಹೇಳಬಹುದು (5)
3.ಪೂಜೆಗಾಗಿ ನೀರು ತುಂಬಿಡುವ ಬಿಂದಿಗೆ (3)
5.ಅಪಹಾಸ್ಯಕ್ಕೊಳಗಾದವನು (4)
8.ಅತಿ ಹೆಚ್ಚು ಕಾಲುವೆ, ನೀರಾವರಿ ಹೊಂದಿದ ರಾಜ್ಯ (6)
10.ಮನುಷ್ಯ–ರಾಕ್ಷಸ ಕೂಡಿ ಕಾಣುತ್ತಿದ್ದಾರೆ (6)
13.ಉಣ್ಣೆಯುಳ್ಳ ಪ್ರಾಣಿಗಳ ಪಾಲಕ ತಿರುಗಿದ್ದಾನೆ (4)
16.ಲಕ್ಷಣ–ಚಿಹ್ನೆಯಿದು (3)
17.ಗೌರವಿಸು–ಸನ್ಮಾನಿಸು (5)

ಮೇಲಿನಿಂದ ಕೆಳಕ್ಕೆ
1.ಮೃದುತನ ಮೊದಲಿರುವ ಕಣ್ಣು(3)
2.ಚರಣವಿಲ್ಲಿ ತಲೆಕೆಳಗಾಗಿದೆ (2)
3.ಪ್ರವಾಸಿಗನಿಲ್ಲಿ ತಲೆಕೆಳಗಾಗಿದ್ದಾನೆ (4)
4.ದೊಡ್ಡ ಸಭೆ–ಸಮ್ಮೇಳನವಿದು (4)
6.ಸ್ನೇಹದ ಸಮಾನಪದ (4)
7.ಮಡಿಲು ಇಲ್ಲಿ ಉಲ್ಟಾ ಕಾಣುತ್ತಿದೆ (2)
9.ಪ್ರದೇಶಕ್ಕೆ ತಕ್ಕ ಜೀವನ ಪದ್ಧತಿ (4)
10.ಕಾಣದಂತೆ ಅದೃಶ್ಯನಾಗು (4)
11.ವಿದೇಶಿಯರು ನೆಲೆಸಿರುವ ಪ್ರದೇಶ (4)
12.ಜಮಾ–ಖರ್ಚು ಬರೆದಿಡುವ ಪುಸ್ತಕ (2)
14.ನರ್ತಿಸುವಂತೆ ಮಾಡುವಿಕೆ (3)
15.ತಂಪು ಕೊಡುವ ಈ ಮರಸಮೂಹ (2)

5968 ಉತ್ತರ

ಎಡದಿಂದ ಬಲಕ್ಕೆ:
1.ದಾತ್ಯೂಹ
3.ಅಂಗಸಾಧನೆ 5.ಲಲಿತ
6.ಒನಪು 8.ಸವಿಗಂಪು
10.ರಾಹುಕೇತು
12.ಕಂಪನ 15.ಪಲ್ಲಟ
16.ಕಲಾಕೋವಿದ
17.ಕಾದಾಡು

ಮೇಲಿನಿಂದ ಕೆಳಕ್ಕೆ :
1.ದಾಸಾನುದಾಸ 2.ಹಲಗೆ
3.ಅಂತೆಕಂತೆ 4.ನೆನಪು
7.ಕೇತನ 9.ವಿರೂಪ
11.ತುಡುಗುಮಾಡು
12.ಜನಪದ 13.ಕಂಟಕ
14.ಜಟಕಾ

ಕಿರುಸುದ್ದಿ

ಬಯಲು ಪ್ರದೇಶದಲ್ಲಿ 20 ಗಂಟೆಗಳ ಕಾಲ ಉರಿದ ಹಣತೆ

ಕೈಕಂಬ: ದೈವಸ್ಥಾನದ ಕಟ್ಟೆಯ ಮೇಲೆ ಉರಿಸಿಟ್ಟ ದೀಪವೊಂದು ಸತತ 20 ಗಂಟೆಗಳ ಕಾಲ ಉರಿದು ಭಕ್ತರಲ್ಲಿ ಆಚ್ಚರಿ ಹುಟ್ಟಿಸಿದ ವಿಸ್ಮಯಕಾರಿ ಘಟನೆಯೊಂದು ಮಳಲಿ (ಮಣೇಲ್)ಯ ಉಳಿಪಾಡಿ ಕೊರ್ದಬ್ಬು ದೈವಸ್ಥಾನದಲ್ಲಿ ನಡೆದಿದೆ. ಮಳಲಿಯ ಸಮೀಪದ ಉಳಿಪಾಡಿಗುತ್ತಿನ ಮತ್ತು ಗ್ರಾಮದ ಕೊರ್ದಬ್ಬು ದೈವಸ್ಥಾನದ ಸುಬ್ಬಿಗುಳಿಗ ಎಂಬ ದೈವದ ಕಟ್ಟೆಯಲ್ಲಿ ಕಳೆದ ಭಾನುವಾರ ಸಂಜೆ ನಾಲ್ಕು ಗಂಟೆಗೆ ಸಣ್ಣದಾದ ದೀಪವೊಂದನ್ನು ಹಚ್ಚಿಡಲಾಗಿತ್ತು.



ಇದು ಪುಟ್ಟದಾದ ದೀಪವಾಗಿದ್ದು, ದೀಪಕ್ಕೆ ಪೂರ್ತಿ ಎಣ್ಣೆ ತುಂಬಿದರೆ ಗರಿಷ್ಠ ಎರಡರಿಂದ ಮೂರು ಗಂಟೆ ದೀಪ ಉರಿಯುವಷ್ಟು ಎಣ್ಣೆ ತುಂಬುತ್ತದೆ. ಆದರೆ ಭಾನುವಾರ ಸಂಜೆ ನಾಲ್ಕು ಗಂಟೆಗೆ ಹಚ್ಚಿದ ದೀಪ ಸೋಮವಾರ ಮಧ್ಯಾಹ್ನವರೆಗೆ ಸತತವಾಗಿ 20 ಗಂಟೆಗಳ ಕಾಲ ಉರಿದಿದೆ. ಭಾನುವಾರ ಉರಿಸಿದ ಬಳಿಕ ದೀಪಕ್ಕೆ ಎಣ್ಣೆ ಹಾಕಿಲ್ಲ. ಬತ್ತಿ ಬದಲಿಸಿಲ್ಲ, ಆದರೂ ದೀಪ ಉರಿದಿದೆ ಎಂದು ಸ್ಥಳೀಯ ಭಕ್ತರು ಮಾಹಿತಿ ನೀಡಿದ್ದಾರೆ. ಸಾಮಾನ್ಯವಾಗಿ ಕೋಣೆಯ ಒಳಗೆ ಹಚ್ಚಿದ ದೀಪ ಇಷ್ಟು ೀರ್ಘ ಸಮಯ ಉರಿಯಲು ಅಸಾಧ್ಯ. ತೆರೆದ ಬಯಲು ಪ್ರದೇಶದಲ್ಲಿರುವ ಕಟ್ಟೆಯ ಮೇಲೆ ಮತ್ತು ಬೀಸುವ ಗಾಳಿಯ ನಡುವೆಯೂ 20ಗಂಟೆಗಳ ಕಾಲ ದೀಪ ಉರಿಯುತ್ತಲೇ ಇದ್ದುದು ದೈವಗಳ ಕಾರಣಿಕ ಎನ್ನುತ್ತಾರೆ ದೈವ ಭಕ್ತರು. ಮೊನ್ನೆಯಷ್ಟೇ ಇಲ್ಲಿ ನೇಮೋತ್ಸವ ನಡೆದಿತ್ತು. ಅದಾದ ಬಳಿಕ ಈ ವಿಸ್ಮಯಕಾರಿ ಘಟನೆ ನಡೆದಿದ್ದು, 20 ಗಂಟೆಗಳ ದೀಪ ಉರಿಯಲು ವೈಜ್ಞಾನಿಕ ಕಾರಣ ಏನೇ ಇದ್ದರೂ ಭಕ್ತರಲ್ಲಿ ದೈವಗಳ ಮೇಲಿನ ಭಕ್ತಿ, ನಂಬಿಕೆ ಹೆಚ್ಚುವಂತೆ ಮಾಡಿದೆ ದೀಪ.

ಚಾರ್ಮಾಡಿ ಘಾಟಿಯಲ್ಲಿ ಒಂಟಿ ಸಲಗ

ಬೆಳ್ತಂಗಡಿ: ಚಿಕ್ಕಮಗಳೂರು–ದಕ ಜಿಲ್ಲೆಗಳನ್ನು ಸಂಪರ್ಕಿಸುವ ಚಾರ್ಮಾಡಿ ಘಾಟಿಯ 3ನೇ ತಿರುವಿನಲ್ಲಿ ಬುಧವಾರ ಒಂಟಿ ಸಲಗ ಕಾಣಿಸಿಕೊಂಡಿದ್ದು, ಪ್ರಯಾಣಿಕರಲ್ಲಿ ಆತಂಕ ಮೂಡಿಸಿದೆ. ಘಾಟಿ ತಿರುವಿನ ಎತ್ತರದ ಪ್ರದೇಶದಲ್ಲಿ ನಿಂತಿದ್ದ ಕಾಡಾನೆ ರಸ್ತೆ ಕಡೆ ಇಳಿಯಲು ಜಾಗ ಹುಡುಕುತ್ತಿದ್ದು,ಕೆಳಗಿಳಿಯಲು ಹೆದರಿ ಕೆಲಕಾಲ ಅಲ್ಲೇ ನಿಂತಿತ್ತು. ಮೇಲ್ಭಾಗದಿಂದ ಬೀಳುವ ಭೀತಿಯಿಂದ ಸುರಕ್ಷಿತ ದಾರಿ ಹುಡುಕುತ್ತಿದ್ದ ಸಲಗವನ್ನು ಕಂಡು ವಾಹನ ಸವಾರರು ಭಯಗೊಂಡು ತಮ್ಮ ವಾಹನಗಳನ್ನು ನಿಲ್ಲಿಸಿದ್ದಾರೆ. ಘಟನಾ ಸ್ಥಳದಲ್ಲಿ ಮೊಬೈಲ್ ನೆಟ್ವರ್ಕ್ ಸಮಸ್ಯೆಯಿಂದ ಅರಣ್ಯ ಇಲಾಖೆ ಅಥವಾ ಸಂಬಂಧಪಟ್ಟವರಿಗೆ ಮಾಹಿತಿ ನೀಡಲು ಪ್ರವಾಸಿಗರು ಪರದಾಡಿದರು.

ಎಟಿಎಂ ಹಣ ಇದ್ದ ವಾಹನದಿಂದ ಕಳವು: ಇನ್ನೋರ್ವ ಆರೋಪಿ ಸೆರೆ

ಉಪ್ಪಳ: ಎಟಿಎಂಗೆ ಹಣ ತುಂಬಿಸಲು ಬಂದ ವಾಹನದಿಂದ 50 ಲಕ್ಷ ರೂಪಾಯಿ ಕಳವು ನಡೆಸಿದ ಪ್ರಕರಣದಲ್ಲಿ ಇನ್ನೋರ್ವ ಆರೋಪಿ ಸೆರೆಗೀಡಾಗಿದ್ದಾನೆ. ತಮಿಳುನಾಡು ತಿರುಚ್ಚಿರಾಪಳ್ಳಿ ದಿಂಡಿಗಲ್ ಮೈನ್ ರೋಡ್ ರಾಮ್‌ಜಿ ನಗರದ ಆರುಮುಗನ್ ಯಾನೆ ಕಿಟ್ಟು (55) ಎಂಬಾತ ಬಂಧಿತ ಆರೋಪಿಯಾಗಿದ್ದಾನೆ. ಈತನನ್ನು ಮಂಜೇಶ್ವರ ಎಸ್‌ಐ ದಿನೇಶ್ ರಾಜನ್ ನೇತೃತ್ವದ ಪೊಲೀಸರು ಮಂಗಳವಾರ ಛತ್ತೀಸ್‌ಘಡದಿಂದ ಬಂಧಿಸಿದ್ದಾರೆ.



ಬಳಿಕ ಆರೋಪಿಯನ್ನು ಮಂಜೇಶ್ವರ ಪೊಲೀಸ್ ಠಾಣೆಗೆ ತಲುಪಿಸಲಾಗಿದೆ. 2024 ಮಾರ್ಚ್ 27ರಂದು ಮಧ್ಯಾಹ್ನ 2 ಗಂಟೆಗೆ ಉಪ್ಪಳ ಪೇಟೆಯ ಆಕ್ಸಿಸ್ ಬ್ಯಾಂಕ್ ಎಟಿಎಂಗೆ ಹಣ ತುಂಬಿಸಲು ಬಂದ ವಾಹನದಿಂದ 50 ಲಕ್ಷ ರೂಪಾಯಿಗಳನ್ನು ಕಳವು ನಡೆಸಲಾಗಿತ್ತು. ಈ ಬಗ್ಗೆ ಎಟಿಎಂ ಕೌಂಟರ್‌ಗೆ ಹಣ ತುಂಬಿಸುವ ಆರುಮುಗನ್ ಹೊಣೆಗಾರಿಕೆ ವಹಿಸಿದ್ದ ಉಳಿಯತ್ತಡ್ಕ ನಿವಾಸಿ ಯತೀಂದ್ರ ಎಂಬವರು ನೀಡಿದ ದೂರಿನಂತೆ ಮಂಜೇಶ್ವರ ಪೊಲೀಸರು ಕೇಸು ದಾಖಲಿಸಿಕೊಂಡಿದ್ದರು. ಬಳಿಕ ಪೊಲೀಸರು ಘಟನೆ ಸ್ಥಳ ಸಹಿತ ವಿವಿಧೆಡೆಗಳ ಸಿಸಿ ಟಿವಿಕ್ಯಾಮರಾ ಪರಿಶೀಲಿಸಿದಾಗ ಆರೋಪಿಗಳ ಗುರುತು ಪತ್ತೆಯಾಗಿತ್ತು. ಇದರ ಆಧಾರದಲ್ಲಿ ಪೊಲೀಸರು ತನಿಖೆ ಮುಂದುವರಿಸಿದ್ದರು. ಹಣ ಕಳವು ನಡೆಸಿದ ಬಳಿಕ ಪರಾರಿಯಾಗಿದ್ದ ತಮಿಳುನಾಡು ನಿವಾಸಿಗಳಾದ ಮುತ್ತು ಕುಮಾರ್ ಹಾಗೂ ಕಾರ್ವರನ್ ಎಂಬಿಬ್ಬರನ್ನು ಪೊಲೀಸರು ಈ ಹಿಂದೆಯೇ ಬಂಧಿಸಿದ್ದರು. ಇವರನ್ನು ತನಿಖೆಗೊಳಪಡಿಸಿದಾಗ ಆರುಮುಗನ್ ಕೂಡಾ ಈ ಕಳವು ಪ್ರಕರಣದಲ್ಲಿ ಒಳಗೊಂಡಿರುವುದಾಗಿ ಪೊಲೀಸರಿಗೆ ಮಾಹಿತಿ ಲಭಿಸಿತ್ತು. ಆರುಮುಗನ್ ಛತ್ತೀಸ್ ಘಡ್‌ನಲ್ಲಿ ಇದ್ದಾನೆಂಬ ಮಾಹಿತಿ ಲಭಿಸಿದ ಬಳಿಕ ಮಂಜೇಶ್ವರ ಎಸ್‌ಐ ದಿನೇಶ್ ರಾಜನ್ ನೇತೃತ್ವದ ಪೊಲೀಸರ ತಂಡ ಆರೋಪಿಯನ್ನು ಪತ್ತೆಹಚ್ಚಿದೆ.

ಮರವಂತೆ ಬೀಚ್ ಬಳಿ ಭೀಕರ ಅಪಘಾತ: ಟ್ಯಾಂಕರ್, ಲಾರಿಗೆ ಗುದ್ದಿದ ಬಸ್

ಮೂವರ ದುರ್ಮರಣ, ಹಲವರಿಗೆ ಗಾಯ

ಕುಂದಾಪುರ : ಕಾಲೇಜು ಪ್ರವಾಸ ಹೊರಟಿದ್ದ ಬಸ್ಸು ರಸ್ತೆ ಬದಿ ನಿಂತಿದ್ದ ಟ್ಯಾಂಕರ್ ಮತ್ತು ಲಾರಿಗೆ ಡಿಕ್ಕಿ ಹೊಡೆದ ಪರಿಣಾಮ ಬಸ್ಸಿನಲ್ಲಿದ್ದ ಮೂವರು ಮೃತಪಟ್ಟ ಘಟನೆ ತ್ರಾಸಿ ಸಮೀಪದ ಮರವಂತೆ ಬೀಚ್ ಬಳಿ ಏ.29 ಬುಧವಾರ ಮಧ್ಯಾಹ್ನ ವೇಳೆ ನಡೆದಿದೆ.


ರಘು ಯಾನೆ ಉಮೇಶ, ರಂಗನಾಥ ಮತ್ತು ಹೇಮಂತ್ ಮೃತಪಟ್ಟ ದುರ್ದೈವಿಗಳು

ಘಟನೆ ವಿವರ

ಶಿವಮೊಗ್ಗ ಜಿಲ್ಲೆಯ ಶಂಕರಘಟ್ಟದ ಕುವೆಂಪು ಯೂನಿವರ್ ಸಿಟಿಯ ರಂಬಾಪುರಿ ಕಾಲೇಜಿನ ಅಂತಿಮ ವರ್ಷದ ಬಿಕಾಂ ವಿದ್ಯಾರ್ಥಿಗಳು ಪ್ರವಾಸದ ನಿಮಿತ್ತ ಭಾನುವಾರ ಹೊರಟಿದ್ದು, ದಾಂಡೇಲಿ, ಹೊನ್ನಾವರ ಕಡೆಯಿಂದ ಪ್ರವಾಸ ಮುಗಿಸಿ, ತ್ರಾಸಿ ಮರವಂತೆ ಬೀಚ್ ಬಳಿ ರಾ.ಹೆ.66ರಲ್ಲಿ ಈ ದುರ್ಘಟನೆ ಸಂಭವಿಸಿದೆ.

ಬೈಂದೂರು ಕಡೆಯಿಂದ ಕುಂದಾಪುರ ಕಡೆಗೆ ಹೋಗುತ್ತಿದ್ದ ಈ ಪ್ರವಾಸಿಗರ ಬಸ್ ರಸ್ತೆಯ ತೀರಾ ಎಡಭಾಗಕ್ಕೆ ಬಂದು ಮಣ್ಣು ರಸ್ತೆಯಲ್ಲಿ ನಿಂತಿದ್ದ ಪೆಟ್ರೋಲಿಯಂ ಟ್ಯಾಂಕರ್‌ನ ಬಲಬದಿಯ ಮುಂಭಾಗಕ್ಕೆ ಡಿಕ್ಕಿ ಹೊಡೆದು ನಂತರ ನಿಯಂತ್ರಣ ಕಳೆದುಕೊಂಡು ಎದುರುಗಡೆ ಮಣ್ಣು ರಸ್ತೆಯಲ್ಲಿ ನಿಂತಿದ್ದ ಲಾರಿಗೆ ಹಿಂದಿನಿಂದ ಡಿಕ್ಕಿ ಹೊಡೆದಿದೆ. ಇದರಿಂದ ಬಸ್ಸಿನ ಮುಂದಿನ ಭಾಗ ಹಾಗೂ ಎಡ ಪಾರ್ಶ್ವ ನುಜ್ಜುಗುಜ್ಜಾಗಿದೆ. ಟ್ಯಾಂಕರ್‌ನ ಮುಂಭಾಗದ ಬಲಬದಿ ಹಾಗೂ ಲಾರಿಯ ಹಿಂಭಾಗದ ಬಲಬದಿ ಜಖಂಗೊಂಡಿದೆ. ಗಾಯಗೊಂಡ ಸುಮಾರು 20ಕ್ಕೂ ಮಿಕ್ಕಿ ಪ್ರಯಾಣಿಕರು ಕುಂದಾಪುರದ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ.





ಶಿವಮೊಗ್ಗ ಜಿಲ್ಲೆಯ ಶಂಕರಘಟ್ಟ ರಂಭಾಪುರಿ ಕಾಲೇಜಿನ ಅಂತಿಮ ಹಂತದ ಬಿಕಾಂ ವಿದ್ಯಾರ್ಥಿಗಳು ಪ್ರವಾಸಕ್ಕೆ ಹೊರಟಿದ್ದು, ಬಸ್ಸಿನಲ್ಲಿ ಶಂಕರಘಟ್ಟದ ಕುವೆಂಪು ಯೂನಿವರ್ ಸಿಟಿಯ ರಂಬಾಪುರಿ ಕಾಲೇಜಿನ ಸುಮಾರು 47 ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಇತರ ಸಹಾಯಕ ಸಿಬ್ಬಂದಿಗಳು ಹಾಗೂ ಬಸ್‌ನ ಹೆಚ್ಚುವರಿ ಚಾಲಕ, ಕ್ಲೀನರ್ ಪ್ರಯಾಣಿಸುತ್ತಿದ್ದರು ಎನ್ನಲಾಗಿದೆ. ಬಸ್ಸಿನ ಚಾಲಕ ಮಂಜುನಾಥನ ಅತೀ ವೇಗ ಹಾಗೂ ಅಜಾಗರೂಕತೆಯ ಚಾಲನೆಯೇ ಅಪಘಾತಕ್ಕೆ ಕಾರಣ ಎನ್ನಲಾಗಿದ್ದು ಗಂಗೊಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಸದ ರಾಘವೇಂದ್ರ ಸಂತಾಪ

ಕುಂದಾಪುರ : ಅಪಘಾತದ ಸುದ್ದಿ ಕೇಳಿ ಮನಸ್ಸಿಗೆ ಆಘಾತ ಮತ್ತು ನೋವುಂಟಾಗಿದೆ. ಈ ದುರ್ಘಟನೆಯಲ್ಲಿ ಶಿವಮೊಗ್ಗ ಜಿಲ್ಲೆಯ ಶಂಕರಘಟ್ಟದ ರಂಭಾಪುರಿ ಕಾಲೇಜಿನ ವಿದ್ಯಾರ್ಥಿಗಳು ಪ್ರವಾಸ ಮುಗಿಸಿ ಹಿಂದಿರುಗುತ್ತಿದ್ದ ವೇಳೆ ಈ ಅವಾಂತರ ಸಂಭವಿಸಿರುವುದು ದುರದೃಷ್ಟಕರ. ಅಪಘಾತದಲ್ಲಿ ಬಸ್ ಚಾಲಕ ಸೇರಿದಂತೆ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದು, ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಅವರ ಕುಟುಂಬಕ್ಕೆ ಈ ನೋವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ. ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿರುವ ವಿದ್ಯಾರ್ಥಿಗಳು ಹಾಗೂ ಇತರ ಪ್ರಯಾಣಿಕರು ಶೀಘ್ರವಾಗಿ ಚೇತರಿಸಿಕೊಳ್ಳಲಿ. ಗಾಯಾಳುಗಳಿಗೆ ಅತ್ಯುತ್ತಮ ಚಿಕಿತ್ಸೆ ಕೊಡಿಸಲು ಸ್ಥಳೀಯ ಆಡಳಿತ ಮತ್ತು ಆಸ್ಪತ್ರೆಯ ವೈದ್ಯರೊಂದಿಗೆ ಸಂಪರ್ಕದಲ್ಲಿದ್ದೇನೆ. ರಕ್ಷಣಾ ಕಾರ್ಯದಲ್ಲಿ ಶ್ರಮಿಸಿದ ಆ್ಯಂಬುಲೆನ್ಸ್ ತಂಡ ಹಾಗೂ ಸ್ಥಳೀಯ ಪೊಲೀಸರ ಕಾರ್ಯ ಶ್ಲಾಘನೀಯ. ಪ್ರವಾಸಿಗರು ಮತ್ತು ವಾಹನ ಸವಾರರು ಹೆದ್ದಾರಿಗಳಲ್ಲಿ ಸಂಚರಿಸುವಾಗ ಹೆಚ್ಚಿನ ಜಾಗರೂಕತೆ ವಹಿಸಬೇಕೆಂದು ಈ ಮೂಲಕ ವಿನಂತಿಸುತ್ತೇನೆ ಎಂದು ಸಂಸದ ಬಿ.ವೈ.ರಾಘವೇಂದ್ರ ತಿಳಿಸಿದ್ದಾರೆ.

ಬೈಂದೂರು ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ, ಮರವಂತೆ ಹಾಗೂ ತ್ರಾಸಿ ಗ್ರಾಪಂ ಮಾಜಿ ಸದಸ್ಯರು, ಗಂಗೊಳ್ಳಿ ಪೊಲೀಸ್ ಠಾಣೆಯ ಸಿಬ್ಬಂದಿಗಳು, ಸ್ಥಳೀಯರು ಗಾಯಾಳುಗಳನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲು ನೆರವಾದರು. ಘಟನಾ ಸ್ಥಳಕ್ಕೆ ಉಡುಪಿ ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಮ್ ಶಂಕರ್, ಕುಂದಾಪುರ ಪೊಲೀಸ್ ಉಪಾಧೀಕ್ಷಕ ಎಚ್. ಡಿ. ಕುಲಕರ್ಣಿ, ಬೈಂದೂರು ಪೊಲೀಸ್ ವೃತ್ತ ನಿರೀಕ್ಷಕ ಶಿವಕುಮಾರ ಬಿ., ಗಂಗೊಳ್ಳಿ ಪೊಲೀಸ್ ಠಾಣಾ ಪಿಎಸ್‌ಐಗಳಾದ ಪವನ್ ನಾಯಕ್ (ಕಾ– ಸು) ಹಾಗೂ ಸುದರ್ಶನ್ ಬಿ.ಎನ್. (ತನಿಖೆ) ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾಪಮಾನ ಹೆಚ್ಚಳ | ರಕ್ಷಣೆಗೆ ಕರೆ

ಕಟ್ಟಡ ಕಾರ್ಮಿಕರಿಗೆ ವಿಶ್ರಾಂತಿ ನೀಡಲು ಅಧಿಕಾರಿಗಳ ಸೂಚನೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾಪಮಾನ ಹೆಚ್ಚಾಗುತ್ತಿದ್ದು, ಬಿಸಿಲಿನಲ್ಲಿ ದುಡಿಯುವ ಕಟ್ಟಡ ಕಾರ್ಮಿಕರ ಬಗ್ಗೆ ಕಟ್ಟಡ ಮಾಲಕರು ಮುತುವರ್ಜಿ ವಹಿಸುವುದರೊಂದಿಗೆ ಮಧ್ಯಾಹ್ನದ ವೇಳೆ ವಿಶ್ರಾಂತಿ ನೀಡಬೇಕು. ನಿರ್ಲಕ್ಷ್ಯ ವಹಿಸಿ, ಅಹಿತಕರ ಘಟನೆಗಳು ಸಂಭವಿಸಿದ್ದಲ್ಲಿ ಕಟ್ಟಡ ಮಾಲಕರನ್ನೇ ನೇರ ಹೊಣೆ ಮಾಡಲಾಗುವುದು ಎಂದು ಜಿಲ್ಲಾ ಸಹಾಯಕ ಕಾರ್ಮಿಕ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಕಾರ್ಮಿಕರ ಬಗ್ಗೆ ಕಾಳಜಿ ವಹಿಸಬೇಕಾದ್ದು ಕಟ್ಟಡ ಮಾಲಕರ ಜವಾಬ್ದಾರಿಯಾಗಿದೆ. ಏರಿಕೆ ಕಾಣುತ್ತಿರುವ ತಾಪಮಾನ ಕಟ್ಟಡ ಕಾಮಗಾರಿ ಸ್ಥಳಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ, ಕಾರ್ಮಿಕರ ಆರೋಗ್ಯದ ಹಿತದೃಷ್ಟಿ ಹಿನ್ನಲೆಯಲ್ಲಿ ಮಧ್ಯಾಹ್ನದ ವೇಳೆ ವಿಶ್ರಾಂತಿಗೆ ಅವಕಾಶ ನೀಡಬೇಕು. ಕಾರ್ಮಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಮಾಡುವುದು ಹಾಗೂ ಕಾಲಕಾಲಕ್ಕೆ ಆರೋಗ್ಯ ತಪಾಸಣೆಯನ್ನು ಮಾಡಿಸುವುದು ಗುತ್ತಿಗೆದಾರರು ಮತ್ತು ಮಾಲೀಕರ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ಮಾಲಕರು ಸೂಕ್ತ ಕ್ರಮ ವಹಿಸಬೇಕು ಎಂದು ಜಿಲ್ಲಾ ಸಹಾಯಕ ಕಾರ್ಮಿಕ ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ಒಂದು ತಿಂಗಳಿನಿಂದ ಜಿಲ್ಲೆಯಲ್ಲಿ ಬಿರುಬಿಸಿಲಿನ ವಾತಾವರಣ ಕಂಡುಬರುತ್ತಿದ್ದು, ಜನತೆ ಕಂಗಾಲಾಗುತ್ತಿದ್ದಾರೆ. ದುಡಿದು ತಿನ್ನುವ ವರ್ಗವಂತೂ ಹೆಚ್ಚು ಸಮಸ್ಯೆಗೆ ಒಳಗಾಗುತ್ತಿದೆ. ಇದರಿಂದ ಆರೋಗ್ಯ ಸಮಸ್ಯೆಯೂ ಕಾಣಿಸಿಕೊಳ್ಳುತ್ತಿದ್ದು, ಜನತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕಾದ್ದು ಅತ್ಯವಶ್ಯಕವಾಗಿದೆ. ಕಟ್ಟಡ ಕಾರ್ಮಿಕರು ಹೆಚ್ಚು ಸಮಸ್ಯೆ ಅನುಭವಿಸುತ್ತಿರುವುದರಿಂದ ಕಾರ್ಮಿಕ ಇಲಾಖೆ ಕಟ್ಟಡ ಮಾಲಕರಿಗೆ ಸ್ಪಷ್ಟ ಸೂಚನೆ ನೀಡಿದ್ದು, ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸುವಂತೆ ಎಚ್ಚರಿಕೆ ನೀಡಿದೆ.



ತಾಪಮಾನ ಏರಿಕೆ

ಭಾರತೀಯ ಹವಾಮಾನ ಇಲಾಖೆ ಮಾಹಿತಿ ಪ್ರಕಾರ ದ.ಕ ಹಾಗೂ ಉಡುಪಿ ಸರಾಸರಿ ಗರಿಷ್ಠ ತಾಪಮಾನ 36.5 ಡಿ.ಸೆಲ್ಸಿಯೆಸ್ ದಾಖಲಾಗಿದೆ. ಮಂಗಳೂರು ಗರಿಷ್ಠ 37 ಡಿ.ಸೆಲ್ಸಿಯಸ್, ಪುತ್ತೂರು 36, ಬೆಳ್ತಂಗಡಿಯಲ್ಲಿ 35.4, ಸುಳ್ಯ ಗರಿಷ್ಠ 37.1, ಬಂಟ್ವಾಳದಲ್ಲಿ ಗರಿಷ್ಠ 36.4ಡಿ.ಸೆಲ್ಸಿಯಸ್, ಮೂಡುಬಿದಿರೆ ಗರಿಷ್ಠ 35.9ಡಿ.ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

ಬಿಸಿಗಾಳಿಯ ಆತಂಕ



ಮಂಗಳೂರು ನಗರದಲ್ಲಂತೂ ಬಿಸಿಝಳ ತೀವ್ರವಾಗಿದೆ. ಒಂದೆಡೆ ಸೆಖೆಯ ಜೊತೆಗೆ ಬೀಸುತ್ತಿರುವ ಬಿಸಿಗಾಳಿ ಸಾರ್ವಜನಿಕರ ಬೆವರಿಳಿಸುತ್ತಿದೆ. ಬಿಸಿಲಿನ ಪ್ರಖರದಿಂದಾಗಿ ಜನತೆ ಬಸವಳಿಯುತ್ತಿದ್ದು, ದೇಹದ ನಿರ್ಜಲೀಕರಣ, ತಲೆ ಸುತ್ತುವುದು ಇತ್ಯಾದಿ ಸಮಸ್ಯೆಗಳಿಗೆ ಒಳಗಾಗುತ್ತಿದ್ದಾರೆ. ಆರೋಗ್ಯ ಕೈಗಕೊಡುವ ಇಂತಹ ಸಂದರ್ಭದಲ್ಲಿ ಹೆಚ್ಚು ನೀರು ಕುಡಿಯುವುದು ಮತ್ತು ಹಣ್ಣು ಹಂಪಲುಗಳ ಸೇವನೆಯತ್ತ ಹೆಚ್ಚಿನ ಒತ್ತು ನೀಡಬೇಕು ಎಂದು ಸಲಹೆ ನೀಡುತ್ತಾರೆ ವೈದ್ಯರು.

ಮಳೆಯಾದರೂ ಕಡಿಮೆಯಾಗದ ಸೆಖೆ



ದಕ್ಷಿಣ ಕನ್ನಡ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಕಳೆದ ಎರಡು ದಿನಗಳಲ್ಲಿ ಮಳೆಯಾಗಿದೆ. ಕಡಬ, ಉಪ್ಪಿನಂಗಡಿ, ಪುತ್ತೂರು, ಮಂಗಳೂರಿನ ಕೆಲವಡೆ ಮಳೆಯಾಗಿದೆ. ಆದರೆ ಸೆಖೆ ಮಾತ್ರ ಕಡಿಮೆಯಾಗಿಲ್ಲ. ಜಿಲ್ಲೆಯ ಕೆಲವೆಡೆ ಬುಧವಾರ ಮೋಡ ಕವಿದ ವಾತಾವರಣವಿತ್ತು. ಆದರೆ ಉರಿ ಸೆಖೆ ಮಾತ್ರ ಎಂದಿಗಿಂತ ತುಸು ಹೆಚ್ಚೇ ಇತ್ತು. ಉರಿಬಿಸಿಲಿನಿಂದ ಕಂಗಾಲಾಗಿರುವ ಜನತೆ ಒಮ್ಮೆ ಮಳೆ ಬಂದರೆ ಸಾಕು ಎಂದು ಮಳೆಯ ನಿರೀಕ್ಷೆಯಲ್ಲಿದ್ದಾರೆ.

'ದೇವಿ ಮಹಾತ್ಮೆ' ಸಿನಿಮಾ ನಿರ್ಮಾಣಕ್ಕೆ ಗ್ರೀಸ್ ಸರ್ಕಾರದಿಂದ 150 ಕೋಟಿ ರೂ.

ಉಡುಪಿ: ಭಾರತೀಯ ಸಂಸ್ಕೃತಿ ಮತ್ತು ಧರ್ಮವನ್ನು ಜಾಗತಿಕ ಮಟ್ಟದಲ್ಲಿ ಪಸರಿಸುವ ನಿಟ್ಟಿನಲ್ಲಿ ನಿರ್ಮಾಣವಾಗಲಿರುವ 'ದೇವಿ ಮಹಾತ್ಮೆ' ಸಿನಿಮಾಗೆ ಗ್ರೀಸ್ ಸರ್ಕಾರ ಭರ್ಜರಿ 150 ಕೋಟಿ ರೂ. ಅನುದಾನ ನೀಡಿದೆ. ಗ್ರೀಸ್ ದೇಶದ ಅಥೆನ್ಸ್ ನಲ್ಲಿ ಸೋಮವಾರ ನಡೆದ ಐತಿಹಾಸಿಕ ಸಮಾರಂಭದಲ್ಲಿ ಉಡುಪಿ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು ಚಿತ್ರ ನಿರ್ಮಾಣಕ್ಕೆ ಅಧಿಕೃತವಾಗಿ ಮುಹೂರ್ತ ನೆರವೇರಿಸಿದರು.

ಜಗತ್ತಿನ ಉಳಿವು ಗೀತೆಯ ಸಂದೇಶದಲ್ಲಿದೆ: ಪುತ್ತಿಗೆ ಶ್ರೀ

ಇದೇ ಸಂದರ್ಭದಲ್ಲಿ ಭಾರತ ಹಾಗೂ ಪೌರ್ವಾತ್ಯ–ಪಾಶ್ಚಾತ್ಯ ತತ್ವಜ್ಞಾನಿಗಳ ಸಮ್ಮೇಳನಕ್ಕೆ ಚಾಲನೆ ನೀಡಿ ಆಶೀರ್ವಚನ ನೀಡಿದ ಪುತ್ತಿಗೆ ಶ್ರೀಗಳು, ವಿಶ್ವದ ಉಳಿವು ಭಗವದ್ಗೀತೆಯ ಸಂದೇಶ ಮತ್ತು ದೇವಿ ಮಹಾತ್ಮೆಯ ತತ್ವಗಳನ್ನು ಅವಲಂಬಿಸಿದೆ. ಅಹಂಕಾರದ ಪ್ರತಿನಿಧಿಯಾದ ಮಹಿಷಾಸುರನು ಜಗತ್ತಿಗೆ ನೀಡಿದ ಪೀಡೆಯನ್ನು ಸಂಹಾರ ಮಾಡಿದ ದೇವಿ, ಎಲ್ಲವನ್ನೂ ಮೀರಿದ ದೈವತ್ವದ ಪ್ರತಿರೂಪ. ಜಗತ್ತಿನಲ್ಲಿ ದುಷ್ಟ ಶಕ್ತಿಗಳ ಸಂಹಾರವಾಗಿ ಸತ್ ಶಕ್ತಿಯ ವಿಸ್ತರಣೆಯಾಗಬೇಕು ಎಂದು ನುಡಿದರು.



ಗ್ರೀಕ್ ಪ್ರಜೆಗಳಿಂದ 'ಕೋಟಿ ಗೀತಾ ಲೇಖನ' ದೀಕ್ಷೆ

ಒಲಿಂಪಿಕ್ಸ್ ಜನ್ಮಭೂಮಿಯಾದ ಗ್ರೀಸ್‌ನಲ್ಲಿ ಭ್ರಾತೃತ್ವ ಮತ್ತು ಏಕತೆಯ ಭಾವ ಮೂಡಿಸಲು ಈ ಸಮ್ಮೇಳನ ಆಯೋಜಿಸಲಾಗಿತ್ತು. ಸಮಾರಂಭದಲ್ಲಿ ಉಪಸ್ಥಿತರಿದ್ದ ಗ್ರೀಕ್ ದೇಶದ ಗಣ್ಯರು ಹಾಗೂ ಪ್ರಜೆಗಳು ಪುತ್ತಿಗೆ ಶ್ರೀಗಳಿಂದ 'ಕೋಟಿ ಗೀತಾ ಲೇಖನ ಯಜ್ಞ' ದೀಕ್ಷೆ ಸ್ವೀಕರಿಸಿದ್ದು ವಿಶೇಷವಾಗಿತ್ತು. ಈ ಕೋಟಿ ಗೀತಾ ಲೇಖನ ಸಮರ್ಪಣಾ ಕಾರ್ಯಕ್ರಮವನ್ನು 2028ರ ಡಿಸೆಂಬರ್‌ವರೆಗೆ ವಿಸ್ತರಿಸಲಾಗಿದೆ ಎಂದು ಶ್ರೀಗಳು ತಿಳಿಸಿದರು.

ಚಿತ್ರತಂಡದ ವಿವರ

ಗ್ರೀಸ್ ದೇಶದಲ್ಲಿ ನೆಲೆಸಿರುವ ಮುಂಬೈ ಮೂಲದ ಮನು ಕುಮಾರ್ ಈ ಬೃಹತ್ ಚಿತ್ರದ ನಿರ್ದೇಶನ ಹಾಗೂ ನಿರ್ಮಾಣದ ಜವಾಬ್ದಾರಿ ಹೊತ್ತಿದ್ದಾರೆ. ಅರ್ನಾಬ್ ಭವೇಜಾ ಸಹ ನಿರ್ಮಾಪಕರಾಗಿದ್ದರೆ, ಶಶಾಂಕ್ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಮಾರಂಭದಲ್ಲಿ ಬಿಎಪಿಎಸ್‌ನ ಶ್ರೀ ಭದ್ರೇಶ್ ದಾಸ್ ಸ್ವಾಮೀಜಿ, ಶ್ರೀಶೈಲದ ಚೆನ್ನ ಸಿದ್ಧರಾಮ ಸ್ವಾಮೀಜಿ, ಜನಪ್ರಿಯ ಗ್ರೀಕ್ ನಟ ಆಂತಿಮೋಸ್ ಅನನಿಯದಾಸ್ ಹಾಗೂ ಗ್ರೀಸ್ ಭಾರತದ ರಾಯಭಾರ ಕಚೇರಿಯ ಬಾಲ್ಜಿ ನಾಗರಥ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಲಾರಿ ಡಿಕ್ಕಿಯಾಗಿ ವಿದ್ಯಾರ್ಥಿ ಸಾವು

ಉಪ್ಪಿನಂಗಡಿ : ಇಲ್ಲಿಗೆ ಸಮೀಪದ ಬಜತ್ತೂರು ಗ್ರಾಮದ ನೀರಕಟ್ಟೆ ಬಳಿ ದ್ವಿಚಕ್ರ ವಾಹನಕ್ಕೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ದ್ವಿಚಕ್ರ ವಾಹನ ಸವಾರ ಕಾರ್ತಿಕ್ (23) ಎಂಬ ಕಾಲೇಜು ವಿದ್ಯಾರ್ಥಿ ಸಾವನ್ನಪ್ಪಿ ಸಹ ಸವಾರಿಣಿ ಕಾಲೇಜು ವಿದ್ಯಾರ್ಥಿನಿ ನೇಹಾ ಎಂಬಾಕೆ ಗಂಭೀರವಾಗಿ ಗಾಯಗೊಂಡ ಘಟನೆ ಬುಧವಾರ ಸಂಭವಿಸಿದೆ.



ಉಪ್ಪಿನಂಗಡಿಯ ಸರಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳ ತಂಡ ದ್ವಿಚಕ್ರ ವಾಹನಗಳಲ್ಲಿ ಪರಿಚಿತರ ಮದುವೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಹಿಂತಿರುಗುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ. ಲಾರಿ ಡಿಕ್ಕಿ ಹೊಡೆದ ರಭಸಕ್ಕೆ ದ್ವಿಚಕ್ರ ವಾಹನ ಸವಾರ ರಸ್ತೆಗೆ ಎಸೆಯಲ್ಪಟ್ಟು ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ತಲೆ ಹಾಗೂ ಕಾಲಿಗೆ ಗಾಯಗೊಂಡ ನೇಹಾ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲುಗೊಂಡು ಚಿಕಿತ್ಸೆಗೆ ಒಳಗಾಗಿದ್ದಾರೆ.

ಮೃತ ಕಾರ್ತಿಕ್ ಕಾಲೇಜಿನ ಅಂತಿಮ ಬಿಬಿಎ ವಿದ್ಯಾರ್ಥಿಯಾಗಿದ್ದು, ಉಪ್ಪಿನಂಗಡಿಯ ಶಿವಕುಮಾರ್ ಗಾಂಧೀಪಾರ್ಕ್ ಎಂಬವರ ಇಬ್ಬರು ಮಕ್ಕಳಲ್ಲಿ ಏಕೈಕ ಪುತ್ರನಾಗಿದ್ದರು. ಕಾಲೇಜು ಶಿಕ್ಷಣ ಪಡೆಯುತ್ತಿದ್ದರೂ ಬಿಡುವಿನ ವೇಳೆಯಲ್ಲಿ ಸಣ್ಣಪುಟ್ಟ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾ ಸ್ವಾವಲಂಬಿ ಬದುಕು ಕಟ್ಟಿಕೊಂಡು ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು.

ಗಂಭೀರ ಗಾಯಗೊಂಡಿರುವ ನೇಹಾ, ಹಿರೆಬಂಡಾಡಿ ಗ್ರಾಮದ ನಿವಾಸಿಯಾಗಿದ್ದು ಕಾಲೇಜಿನ ಅಂತಿಮ ಬಿಎ ವಿದ್ಯಾರ್ಥಿನಿಯಾಗಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿ ಪುತ್ತೂರು ಸಂಚಾರಿ ಠಾಣೆಯಲ್ಲಿ ಕೇಸು ದಾಖಲುಗೊಂಡಿದ್ದು , ತನಿಖೆ ನಡೆಸಲಾಗುತ್ತಿದೆ.

ಸೀತಾಂಗೋಳಿಯಲ್ಲಿ ಹಾಡಹಗಲೇ ನಡೆದ ಘಟನೆ

ಯುವಕನ ಕೊಲೆ: ಗಂಟೆಗಳೊಳಗೆ ಸೆರೆ

ಕಾಸರಗೋಡು: ಹಾಡಹಗಲೇ ಯುವಕನನ್ನು ತಲೆಗೆ ಹೊಡೆದು ಕೊಲೆಗೈದ ಘಟನೆ ಸೀತಾಂಗೋಳಿಯಲ್ಲಿ ಮಂಗಳವಾರ ನಡೆದಿದೆ. ಪ್ರಕರಣದ ಆರೋಪಿಯನ್ನು ಗಂಟೆಗಳೊಳಗೆ ಪೊಲೀಸರು ಸೆರೆಹಿಡಿದಿದ್ದಾರೆ.

ಬಾಪಾಲಿಪೊನ ಕುಂಟಿಕಾನ ನಿವಾಸಿ ಸಫಾಹಿದ್ ಯಾನೆ ಸಫಾಯತ್ (35) ಎಂಬವರು ಕೊಲೀಡಾದ ವ್ಯಕ್ತಿಯಾಗಿದ್ದಾರೆ. ಈ ಸಂಬಂಧ ಕುಂಬಳೆ ನಾಯ್ಕಾಪು ಕೋಟೆಕಾರ್‌ನ ಶ್ರೀನಿವಾಸ (39) ಎಂಬಾತನನ್ನು ಕುಂಬಳೆ ಪೊಲೀಸ್ ಇನ್ಸ್‌ಪೆಕ್ಟರ್ ಬೈಜು ಕೆ.ಜೋಸ್, ಎಸ್ ಐಗಳಾದ ಸಿ.ಸನಿತ್, ಅನಂತಕೃಷ್ಣನ್ ಆರ್ ಮೆನೋನ್ ಎಂಬವರು ಸೆರೆ ಹಿಡಿದಿದ್ದಾರೆ.


ಶಫಾಯತ್


ಶ್ರೀನಿವಾಸ

ಮಂಗಳವಾರ ಸೀತಾಂಗೋಳಿಯ ಬಿವರೇಜಸ್ ಮದ್ಯದಂಗಡಿ ಸಮೀಪದ ಕಟ್ಟಡದ ಹಿಂಬದಿಯಲ್ಲಿ ಶಫಾಯತ್‌ರ ಮೃತದೇಹ ಪತ್ತೆಯಾಗಿತ್ತು. ಅದನ್ನು ಕಂಡ ವ್ಯಕ್ತಿಗಳು ನೀಡಿದ ಮಾಹಿತಿಯಂತೆ ಕುಂಬಳೆ ಪೊಲೀಸರು ಸ್ಥಳಕ್ಕೆ ತಲುಪಿದ್ದರು. ಬಳಿಕ ನಡೆಸಿದ ಪರಿಶೀಲನೆಯಲ್ಲಿ ಶಫಾಯತ್‌ರ ತಲೆಗೆ ಹೊಡೆದು ಕೊಲೆಗೈದಿರುವುದಾಗಿ ತಿಳಿದು ಬಂದಿತ್ತು. ತಲೆಗೆ ಹೊಡೆಯಲು ಉಪಯೋಗಿಸಿದ ಮರದ ತುಂಡು ಸಮೀಪದಲ್ಲಿ ಪತ್ತೆಯಾಗಿತ್ತು. ಆದರಂತೆ ತನಿಖೆ ಚುರುಕುಗೊಳಿಸಿದ ಪೊಲೀಸರು ಶ್ರೀನಿವಾಸನನ್ನು ಬಂಧಿಸಿದ್ದಾರೆ. ಮದ್ಯದಮಲಿನಲ್ಲಿ ಉಂಟಾದ ವಾಗ್ವಾದವೇ ಕೊಲೆ ಕೃತ್ಯಕ್ಕೆ ಕಾರಣವಾಗಿದೆ ಎಂದು ಸೆರೆಗೀಡಾದ ಶ್ರೀನಿವಾಸ ಹೇಳಿಕೆ ನೀಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಮದ್ಯದಮಲಿನಲ್ಲಿ ಉಂಟಾದ ವಾಗ್ವಾದವೇ ಕೊಲೆ ಕೃತ್ಯಕ್ಕೆ ಕಾರಣವಾಗಿದೆ

ಮಂಗಳವಾರ ಬೆಳಗ್ಗೆ ಶಫಾಯತ್ ಹಾಗೂ ಶ್ರೀನಿವಾಸರ ಮಧ್ಯೆ ವಾಗ್ವಾದ ಉಂಟಾಗಿತ್ತೆಂದು ಹೇಳಲಾಗುತ್ತಿದೆ. ಇದರ ಮುಂದುವರಿಕೆಯಾಗಿ ಈ ಕೊಲೆ ಕೃತ್ಯ ನಡೆದಿದೆ ಎಂಬ ಅಂದಾಜಿನ ಮೇರೆಗೆ ಪೊಲೀಸರು ಶ್ರೀನಿವಾಸನನ್ನು ಕಸ್ಟಡಿಗೆ ತೆಗೆದುಕೊಂಡಿದ್ದರು. ತನಿಖೆ ವೇಳೆ ಆರೋಪಿಯು ತಪ್ಪೊಪ್ಪಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಇದರಿಂದ ಆರೋಪಿಯನ್ನು ಬಂಧಿಸಿರುವುದಾಗಿಯೂ, ಈ ಕೊಲೆ ಕೃತ್ಯದಲ್ಲಿ ಬೇರೆ ಯಾರಾದರೂ ಭಾಗಿಯಾಗಿದ್ದಾರೆಯೇ ಎಂದು ತನಿಖೆ ನಡೆಸುತ್ತಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಶಫಾಯತ್‌ರ ಮೃತದೇಹವನ್ನು ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ಇಂದು ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಇಬ್ರಾಹಿಂ ಮತ್ತು ದಿ.ಖದೀಜಾ ದಂಪತಿಯ ಪುತ್ರನಾದ ಮೃತರು ಪತ್ನಿ ತಬ್ಸೀರ, ಮಕ್ಕಳಾದ ಸಿನಾನ್, ತಮೀಸ್, ಶಾಸಿಮ್, ದುವ ಮೆಹಕ್ ಅವರನ್ನು ಆಗಲಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 34° 26° | ಉಡುಪಿ 33° 27°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಗುರುವಾರ 30, ಏಪ್ರಿಲ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 5
ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ದೇವಳದಲ್ಲಿ ಬ್ರಹ್ಮಕಲಶ


ಪುಟ 7
ಶಿಲಾಮಯ ಗರ್ಭಗುಡಿಯಲ್ಲಿ ಶ್ರೀ ದೇವರ ಪುನರ್ ಪ್ರತಿಷ್ಠೆ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ಕ್ಷೇತ್ರ

ಅಂಚೆ: ರಾಮದಾಸನಗರ, ಕೂಡ್ಲುಗ್ರಾಮ, ಕಾಸರಗೋಡು - 671 124

ಕೇರಳ ರಾಜ್ಯದ ಸಪ್ತಭಾಷಾ ಸಂಗಮ ಭೂಮಿ ಎಂದು ಪ್ರಸಿದ್ಧಿ ಪಡೆದ ಕಾಸರಗೋಡು ನಗರದಿಂದ ಕೇವಲ 2 ಕಿಲೋಮೀಟರ್ ದೂರದಲ್ಲಿ ನೆಲೆ ನಿಂತಿರುವ ಕಾರಣಿಕ ದೇವಸ್ಥಾನವೇ ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ಕ್ಷೇತ್ರ. ಸುಮಾರು 50 ವರ್ಷಗಳ ಹಿಂದೆ ಶಿವೈಕ್ಯ ಶ್ರೀ ಶ್ರೀ ತನಿಯಪ್ಪ ಗುರುವರ್ಯರು ಕುಕ್ಕಾಜೆ ಇವರ ಮಾರ್ಗದರ್ಶನದಲ್ಲಿ ಶ್ರೀ ದೇವಿಯ ಸೇವೆಗಾಗಿ ತನ್ನನ್ನು ತಾನು ಅರ್ಪಿಸಿಕೊಂಡ ಧರ್ಮದರ್ಶಿ ಶ್ರೀ ಮಹಾಲಿಂಗ ಪಾತ್ರಿಯವರ ನೇತೃತ್ವದಲ್ಲಿ ಮೂಕಾಂಬಿಕಾ ದೇವಿಯ ಭವ್ಯ ದೇಗುಲವು ನಿರ್ಮಾಣಗೊಂಡಿತು. ಇದೀಗ ಸ್ವರ್ಣ ಪ್ರಶ್ನೆ ಚಿಂತನೆಯಲ್ಲಿ ಅಪ್ಪಣೆಯಾದಂತೆ ಕ್ಷೇತ್ರದ ತಂತ್ರಿವರ್ಯರಾದ ಶ್ರೀ ಶ್ರೀಕೃಷ್ಣ ಗುರೂಜಿ ಕುಕ್ಕಾಜೆಯವರ ನೇತೃತ್ವದಲ್ಲಿ ಜೀರ್ಣೋದ್ಧಾರ ಸಮಿತಿಯನ್ನು ರೂಪೀಕರಿಸಿ, ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಶ್ರೀಮದ್ ಎಡನೀರು ಮಠ ಇವರ ದಿವ್ಯಹಸ್ತದಿಂದ ನೂತನ ಕ್ಷೇತ್ರಕ್ಕೆ ಶಿಲಾನ್ಯಾಸಗೈದು, ಧರ್ಮಸ್ಥಳ ಧರ್ಮಾಧಿಕಾರಿ ಪರಮಪೂಜ್ಯ ಡಾ.ಡಿ.ವೀರೇಂದ್ರ ಹೆಗ್ಗಡೆಯವರ ಪೂರ್ಣಾನುಗ್ರಹದೊಂದಿಗೆ ಕ್ಷೇತ್ರ ಪುನರ್ ನಿರ್ಮಾಣ ಕೈಗೆತ್ತಿಕೊಳ್ಳಲಾಯಿತು. ಸಂಪೂರ್ಣ ಶಿಲಾಮಯ ಗರ್ಭಗುಡಿ, ನೂತನ ದರ್ಶನ ಮಂಟಪ ಹಾಗೂ ಇನ್ನಿತರ ಯೋಜಿತ ನಿರ್ಮಾಣ ಕಾಮಗಾರಿಗಳು ಭಗವದ್ಭಕ್ತರ ತುಂಬು ಸಹಕಾರದಿಂದ ಯಶಸ್ವಿಯಾಗಿ ಪೂರೈಸಿ ಇದೀಗ ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ಕ್ಷೇತ್ರವು ಜೀರ್ಣೋದ್ಧಾರಗೊಂಡು ಬ್ರಹ್ಮಕಲಶೋತ್ಸವ ನಡೆಯುತಿದೆ.

ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ದೇವಸ್ಥಾನದ ಪುನರ್ ಪ್ರತಿಷ್ಠಾ ಬ್ರಹ್ಮಕಲಶಾಭಿಷೇಕ ಹಾಗೂ ಪರಿವಾರ ದೈವ ದೇವರುಗಳ ಪ್ರತಿಷ್ಠೆ ಶ್ರೀ ಗುಳಿಗ ಹಾಗೂ ಶ್ರೀ ಕೊರಗತನಿಯ ದೈವದ ಜೋಡುಕೋಲ, ವಿವಿಧ ವೈದಿಕ, ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಆರಂಭಗೊಂಡಿದ್ದು ಮೇ 2ನೇ ಶನಿವಾರದ ತನಕ ತಂತ್ರಿವರ್ಯರಾದ ಶ್ರೀ ಶ್ರೀಕೃಷ್ಣಗುರೂಜಿಯವರ ನೇತೃತ್ವದಲ್ಲಿ ಆಗಮೋಕ್ತ ವಿಧಿಗಳೊಂದಿಗೆ ಜರಗಲಿರುವುದು.




ಕಾರ್ಯಕ್ರಮಗಳು

30-04-2026 ಗುರುವಾರ

ಬೆಳಗ್ಗೆ 6ರಿಂದ		ಗಣಪತಿಹೋಮ, ಸಾಮೂಹಿಕ ಪ್ರಾರ್ಥನೆ, ಕವಾಟೋದ್ಘಾಟನೆ
9.30ರಿಂದ 11.00		ಶ್ರೀದೇವಿ ಹಾಗೂ ಪರಿವಾರ ದೈವ ದೇವರುಗಳಿಗೆ ಗಂಟೆಯ ತನಕ ಒದಗುವ ಶುಭ ಮುಹೂರ್ತದಲ್ಲಿ ಬ್ರಹ್ಮಕಲಶಾಭಿಷೇಕ ನಿತ್ಯನೈಮಿತ್ತಿಕ ಕಾರ್ಯಗಳ ನಿರ್ಣಯ ಹಾಗೂ ಮಹಾಪೂಜೆ
11.30ಕ್ಕೆ	:	ನಾಗತಂಬಿಲ
12.30ಕ್ಕೆ	:	ಮಹಾಪೂಜೆ, ಪ್ರಸಾದ ವಿತರಣೆ
ಸಂಜೆ 6.55ಕ್ಕೆ	:	ದೀಪಾರಾಧನೆ, ಅನ್ನಪ್ರಸಾದ ವಿತರಣೆ
7.30ಕ್ಕೆ	:	ಆಂಜನೇಯ ಸೇವೆ, ವೀರಭದ್ರನಿಗೆ ವಿಶೇಷ ಮಹಾಪೂಜೆ
8 ಗಂಟೆಗೆ	:	ಅನ್ನಪ್ರಸಾದ ವಿತರಣೆ

ಇಂದು ಬೆಳಗ್ಗೆ 9.30ರಿಂದ 11 ಗಂಟೆಯ ತನಕ ಶುಭ ಮುಹೂರ್ತದಲ್ಲಿ ಶ್ರೀ ಮೂಕಾಂಬಿಕಾ ದೇವಿ ಹಾಗೂ ಪರಿವಾರ ದೈವ ದೇವರುಗಳಿಗೆ

ಬ್ರಹ್ಮಕಲಶಾಭಿಷೇಕ

ಕಾರ್ಯಕ್ರಮಗಳು

9 ಗಂಟೆಗೆ	:	ಶ್ರೀ ದೇವಿಯ ಮಹಾಪೂಜೆ, ಪ್ರಸಾದ ವಿತರಣೆ
		ಶ್ರೀ ಸರಸ್ವತಿ ಮಂಟಪದಲ್ಲಿ
ಬೆಳಗ್ಗೆ 6 ಗಂಟೆಗೆ		ಭಜನಾ ಕಾರ್ಯಕ್ರಮ
ಮಧ್ಯಾಹ್ನ 1ಗಂಟೆಗೆ	:	ಯಕ್ಷಗಾನ ತಾಳಮದ್ದಳೆ - ಶ್ರೀ ಜಯರಾಮ ಭಟ್ ದೇವಸ್ಯ ಮತ್ತು ಬಳಗದವರಿಂದ, ಅತಿಥಿ ಕಲಾವಿದರ ಕೂಡುವಿಕೆಯೊಂದಿಗೆ (ನೂತನ ಪ್ರಸಂಗ)
ಸಂಜೆ 4 ಗಂಟೆಗೆ	:	ಭಜನಾ ಕಾರ್ಯಕ್ರಮ
		ಶ್ರೀಮೂಕಾಂಬಿಕಾ ವೇದಿಕೆ
ರಾತ್ರಿ 8 ಗಂಟೆಗೆ	:	ಆಂಟೀ ಬೊಕ್ಕ ಅಂಕಲ್ (ತುಳು ಹಾಸ್ಯಮಯ ನಾಟಕ)

ಲಯನ್ ಕಿಶೋರ್ ಡಿ.ಶೆಟ್ಟಿಯವರ ರಚನೆ ಮತ್ತು ನಿರ್ದೇಶನದಲ್ಲಿ ಲಕುಮಿ ತಂಡದ ಕುಸಲ್ದ ಕಲಾವಿದೆರ್ ಅಭಿನಯಿಸುವ ತುಳುನಾಡ ಮಾಣಿಕ್ಯ ಅರವಿಂದ ಬೋಳಾರ್ ಪಂದಾಸ್ ಪಾತ್ರದಲ್ಲಿ

(ಪ್ರಾಯೋಜಕರು : ಶ್ರೀ ಮೂಕಾಂಬಿಕಾ ಆರ್ಟ್ಸ್ ಆ್ಯಂಡ್ ಸ್ಪೋರ್ಟ್ಸ್ ಕ್ಲಬ್, ಕಾಳ್ಯಂಗಾಡು)

01-05-2026 ಶುಕ್ರವಾರ

ಬೆಳಗ್ಗೆ 8 ಗಂಟೆಗೆ	:	ಉದಯಪೂಜೆ, ಭಜನೆ
9 ಗಂಟೆಗೆ	:	ಚಂಡಿಕಾ ಹೋಮ
12.30ಕ್ಕೆ	:	ಶ್ರೀ ದೇವಿಯ ಮಹಾಪೂಜೆ, ಪ್ರಸಾದ ವಿತರಣೆ
1.00 ಗಂಟೆಗೆ	:	ಅನ್ನಪ್ರಸಾದ ವಿತರಣೆ
ಸಂಜೆ 6.56ಕ್ಕೆ	:	ದೀಪಾರಾಧನೆ
ರಾತ್ರಿ 8 ಗಂಟೆಗೆ	:	ಶ್ರೀದೇವಿಯ ಮಹಾಪೂಜೆ, ಪ್ರಸಾದ ವಿತರಣೆ
8 ಗಂಟೆಗೆ	:	ಅನ್ನಪ್ರಸಾದ ವಿತರಣೆ
12 ಗಂಟೆ	:	ಶ್ರೀ ದೇವಿಯ ಮಹಾಪೂಜೆ, ಶಕ್ತಿಪೂಜೆ, ಮಂಗಳಸೇವೆ
		ಶ್ರೀ ಸರಸ್ವತಿ ಮಂಟಪದಲ್ಲಿ
ಬೆಳಗ್ಗೆ 6.00	:	ಭಜನಾಸಂಕೀರ್ತನೆ
10 ಗಂಟೆಗೆ	:	ಭಗವದ್ಗೀತಾ ಪಾರಾಯಣ
11 ಗಂಟೆಗೆ	:	ಸಂಕೀರ್ತನೆ
12 ಗಂಟೆಗೆ	:	ಶ್ರೀ ರಾಮನಾಥ ಸಾಂಸ್ಕೃತಿಕ ಭಜನಾ ಸಂಘ, ಕೋಟೆಕಣಿ
1 ಗಂಟೆಗೆ ಗಂಟೆ	:	ಭಜನಾ ಸಂಕೀರ್ತನೆ
		ಶ್ರೀ ಮೂಕಾಂಬಿಕಾ ವೇದಿಕೆ
5 ಗಂಟೆಗೆ	:	ಸಮಾರೋಪ ಸಮಾರಂಭ

ಪರಮಪೂಜ್ಯ ಶ್ರೀ ಶ್ರೀ ಗುರುದೇವಾನಂದ ಸ್ವಾಮೀಜಿ
ಶ್ರೀ ಗುರುದೇವದತ್ತ ಸಂಸ್ಥಾನಂ, ಒಡಿಯೂರು ಇವರಿಗೆ ಪೂರ್ಣಕುಂಭ ಸ್ವಾಗತ , ಉದ್ಘಾಟನೆ ಮತ್ತು ಆಶೀರ್ವಚನ
ಅಧ್ಯಕ್ಷತೆ : ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ
ದಿವ್ಯ ಉಪಸ್ಥಿತಿ :
ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು
ಶ್ರೀ ಶ್ರೀಕೃಷ್ಣಗುರೂಜಿ ಕುಕ್ಕಾಜೆ, ಶ್ರೀ ಕ್ಷೇತ್ರದ ತಂತ್ರಿವರ್ಯರು
ರಾತ್ರಿ ಗಂಟೆ 7.30ಕ್ಕೆ : ನೃತ್ಯ ವೈಭವ ಮಂಗಳೂರು ಬಿಜೈ,
ರಾತ್ರಿ 9 ಗಂಟೆಗೆ : ಸುಗಮ ಸಂಗೀತ - ಚಲನಚಿತ್ರ ಹಿನ್ನೆಲೆ ಗಾಯಕ. ಕರ್ನಾಟಕ ರಾಜ್ಯ ಪ್ರಶಸ್ತಿ ವಿಜೇತರು ಶ್ರೀ ರಮೇಶ್ಚಂದ್ರ ಬೆಂಗಳೂರು ಹಾಗೂ ಪ್ರಸಿದ್ಧ ಕಲಾವಿದರ ಸಹಯೋಗದೊಂದಿಗೆ

02-05-2026 ಶನಿವಾರ

ಸಂಜೆ 5 ಗಂಟೆಗೆ	:	ಭಂಡಾರ ಮನೆಯಿಂದ ಭಂಡಾರ ಆಗಮನ
6 ಗಂಟೆಗೆ	:	ಶ್ರೀ ಗುಳಿಗ ದೈವದ ಕೋಲ
8 ಗಂಟೆಗೆ	:	ಶ್ರೀ ಕೊರಗ ತನಿಯ ದೈವದ ಜೋಡುಕೋಲ

ಸುತ್ತಮುತ್ತ

ಇಂದು, ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ಬೋಳೂರು, ಮಠದಕಣಿ 4ನೇ ಕ್ರಾಸ್, ತಿಲಕನಗರ, ಹಿಂದುಸ್ತಾನ್ ಲಿವರ್ ಹಿಂಬದಿ, ಅಮೃತನಂದ ಮಯಿ ಶಾಲೆ, ಎಸ್.ಬಿ ರೋಡ್, ಜಾರಂದಾಯ ದೇವಸ್ಥಾನ, ಪ್ರಭು ಸ್ಟ್ರೀಟ್ಸ್ ಮತ್ತು ಮಠದಕಣಿ ರೋಡ್, ಮಠದಕಣಿ 2ನೇ ಮತ್ತು 3ನೇ ಕ್ರಾಸ್, ಬರ್ಕೆ ಪೊಲೀಸ್ ಸ್ಟೇಷನ್ ಹಿಂದೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಏ.29ರಂದು ಬೆಳಗ್ಗೆ 10ರಿಂದ ಸಂಜೆ 4ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ.

ಸುರತ್ಕಲ್ ಪರಿಸರ

ಸುರತ್ಕಲ್, ಕಾನ, ಕಟ್ಲ, ತಡಂಬೈಲ್, ಎನ್.ಐ.ಟಿ.ಕೆ, ಮುಂಚೂರು, ಚೇಳ್ಯಾರು, ಮಧ್ಯ, 1ನೇ ಬ್ಲಾಕ್, 2ನೇ ಬ್ಲಾಕ್, 3ನೇ ಬ್ಲಾಕ್, 4ನೇ ಬ್ಲಾಕ್, 5ನೇ ಬ್ಲಾಕ್, 7ನೇ ಬ್ಲಾಕ್, 8ನೇ ಬ್ಲಾಕ್, 9ನೇ ಬ್ಲಾಕ್, ಕಾಟಿಪಳ್ಳ, ಚೊಕ್ಕಬೆಟ್ಟು, ಕೋಟೆ, ಕುತ್ತೆತ್ತೂರು, ಆದರ್ಶ ನಗರ, ರಾಜೀವ ನಗರ, ಸೂರಿಂಜೆ, ಶಿಬರೂರು, ಬಾಳ, ಮಂಗಳಪೇಟೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಏ.30ರಂದು ಬೆಳಗ್ಗೆ 10ರಿಂದ ಸಂಜೆ 4ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಮೇ 8: ಪಿಯುಸಿ ಅರ್ಜಿ ಸ್ವೀಕಾರಕ್ಕೆ ಕಡೇ ದಿನ

ಸುಬ್ರಹ್ಮಣ್ಯ: ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)ಯ ಸುತ್ತೋಲೆ ಪ್ರಕಾರ ಪ್ರಥಮ ಪಿಯುಸಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಮೇ 8 ಕೊನೆಯ ದಿನ. ಮೇ 9ರಂದು ಅರ್ಜಿ ಸಲ್ಲಿಸಿರುವ ಎಲ್ಲಾ ವಿದ್ಯಾರ್ಥಿಗಳ ಪಟ್ಟಿ ಪ್ರಕಟಿಸಲಾಗುವುದು. ಮೇ 14ರಂದು ವಿದ್ಯಾರ್ಥಿಗಳ ಪ್ರಥಮ ಪಟ್ಟಿ ಪ್ರಕಟಿಸಲಾಗುವುದು ಎಂದು ದ.ಕ ಜಿಲ್ಲಾ ಅನುದಾನಿತ ಉಪನ್ಯಾಸಕರ ಸಂಘದ ಅಧ್ಯಕ್ಷ ಮತ್ತು ಸುಬ್ರಹ್ಮಣ್ಯೇಶ್ವರ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಸೋಮಶೇಖರ್ ನಾಯಕ್ ತಿಳಿಸಿದ್ದಾರೆ. ಮೇ 18ರಂದು ಪ್ರಥಮ ಪಟ್ಟಿಯಲ್ಲಿ ಪ್ರಕಟಿಸಲ್ಪಟ್ಟ ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿಸಲು ಕೊನೆಯ ದಿನ. ಮೇ 19 ದ್ವಿತೀಯ ಪಟ್ಟಿ ಪ್ರಕಟ, ಮೇ 21 ದ್ವಿತೀಯ ಪಟ್ಟಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿಸಲು ಕೊನೆಯ ದಿನ, ಮೇ 22 ತೃತೀಯ ಪಟ್ಟಿ ಪ್ರಕಟ, ಮೇ 23 ತೃತೀಯ ಪಟ್ಟಿಯ ವಿದ್ಯಾರ್ಥಿಗಳು ಶುಲ್ಕ ಪಾವತಿಸಲು ಕೊನೆ ದಿನ ಎಂದು ಪ್ರಕಟಣೆ ತಿಳಿಸಿದೆ.

ನರಸಿಂಹ ಜಯಂತಿ: ಧಾರ್ಮಿಕ ಕಾರ್ಯಕ್ರಮ

ಸುಬ್ರಹ್ಮಣ್ಯ: ಶ್ರೀ ಸುಬ್ರಹ್ಮಣ್ಯ ಮಠದಲ್ಲಿ ನೃಸಿಂಹ ಜಯಂತಿ ಮಹೋತ್ಸವದ ಅಂಗವಾಗಿ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿಗಳ ಉಪಸ್ಥಿತಿಯಲ್ಲಿ ವಸಂತ ದ್ವಾದಶಿಯ ದಿನವಾದ ಮಂಗಳವಾರ ಗಣಹೋಮ, ನರಸಿಂಹ ಹೋಮ, ವೇದವ್ಯಾಸ ಜಯಂತಿ ಮತ್ತು ವಸಂತ ಪೂಜೆ ನೆರವೇರಿತು. ಶ್ರೀ ಮಠದ ದಿವಾನ ಸುದರ್ಶನ ಜೋಯಿಸ ಮತ್ತು ಅರ್ಚಕ ಶ್ರೀಕರ ಉಪಾಧ್ಯಾಯ ವೈದಿಕ ವಿಧಿ ವಿಧಾನ ನೆರವೇರಿಸಿದರು.

ಜ್ವಲಂತ ಸಮಸ್ಯೆಗಳ ಬಗ್ಗೆ ಶಾಸಕರು ಧ್ವನಿಯೆತ್ತಲಿ: ಸುಳ್ಯ ಕಾಂಗ್ರೆಸ್ ಆಗ್ರಹ

ಸುಳ್ಯ: ಸುಳ್ಯ ತಾಲೂಕಿನಲ್ಲಿ ಸಾವಿರಾರು ಜ್ವಲಂತ ಸಮಸ್ಯೆಗಳು ಇರುವಾಗ ಶಾಸಕಿ ಕಲಾಪದಲ್ಲಿ ಕೇವಲ ಚಾರಣ ಮತ್ತು ಸಂಯುಕ್ತ ಮಂಡಳಿ ಕಾರ್ಯಕ್ರಮಕ್ಕೆ ಅನುದಾನ ಕೇಳುವುದು ಹಾಸ್ಯಸ್ಪದ. ಶಾಸಕಿ ಮೊದಲು ತಾಲೂಕಿನ ಶಾಲೆ, ಆರೋಗ್ಯ ಕೇಂದ್ರ, ರಸ್ತೆ ಸೇರಿದಂತೆ ಪ್ರಮುಖ ಜ್ವಲಂತ ಸಮಸ್ಯೆಗಳ ಬಗ್ಗೆ ವಿಧಾನ ಸಭೆಯಲ್ಲಿ ಪ್ರಶ್ನೆಯನ್ನು ಎತ್ತಲಿ ಎಂದು ಕಾಂಗ್ರೆಸ್ ಮಹಿಳಾ ಸಮಿತಿ ಹೇಳಿದೆ.

ಬುಧವಾರ ಪ್ರೆಸ್ ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆಪಿಸಿಸಿ ಸದಸ್ಯೆ ಹಾಗೂ ತಾಲೂಕು ಮಹಿಳಾ ಘಟಕ ಉಸ್ತುವಾರಿ ಸರಸ್ವತಿ ಕಾಮತ್, ತಾಲೂಕಿನಲ್ಲಿ ಹಲವಾರು ಸಮಸ್ಯೆಗಳು ಇದ್ದು ಜೊತೆಗೆ 9x11, ಆಸ್ಪತ್ರೆ, ಶಾಲೆ, ರಸ್ತೆಗಳ ಸಮಸ್ಯೆಗಳಿದ್ದು ಇವುಗಳ ಬಗ್ಗೆ ವಿಷಯ ಪ್ರಸ್ತಾಪಿಸಲು ಅವರಿಗೆ ಅವಕಾಶವಿದ್ದರೂ ಮಾತನಾಡದೇ ಬೇರೆ ಇತರೆ ವಿಚಾರಗಳ ಬಗ್ಗೆ ರಸ್ತೆಯಲ್ಲಿ ಪ್ರತಿಭಟನೆ ನಡೆಸಿ ಪ್ರಯೋಜನವಿಲ್ಲ ಎಂದು ಹೇಳಿದರು.

ಮಹಿಳೆಯರ ಬಗ್ಗೆ ಕಾಳಜಿ ಇರುವ ತಾವು ಯಾಕೆ ಪುತ್ತೂರು ನಿಮ್ಮದೇ ಪಕ್ಷದ ನಾಯಕರ ಮಗನ ವಿಚಾರದಲ್ಲಿ ಪ್ರತಿಭಟನೆಯಲ್ಲಿ ಭಾಗವಹಿಸಿಲ್ಲ ಎಂದು ಅವರು ಪ್ರಶ್ನಿಸಿದರು. ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಗೀತಾ ಕೋಲ್ಚಾರ್ ಮಾತನಾಡಿ, ಬಿಜೆಪಿ ಪ್ರತಿಭಟನಾ ಸಭೆಯಲ್ಲಿ ಸೇರಿದ ಮಹಿಳೆಯರಿಗೆ ಈ ವಿಧೇಯಕದ ಕುರಿತು ಮಾಹಿತಿ ಇದೆಯೇ ಎಂದು ಪ್ರಶ್ನಿಸಿದರಲ್ಲದೇ ಮೊದಲು ಕಾಯಿದೆ ಬಗ್ಗೆ ತಿಳಿದುಕೊಳ್ಳಲಿ ಎಂದರು. ಜಿಲ್ಲಾ ಕಾರ್ಯದರ್ಶಿ ಅನುಸೂಯ ಬೆಳ್ಳಾರೆ, ಶಹನಾಝ್, ಬ್ಲಾಕ್ ಮಹಿಳಾ ಕಾಂಗ್ರೆಸ್ ಕಾರ್ಯದರ್ಶಿ ಪವಿತ್ರ ಉಪಸ್ಥಿತರಿದ್ದರು.

ಉಪ್ಪಿನಂಗಡಿ ಜೈನ ಬಸದಿ ಪುನರ್ ಪ್ರತಿಷ್ಠಾ ಮಹೋತ್ಸವ | ವೀರಸಾಗರ ಮುನಿ ಮಹಾರಾಜರಿಂದ ಪ್ರವಚನ

ತೀರ್ಥಂಕರರ ಸಂದೇಶ ಪಾಲನೆಯಿಂದ ಜೀವನ ಸಾರ್ಥಕ್ಯ



ಉಪ್ಪಿನಂಗಡಿ: ತೀರ್ಥಂಕರರು ಬೋಧಿಸಿದ ಆರು ಕರ್ತವ್ಯಗಳನ್ನು ನಿಷ್ಠೆಯಿಂದ ಪಾಲಿಸಿ ಜೀವನ ಸಾರ್ಥಕ್ಯವನ್ನು ಕಾಣಬೇಕೆಂದು ಜೈನ ದಿಗಂಬರ ಪರಂಪರೆಯ ಪರಮಪೂಜ್ಯ 108 ಶ್ರೀ ವೀರಸಾಗರ ಮುನಿ ಮಹಾರಾಜರು ಕರೆ ನೀಡಿದರು.

ಅವರು ಉಪ್ಪಿನಂಗಡಿ ಗಾಂಧಿ ಪಾರ್ಕ್‌ನ ಹೆದ್ದಾರಿ ಪಾರ್ಶ್ವದಲ್ಲಿಪುನರ್ ನಿರ್ಮಿತಕರಾದ ಭಗವಾನ್ 1008 ಶ್ರೀ ಚಂದ್ರನಾಥ ಸ್ವಾಮಿ ಬಸದಿಯಲ್ಲಿ ಏಕಶಿಲಾ ಚತುರ್ಮುಖ ಮಾನಸ್ತಂಭೋಪರಿ ಶ್ರೀ ಜಿನಬಿಂಬಗಳ ಪಂಚಕಲ್ಯಾಣ ಹಾಗೂ ಧಾಮ ಸಂಪ್ರೋಕ್ಷಣಾಪೂರ್ವಕ ಭಗವಾನ್ 1008 ಶ್ರೀ ಚಂದ್ರನಾಥ ಸ್ವಾಮಿ ಹಾಗೂ ಮಹಾಮಾತೆ ಶ್ರೀ ಪದ್ಮಾವತೀ ದೇವಿ ಬಿಂಬಗಳ ಪುನರ್ ಪ್ರತಿಷ್ಠಾ ಮಹೋತ್ಸವದ ಮೊದಲ ದಿನ ಭಾಗವಹಿಸಿ ಮಂಗಲ ಪ್ರವಚನ ನೀಡಿದರು.

ದೇವಪೂಜೆ, ಗುರುಸೇವೆ, ಸ್ವ ಅಧ್ಯಾಯ, ಸಂಯಮ, ತಪ, ದಾನ ಇವು ಕಡ್ಡಾಯ ಅನುಷ್ಠಾನದ ವಿಧಿ. ಇದರ ಬಗ್ಗೆ ಅಸಡ್ಡೆ ಸಲ್ಲದು. ತಾನೇ ಕಡ್ಡಾಯವಾಗಿ ಪಾಲಿಸ್ಲೇಕಾಗುವುದೇ ಭಗವಂತನ ಪ್ರೀತಿಗೆ ಪಾತ್ರವಾಗುವುದಾಗಿದೆ ಎಂದರು.

ಶ್ರೀಕ್ಷೇತ್ರ, ಕಂಬದಹಳ್ಳಿಯ ಪರಮಪೂಜ್ಯ ಸ್ವಸ್ತಿಶ್ರೀ ಭಾನುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿ ಮಂಗಲ ಪ್ರವಚನ ನೀಡಿ, ಬಸದಿ ಕೇವಲ ಅಲ್ಲಿನ ಪುರೋಹಿತರದಾಗಿಲ್ಲ, ಬದಲಾಗಿ ಅದು ಸಮಸ್ತ ಜನ ಭಕ್ತರದ್ದಾಗಿದೆ. ಅದಕ್ಕಾಗಿ ಬಸದಿಗೆ ದಿನ ನಿತ್ಯ ಭೇಟಿ ನೀಡಿ ತಿಳಿದೋ ತಿಳಿಯದೆಯೋ ಮಾಡಿದ ಪಾಪ ಕರ್ಮಗಳನ್ನು ಕಳೆಯಬೇಕೆಂದರು.

ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ವಜ್ರಕುಮಾರ್ ಜೈನ್, ಕಾರ್ಯಾಧ್ಯಕ್ಷ ಧನ್ಯಕುಮಾರ್ ರೈ, ಪಂಚಕಲ್ಯಾಣ ಸಮಿತಿಯ ಅಧ್ಯಕ್ಷ ವಿದ್ಯಾಧರ ಜೈನ್, ಕಾರ್ಯದರ್ಶಿ ಶಾಂತಿಪ್ರಸಾದ್, ಸಮಿತಿಯ ಸದಸ್ಯ ಪ್ರಶಾಂತ್ ಜೈನ್ ಬಾರ್ಯ, ಅನುದೀಪ್ ರೈ, ನಿತೇಶ್ ಕುಮಾರ್ ಪುತ್ತಿಲ, ಪ್ರಭಾಕರ್ ರೈ, ರಕ್ಷಿತ್ ಕುಮಾರ್ ಪುತ್ತಿಲ, ಜಯರಾಜ್ ಜಾರಕೆ, ಸುಭಾಷ್ ಜೈನ್, ನಿರಂಜನ್ ಕೊಂಡೆ, ಅರುಣಾ ಡಿ. ರೈ, ಪಾರ್ಶ್ವನಾಥ್ ನೆಲ್ಯಾಡಿ, ಸಮಂತ್ ನೆಲ್ಯಾಡಿ, ಪುನೀತ್ ನೆಲ್ಯಾಡಿ, ಉದಯ ಕುಮಾರ್ ಜೈನ್, ಅಭಯ್ ಜೈನ್, ವಿಜೇತ್ ಜೈನ್ ,ಸಂಪತ್ ಕುಮಾರ್ ಅಲಂಕಾರು, ಸನ್ಮತಿ ಹೆಗ್ಡೆ ಸತೀಶ್ ಪಡಿವಾಳ್ , ಮಹೇಶ್ ಪಡಿವಾಳ ಮೊದಲಾದವರು ಭಾಗವಹಿಸಿದ್ದರು. ಮಿತ್ರಸೇನ್ ಜೈನ್ ಕಾರ್ಯಕ್ರಮ ನಿರೂಪಿಸಿದರು.

ಧಾರ್ಮಿಕ ಕಾರ್ಯಕ್ರಮ

ಬಸದಿಯಲ್ಲಿ ಬುಧವಾರ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಯಿತು. ಇಂದ್ರ ಪ್ರತಿಷ್ಠೆ, ತೋರಣ ಮೂಹೂರ್ತ, ಪಂಚ ಕಲ್ಯಾಣ ಮಂಟಪ ಪ್ರವೇಶ, ಯಕ್ಷ ಪ್ರತಿಷ್ಠೆ ವಿಮಾನ ಶುದ್ಧಿ ವಿಧಾನ, 81 ಕಲಶಗಳಿಂದ ಮಂದಿರ- ಮಾನಸ್ತಂಭ-ಶಿಖರ ಶುದ್ಧಿ ವಿಧಾನ, ಮುಖ ವಸ್ತ್ರ ಉದ್ಘಾಟನೆ, ಧ್ವಜಾರೋಹಣ, ನಾಂದಿ ಮಂಗಲ ಪೂಜಾ ವಿಧಾನ , ಆರಾಧನಾ ಪೂರ್ವಕ ಶ್ರೀ ಕ್ಷೇತ್ರಪಾಲ ಪ್ರತಿಷ್ಠಾ ವಿಧಾನ, ಪಂಚ ಕಲ್ಯಾಣ ಆರಾಧನಾ ವಿಧಾನ, ಯಾಗ ಮಂಡಲ ಆರಾಧನಾ ವಿಧಾನ, ಮೃತ್ತಿಕಾ ಸಂಗ್ರಹಣೆ, ಅಂಕುರಾರ್ಪಣೆ, ಪಂಚಕಲ್ಯಾಣ ಮಂಟಪದಲ್ಲಿ ಮಾತುರಾಧ್ಯಾನಾದಿ ಕ್ರಿಯಾಯುಕ್ತ ಗರ್ಭಾವತರಣ ಕಲ್ಯಾಣ ಪೂರ್ವ ವಿಧಿ, ಭೇರಿತಾಡನ ವಿಧಿ, ಮಂಗಲ ಸೂತ್ರ ಬಂಧನ , ಶ್ರೀ ಸ್ವಾಮಿಗೆ ನವ ಕಲಶಾಭಿಷೇಕ, ಮಹಾಪೂಜೆ. ಮಹಾಮಂಗಳಾರತಿ, ಶ್ರೀ ಜಿನಗಂಧೋದಕ ವಿಧಿವಿಧಾನಗಳು ನಡೆದವು. ಪ್ರತಿಷ್ಠಾಚಾರ್ಯರಾಗಿ ಸೂರಜ್ ಭಾಗವಹಿಸಿದರು.

ಗುರುವಾಯನಕೆರೆಯಲ್ಲಿ ಯಕ್ಷಗಾನ ಬಣ್ಣಗಾರಿಕೆ ಕಲಿಕಾ ಶಿಬಿರ, ಪ್ರಾತ್ಯಕ್ಷಿಕೆ



ಬೆಳ್ತಂಗಡಿ: ಶ್ರೀ ಶಾರದಾಂಬ ಯಕ್ಷಗಾನ ಕಲಾ ಬಳಗದ ವತಿಯಿಂದ ಯಕ್ಷಗಾನ ಬಣ್ಣಗಾರಿಕೆ ಕಲಿಕಾ ಶಿಬಿರವು ಗುರುವಾಯನಕೆರೆ ಶ್ರೀ ಶಾರದಾಂಬ ಭಜನಾ ಮಂಡಳಿಯಲ್ಲಿ ಜರಗಿತು.

ಭಾಗವತ ದೇವಿಪ್ರಸಾದ್, ಚಂದ್ರಶೇಖರ ಆಚಾರ್ಯ ಗುರುವಾಯನಕೆರೆ, ಶ್ರೇಯಸ್ ಪಾಮದ ಪದವು, ಕೇಶವ ಹಿಮ್ಮೇಳದಲ್ಲಿ ಚೌಕಿ ಪೂಜೆ ನಡೆದು ಯಕ್ಷಗಾನ ಕಲಿಕಾ ವಿದ್ಯಾರ್ಥಿಗಳಿಂದ ಪೂರ್ವರಂಗದ ಪ್ರಾತ್ಯಕ್ಷಿಕೆ ನಡೆಯಿತು. ಕೊಡಮಣಿತ್ತಾಯ ದೈವಸ್ಥಾನ ಅರಮಲೆ ಬೆಟ್ಟ ಅನುವಂಶಿಕ ಮೊಕ್ತೇಸರ ಸುಕೇಶ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸಿ ಕಲಾ ಬಳಗದಿಂದ ತರಬೇತಿ ಪಡೆದ ವಿದ್ಯಾರ್ಥಿಗಳು ಉತ್ತಮ ಕಲಾವಿದರಾಗಿ ರೂಪುಗೊಳ್ಳುವಂತಾಗಲು ಶಿಬಿರವು ಪ್ರೇರಣೆ ನೀಡಲಿ ಎಂದರು.

ಬೆಳ್ತಂಗಡಿ ಯಕ್ಷಧ್ರುವ ಪಟ್ಲ ಫೌಂಡೇಶನ್ ಘಟಕದ ಟ್ರಸ್ಟಿ ಲಯನ್ ದೇವಿದಾಸ ಶೆಟ್ಟಿ ಬದ್ಯಾರು, ಮಾಜಿ ಗ್ರಾ.ಪಂ. ಸದಸ್ಯ ಪ್ರದೀಪ ಶೆಟ್ಟಿ ಶಕ್ತಿ ನಗರ, ಆನಂದ ಶೆಟ್ಟಿ ಶಕ್ತಿನಗರ ಶುಭ ಹಾರೈಸಿದರು. ಶ್ರೀ ಶಾರದಾಂಬ ಭಜನಾ ಮಂಡಳಿ ಅಧ್ಯಕ್ಷ ಕುಸುಮಾವತಿ ಅಧ್ಯಕ್ಷತೆ ವಹಿಸಿದ್ದರು. ಯಕ್ಷಗಾನ ಮತ್ತು ಬಣ್ಣಗಾರಿಕೆ ಕುರಿತು ಯಕ್ಷಗಾನ ಕಲಾವಿದ ದಿವಾಕರ ಆಚಾರ್ಯ ಗೇರುಕಟ್ಟೆ ಉಪನ್ಯಾಸ ನೀಡಿ ಕಲಾವಿದನಾಗಲು ಯಕ್ಷಗಾನದ ಚತುರ್ವಿಧಗಳಾದ ಆಂಗಿಕ, ಸಾತ್ವಿಕ, ಆಹಾರ್ಯ ಮತ್ತು ವಾಚಿಕದಲ್ಲಿ ಪೂರ್ಣತೆಯನ್ನು ಸಾಧಿಸಬೇಕೆಂದರು.

ಪಿಯು ಸಾಧಕರಾದ ವಾಣಿ ಪದವಿ ಪೂರ್ವ ಕಾಲೇಜು ಪಟ್ಲ ಫೌಂಡೇಶನ್ ಯಕ್ಷ ಶಿಕ್ಷಣದ ವಿದ್ಯಾರ್ಥಿಗಳಾದ ರಂಜಿತಾ ಮತ್ತು ಸಾನ್ವಿ ಅವರನ್ನು ಗೌರವಿಸಲಾಯಿತು. ಕಲಾವಿದ ಪ್ರಭಾಕರ ಶೆಟ್ಟಿ ತೆಂಕಕಾರಂದೂರು ವಿದ್ಯಾರ್ಥಿಗಳಿಗೆ ಬಣ್ಣಗಾರಿಕೆಯ ಶಿಬಿರ ನಿರ್ವಹಿಸಿದರು. ನಾಟ್ಯಗುರು ದೇವಿ ಪ್ರಸಾದ್ ಆಚಾರ್ಯ ಗುರುವಾಯನಕೆರೆ ನಿರೂಪಿಸಿ ಸುಧಾಮಣಿ ವಂದಿಸಿದರು. ಗೆಳೆಯರ ಬಳಗ ಗುರುವಾಯನಕೆರೆ, ಶ್ರೀ ಶಾರದಾಂಬ ಭಜನಾ ಮಂಡಳಿ ಗುರುವಾಯನಕೆರೆ ಶಿಬಿರಕ್ಕೆ ಸಹಕಾರ ನೀಡಿದರು.

ಸುಬ್ರಹ್ಮಣ್ಯ ಮಠದಲ್ಲಿ ನರಸಿಂಹ ಜಯಂತಿ: ಸಾಂಸ್ಕೃತಿಕ ವೈಭವಕ್ಕೆ ಚಾಲನೆ



ಸುಬ್ರಹ್ಮಣ್ಯ: ಧಾರ್ಮಿಕ, ವೈದಿಕ, ಸಾಂಸ್ಕೃತಿಕ ಕಾರ್ಯಕ್ರಮಗಳ ಸಮ್ಮಿಳಿತದ ಉತ್ಸವಗಳು ಭಗವಂತನಿಗೆ ಪ್ರಿಯ. ಆಧುನಿಕ ಯುಗದಲ್ಲಿ ಮಕ್ಕಳು ನಮ್ಮ ಧಾರ್ಮಿಕ ಕಾರ್ಯಕ್ರಮದತ್ತ ಆಕರ್ಷಿತರಾಗಬೇಕು. ಈ ಮೂಲಕ ನಮ್ಮ ಧಾರ್ಮಿಕ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಹೋಗಲು ಅವರು ಸಿದ್ಧರಾಗಬೇಕು. ಯುವ ಜನಾಂಗ ಧಾರ್ಮಿಕ ಚಿಂತನೆ ಬೆಳೆಸಿಕೊಳ್ಳುವುದರ ಜೊತೆಗೆ ಅಂತರ್ಗತವಾಗಿರುವ ದ್ವೇಷ ಭಾವನೆ ತೊಡೆದು ಹಾಕಬೇಕು. ನಿರ್ಮಲ ಮನಸಿನಿಂದ ನಮ್ಮೊಳಗಿರುವ ಶತ್ರುತ್ವದ ಭಾವನೆ ದೂರವಾಗಿ ಬದುಕು ಔನತ್ಯ ವಾಗುತ್ತದೆ ಎಂದು ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಗಳು ನುಡಿದರು.

ಶ್ರೀ ಸಂಪುಟ ನರಸಿಂಹ ಸ್ವಾಮಿ ಸುಬ್ರಹ್ಮಣ್ಯ ಮಠದಲ್ಲಿ ನರಸಿಂಹ ಜಯಂತಿ ಅಂಗವಾಗಿ ಪಂಚ ದಿನಗಳ ಕಾಲ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಂಗಳವಾರ ಸಂಜೆ ಉದ್ಘಾಟಿಸಿ ಅವರು ಮಾತನಾಡಿದರು.

ಧರ್ಮ ರಕ್ಷಣೆಗೆ ಭಗವಂತನ ಅವತಾರ

ಭಗವಂತನು ನಾನಾ ಅವತಾರಗಳನ್ನು ಎತ್ತಿದ್ದಾನೆ. ಪ್ರತಿಯೊಂದು ಅವತಾರಕ್ಕೂ ವಿಶೇಷ ಅರ್ಥವಿದೆ. ಧರ್ಮ ರಕ್ಷಣೆಗಾಗಿ ಮತ್ತು ದುಷ್ಟ ನಿಗ್ರಹಕ್ಕಾಗಿ ದೇವರು ವಿವಿಧ ಅವತಾರ ತಾಳಿದ್ದಾನೆ. ಇದರಲ್ಲಿ ಅತ್ಯಂತ ಅಮೂಲ್ಯವಾದುದು ನರಸಿಂಹಾವತಾರವಾಗಿದೆ. ಎಡನೀರು ಮಠ ಮತ್ತು ಸುಬ್ರಹ್ಮಣ್ಯ ಮಠದ ನಡುವೆ ಅವಿನಾಭಾವ ಸಂಬಂಧವಿದೆ ಎಂದು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು. ಸುಬ್ರಹ್ಮಣ್ಯ ಮಠದ ದಿವಾನ ಸುದರ್ಶನ ಜೋಯಿಸ, ಕಲಾವಿದ ಕೆ. ಯಜ್ಞೇಶ್ ಆಚಾರ್ ಉಪಸ್ಥಿತರಿದ್ದರು.

ಅಂತರ್ ವಿಭಾಗ ಮಟ್ಟದ ವಾರ್ಷಿಕ 'ಅಥ್ಲೆಟಿಕ್ ಕ್ರೀಡೋತ್ಸವ'ಕ್ಕೆ ಚಾಲನೆ



ಕೊಣಾಜೆ: ಕ್ರೀಡೆಯಿಂದ ದೈಹಿಕ ಮತ್ತು ಮಾನಸಿಕ ಶಿಸ್ತು ಒದಗುತ್ತದೆ. ಎಲ್ಲರೊಂದಿಗೆ ಬೆರೆಯುವ ಅವಕಾಶ ಒದಗಿ ಸ್ನೇಹ ವೃದ್ಧಿಯಾಗುತ್ತದೆ. ಕ್ರೀಡಾ ಮನೋಭಾವ ಬದುಕಿನಲ್ಲಿ ಮೌಲ್ಯವಾಗಬೇಕು ಎಂದು ಕೊಣಾಜೆ ಪೊಲೀಸ್ ಠಾಣೆಯ ಮುಖ್ಯ ಅಧಿಕಾರಿ ಯತೀಶ್ ಗೌಡ ಹೇಳಿದರು.

ಅವರು ಬುಧವಾರ ಮಂಗಳೂರು ವಿಶ್ವವಿದ್ಯಾನಿಲಯದ ಕ್ರೀಡಾ ಸಮಿತಿ ವಿಶ್ವವಿದ್ಯಾನಿಲಯದ ಅಥ್ಲೆಟಿಕ್ ಸ್ಟೇಡಿಯಂನಲ್ಲಿ ಏರ್ಪಡಿಸಿದ ಅಂತರ್ ವಿಭಾಗ ವಾರ್ಷಿಕ ಅಥ್ಲೆಟಿಕ್ ಕ್ರೀಡೋತ್ಸವವನ್ನು ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷತೆಯನ್ನು ವಹಿಸಿದ ವಿವಿಯ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಜೆರಾಲ್ಡ್ ಸಂತೋಷ್ ಮಾತನಾಡಿ, ವಿದ್ಯಾರ್ಥಿಗಳು ಪಠ್ಯ ಕ್ರಮ ಶಿಕ್ಷಣದ ಜೊತೆಗೆ ಕ್ರೀಡೆಗೂ ಸಮಾನ ಪ್ರಾಧಾನ್ಯತೆ ನೀಡಬೇಕು ಎಂದರು.

ಸಮಾರಂಭದಲ್ಲಿ ಪ್ರಾಧ್ಯಾಪಕ ಪ್ರೊ. ಪ್ರಶಾಂತ್ ನಾಯ್ಕ್, ಡಾ. ಧನಂಜಯ ಕುಂಬ್ಳೆ ಅತಿಥಿಗಳಾಗಿ ಭಾಗವಹಿಸಿದ್ದರು. ದೈಹಿಕ ಶಿಕ್ಷಣ ವಿಭಾಗದ ಸಹ ನಿರ್ದೇಶಕ ಡಾ.ಪ್ರಸನ್ನ ಚಂದ್ರಹಾಸ ಕೊಳೂರು, ವಿದ್ಯಾರ್ಥಿ ನಾಯಕರು, ವಿದ್ಯಾರ್ಥಿಗಳು, ಉಪನ್ಯಾಸಕರು ಭಾಗವಹಿಸಿದ್ದರು. ಕಾರ್ಯಕ್ರಮ ಸಂಯೋಜಕ ದೈಹಿಕ ಶಿಕ್ಷಣ ವಿಭಾಗದ ಸಹ ನಿರ್ದೇಶಕ ರಮೇಶ್.ಎಚ್ ಎನ್ ಸ್ವಾಗತಿಸಿದರು.



ಸುಬ್ರಹ್ಮಣ್ಯ ಮಠದಲ್ಲಿ ನರಸಿಂಹ ಜಯಂತಿಯಂದು ಮಂಗಳವಾರ ರಾತ್ರಿ ವಿದ್ವಾನ್ ಕುನ್ನಕುಡಿ ಬಾಲಮುರಳಿಕೃಷ್ಣ ಚೆನ್ನೈ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಚೇರಿ ನಡೆಯಿತು. ಅವರಿಗೆ ಪ್ರಾದೇಶ್ ಆಚಾರ್ಯ ಬೆಂಗಳೂರು, ಅರ್ಜುನ ಕುಮಾರ್ ಬೆಂಗಳೂರು, ಗುರುಪ್ರಸನ್ನ ಬೆಂಗಳೂರು ಹಿಮ್ಮೇಳದಲ್ಲಿ ಸಹಕರಿಸಿದರು. ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ, ಮಠದ ದಿವಾನ ಸುದರ್ಶನ ಜೋಯಿಸ ಇದ್ದರು.

ಮೆಡ್ ಲ್ಯಾಂಡ್ ಆಸ್ಪತ್ರೆಯಲ್ಲಿ ಆಶಾ ಕಾರ್ಯಕರ್ತೆಯರಿಗೆ ಆರೋಗ್ಯ ತಪಾಸಣೆ



ಪುತ್ತೂರು: ತಾಲೂಕಿನ ಸಂಪ್ಯದಲ್ಲಿರುವ ಮೆಡ್ ಲ್ಯಾಂಡ್ ಆಸ್ಪತ್ರೆಯಲ್ಲಿ ಪುತ್ತೂರು ಹಾಗೂ ಕಡಬ ತಾಲೂಕಿನ ಆಶಾ ಕಾರ್ಯಕರ್ತೆಯರಿಗಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಯಿತು.

ಈ ಶಿಬಿರದಲ್ಲಿ ನೂರಕ್ಕೂ ಹೆಚ್ಚು ಆಶಾ ಕಾರ್ಯಕರ್ತೆಯರು ಭಾಗವಹಿಸಿ ತಮ್ಮ ಆರೋಗ್ಯ ತಪಾಸಣೆಯನ್ನು ಮಾಡಿಸಿಕೊಂಡರು. ರಕ್ತದ ಒತ್ತಡ, ಶುಗರ್, ಹಿಮೋಗ್ಲೋಬಿನ್, ತೂಕ ಸೇರಿದಂತೆ ವಿವಿಧ ಆರೋಗ್ಯ ಪರೀಕ್ಷೆಗಳು ಉಚಿತವಾಗಿ ನೆರವೇರಿಸಲಾಯಿತು. ತಜ್ಞ ವೈದ್ಯರ ತಂಡವು ಭಾಗವಹಿಸಿದವರಿಗೆ ಆರೋಗ್ಯ ಸಂಬಂಧಿತ ಸಲಹೆಗಳನ್ನು ನೀಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಮೆಡ್ ಲ್ಯಾಂಡ್ ಆಸ್ಪತ್ರೆಯ ಮೆಡಿಕಲ್ ಡೈರೆಕ್ಟರ್ ಡಾ. ವಿಶಾಲ್ ಯು.ಪಿ., ಆಶಾ ಕಾರ್ಯಕರ್ತೆಯರು ಗ್ರಾಮೀಣ ಮಟ್ಟದಲ್ಲಿ ಆರೋಗ್ಯ ಸೇವೆಯನ್ನು ಜನರಿಗೆ ತಲುಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಅವರ ಆರೋಗ್ಯ ಕಾಳಜಿ ಕೂಡ ಅತಿ ಮುಖ್ಯವಾಗಿದ್ದು ಇಂತಹ ಶಿಬಿರಗಳು ಅವಶ್ಯಕವೆಂದು ಹೇಳಿದರು.

ಆಶಾ ಕಾರ್ಯಕರ್ತೆಯರ ಮೇಲ್ವಿಚಾರಕಿ ಹರಿಣಿ ಮಾತನಾಡಿ, ಇಂತಹ ಉಚಿತ ಶಿಬಿರಗಳು ತಮ್ಮ ಆರೋಗ್ಯವನ್ನು ಪರಿಶೀಲಿಸಲು ಸಹಾಯಕವಾಗಿದ್ದು ಆಸ್ಪತ್ರೆಯ ಈ ಮುಂದಾಳತ್ವಕ್ಕೆ ಧನ್ಯವಾದಗಳನ್ನು ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಆಸ್ಪತ್ರೆಯ ವೈದ್ಯರಾದ ಮಧುಮೇಹ ತಜ್ಞೆ ಡಾ. ಸ್ವಾತಿ ಪಿ., ಡಾ. ಸುಜನ್, ಆಸ್ಪತ್ರೆಯ ಪಿಆರ್‌ಓ ರಝಾಕ್ ಸಾಲ್ಮರ ಮತ್ತಿತರರು ಉಪಸ್ಥಿತರಿದ್ದರು. ರಫೀಕ್ ಎಂ.ಎ. ಸವಣೂರು ಕಾರ್ಯಕ್ರಮ ನಿರ್ವಹಿಸಿದರು.

ಯೆನೆಪೋಯಾ ಆಕ್ಯುಪೇಶನಲ್ ಚಿಕಿತ್ಸಾ ವಿಭಾಗದಿಂದ 'ಆಟಿಸಂ ಜಾಗೃತಿ'



ಮಂಗಳೂರು: ಯೆನೆಪೋಯಾ (ಡೀಮ್ಡ್–ಟು–ಬಿ ಯುನಿವರ್ಸಿಟಿ)ಯ ಆಕ್ಯುಪೇಶನಲ್ ಚಿಕಿತ್ಸಾ ವಿಭಾಗದ ವತಿಯಿಂದ ಸಮುದಾಯ ಆಧಾರಿತ 'ಆಟಿಸಂ ಜಾಗೃತಿ ಆಂದೋಲನ'ವನ್ನು ಫಿಝಾ ಮಾಲ್ ಮತ್ತು ಉಳ್ಳಾಲ ಬೀಚ್ ನಲ್ಲಿ ನೆರವೇರಿಸಲಾಯಿತು.

ಆಟಿಸಂ ಕುರಿತಂತೆ ಜಾಗೃತಿ ಮೂಡಿಸುವುದು, ಅವರನ್ನು ಎಲ್ಲರೊಂದಿಗೆ ಸೇರಿಸಿಕೊಳ್ಳುವುದು ಮತ್ತು ಆರಂಭಿಕ ಹಂತದಲ್ಲೇ ಆಟಿಸಂ ಗುರುತಿಸುವುದು ಈ ಆಂದೋಲನದ ಉದ್ದೇಶವಾಗಿತ್ತು.

ವಿಭಾಗ ಮುಖ್ಯಸ್ಥೆ ಡಾ. ಪ್ರೇಮಾ ಲಾಲ್ ಅವರ ನಿರ್ದೇಶನ ಮತ್ತು ಬೆಂಬಲದೊಂದಿಗೆ ಡಾ. ದಯಾನಿಧಿ ಕೆ. ಮತ್ತು ಡಾ. ಅನನ್ಯ ಜಾನ ಅವರು ಕಾರ್ಯಕ್ರಮದ ಸಂಘಟನಾ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದರು. ಸಂಘಟನಾ ತಂಡದಲ್ಲಿ ಡಾ. ಅನಸ್, ಡಾ. ಅಮಂಡಾ ಫಿಲಿಪ್ ಮತ್ತು ಡಾ. ಅನ್ನು ಎ. ಡೇವಿಡ್ ಇದ್ದರು. ಆಕ್ಯುಪೇಶನಲ್ ಚಿಕಿತ್ಸಾ ವಿಭಾಗದ ಮೂರನೇ ಮತ್ತು ಕೊನೆಯ ವರ್ಷದ ಪದವಿ ವಿದ್ಯಾರ್ಥಿಗಳ ಉತ್ಸಾಹದ ಪಾಲ್ಗೊಳ್ಳುವಿಕೆಯೊಂದಿಗೆ ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಬೀದಿ ನಾಟಕ, ಫ್ಲಾಶ್ ಮಾಬ್, ಮುಖ ಚಿತ್ತಾರ, ಮೆಹಂದಿ, ಸಾರ್ವಜನಿಕರೊಂದಿಗೆ ಮುಕ್ತ ಸಮನ್ವಯ ಮುಂತಾಗಿ ವಿವಿಧ ಬಗೆಯ ಕಾರ್ಯಕ್ರಮಗಳೊಂದಿಗೆ ಈ ಜಾಗೃತಿ ಆಂದೋಲನ ನಡೆಯಿತು. ಆಟಿಸಂನ ಆರಂಭಿಕ ಲಕ್ಷಣಗಳ ಕುರಿತಂತೆ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು. ಕ್ಯೂಆರ್ ಆಧಾರಿತ ಡಿಜಿಟಲ್ ಸಂಪನ್ಮೂಲದ ಮುಖಾಂತರ ಜನರಿಗೆ ಆಟಿಸಂ ಕುರಿತಂತೆ ಸುಲಭದಲ್ಲೇ ಮಾಹಿತಿ ದೊರಕುವಂತೆ ಮಾಡಿದ್ದು ಈ ಕಾರ್ಯಕ್ರಮದ ವಿಶೇಷವಾಗಿತ್ತು.



ಅಧಿವಕ್ತಾ ಪರಿಷತ್ ದಕ್ಷಿಣ ಪ್ರಾಂತ ಮಂಗಳೂರು ಘಟಕ ಮತ್ತು ಬಂಟ್ವಾಳ ಘಟಕದ ವತಿಯಿಂದ ಅಂಬೇಡ್ಕರ್ ಜಯಂತಿ ಅಂಗವಾಗಿ ಅರ್ಕುಲ ಫರಂಗಿಪೇಟೆಯ ಶ್ರೀಮಾತಾ ಲಕ್ಷಣ ಶಾಂತಿಧಾಮ ಆಶ್ರಮಕ್ಕೆ ಅಗತ್ಯವಾದ ದಿನಸಿ ಸಾಮಾಗ್ರಿ ಹಸ್ತಾಂತರಿಸಲಾಯಿತು. ಪ್ರಾಂತ ಅಧ್ಯಕ್ಷ ಗುರುಪ್ರಸಾದ್ ಶೆಟ್ಟಿ ಮಂಗಳೂರು, ಜಿಲ್ಲಾ ಉಪಾಧ್ಯಕ್ಷ ಉಮಾ ಎಸ್. ಸೋಮಯಾಜಿ, ಅಕ್ಷಯ್ ರಾವ್ ಬೆಳ್ತಂಗಡಿ, ಮಂಗಳೂರು ಘಟಕ ಅಧ್ಯಕ್ಷ ಆಶಾ ಪಿ. ರೈ, ಬಂಟ್ವಾಳ ಘಟಕದ ಪ್ರಧಾನ ಕಾರ್ಯದರ್ಶಿ ಶ್ರೀರಾಮ ಪ್ರಭು. ಉಪಾಧ್ಯಕ್ಷೆ ಉಷಾ , ಜಿಲ್ಲಾ ಸದಸ್ಯ ವೀರೇಂದ್ರ ಎಂ. ಸಿದ್ದಕಟ್ಟೆ ಉಪಸ್ಥಿತರಿದ್ದರು.

ಉಳ್ಳಾಲ ಗಾಂಧಿನಗರ ಚಾಮುಂಡೇಶ್ವರಿ ಶ್ರೀ ಕ್ಷೇತ್ರದಲ್ಲಿ ಪುನರ್ ಪ್ರತಿಷ್ಠಾ ಕಲಶೋತ್ಸವದ ಸಂಭ್ರಮ | ಹಸಿರು ಹೊರೆಕಾಣಿಕೆ ಸಮರ್ಪಣೆ

ಸಂಸ್ಕೃತಿ, ಸಂಸ್ಕಾರ ಉಳಿಯಬೇಕಾದರೆ ಆರಾಧ್ಯ ಕ್ಷೇತ್ರಗಳ ಅಭಿವೃದ್ಧಿ ಅಗತ್ಯ: ದೇವು ಮೂಲ್ಯಣ್ಣ



ಉಳ್ಳಾಲ: ಎಲ್ಲಾ ಕಡೆಗಳಲ್ಲೂ ದೈವ, ದೇವಸ್ಥಾನಗಳ ಜೀರ್ಣೋದ್ಧಾರ ಕಾರ್ಯಗಳು ಸಾಂಘವಾಗಿ ನಡೆಯುತ್ತಿದ್ದು ಭಾರತ ದೇಶವು ಬೆಳಗುತ್ತಿರುವುದಕ್ಕೆ ಇದು ಸಾಕ್ಷಿ. ದೇಶದ ಸಂಸ್ಕೃತಿ, ಸಂಸ್ಕಾರ ಉಳಿಯಲು ನಮ್ಮ ಆರಾಧ್ಯ ಕ್ಷೇತ್ರಗಳು ಅಭಿವೃದ್ಧಿಗೊಳ್ಳಬೇಕಿದೆ. ಊರಿನ ದೈವ, ದೇವಸ್ಥಾನಗಳೇ ನಮ್ಮ ಜ್ಞಾನ ಪೀಠಗಳಾಗಿದ್ದು ಅಂತಹ ಜ್ಞಾನಪೀಠಗಳ ಏಳಿಗೆಗಾಗಿ ಜೀರ್ಣೋದ್ಧಾರ, ಬ್ರಹ್ಮಕಲಶ ಪ್ರಕ್ರಿಯೆಗಳು ಪ್ರಾಮುಖ್ಯವಾಗಿದೆಯೆಂದು ಉಳಿಯ ಶ್ರೀ ಉಳ್ಳಾಲ್ತಿ ಧರ್ಮ ಅರಸರ ಕ್ಷೇತ್ರದ ಧರ್ಮದರ್ಶಿ ದೇವು ಮೂಲ್ಯಣ್ಣ ಅಭಿಪ್ರಾಯಪಟ್ಟರು.

ತೊಕ್ಕೊಟ್ಟು ಗಾಂಧಿನಗರದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಏ.29ರಿಂದ ಮೇ 3ರ ತನಕ ನಡೆಯಲಿರುವ ಶ್ರೀ ಚಾಮುಂಡೇಶ್ವರಿ ಅಮ್ಮನವರು ಹಾಗೂ ಪರಿವಾರ ಸಾನಿಧ್ಯಗಳ ಪುನರ್ ಪ್ರತಿಷ್ಠಾಪನಾ ಕಲಶೋತ್ಸವದ ಪ್ರಯುಕ್ತ ಬುಧವಾರದಂದು ತೊಕ್ಕೊಟ್ಟು ಓವರ್ ಬ್ರಿಡ್ಜ್‌ನ ಜೈ ವೀರಮಾರುತಿ ವ್ಯಾಯಾಮ ಶಾಲೆಯಿಂದ ಶ್ರೀ ಕ್ಷೇತ್ರಕ್ಕೆ ಹೊರಟ ಹಸಿರು ಹೊರೆ ಕಾಣಿಕೆ ಶೋಭಾಯಾತ್ರೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಹಸಿರು ಹೊರೆಕಾಣಿಕೆ ಶೋಭಾಯಾತ್ರೆಯು ಓವರ್ ಬ್ರಿಡ್ಜ್ ಜೈ ವೀರಮಾರುತಿ ವ್ಯಾಯಾಮ ಶಾಲೆಯಿಂದ ಹೊರಟು ಕಾಪಿಕಾಡು, ತೊಕ್ಕೊಟ್ಟು ಜಂಕ್ಷನ್‌ಗೆ ತೆರಳಿ ಗಾಂಧಿನಗರದ ಶ್ರೀ ಚಾಮುಂಡೇಶ್ವರಿ ಕ್ಷೇತ್ರಕ್ಕೆ ತಲುಪಿತು. ವಿವಿಧ ಭಜನಾ ತಂಡಗಳು ಕುಣಿತ ಭಜನೆಯ ಮೂಲಕ ಶೋಭಾಯಾತ್ರೆಗೆ ಮೆರುಗು ನೀಡಿದವು. ಕಾಪಿಕಾಡು ಶ್ರೀ ಉಮಾಮಹೇಶ್ವರಿ ಕ್ಷೇತ್ರದ ಆಡಳಿತ ಮೊಕ್ತೇಸರ ಎ.ಜಿ.ಶೇಖರ್, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಕೆ. ರವೀಂದ್ರ ಶೆಟ್ಟಿ ಉಳಿದೊಟ್ಟು ಉಳ್ಳಾಲ ಶ್ರೀ ಚೀರುಂಭ ಭಗವತಿ ಕ್ಷೇತ್ರದ ಆಡಳಿತ ಮೊಕ್ತೇಸರರಾದ ಸುರೇಶ್ ಭಟ್ನಗರ, ಶ್ರೀ ಚಾಮುಂಡೇಶ್ವರಿ ಕ್ಷೇತ್ರದ ಆಡಳಿತ ಮೊಕ್ತೇಸರರಾದ ಗಿರೀಶ್ ಕುಮಾರ್ ಯು.ಕೆ., ಬ್ರಹ್ಮಕಲಶೋತ್ಸವ ಸಮಿತಿಯ ಕಾರ್ಯಾಧ್ಯಕ್ಷ ಭಾಸ್ಕರ ತೊಕ್ಕೊಟ್ಟು ಕಾಪಿಕಾಡು ಶ್ರೀ ಮಂತ್ರದೇವತೆ, ಕೊರಗಜ್ಜ ಸಾನಿಧ್ಯದ ಪ್ರಶಾಂತ್ ಕಾಪಿಕಾಡು, ಶ್ರೀ ಜೈ ವೀರಮಾರುತಿ ವ್ಯಾಯಾಮ ಶಾಲೆಯ ಅಧ್ಯಕ್ಷ ಪುರುಷೋತ್ತಮ ಗಟ್ಟಿ, ಮುಖ್ಯ ಶಿಕ್ಷಕ ಜಯಾನಂದ ಅಂಚನ್, ಕಾಪಿಕಾಡು ಬಬ್ಬುಸ್ವಾಮಿ ಕ್ಷೇತ್ರದ ರಾಜು ಗುರಿಕಾರ, ಉಳ್ಳಾಲ ಬಂಡಿಕೊಟ್ಯ ಕೋರ್ದಬ್ಬು ದೈವಸ್ಥಾನದ ಮೊಕ್ತೇಸರರಾದ ಸಂತೋಷ್ ಉಳ್ಳಾಲ್, ಕಾಪಿಕಾಡು ಬ್ರಹ್ಮಶ್ರೀ ಮುಗೇರ ಮಹಾಂಕಾಳಿ ದೈವಸ್ಥಾನದ ಅಧ್ಯಕ್ಷ ಹರೀಶ್ಚಂದ್ರ ಕಾಪಿಕಾಡು, ತೊಕ್ಕೊಟ್ಟು ಶಿವಾಜಿ ಫ್ರೆಂಡ್ಸ್ ಕ್ಲಬ್‌ನ ಅಧ್ಯಕ್ಷ ನವೀನ್ ಭಟ್ನಗರ, ಓವರ್ ಬ್ರಿಡ್ಜ್ ಕೊರಗಜ್ಜ ಸೇವಾ ಸಮಿತಿಯ ಅಧ್ಯಕ್ಷ ನಾರಾಯಣ ರೈ, ನಿಕಟಪೂರ್ವ ಅಧ್ಯಕ್ಷ ರಾಜೇಶ್ ಕಾಪಿಕಾಡು, ಜೀರ್ಣೋದ್ಧಾರ ಸಮಿತಿಯ ಪ್ರಧಾನ ಕಾರ್ಯದರ್ಶಿ ಸತೀಶ್ ದೀಪಂ, ಬ್ರಹ್ಮಕಲಶೋತ್ಸವ ಸಮಿತಿಯ ಪ್ರಮುಖರಾದ ರಾಘವ ಆರ್.ಉಚ್ಚಿಲ್, ದೇವದಾಸ್ ಕೊಲ್ಯ, ದಿನೇಶ್ ಕಾಜವ, ಆನಂದ ಶೆಟ್ಟಿ ಭಟ್ನಗರ, ರವಿಶಂಕರ ಸೋಮೇಶ್ವರ, ಭಗವಾನ್ ದಾಸ್ ತೊಕ್ಕೊಟ್ಟು, ಪ್ರಕಾಶ್ ಸಿಂಪೋಣಿ, ಮಹಿಳಾ ಸಮಿತಿ ಅಧ್ಯಕ್ಷ ಸುರೇಖಾ ಚಂದ್ರಹಾಸ್, ಪ್ರಮುಖರಾದ ಚಂದ್ರಿಕಾ ರೈ, ಅಮಿತಾ ಅಶ್ವಿನ್ ಬಂಡಿಕೊಟ್ಯ ಮೊದಲಾದವರು ಉಪಸ್ಥಿತರಿದ್ದರು. ರೋಹಿತ್ ಉಳ್ಳಾಲ್ ಸ್ವಾಗತಿಸಿ, ನಿರೂಪಿಸಿದರು. ಪ್ರವೀಣ್ ಬಸ್ತಿ ವಂದಿಸಿದರು.

ಸುತ್ತಮುತ್ತ

ಇಂದಿನಿಂದ ಮ್ಯಾಂಗೋ ಫೆಸ್ಟ್ ಮಧುರಂ-2026

ಕಾಸರಗೋಡು: ಕೇರಳ ಕೃಷಿ ವಿಶ್ವವಿದ್ಯಾಲಯ ಮತ್ತು ಪಡನ್ನಕ್ಕಾಡ್ ಕೃಷಿ ಕಾಲೇಜು ಸ್ಟುಡೆಂಟ್ಸ್ ಯೂನಿಯನ್‌ನ ನೇತೃತ್ವದಲ್ಲಿ ಪಡನ್ನಕ್ಕಾಡ್ ಕೃಷಿ ಕಾಲೇಜಿನಲ್ಲಿ ನಡೆಸುವ ಮ್ಯಾಂಗೋ ಫೆಸ್ಟ್‌ನ ಮಧುರಂ-2026 ಏ.30ರಿಂದ ಮೇ 4 ರ ತನಕ ನಡೆಯಲಿದೆ. ವಿವಿಧ 30ರಷ್ಟು ತಳಿಗಳ ಮಾವಿನ ಹಣ್ಣುಗಳನ್ನು ಇಲ್ಲಿ ಪ್ರದರ್ಶಿಸಿ ಮಾರಾಟಕಕಿರಿಸಲಾಗುವುದು. ಮಾವಿನ ಹಣ್ಣುಗಳ ಹೊರತಾಗಿ ವಿವಿಧ ತಳಿಗಳ ಮಾವಿನ ಸಸಿಗಳ ಪ್ರದರ್ಶನ ಹಾಗೂ ಮಾರಾಟವು ನಡೆಯಲಿದೆ. ಮ್ಯಾಂಗೋ ಫೆಸ್ಟ್‌ನ ಅಂಗವಾಗಿ ವಿಚಾರಸಂಕಿರಣಗಳು, ಸಂಶಯ ನಿವಾರಣೆಗಾಗಿ ಕೃಷಿ ವಿಜ್ಞಾನಿಗಳ ಮೇಲ್ನೋಟದಲ್ಲಿ ಅಗ್ರೋ ಕ್ಲಿನಿಕ್‌ಗಳನ್ನು ಆಯೋಜಿಸಲಾಗುವುದು ಎಂದು ಕೃಷಿ ವಿಶ್ವವಿದ್ಯಾಲಯದ ಪಡನ್ನಕ್ಕಾಡ್ ಕಾಲೇಜಿನ ಡೀನ್ ಡಾ.ಸಜಿತರಾಣಿ, ಅಕಾಡೆಮಿಕ್ ಹೆಡ್ ಕೆ.ಕೆ.ಶಿವಾನಿ, ಯೂನಿಯನ್ ಅಧ್ಯಕ್ಷ ಶ್ರೀನಾಥ್ ಆರ್.ನಾಯರ್, ಸಂಚಾಲಕ ಕೆ.ಎಚ್.ನಿಖಿಲ್, ಅಭಿನವ್, ಕೆ.ಪಿ.ಕೃಷ್ಣಸಾಗರ್ ಮತ್ತು ಅಷ್ಟಮಿ ವಿ. ನಾಯರ್ ಮೊದಲಾದವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ಅಧ್ಯಯನ ಕಿಟ್ ವಿತರಣೆ: ಅರ್ಜಿ ಆಹ್ವಾನ

ಕಾಸರಗೋಡು: ಜಿಲ್ಲೆಯಲ್ಲಿ ಮೋಟಾರು ಕಾರ್ಮಿಕರ ಕಲ್ಯಾಣ ನಿಧಿ ಯೋಜನೆಯ ಸಕ್ರಿಯ ಸದಸ್ಯರಾಗಿರುವ ಮತ್ತು ಸರಕಾರಿ ಅಥವಾ ಅನುದಾನಿತ ಶಾಲೆಗಳಲ್ಲಿ 1ನೇ ತರಗತಿಗೆ ಪ್ರವೇಶ ಪಡೆದ ಕಾರ್ಮಿಕರ ಮಕ್ಕಳಿಗೆ ಉಚಿತ ಅಧ್ಯಯನ ಕಿಟ್‌ಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮೇ 15 ಆಗಿದೆ. ಹೆಚ್ಚಿನ ವಿವರಗಳಿಗೆ 0467 2205380 ಸಂಪರ್ಕಿಸಬಹುದು.

ಮಂಜೇಶ್ವರ ಶಿಶು ಅಭಿವೃದ್ಧಿ ಯೋಜನಾ ಕಚೇರಿಯಲ್ಲಿ ಬೀಳ್ಕೊಡುಗೆ

ಉಪ್ಪಳ: ಮಂಜೇಶ್ವರ ಶಿಶು ಅಭಿವೃದ್ಧಿ ಯೋಜನಾ ಕಚೇರಿಯಿಂದ ನಿವೃತ್ತರಾಗಲಿರುವ ಸಿಬ್ಬಂದಿಗಳನ್ನು ಬೀಳ್ಕೊಡುವ ಸಮಾರಂಭವು ನಡೆಯಿತು. ಆಫೀಸ್ ಅಟೆಂಡೆಂಟ್ ಕೆ.ನಾರಾಯಣ, ಅಂಗನವಾಡಿ ಟೀಚರ್ ಹರಿಣಾಕ್ಷಿ, ಸಹಾಯಕಿ ಜ್ಯೋತಿ ಮೊದಲಾದವರನ್ನು ಈ ಸಂದರ್ಭದಲ್ಲಿ ಬೀಳ್ಕೊಡಲಾಯಿತು. ಕಾರ್ಯಕ್ರಮವನ್ನು ಮಂಜೇಶ್ವರ ಅಡಿಶನಲ್ ಶಿಶು ವಿಕಸನ ಯೋಜನಾ ಆಫೀಸರ್ ಪ್ರೀತಾ, ಮುರಳಿ, ಸೂಪರ್‌ವೈಸರ್ ಜ್ಯೋತಿ, ಪ್ರೇಮಾ, ನಿಶಿತಾ ಮೊದಲಾದವರು ಮಾತನಾಡಿದರು. ಉಷಾ ಎಂ.ಎಸ್. ಸ್ವಾಗತಿಸಿ, ತಾರಾ ವಂದಿಸಿದರು.

ಸರಿಗಮಪ ಲಿಟಲ್ ಚಾಂಪ್ ಸ್ಪರ್ಧೆ: ಶ್ರೀವಿಭಾ ಕೇಪು ಆಯ್ಕೆ

ಬಂಟ್ವಾಳ: ತಾಲೂಕಿನ ಕೇಪು ಗ್ರಾಮದ ಶ್ರೀ ಕೃಷ್ಣ



ಕೇಪು – ಮೀರಾ ದಂಪತಿಯ ಪುತ್ರಿ ಶ್ರೀವಿಭಾ ಕೇಪು ಅವರು ಜೀ ಕನ್ನಡ ನಡೆಸುತ್ತಿರುವ ಸರಿಗಮಪ ಲಿಟಲ್ ಚಾಂಪ್ಸ್ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಇವರು ಡಾ. ವಿದುಷಿ ಸುಚಿತ್ರ ಹೊಳ್ಳ ಅವರ ಬಳಿ ಕರ್ನಾಟಕ ಸಂಗೀತ, ಸುಗಮ ಸಂಗೀತವನ್ನು ಅಖಿಲ ಪಜಿಮಣ್ಣು ಹಾಗೂ ಗಾಯತ್ರಿ ಭಟ್ ಅವರ ಬಳಿ ಅಭ್ಯಾಸ ಮಾಡುತ್ತಿದ್ದಾರೆ. ಈಕೆ ಪುತ್ತೂರು ಸುದಾನ ವಸತಿಯುತ ಶಾಲೆ ವಿದ್ಯಾರ್ಥಿನಿ.

ಮಂಗಲ್ಪಾಡಿ : ಪ್ರಥಮ ಹಂತದ ಕುಡಿಯುವ ನೀರು ವಿತರಣೆ ಆರಂಭ

ಉಪ್ಪಳ: ಕುಡಿಯುವ ನೀರು ಕ್ಷಾಮ ವ್ಯಾಪಕಗೊಂಡ ಹಿನ್ನೆಲೆಯಲ್ಲಿ ಮಂಗಲ್ಪಾಡಿ ಗ್ರಾಮ ಪಂಚಾಯತ್‌ನಿಂದ ಎಲ್ಲಾ ವಾರ್ಡ್‌ಗಳಿಗೆ ಕುಡಿಯುವ ನೀರು ವಿತರಿಸುವ ಯೋಜನೆಗೆ ಚಾಲನೆ ನೀಡಲಾಗಿದೆ. ಪ್ರಥಮ ಹಂತದ ಕುಡಿಯುವ ನೀರು ವಿತರಣೆಯನ್ನು ಬುಧವಾರ ವಿದ್ಯುಕ್ತವಾಗಿ ಆರಂಭಿಸಲಾಯಿತು. ಪಂಚಾಯತ್ ಕಚೇರಿ ಆವರಣದಲ್ಲಿ ಜರಗಿದ ಕಾರ್ಯಕ್ರಮವನ್ನು ಪಂಚಾಯತ್ ಅಧ್ಯಕ್ಷ ಗೋಲ್ಡನ್ ಅಬ್ದುಲ್ ರಹಿಮಾನ್ ಉದ್ಘಾಟಿಸಿ ಮಾತನಾಡಿ, ಕುಡಿಯುವ ನೀರು ವಿತರಣೆಯನ್ನು ಮಳೆಗಾಲದ ತನಕ ಮುಂದುವರಿಸಲಾಗುವುದು ಎಂದರು. ಕುಡಿಯುವ ನೀರು ಕೊರತೆಯಿರುವ ಪ್ರದೇಶಗಳಲ್ಲಿ ಆಯಾ ವಾರ್ಡ್‌ನ ಜನಪ್ರತಿನಿಧಿಯವರನ್ನು ಸಂಪರ್ಕಿಸಬೇಕಾಗಿದೆ. ದಿನದಲ್ಲಿ ಎಂಟು ವಾರ್ಡ್‌ಗಳಿಗೆ ನೀರು ವಿತರಿಸಲಾಗುವುದು. ಇದೇ ರೀತಿ ಮೂರು ದಿನಗಳಲ್ಲಿ ಒಟ್ಟು 24 ವಾರ್ಡ್‌ಗಳಿಗೆ ಪ್ರಥಮ ಹಂತದ ನೀರನ್ನು ಒದಗಿಸಲಾಗುವುದು. ಬೆಳಿಗ್ಗೆ 7ರಿಂದ ರಾತ್ರಿ 7ರ ತನಕ ನೀರು ವಿತರಣೆಯಾಗಲಿದೆ. ಕುಡಿಯುವ ನೀರನ್ನು ಯಾರೂ ವ್ಯರ್ಥ ಮಾಡಬಾರದೆಂದು ಅವರು ವಿನಂತಿಸಿದರು.

ವಿಶೇಷ ಆರೈಕೆಯಲ್ಲಿರುವ ಮಕ್ಕಳಿಗೆ ಡೈಪರ್ ವಿತರಣೆ

ಮಂಜೇಶ್ವರ: ಮಂಜೇಶ್ವರ ಬಿಆರ್‌ಸಿ ವ್ಯಾಪ್ತಿಯಲ್ಲಿರುವ ಹಾಸಿಗೆಯಲ್ಲೇ ಇರುವ 25 ಮಕ್ಕಳಿಗೆ ಡೈಪರ್ ವಿತರಿಸಲಾಯಿತು. ಈ ವಿಶೇಷ ಆರೈಕೆ ಅಗತ್ಯವಿರುವ ಮಕ್ಕಳನ್ನು ಅಪ್ಪಿಕೊಳ್ಳಲು ಮಂಜೇಶ್ವರ ಉಪಜಿಲ್ಲಾ ಹೆಡ್ಮಾಸ್ಟರ್ಸ್ ಫಾರಂ ಮತ್ತು ಮಂಗಲ್ಪಾಡಿ ಗ್ರಾ.ಪಂ. ಅಧ್ಯಕ್ಷ ಗೋಲ್ಡನ್ ಅಬ್ದುಲ್ ರಹ್ಮಾನ್ ಮುಂದಾಗಿದ್ದರು. ಅವರ ಸಂಯುಕ್ತ ಸಹಕಾರದಲ್ಲಿ ಆಯೋಜಿಸಿದ ಕಾರ್ಯಕ್ರಮ ಮಾನವೀಯತೆಗೆ ಉದಾಹರಣೆಯಾಯಿತು.

ಕಾರ್ಯಕ್ರಮವನ್ನು ಗ್ರಾ.ಪಂ. ಅಧ್ಯಕ್ಷ ಗೋಲ್ಡನ್ ಅಬ್ದುಲ್ ರಹ್ಮಾನ್ ನೆರವೇರಿಸಿದರು. ಮಂಜೇಶ್ವರ ಎಇಒ ಜಾರ್ಜ್ ಕ್ರಾಸ್ತಾ ಸಿ.ಎಚ್. ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭ ಹೆಡ್ಮಾಸ್ಟರ್ಸ್ ಫಾರಂನ ಮಾಜಿ ಸಂಯೋಜಕ ಶ್ಯಾಮ್ ಭಟ್ ಯು., ಪ್ರಸ್ತುತ ಸಂಯೋಜಕ ಸತ್ಯಪ್ರಕಾಶ್, ಸಂಯುಕ್ತ ಸಂಯೋಜಕ ಅರವಿಂದಾಕ್ಷ ಭಂಡಾರಿ, ಮುಳಿಂಜ ಶಾಲಾ ಮುಖ್ಯ ಶಿಕ್ಷಕಿ ಚಿತ್ರಾವತಿ ಚಿಗುರುಪಾದೆ ಹಾಗೂ ಬಿಆರ್‌ಸಿ ತರಬೇತುದಾರರಾದ ಸುಮಯ್ಯ ಪಿ. ಶುಭಹಾರೈಸಿದರು. ಮಂಜೇಶ್ವರ ಬಿಪಿಸಿ ರಾಜಗೋಪಾಲನ್ ಪಿ. ಸ್ವಾಗತಿಸಿ, ಶಿಕ್ಷಕಿ ರೀಮಾ ಪಿ. ವಂದಿಸಿದರು.

ಮಳೆಗಾಲಕ್ಕೂ ಮೊದಲು ಪೂರ್ಣವಾಗದ ಕಾಸರಗೋಡು- ಕಾಞಂಗಾಡು ರೋಡ್ ಯೋಜನೆ

ಕುಂಟುತ್ತಾ ಸಾಗುತ್ತಿದೆ ರಾಜ್ಯ ಹೆದ್ದಾರಿ ನವೀಕರಣ ಕಾಮಗಾರಿ

ಕಾಸರಗೋಡು: ಕಾಸರಗೋಡಿನಿಂದ ಚಂದ್ರಗಿರಿ ರೂಟ್‌ನಲ್ಲಿ ಬೇಕಲಕೋಟೆ ಮೂಲಕ ಕಾಞಂಗಾಡಿಗೆ ತೆರಳುವ ರಾಜ್ಯ ಹೆದ್ದಾರಿಯು ಹೊಂಡ ಗುಂಡಿಗಳಿಂದ ಕೂಡಿದ್ದು, ಈ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ಆರಂಭಿಸಲಾಗಿದ್ದರೂ ಕೆಲವೆಡೆ ಕುಂಟುತ್ತಾ ಸಾಗುತ್ತಿರುವುದು ಕಂಡುಬರುತ್ತಿದೆ. ಇನ್ನು ಕೆಲವೆಡೆ ಕಾಮಗಾರಿಯು ಸಂಪೂರ್ಣ ಸ್ಥಗಿತಗೊಂಡಿದೆ. ಮಾತ್ರವಲ್ಲದೆ ಮಳೆಗಾಲ ಆರಂಭಕ್ಕೂ ಮೊದಲು ರೋಡ್‌ನ ನವೀಕರಣ ಕೆಲಸಕಾರ್ಯವು ಪೂರ್ಣಗೊಳ್ಳುವ ಲಕ್ಷಣಗಳೂ ಗೋಚರಿಸುತ್ತಿಲ್ಲ.



ವರ್ಷದ ಬಳಿಕ ಕಾಮಗಾರಿ?

ಕಾಸರಗೋಡು – ಕಾಞಂಗಾಡು ರಾಜ್ಯ ಹೆದ್ದಾರಿಯ ನವೀಕರಣ ಕಾಮಗಾರಿಯು ಸದ್ಯಕ್ಕೆ ಬಹುತೇಕವಾಗಿ ನಿಲುಗಡೆಗೊಂಡಿದೆ ಎಂದೇ ಹೇಳಬಹುದು. ಒಂದು ವರ್ಷ ಕಳೆದ ಬಳಿಕವಷ್ಟೇ ಮರುಡಾಮರೀಕರಣ ಯೋಜನೆ ಹಾಗೂ ಇನ್ನಿತರ ಕಾಮಗಾರಿಗಳನ್ನು ಮುಂದುವರಿಸಲಾಗುವುದು ಎಂದು ಗುತ್ತಿಗೆದಾರ ಕಂಪೆನಿಯಾದ ಊರಾಳುಂಗಾಲ್ ಸೊಸೈಟಿಯು ರಾಜ್ಯ ಹೆದ್ದಾರಿ ವಿಭಾಗಕ್ಕೆ ತಿಳಿಸಿದೆ.

ಇನ್ನೊಂದೆಡೆ ಈ ಸಂಸ್ಥೆಗೆ ಗುತ್ತಿಗೆ ವಹಿಸಿದಾಗ ಸಾರ್ವಜನಿಕರಲ್ಲಿ ಬಹಳಷ್ಟು ನಿರೀಕ್ಷೆ ಮೂಡಿತ್ತು. ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಯೋಜನೆಯಾದ ತಲಪಾಡಿ – ಚೆಂಗಳ ಪ್ರಥಮ ರೀಚ್‌ನ ಕಾಮಗಾರಿಯನ್ನು ಇದೇ ಕಂಪೆನಿಯು ವಹಿಸಿ ಸಮಯಕ್ಕೆ ಅನುಗುಣವಾಗಿ ಉತ್ತಮ ರಸ್ತೆ ನಿರ್ಮಿಸಿ ಪ್ರಖ್ಯಾತಿ ಗಳಿಸಿತ್ತು. ಇದೇ ರೀತಿಯಲ್ಲಿ ಕಾಸರಗೋಡು – ಕಾಞಂಗಾಡು ರಾಜ್ಯ ರಸ್ತೆಯು ಸುಸಜ್ಜಿತ ರಸ್ತೆಯಾಗಬಹುದು ಎಂಬ ಭರವಸೆ ಜನರದ್ದಾಗಿತ್ತು. ಕಾಸರಗೋಡು ಹಳೆಯ ಪ್ರೆಸ್‌ಕ್ಲಬ್ ಜಂಕ್ಷನ್‌ನಿಂದ ಕಾಞಂಗಾಡು ಸೌತ್ ತನಕದ 28 ಕಿಲೋ ಮೀಟರ್ ರಾಜ್ಯ ಹೆದ್ದಾರಿ ಇದಾಗಿದೆ. ಈ ರಸ್ತೆ ನವೀಕರಣಕ್ಕಾಗಿ 36 ಕೋಟಿ ರೂ.ಗಳ ಟೆಂಡರ್ ನೀಡಲಾಗಿತ್ತು. ಜುಲೈ 31ರ ಮೊದಲು ಕಾಮಗಾರಿ ಪೂರ್ತಿಗೊಳಿಸಲು ಗುತ್ತಿಗೆದಾರ ಸಂಸ್ಥೆಗೆ ತಿಳಿಸಲಾಗಿತ್ತು. ಈ ರಸ್ತೆಯಲ್ಲಾಗಿ ಇಂಟರ್ ಲಾಕ್ ಕಾಮಗಾರಿ, ಕಾಂಕ್ರೀಟ್ ಕಾಮಗಾರಿ ಇತ್ಯಾದಿ ಶೇಕಡಾ 50ರಷ್ಟು ಪೂರ್ಣಗೊಂಡಿದೆ. ಉಳಿದ ಶೇಕಡಾ 50ರಷ್ಟು ಕಾಮಗಾರಿ ನಡೆಸಿ ಮರುಡಾಮರೀಕರಣ ಅಳವಡಿಸುವಾಗ ಮಳೆಗಾಲ ಆರಂಭಗೊಳ್ಳಲಿದೆ ಎಂಬುದು ಗುತ್ತಿಗೆದಾರ ಕಂಪೆನಿಯು ಅಭಿಪ್ರಾಯಪಟ್ಟಿದೆ.

ಕಾಂಕ್ರೀಟ್ ಕಾಮಗಾರಿ ಪೂರ್ಣಗೊಂಡಿಲ್ಲ

ಚರಂಡಿ ನಿರ್ಮಾಣ ಭಾಗಗಳಲ್ಲಿ ನಡೆಯಬೇಕಾದ ಕಾಂಕ್ರೀಟ್ ಕಾಮಗಾರಿಯು ಶೇಕಡಾ 50ರಷ್ಟು ಮಾತ್ರ ಪೂರ್ತಿಯಾಗಿದೆ. ಈ ರಸ್ತೆಯ 20ರಷ್ಟು ಪ್ರದೇಶಗಳಲ್ಲಿ ಕಾಂಕ್ರೀಟ್ ಕಾಮಗಾರಿಗಳು ನಡೆಯಬೇಕಾಗಿವೆ. ಇದರಲ್ಲಿ ಅರ್ಧದಷ್ಟು ಕಾಮಗಾರಿ ಇನ್ನೂ ಆರಂಭಗೊಂಡಿಲ್ಲ. ಸಂಬಂಧಪಟ್ಟ ಕಾಮಗಾರಿಗಳನ್ನೆಲ್ಲಾ ಪೂರ್ಣಗೊಳಿಸಿ ಮರುಡಾಮರೀಕರಣ ನಡೆಸಬೇಕಾಗಿದ್ದು, ಈ ಹಿನ್ನೆಲೆಯಲ್ಲಿ ಗುತ್ತಿಗೆದಾರ ಸಂಸ್ಥೆ ಜನಹಿತದ ಕಾರ್ಯ ಕೈಗೊಳ್ಳಬೇಕಾಗಿದೆ.

ಕಾರ್ಮಿಕರ ಕೊರತೆ ಕಾಡುತ್ತಿದೆ

ಮಧ್ಯಪ್ರಾಚ್ಯ ಯುದ್ಧದ ಹಿನ್ನೆಲೆಯಲ್ಲಿ ಡಾಮರು ಆಗತ್ಯಕ್ಕೆ ತಕ್ಕಂತೆ ಲಭಿಸುತ್ತಿಲ್ಲ. ಜೊತೆಗೆ ಬೆಲೆ ವಿಪರೀತ ಏರಿಕೆಯಾಗಿದೆ. ಇದರೊಂದಿಗೆ ಕಾರ್ಮಿಕರ ಕೊರತೆಯೂ ಕಂಡುಬರುತ್ತಿದೆ.ಇದೆಲ್ಲದರ ನಿಟ್ಟಿನಲ್ಲಿ ರಸ್ತೆಯ ಉಳಿದ ಕಾಮಗಾರಿ ಯನ್ನು ಮುಂದಿನ ವರ್ಷಕ್ಕೆ ಮುಂದೂಡಲಾಗಿದೆ. ಈ ನಡುವೆ ಕಾಞಂಗಾಡು ಸೌತ್ ಭಾಗದಲ್ಲಿ ಪ್ರಸ್ತುತ ಇಂಟರ್ ಲಾಕ್‌ನ ಕಾಮಗಾರಿ ಅಂತಿಮ ಹಂತದಲ್ಲಿದೆ.

ಅಪಘಾತಗಳಿಗೆ ಕಾರಣ

ಪ್ರಸ್ತುತ ರಸ್ತೆಯ ಅಲ್ಲಲ್ಲಿ ಉದ್ಭವವಾಗಿರುವ ಹೊಂಡ ಗುಂಡಿಗಳಿಂದಾಗಿ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳು ಅತ್ಯಂತ ಪ್ರಯಾಸದಿಂದಲೇ ಸಂಚರಿಸುವಂತಾಗಿವೆ. ಮಾತ್ರವಲ್ಲದೆ ಸಣ್ಣಪುಟ್ಟ ವಾಹನಗಳು ಪದೇ ಪದೇ ಅಪಘಾತಗಳಿಗೂ ಈಡಾಗುತ್ತಿವೆ. ಆದ್ದರಿಂದ ಇನ್ನಾದರೂ ಈ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಗಮನ ಹರಿಸಬೇಕಾಗಿದೆ. ಅಲ್ಲದೆ ಅಪಘಾತ ವಲಯಗಳಲ್ಲಿ ಅತ್ಯಂತ ಹೆಚ್ಚು ಸುರಕ್ಷಾ ಕ್ರಮಗಳನ್ನು ಜಾರಿಗೊಳಿಸಬೇಕಾಗಿದೆ.

ನಿಡ್ವಾಳ ಶ್ರೀ ದೇವಸ್ಥಾನಕ್ಕೆ ಮಠದಿಂದ ಸಂಪೂರ್ಣ ಸಹಕಾರ: ರಾಘವೇಶ್ವರ ಶ್ರೀ



ಸುಬ್ರಹ್ಮಣ್ಯ: ಸುಮಾರು 69 ವರ್ಷಗಳ ಕಾಲ ಚೊಕ್ಕಾಡಿಯಲ್ಲಿ ಶ್ರೀರಾಮನಾಗಿ ಪೂಜೆ ಸ್ವೀಕರಿಸಿದ ನಿಡ್ವಾಳದ ಮಹಾವಿಷ್ಣು ದೇವರು ಮರಳಿ ನಿಡ್ವಾಳಕ್ಕೆ ಬರುವ ಸಂಕಲ್ಪ ಮಾಡಿದಾಗ ನಾವು ಮನಃಪೂರ್ವಕವಾಗಿ ದೇವರ ವಿಗ್ರಹದ ಹಸ್ತಾಂತರ ಮಾಡಿದೆವು. ಇಂತಹ ಘಟನೆ ಚರಿತ್ರೆಯಲ್ಲೇ ಮೊದಲು. ಈ ಘಟನೆಯಿಂದಾಗಿ ಕೋಟಿ ಚೆನ್ನಯರಂತೆ ಚೊಕ್ಕಾಡಿ ಶ್ರೀ ರಾಮ ಕ್ಷೇತ್ರ ಮತ್ತು ನಿಡ್ವಾಳ ಶ್ರೀ ಮಹಾವಿಷ್ಣು ಕ್ಷೇತ್ರಗಳು ಸೋದರ ಸಂಬಂಧ ಹೊಂದಿದವು. ನಿಡ್ವಾಳ ಕ್ಷೇತ್ರಕ್ಕೆ ನಮ್ಮ ಮಠದಿಂದ ಸಂಪೂರ್ಣ ಸಹಕಾರ ನೀಡಲಿದ್ದೇವೆ ಎಂದು ಶ್ರೀ ರಾಮಚಂದ್ರಾಪುರಮಠದಶ್ರೀರಾಘವೇಶ್ವರ ಭಾರತೀ ಸ್ವಾಮೀಜಿ ಹೇಳಿದರು.

ಅವರು ನಿಡ್ವಾಳ ಶ್ರೀ ಮಹಾವಿಷ್ಣು ದೇವಳ ಪುನರ್ ನಿರ್ಮಾಣ ಪುನ:ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶದ ಅಂಗವಾಗಿ ಕ್ಷೇತ್ರಕ್ಕೆ ಸೋಮವಾರ ಭೇಟಿ ನೀಡಿ, ಶ್ರೀ ದೇವಳ ವೀಕ್ಷಿಸಿದ ಬಳಿಕ ಆಶೀರ್ವಚನ ನೀಡಿದರು.

ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿಗಳು, ದೇವಳದ ಆಡಳಿತ ಟ್ರಸ್ಟ್ ಅಧ್ಯಕ್ಷ ಚಂದ್ರಪ್ರಕಾಶ್ ಕಂಬಳ, ಕಾರ್ಯದರ್ಶಿ ಗುರುಪ್ರಸಾದ್ ತೋಟ, ಬ್ರಹ್ಮಕಲಶ ಸಮಿತಿ ಅಧ್ಯಕ್ಷ ನೇಮಿರಾಜ ಪಲ್ಲೋಡಿ, ಪ್ರಧಾನ ಕಾರ್ಯದರ್ಶಿ ಕುಸುಮಾಧರ ಕರಿಮಜಲು, ಕಾರ್ಯದರ್ಶಿ ಅಶೋಕ್ ಮೇಲ್ಪಾಡಿ, ಪ್ರಧಾನ ಸಂಚಾಲಕ ರಾಮಕೃಷ್ಣ ಪುರಿಯಮನೆ, ಕೋಶಾಧಿಕಾರಿ ಕುಶಾಲಪ್ಪ ಮೇಲ್ಪಾಡಿ, ದೇವಳದ ಪ್ರಧಾನ ಅರ್ಚಕ ಅಕ್ಷಯ್ ಭಟ್ ಬಲ್ಯಾಯಬೆಟ್ಟು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಡಾ. ಅನಂತಕೃಷ್ಣ ಭಟ್ ಕಂಬಳ ಪ್ರಾಸ್ತಾವಿಕವಾಗಿ ಮಾತನಾಡಿದರು.

ಇರಿಯಣ್ಣಿ ಸರಕಾರಿ ವೃತ್ತಿಪರ ಹೈಯರ್ ಸೆಕೆಂಡರಿ ಶಾಲೆ: ಹಳೆ ವಿದ್ಯಾರ್ಥಿಗಳ ಸಭೆ

ಕಾಸರಗೋಡು: ಬೋವಿಕ್ಕಾನ ಸಮೀಪದ ಇರಿಯಣ್ಣಿ ಸರಕಾರಿ ವೃತ್ತಿಪರ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಹಳೆ ವಿದ್ಯಾರ್ಥಿಗಳ ಸಭೆಯನ್ನು ಆಯೋಜಿಸಲಾಗಿತ್ತು. 1957ರಲ್ಲಿ ಪ್ರಾರಂಭವಾದ ಶಾಲೆಯ ವಿವಿಧ ವರ್ಷಗಳ ಹಳೆ ವಿದ್ಯಾರ್ಥಿಗಳ ಸಭೆ ಅಭಿವೃದ್ಧಿ ಗುರಿಯೊಂದಿಗೆ ನಡೆಯಿತು.

ಕಾರಡ್ಕ ಬ್ಲಾಕ್ ಪಂಚಾಯತ್ ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಕೆ.ಸುಗಂಧಿನಿ ಕಾರ್ಯಕ್ರಮ ಉದ್ಘಾಟಿಸಿದರು. ಉಸ್ತುವಾರಿ ಪ್ರಧಾನ ಕಾರ್ಯದರ್ಶಿ ಸಜೀವನ್ ಮಾದಪರಂಬತ್ತಿಲ್ ಪ್ರಾಸ್ತಾವಿಕ ಭಾಷಣ ಮಾಡಿದರು. ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ರಾಘವನ್ ಬೆಳ್ಳಿಪ್ಪಾಡಿ ಅಭಿವೃದ್ಧಿ ದೃಷ್ಟಿಕೋನ ಮಂಡಿಸಿದರು.

ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ಬಿ.ಕೆ. ನಾರಾಯಣನ್, ಸ್ವಾತಂತ್ರ್ಯ ಹೋರಾಟಗಾರ, ಗಾಂಧಿ ರಾಮನ್ ನಾಯರ್ ಸ್ಮಾರಕ ಟ್ರಸ್ಟ್‌ನ ಅಧ್ಯಕ್ಷ ಮೋಹನ್ ಕುಮಾರ್ ನರಂತಟ್ಟ, ಕೆ.ರಾಘವನ್ ನಾಯರ್ ಒಲತುಕಾಯ, ಸುಧಾಮನ್ ಮುಳಿಯಾರು, ಡಾ.ಕೆ.ಗಂಗಾಧರನ್ ನಾಯರ್, ಕೆ.ಪಿ.ಚಿದಾನಂದನ್, ಮಾಜಿ ಪಿಟಿಎ ಅಧ್ಯಕ್ಷರಾದ ಪಿ.ವಿನಯ ಕುಮಾರ್, ವಿ. ವಾಸು, ಪಿ.ಚೆರಿಯನ್, ಕೆ.ಶ್ರೀನಿವಾಸನ್, ವಕೀಲ ರಾಜನ್ ಕುಣಿಯೇರಿ, ವಿಎಚ್‌ಎಸ್‌ಇ ಪ್ರಾಂಶುಪಾಲ ಪಿ.ಸುಚೀಂದ್ರನಾಥ್, ಶಾಲಾ ಮುಖ್ಯೋಪಾಧ್ಯಾಯ ಎ.ಎಂ. ಅಬ್ದುಲ್ ಸಲಾಂ, ಬಾಬು ಮಂಜಕ್ಕಲ್, ಅನಿಮಾ ಅನಿಲ್ ಮಾತನಾಡಿದರು.

ಗ್ರಾ.ಪಂ. ಸದಸ್ಯ ಕೆ. ಪ್ರಭಾಕರನ್ ಅಧ್ಯಕ್ಷತೆ ವಹಿಸಿದ್ದರು. ಹಳೆ ವಿದ್ಯಾರ್ಥಿಗಳ ಸಂಘದ ಸಂಚಾಲಕ ಸಿ.ರಾಮಕೃಷ್ಣನ್ ಸ್ವಾಗತಿಸಿ, ಕೆ.ನಿಮಿಷ್ ಬಾಬು ವಂದಿಸಿದರು.

ನೂತನ ಪದಾಧಿಕಾರಿಗಳು

ಹಳೆ ವಿದ್ಯಾರ್ಥಿಗಳ ಸಂಘದ ನೂತನ ಪದಾಧಿಕಾರಿಗಳನ್ನು ಆರಿಸಲಾಯಿತು. ಅಧ್ಯಕ್ಷರಾಗಿ ಸಿ.ರಾಮಕೃಷ್ಣನ್, ಉಪಾಧ್ಯಕ್ಷರಾಗಿ ಮೋಹನ್ ಕುಮಾರ್ ನರಂತಟ್ಟ, ಸಂಚಾಲಕರಾಗಿ ರಾಘವನ್ ಕುಣಿಯೇರಿ, ಜೊತೆ ಸಂಚಾಲಕರಾಗಿ ರಾಮಚಂದ್ರನ್ ಪೊಯ್ಯಕ್ಕಲ್ ಆಯ್ಕೆಯಾದರು. ಶಾಲಾ ಅಭಿವೃದ್ಧಿ ಸಮಿತಿಯ ನೂತನ ಪದಾಧಿಕಾರಿಗಳನ್ನು ಈ ಸಂದರ್ಭ ಆರಿಸಲಾಯಿತು. ಅಧ್ಯಕ್ಷರಾಗಿ ಬಿ. ಕೆ.ನಾರಾಯಣನ್, ಉಪಾಧ್ಯಕ್ಷರಾಗಿ ಸಜೀಶ್ ಕೆ.ವಿ., ಕೆ.ಶ್ರೀನಿವಾಸನ್, ಸಂಚಾಲಕರಾಗಿ ಕೆ.ಪಿ.ಜೂಲಿ, ಜೊತೆ ಸಂಚಾಲಕರಾಗಿ ಪಿ.ಸುಚೀಂದ್ರನಾಥ್, ಎ.ಎಂ. ಅಬ್ದುಲ್ ಸಲಾಂ ಆಯ್ಕೆಯಾದರು.

ಕಣಚೂರು ವೈದ್ಯಕೀಯ ಶಿಕ್ಷಣ ಕಾಲೇಜು - ಸ್ನಾತಕೋತ್ತರ ವಿದ್ಯಾರ್ಥಿಗಳ ಸಾಧನೆ



ಮಂಗಳೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯವು 2026ನೇ ಸಾಲಿನಲ್ಲಿ ಆಯೋಜಿಸಿದ ಅಂತಿಮ ಸ್ನಾತಕೋತ್ತರ ಎಂ.ಡಿ. (ಜನರಲ್ ಮೆಡಿಸಿನ್) ಪದವಿ ಪರೀಕ್ಷೆ ಫಲಿತಾಂಶ ಪ್ರಕಟವಾಗಿದ್ದು, ಮಂಗಳೂರಿನ ನಾಟೆಕಲ್‌ನ ಕಣಚೂರು ವೈದ್ಯಕೀಯ ಶಿಕ್ಷಣ ಕಾಲೇಜಿನ 5 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ. 100 ಫಲಿತಾಂಶ ದಾಖಲಿಸಿದ್ದಾರೆ.

ಎಲ್ಲಾ 5 ವಿದ್ಯಾರ್ಥಿಗಳು ರ್‍ಯಾಂಕ್ ಪಡೆದು ಶೇ. 100 ರ್‍ಯಾಂಕ್ ವಿಜೇತರಾಗಿದ್ದಾರೆ. ಈ ಸಾಧನೆ ಕಾಲೇಜಿನ ಶೈಕ್ಷಣಿಕ ಇತಿಹಾಸದಲ್ಲಿ ಪ್ರಥಮ ಬಾರಿಗೆ ದಾಖಲಾಗಿದೆ.

ಡಾ. ಪಾರ್ಥಸಾರಥಿ ಸಮಾಲ್ 5ನೇ ರ್‍ಯಾಂಕ್, ಡಾ. ಅಫ್ಘಾರುಝ್ ಮೊಹಮ್ಮದ್ 1ನೇ ರ್‍ಯಾಂಕ್ , ಡಾ.ರುದ್ರೇಶ್ ಗೌಡ 9ನೇ ರ್‍ಯಾಂಕ್, ಡಾ. ಹೇಮಂತ್‌ಕುಮಾರ್ 5ನೇ ರ್‍ಯಾಂಕ್, ಡಾ. ಅಬ್ಬಾಸ್ ಆಲಿ ಅಬ್ದುಲ್‌ಮಜೀದ್ ಖಾಜಿ 8ನೇ ರ್‍ಯಾಂಕ್ ಗಳಿಸಿದ್ದಾರೆ.

ತಮ್ಮ ಅಪೂರ್ವ ಶೈಕ್ಷಣಿಕ ಸಾಧನೆಗೆ ತಮ್ಮ ಕಾಲೇಜಿನ ಪ್ರಾಂಶುಪಾಲರು, ಪ್ರಾಧ್ಯಾಪಕ ವರ್ಗ, ಹಾಗೂ ವಿಭಾಗೀಯ ಮುಖ್ಯಸ್ಥ ಡಾ. ದೇವದಾಸ ರೈ ಅವರ ಪ್ರೋತ್ಸಾಹ, ಮಾರ್ಗದರ್ಶನ, ತರಬೇತಿ ಹಾಗೂ ಶ್ರೇಷ್ಠ ಮಟ್ಟದ ಉಪನ್ಯಾಸ ಎಂದು ವಿದ್ಯಾರ್ಥಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕಣಚೂರು ವೈದ್ಯಕೀಯ ಶಿಕ್ಷಣ ಕಾಲೇಜಿನ ಆಡಳಿತ ಮಂಡಳಿ ವರ್ಗದವರು ವಿದ್ಯಾರ್ಥಿಗಳ ಅಮೋಘ ಶೈಕ್ಷಣಿಕ ಸಾಧನೆಯನ್ನು ಅಭಿನಂದಿಸಿದ್ದಾರೆ.

ಸಿಕ್ಕ ಅವಕಾಶಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವುದು ಇಂದಿನ ಅತ್ಯಗತ್ಯ



ಕೋಟ: ಅವಕಾಶ ಸಿಕ್ಕಾಗ ಕೈಗೆತ್ತಿಕೊಂಡು ಕಾರ್ಯಪ್ರವೃತ್ತರಾಗಬೇಕು. ಪ್ರತೀ ಅವಕಾಶಗಳೂ ಅಮೂಲ್ಯವಾದದ್ದು. ಬಂದ ಅವಕಾಶ ಕೈತಪ್ಪಿಸಿಕೊಂಡರೆ ಪಶ್ಚಾತ್ತಾಪ ಪಡಬೇಕಾಗುತ್ತದೆ. ಹೀಗೆ ಪ್ರತೀ ಅವಕಾಶ ಪಡೆದು ಸಂಭ್ರಮಿಸಿದಕಾರಣದಿಂದಲೇಇಂದುಇಷ್ಟು ಎತ್ತರಕ್ಕೇರಲು ಸಾಧ್ಯವಾಗಿದೆ ಎಂದು ಸಾಧಕ ಬಾಲಕ ಮನೀಶ್ ಪಿ. ಶೆಟ್ಟಿ ನುಡಿದರು.

ತೆಕ್ಕಟ್ಟೆಯ ಆಚಾರ್ಯ ಸಹೋದರರ ತಾಣದಲ್ಲಿ ಶ್ರೀ ಕೈಲಾಸ ಕಲಾಕ್ಷೇತ್ರ ಟ್ರಸ್ಟ್ ತೆಕ್ಕಟ್ಟೆ, ಧಮನಿ ಟ್ರಸ್ಟ್ ತೆಕ್ಕಟ್ಟೆ, ಶ್ರೀ ವರ್ಣ ಯಕ್ಷ ಬಳಗ ತೆಕ್ಕಟ್ಟೆ, ಯಶಸ್ವೀ ಮಹಿಳಾ ಬಳಗ ತೆಕ್ಕಟ್ಟೆ ಸಂಯುಕ್ತ ಆಶ್ರಯದಲ್ಲಿ 'ರಜಾರಂಗು-2026' ಯಕ್ಷಗಾನ ಮುಖವರ್ಣಿಕೆ ಶಿಬಿರದಲ್ಲಿ ಏಪ್ರಿಲ್ 24ರಂದು ಗೌರವ ಸಮ್ಮಾನ ಪಡೆದು ಅವರು ಮಾತನ್ನಾಡಿದರು.

ಅವಕಾಶ ಮರೆಯಲಾಗದು

ರಜಾ ರಂಗು ಶಿಬಿರದ ಆರಂಭದ ದಿನದಲ್ಲಿ ರಂಗಭೂಮಿಯಲ್ಲಿ ಮುಖ್ಯ ನಟನಾಗಿ ಅಭಿನಯಿಸುವ ಅವಕಾಶ ಮರೆಲಾರದು. ಈ ಅವಕಾಶದಿಂದಲೇ ಇನ್ನಷ್ಟು ಎತ್ತರಕ್ಕೇರಲು ಸಾಧ್ಯವಾಯಿತು

● ಮನೀಶ್ ಪಿ.ಶೆಟ್ಟಿ

ಯಕ್ಷಗಾನ ಮುಖವರ್ಣಿಕೆಗೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ರಾಹುಲ್ ಕೋಟ, ಅನೂಪ್ ಉರಾಳ, ಶಿಬಿರದ ನಿರ್ದೇಶಕ ರೋಹಿತ್ ತೀರ್ಥಹಳ್ಳಿ, ಚಂದ್ರಶೇಖರ ಶೆಟ್ಟಿ ಉಪಸ್ಥಿತರಿದ್ದರು. ಪಂಚಮಿ ವೈದ್ಯ ಸಮ್ಮಾನ ಪತ್ರ ವಾಚಿಸಿದರು.

ಎಐ ಕ್ಯಾಮರಾ ಬಳಕೆಯಿಂದ ಹೋಂಸ್ಟೇ ಅಪರಾಧ ಕೃತ್ಯದ ತಡೆ ಸಾಧ್ಯ: ನಾಪಂಡ

ಮಡಿಕೇರಿ: ಹೋಂಸ್ಟೇಗಳ ಬಗ್ಗೆ ಕಠಿಣ ನೀತಿ ರೂಪಿಸುವುದರೊಂದಿಗೆ, ಅಲ್ಲಿ ನಡೆಯುವ ಅಪರಾಧ ಕೃತ್ಯಗಳನ್ನು ಎಐ ನಿಯಂತ್ರಿತ ಕ್ಯಾಮೆರಾಗಳಿಂದ ತಡೆಯಲು ಸಾಧ್ಯವಿದೆ ಎಂದು ಉದ್ಯಮಿ ಹಾಗೂ ಕಾಂಗ್ರೆಸ್ ಮುಖಂಡ ನಾಪಂಡ ಮುತ್ತಪ್ಪ ಅಭಿಪ್ರಾಯಪಟ್ಟಿದ್ದಾರೆ.



ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ಪ್ರವಾಸೋದ್ಯಮದಲ್ಲಿ ಜನ ಸಾಮಾನ್ಯರ ಪಾಲ್ಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಹೋಂಸ್ಟೇ, ಸ್ಥಳೀಯರ ಆರ್ಥಿಕ ಅಭಿವೃದ್ಧಿಗೆ ಹೊಸ ದಾರಿ ತೋರಿಸಿದೆ. ಆದರೆ ಹೋಂಸ್ಟೇಗಳ ನಿರ್ವಹಣೆಗೆ ಮತ್ತು ನಿಗಾ ವಹಿಸಲು ಸರಕಾರ ಮತ್ತು ಸ್ಥಳೀಯ ಆಡಳಿತ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಪ್ರವಾಸಿಗರ ಸುರಕ್ಷತೆ ಮತ್ತು ಭದ್ರತೆಯನ್ನು ಖಚಿತಪಡಿಸಿಕೊಳ್ಳಬೇಕು ಎಂದು ಅವರು ಸಲಹೆ ಮಾಡಿದ್ದಾರೆ.

ನಿರಂತರ ಕಾರ್ಯಾಚರಿಸಬೇಕು

ಪ್ರತೀ ಹೋಂಸ್ಟೇಗಳಲ್ಲಿ ನಿಯಂತ್ರಿತ ಕ್ಯಾಮರಾಗಳನ್ನು ಅಗತ್ಯಕ್ಕನುಗುಣವಾಗಿ ಅಳವಡಿಸಿ ಅದರ ಲಿಂಕನ್ನು ಪೊಲೀಸ್ ಠಾಣೆಗಳಿಗೆ ನೀಡಿ ಅಲ್ಲಿ ದತ್ತಾಂಶ ಸಂಗ್ರಹವಾಗುವಂತೆ ಮಾಡಬೇಕು. ನಿರಂತರವಾದ ಕಣ್ಗಾವಲಿಗೆ ಪೊಲೀಸ್, ಕಂದಾಯ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ನಾಗರಿಕ ಸಂಸ್ಥೆಗಳ ಪ್ರತಿನಿಧಿಗನ್ನೊಳಗೊಂಡ ಸಮಿತಿ ರಚಿಸಿ ಅವು ನಿರಂತರ ಕಾರ್ಯಾಚರಿಸಬೇಕು ಎಂದು ನಾಪಂಡ ಮುತ್ತಪ್ಪ ಹೇಳಿದ್ದಾರೆ.

ಕಠಿಣ ನಿಯಮ

ಎಲ್ಲಾ ಹೋಂಸ್ಟೇಗಳಲ್ಲಿ ಸೂಕ್ತ ದಾಖಲಾತಿಗಳ ಲಭ್ಯತೆ ನಿರಂತರ ಗಮನಿಸುತ್ತಿರಬೇಕು. ಪ್ರತಿ ವರ್ಷ ಸಂಬಂಧಿಸಿದ ಇಲಾಖೆಗೆ ವಾರ್ಷಿಕ ವರದಿ ನೀಡುವಂತೆ ನಿಯಮ ರೂಪಿಸಬೇಕು. ಸಂಬಂಧಿಸಿದ ಇಲಾಖೆಗಳು ಕಾಲಕಾಲಕ್ಕೆ ಹೋಂಸ್ಟೇ ಮಾಲಕರಿಗೆ ಮತ್ತು ಸಂಬಂಧಿಸಿದವರಿಗೆ ಸೂಕ್ತ ಕಾನೂನು ತಿಳುವಳಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಇಂತಹ ಮುಂಜಾಗ್ರತಾ ಕಾರ್ಯಕ್ರಮ ಮತ್ತು ಕಠಿಣ ನಿಯಮ ರೂಪಿಸುವುದರಿಂದ ಪ್ರವಾಸಿಗರ ಸುರಕ್ಷತೆ ಖಾತ್ರಿಪಡಿಸಲು ಸಾಧ್ಯವಾಗುತ್ತದೆ.

● ನಾಪಂಡ ಮುತ್ತಪ್ಪ

ನಾಳೆ ಕಾರ್ನಾಡ್ ಸರಕಾರಿ ಕಾಲೇಜಿನಲ್ಲಿ ಜಿಲ್ಲಾ ಮಟ್ಟದ ಸೌಹಾರ್ದ ಕ್ರೀಡಾಕೂಟ

ಮೂಲ್ಕಿ: ಮುಲ್ಕಿ ದಕ್ಷಿಣ ಕನ್ನಡ ಜಿಲ್ಲೆ ಮುಲ್ಕಿ ತಾಲೂಕು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಶ್ರಯದಲ್ಲಿ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ದ.ಕ.ಜಿಲ್ಲಾ ಮಟ್ಟದ ಸೌಹಾರ್ದ ಕ್ರೀಡಾಕೂಟ 2026 ಕಾರ್ಯಕ್ರಮ ಮೇ 1ರಂದು ಬೆಳಿಗ್ಗೆ 9 ಗಂಟೆಗೆ ಮುಲ್ಕಿಯ ಕಾರ್ನಾಡ್ ಸರಕಾರಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ನಡೆಯಲಿದೆ. ಕ್ರೀಡಾಕೂಟವನ್ನು ದ.ಕ. ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನರ್ವಡೆ ವಿನಾಯಕ್ ಕಾರ್ಭಾರಿ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಶಾಸಕ ಉಮಾನಾಥ ಕೋಟ್ಯಾನ್ ವಹಿಸಲಿದ್ದಾರೆ. ಸಂಸದ ಕ್ಯಾ. ಬ್ರಿಜೇಶ್ ಚೌಟ, ಮಾಜಿ ಸಚಿವ ಅಭಯ ಚಂದ್ರ ಜೈನ್ , ಕರ್ನಾಟಕ ರಾಜ್ಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ(ನೋಂ) ಬೆಂಗಳೂರಿನ ರಾಜ್ಯಾಧ್ಯಕ್ಷ ದಿಲೀಪ್ ಕುಮಾರ್ ಬಿ.ಎಂ. ದ.ಕ.ಜಿಲ್ಲೆಯ ವಿವಿಧ ತಾಲೂಕು ಪಂಚಾಯತ್ ಕಾರ್ಯನಿರ್ವಾಹಣಾಧಿಕಾರಿಗಳಾದ ಗುರುದತ್ ಎಂ.ಎನ್., ಸಚಿನ್ ಕುಮಾರ್ , ನವೀನ್ ಕುಮಾರ್ ಭಂಡಾರಿ ಎಚ್ , ಮಹೇಶ್ ಹೊಳ್ಳ ಎನ್ ಭವಾನಿ ಶಂಕರ್ , ಕೆ. ರಾಜಣ್ಣ , ಮುಲ್ಕಿ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ, ಮಧುಕರ್,ಮುಲ್ಕಿ ಸರಕಾರಿ ಪದವಿ ಪೂರ್ವ ಕಾಲೇಜು, ಪ್ರಾಂಶುಪಾಲ ವಾಸುದೇವ ಬೆಳ್ಳೆ ಉಪಸ್ಥಿತರಿರುವರು.

ಸಮಾರೋಪ ಸಮಾರಂಭ

ಸಂಜೆ 5.30ಕ್ಕೆ ನಡೆಯುವ ಸಮಾರೋಪ ಸಮಾರಂಭದಲ್ಲಿ ದ.ಕ. ಜಿ.ಪಂ. ಉಪ ಕಾರ್ಯದರ್ಶಿ ಜಯಲಕ್ಷ್ಮೀ ರಾಯಕೋಡ, ಕೆ.ಎ.ಎಸ್(ಹಿ.ಶ್ರೇ) ಬಹುಮಾನ ವಿತರಿಸಲಿದ್ದಾರೆ.

ದ.ಕ.ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಪ್ರದೀಪ್ ಡಿಸೋಜ, ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಮಂಗಳೂರು ವಲಯದ ಜಿಲ್ಲಾ ಅಧ್ಯಕ್ಷ ನವೀನ್ ಕುಮಾರ್, ದ.ಕ.ಜಿ.ಪಂ. ಯೋಜನಾ ನಿರ್ದೇಶಕರಾದ ಕೆ. ಜಯರಾಮ್, ತಾ.ಪಂ. ಕಾರ್ಯನಿರ್ವಹಣಾಧಿಕಾರಿ ಗುರುದತ್ ಎಂ.ಎನ್. ಉಪಸ್ಥಿತರಿರುವರೆಂದು ಮುಲ್ಕಿ ತಾ. ಅಧ್ಯಕ್ಷರು, ಉಪಾಧ್ಯಕ್ಷರು , ಸರ್ವ ಸದಸ್ಯರು, ಗ್ರಾಮೀಣಾಭಿವೃದ್ಧಿ – ಪಂ. ರಾಜ್ ನೌಕರರ ಸಂಘದ ಪ್ರಕಟಣೆ ತಿಳಿಸಿದೆ

ಪುತ್ತೂರಿನಲ್ಲಿ ಮಾನವೀಯತೆಗೆ ಮೆರುಗು ತಂದ ಕರೆಮೂಲೆ ದೀಪಶ್ರೀ ಪುನರ್ವಸತಿ ಕಾರ್ಯ

ಕೋಡಿಂಬಾಡಿ ಗ್ರಾಮದ ನಿರ್ಗತಿಕ ವೃದ್ಧೆಗೆ ಸಿಕ್ಕಿತು ಇಲ್ಲಿ ಹೊಸ ಬದುಕು

ಪುತ್ತೂರು: ಪುತ್ತೂರು ಸರಕಾರಿ ಆಸ್ಪತ್ರೆಯಲ್ಲಿ ಮಾರ್ಚ್ ತಿಂಗಳು ಒಳರೋಗಿಯಾಗಿ ದಾಖಲಾಗಿದ್ದ ಕೋಡಿಂಬಾಡಿ ಗ್ರಾಮದ ದಾರಂದಕುಕ್ಕುಮನೆ ನಿವಾಸಿಯಾದ 80 ವರ್ಷದ ಲಕ್ಷ್ಮೀ ಅವರಿಗೆ ಪುನರ್ವಸತಿ ಕಲ್ಪಿಸಿದ ಮಾನವೀಯ ಕಾರ್ಯ ನಡೆದಿದೆ.



ಸೇವಾಭಾವಕ್ಕೆ ಇದು ಜೀವಂತ ಸಾಕ್ಷಿ

ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಸ್ಥಿತಿಯಲ್ಲಿದ್ದ ವೃದ್ಧೆ ಲಕ್ಷ್ಮೀ ಅವರಿಗೆ ಪುತ್ತೂರು ಸರಕಾರಿ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಯದುರಾಜ್ ಡಿ.ಕೆ. ಅವರ ಮಾರ್ಗದರ್ಶನದಲ್ಲಿ ವೈದ್ಯಕೀಯ ತಂಡವು ಅತ್ಯುತ್ತಮ ಚಿಕಿತ್ಸೆ ಮತ್ತು ಆರೈಕೆ ನೀಡಿದ್ದು, ಅವರು ಮತ್ತೆ ನಡೆಯುವ ಮಟ್ಟಕ್ಕೆ ಚೇತರಿಸಿಕೊಂಡಿದ್ದಾರೆ. ಸರ್ಕಾರಿ ಆಸ್ಪತ್ರೆಯ ಸೇವಾಭಾವಕ್ಕೆ ಇದು ಜೀವಂತ ಸಾಕ್ಷಿಯಾಗಿದೆ. ಸರ್ಕಾರಿ ಆಸ್ಪತ್ರೆ ವೈದ್ಯಾಧಿಕಾರಿಗಳ ವಿನಂತಿಯ ಮೇರೆಗೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಹರೀಶ್ ಕೆ. ಹಾಗೂ ಸಹಾಯಕ ಅಭಿವೃದ್ಧಿ ಯೋಜನಾಧಿಕಾರಿ ಹಾಗೂ ವಿಕಲಚೇತನರ ನೋಡೆಲ್ ಅಧಿಕಾರಿ ಮಂಗಳ ಕಾಳೆಯವರ ಮಾರ್ಗದರ್ಶನದಲ್ಲಿ, ಪುತ್ತೂರು ಉಮೇಶ್ ನಾಯಕ್ ನೇತೃತ್ವದಲ್ಲಿ ವೃದ್ಧೆಯನ್ನು ಪುತ್ತೂರು ಕಸಬಾ ಗ್ರಾಮದ ಕರೆಮೂಲೆ ದೀಪಶ್ರೀ ಹಿರಿಯ ನಾಗರಿಕರ ಪುನರ್ವಸತಿ ಕೇಂದ್ರಕ್ಕೆ ದಾಖಲಿಸಲಾಯಿತು. ಈ ಸಂದರ್ಭ ಪುತ್ತೂರು ಪೊಲೀಸ್ ಇಲಾಖೆಯ ಅಕ್ಕಪಡೆಯ ಸಿಬ್ಬಂದಿಗಳಾದ ಸಂಧ್ಯಾ, ನವ್ಯ ಮತ್ತು ರೇವತಿ, ಚಾಲಕರಾದ ನವಾಜ್ ಬಡ್ಕಿ ಅವರು ವೃದ್ಧೆಯ ಕೈ ಹಿಡಿದು ಆಶ್ರಮದತ್ತ ಕರೆದೊಯ್ದ ಘಟನೆ ಮಾನವೀಯತೆ ಮೆರೆದ ಉದಾಹರಣೆಯಾಗಿದೆ. ವಾಹನ ಚಾಲಕ ನವಾಜ್ ಬಡ್ಕಿ ಅವರು ತಮ್ಮ ದುಡಿಮೆ ಒಂದು ಭಾಗ ವೃದ್ಧೆ ಖರ್ಚಿಗೆ ನೀಡಿದ ಮಾನವೀಯ ನಡೆ ಸಹ ಗಮನಾರ್ಹ.

ಭಾವುಕತೆ ಮೂಡಿಸಿತು

ಆಸ್ಪತ್ರೆಯಿಂದ ಆಶ್ರಮಕ್ಕೆ ತೆರಳುವ ವೇಳೆ, ವೃದ್ಧೆ ಡಾ. ಯದುರಾಜ್ ಅವರನ್ನು ಕರೆದು ಎರಡು ಕೈಗಳನ್ನು ಜೋಡಿಸಿ ಸರ್ಕಾರಿ ಆಸ್ಪತ್ರೆಯ ವೈದ್ಯರು ಹಾಗೂ ಹೆಸರು ಸಿಬ್ಬಂದಿಗಳು ದೇವರ ರೂಪದಲ್ಲಿ ತನ್ನ ರಕ್ಷಣೆ ಮಾಡಿದ್ದಾರೆ ಎಂದು ಕೃತಜ್ಞತೆಯೊಂದಿಗೆ ಧನ್ಯವಾದ ಸಲ್ಲಿಸಿದ ಕ್ಷಣ ಹಾಜರಿದ್ದವರಲ್ಲಿ ಭಾವುಕತೆ ಮೂಡಿಸಿತು.

ಸೇವಾ ಕಾರ್ಯ

ಬೆಂಗಳೂರಿನ ದೀಪಶ್ರೀ ಆಸ್ಪತ್ರೆಯ ಡಾ. ಶ್ರೀಧರ್ ವೃದ್ಧೆಯನ್ನು ಯಾವುದೇ ಶುಲ್ಕವಿಲ್ಲದೆ ಆಶ್ರಮದಲ್ಲಿ ಸೇರಿಸಿಕೊಳ್ಳಲು ಮುಂದಾಗಿದ್ದಾರೆ. ಈಗಾಗಲೇ ಪುತ್ತೂರು ಮೈಸೂರು, ಬೆಂಗಳೂರಿನಲ್ಲಿ ದೀಪಶ್ರೀ ವೃದ್ಧರ ಪುನರ್ವಸತಿ ಕೇಂದ್ರ ಅತ್ಯಂತ ಸೇವಾ ಭಾವದಲ್ಲಿ ನಡೆಯುತ್ತಿರುವುದು ಡಾ. ಶ್ರೀಧರ್ ಅವರ ಸೇವಾ ಭಾವಕ್ಕೆ ಪ್ರತ್ಯಕ್ಷ ದರ್ಪಣವಾಗಿದೆ. ಈ ಕಾರ್ಯದಲ್ಲಿ ಮಹಿಳಾ-ಮಕ್ಕಳ ಅಭಿವೃದ್ಧಿ ಇಲಾಖೆ ಮೇಲ್ವಿಚಾರಕ ಯಶೋದಾ, ತಾ.ಪಂ. ವಿಕಲಚೇತನರ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರಾದ ನವೀನ್ ಕುಮಾರ್, ಆಟೋ ಚಾಲಕ ನಾರಾಯಣ ಅಕ್ಕ ಪಡೆಯ ಪೊಲೀಸ್ ಸಿಬ್ಬಂದಿಗಳು , ಇತರರು ಸಹಕರಿಸಿದರು.

ಸುತ್ತಮುತ್ತ

ಬಂಟ ಸಮಾಜದಿಂದ ಮೇ 7ಕ್ಕೆ ಗುರುವಂದನೆ, ಪಾದಪೂಜೆ

ಪುತ್ತೂರು: ಶೃಂಗೇರಿ ಶಾರದಾ ಪೀಠಾಧೀಶ್ವರಾದ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಪುತ್ತೂರಿಗೆ ಬರಲಿದ್ದು, ಮೇ 7ರಂದು ಸಂಘದ ವತಿಯಿಂದ ನಡೆಯುವ ಗುರುವಂದನೆ ಮತ್ತು ಪಾದಪೂಜೆ ನಡೆಯಲಿದೆ ಎಂದು ಗುರುವಂದನಾ ಸಮಿತಿ ಉಪಾಧ್ಯಕ್ಷ ಕಾವು ಹೇಮನಾಥ ಶೆಟ್ಟಿ ವಿನಂತಿಸಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಮೇ 6ಕ್ಕೆ ಪುತ್ತೂರಿಗೆ ಶ್ರೀಗಳು ಆಗಮಿಸುವ ಸಂದರ್ಭದಲ್ಲಿ ಭವ್ಯ ಸ್ವಾಗತ ನೀಡಲಾಗುವುದು. ಮೇ 7ರಂದು ಬಪ್ಪಳಿಗೆ ಶ್ರೀ ಶಂಕರ ಸಭಾಭವನದ ಶ್ರೀ ಲಲಿತಾಂಬಿಕಾ ವೇದಿಕೆಯಲ್ಲಿ ಗುರುವಂದನಾ ಕಾರ್ಯಕ್ರಮ ನಡೆಯಲಿದೆ. ಬಂಟ ಸಮಾಜದ ಅನೇಕ ತರವಾಡು ಅಥವಾ ಕುಟುಂಬದಲ್ಲಿ ಪ್ರಶ್ನಾ ಚಿಂತನೆ ವೇಳೆ ಮುಖ್ಯವಾಗಿ ಗುರು ಕೋಪ ಅಥವಾ ಗುರುಗಳ ಆಶೀರ್ವಾದ ಪಡೆಯುವ ವಿಚಾರ ಬರುತ್ತದೆ. ಈ ನಿಟ್ಟಿನಲ್ಲಿ ಪುತ್ತೂರಿಗೆ ಶ್ರೀ ಗುರುಗಳು ಆಗಮಿಸುತ್ತಿದ್ದು ಗುರುವಂದನೆ ಮತ್ತು ಪಾದಪೂಜೆಯಲ್ಲಿ ಸಮುದಾಯದ ಎಲ್ಲರೂ ಭಾಗವಹಿಸುವಂತೆ ಮನವಿ ಮಾಡಿದರು. ಧರ್ಮಾಭ್ಯುದಯ ತಾಲೂಕು ಸಮಿತಿ ಅಧ್ಯಕ್ಷ ದಂಬೆಕಾನ ಸದಾಶಿವ ರೈ, ಪುತ್ತೂರು ತಾಲೂಕು ಬಂಟರ ಸಂಘದ ಕಾರ್ಯದರ್ಶಿ ನಿತ್ಯಾನಂದ ಶೆಟ್ಟಿ ಕೋಶಾಧಿಕಾರಿ ಸಂತೋಷ್ ಶೆಟ್ಟಿ ನಿರ್ದೇಶಕ ರವಿಪ್ರಸಾದ್ ಶೆಟ್ಟಿ ಗಂಗಾಧರ ರೈ ಎಲಿಕ ಇದ್ದರು.

ಸಾಧನೆಗೈದ ಮಕ್ಕಳಿಗೆ ಸನ್ಮಾನ

ಕುಂದಾಪುರ: ಗಿಳಿಯಾರು ಕುಶಲ ಹೆಗ್ಡೆ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ 2025–26ನೇ ಸಾಲಿನ ಪದವಿ, ಪಿಯು ಹಾಗೂ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರ್ಯಾಂಕ್ ಗಳಿಸಿದ ಕುಂದಾಪುರ– ಬೈಂದೂರು ತಾಲೂಕಿನ ವಿದ್ಯಾರ್ಥಿಗಳನ್ನು ಗೌರವಿಸುವ ಕಾರ್ಯಕ್ರಮ ನಡೆಯಲಿದೆ. 10 ರ್ಯಾಂಕ್ ಒಳಗೆ ಸ್ಥಾನ ಪಡೆದವರು, ಪಿಯುಸಿ ಹಾಗೂ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಜ್ಯ ಮಟ್ಟದ 10ನೇ ರ್ಯಾಂಕಿನೊಳಗೆ ಸ್ಥಾನ ಪಡೆದವರು ಮಾಹಿತಿ ಕಳುಹಿಸಬಹುದು. ಫೋಟೋ, ಅಂಕ ಪಟ್ಟಿ ಹಾಗೂ ಕಾಲೇಜು ಪ್ರಾಂಶುಪಾಲರ/ ಮುಖ್ಯೋಪಾಧ್ಯಾಯರ ಸಹಿ ಇರುವ ಪತ್ರ ಮೇ.10 ರೊಳಗೆ ತಲುಪುವಂತೆ ಕಳುಹಿಸಬೇಕು. ಶೇ. 95 ಕ್ಕಿಂತ ಹೆಚ್ಚು ಅಂಕ ಪಡೆದ ಕುಂದಾಪುರ–ಬೈಂದೂರು ತಾಲೂಕಿನ ಪಿಯುಸಿ, ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ಮುಂದಿನ ಶಿಕ್ಷಣಕ್ಕಾಗಿ ಸಹಾಯಧನ ನೆರವಿಗಾಗಿ ಅರ್ಜಿ ಸಲ್ಲಿಸಬಹುದಾಗಿದ್ದು ಅರ್ಜಿ ಪತ್ರದೊಂದಿಗೆ ಸೇರಿದ ಕಾಲೇಜಿನ ಶುಲ್ಕ ರಶೀದಿ ಅಥವಾ ಸೇರ್ಪಡೆ ದಾಖಲೆ ಪತ್ರದ ಪ್ರತಿ, ಅಂಕ ಪಟ್ಟಿ ಮೇ 20ರೊಳಗೆ ತಲುಪುವಂತೆ ಕಳುಹಿಸಬೇಕು. ಅರ್ಜಿಯನ್ನು 'ಕುಂದಪ್ರಭ, ಶ್ರೀ ನಾರಾಯಣ ಗುರು ಕಾಂಪ್ಲೆಕ್ಸ್, ವೆಸ್ಟ್ ಬ್ಲಾಕ್ ರಸ್ತೆ, ಕುಂದಾಪುರ–576201 ಇಲ್ಲಿಂದ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳನ್ನು ಯು. ಎಸ್. ಶೆಣೈ, ಕಾರ್ಯದರ್ಶಿ – 9448120765., ಕೆ. ನಾರಾಯಣ–9448548806 ಅವರಿಂದ ಪಡೆಯಬಹುದು ಎಂದು ತಿಳಿಸಲಾಗಿದೆ.

ಹಾಲಿ ಸ್ಥಾನಗಳಿಗೆ ಮೀಸಲಾತಿ ಕಲ್ಪಿಸಲಿ: ಮಮತಾ ಗಟ್ಟಿ

ಮಡಿಕೇರಿ: ಬಿಜೆಪಿಗೆ ಮಹಿಳೆಯರ ಬಗ್ಗೆ ನೈಜ ಕಾಳಜಿ ಇದ್ದರೆ, ಕ್ಷೇತ್ರ ಪುನರ್ ವಿಂಗಡಣೆ ನೆಪವಿಲ್ಲದೆ ಹಾಲಿ ಲೋಕಸಭಾ ಸ್ಥಾನಗಳಿಗೆ ಅನುಗುಣವಾಗಿಯೇ ಮಹಿಳಾ ಮೀಸಲಾತಿ ಜಾರಿ ಮಾಡಲಿ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಮತಾ ಗಟ್ಟಿ ಸವಾಲು ಹಾಕಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 2023ರಲ್ಲಿ ಅಂಗೀಕಾರವಾದ ಮಸೂದೆಯನ್ನೇ ಯಥಾವತ್ತಾಗಿ ಜಾರಿಗೆ ತರುವಂತೆ ಒತ್ತಾಯಿಸಿದರು. ಮಹಿಳೆಯರು ಶಾಸನಸಭೆಗೆ ಬರುವುದು ಬಿಜೆಪಿಗೆ ಬೇಕಿಲ್ಲ. ಪಂಚರಾಜ್ಯ ಚುನಾವಣೆ ಲೆಕ್ಕಾಚಾರಕ್ಕಾಗಿ ಮಸೂದೆ ಮಂಡಿಸಿದ್ದಾರೆ. ಪಂಚಾಯತ್ ರಾಜ್‌ನಲ್ಲಿ ಶೇ.50ಷ್ಟು ಮಹಿಳಾ ಮೀಸಲಾತಿ ತಂದಿದ್ದು ಕಾಂಗ್ರೆಸ್. ಮೊದಲ ಮಹಿಳಾ ಪ್ರಧಾನಿ, ರಾಷ್ಟ್ರಪತಿ ಎಲ್ಲವನ್ನೂ ನೀಡಿದ್ದು ನಮ್ಮ ಪಕ್ಷ. ಬಿಜೆಪಿ ಮಹಿಳೆಯರಿಗೆ ಒಂದು ಕಾರ್ಯಕ್ರಮವನ್ನು ಕೊಟ್ಟಿಲ್ಲ ಎಂದು ತಿರುಗೇಟು ನೀಡಿದ ಅವರು, ಈ ಸಂಬಂಧ ಮಹಿಳಾ ಕಾಂಗ್ರೆಸ್‌ನಿಂದ 10 ಲಕ್ಷ ಸಹಿ ಸಂಗ್ರಹ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಪಿ.ಚಂದ್ರಕಲಾ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ, ಪ್ರಮುಖರಾದ ರೂಪಾ ಭೀಮಯ್ಯ, ಶೀಲಾ ಡಿಸೋಜಾ, ಜೆ.ಫಿಲೋಮಿನಾ ಇದ್ದರು.

ಪುತ್ತೂರಿನಲ್ಲಿ ಪಶು ಪಾಲಿ ಕ್ಲಿನಿಕ್‌ನ ನೂತನ ಕಟ್ಟಡಕ್ಕೆ ಶಿಲಾನ್ಯಾಸ ನೆರವೇರಿಸಿ ಶಾಸಕ ಅಶೋಕ್ ಮಾಹಿತಿ

ಕೈಲದಲ್ಲಿ ಪಶು ವೈದ್ಯಕೀಯ ವಿವಿ ಸ್ಥಾಪನೆಗೆ ಪ್ರಸ್ತಾವನೆ

ಪುತ್ತೂರು: ಕೇಂದ್ರ ಸರಕಾರದ ಯೋಜನೆಯಾದ ವೆಟರ್ನರಿ ಕೌನ್ಸಿಲ್ ಆಫ್ ಇಂಡಿಯ ಇದರಲ್ಲಿ ದೇಶದ 4 ಕಡೆ ಪಶು ವೈದ್ಯಕೀಯ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಲಿದೆ. ಇದರಲ್ಲಿ ದಕ್ಷಿಣ ಭಾಗದಲ್ಲಿ ಕೈಲ ಪಶು ವೈದ್ಯಕೀಯ ಕಾಲೇಜನ್ನು ಆಯ್ಕೆ ಮಾಡುವ ಪ್ರಸ್ತಾವನೆ ಇದೆ. ಇದಕ್ಕೆ ಬೇಕಾದ ಎಲ್ಲಾ ಪೂರಕ ಮೂಲಭೂತ ವ್ಯವಸ್ಥೆಗಳು ಇಲ್ಲಿ ಇದೆ. ಆದುದರಿಂದ ವಿಶ್ವವಿದ್ಯಾನಿಲಯ ಆರಂಭಗೊಂಡರೆ ಉಪ್ಪಿನಂಗಡಿ, ಪುತ್ತೂರು ಅಭಿವೃದ್ಧಿಗೊಳ್ಳಲಿದೆ ಎಂದು ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಹೇಳಿದರು.

ತಾಲೂಕು ಮಟ್ಟದಲ್ಲಿ ಪಶು ವೈದ್ಯಕೀಯ ಸೇವೆಗಳನ್ನು ಬಲಪಡಿಸಲು ಮತ್ತು ಜಾನುವಾರುಗಳಿಗೆ, ಸಾಕುಪ್ರಾಣಿಗಳಿಗೆ ಉತ್ತಮ ಚಿಕಿತ್ಸೆ ನೀಡುವ ಉದ್ದೇಶದಿಂದ ಪುತ್ತೂರಿನ ಪಶು ವೈದ್ಯಕೀಯ ಆಸ್ಪತ್ರೆಯ ಆವರಣದಲ್ಲಿ ನಿರ್ಮಾಣಗೊಳ್ಳಲಿರುವ ತಾಲೂಕು ಮಟ್ಟದ ಪ್ರಥಮ ಪಶು ಪಾಲಿ ಕ್ಲಿನಿಕ್‌ನ ನೂತನ ಕಟ್ಟಡಕ್ಕೆ ಶಿಲಾನ್ಯಾಸ ನೆರವೇರಿಸಿ ಹಾಗೂ ಫಲಾನುಭವಿಗಳಿಗೆ ಸವಲತ್ತುಗಳನ್ನು ವಿತರಿಸಿ ಅವರು ಮಾತನಾಡಿದರು.



ರೂ.49 ಕೋಟಿ ಅನುದಾನ

ಕೈಲದಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ ಪಶು ವೈದ್ಯಕೀಯ ಕಾಲೇಜ್ ಆರಂಭವಾಗುತ್ತಿದೆ. ಡಿ.ವಿ. ಸದಾನಂದ ಗೌಡ ಅವರು ಮುಖ್ಯಮಂತ್ರಿಯಾಗಿರುವಾಗ ರೂ.5 ಕೋಟಿ ಅನುದಾನ ನೀಡುವ ಹಾಗೆ ಅವರಿಗೆ ನಾನು ಒತ್ತಡ ಹಾಕಿದ್ದೆ. ಆ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರೂ.100 ಕೋಟಿ ಅನುದಾನ ನೀಡಿ ಸುಂದರವಾದ ಕಾಲೇಜ್ ನಿರ್ಮಾಣವಾಗಿದೆ. ನಾನು ಶಾಸಕನಾದ ಮೇಲೆ ರೂ.49 ಕೋಟಿ ಅನುದಾನ ನೀಡಿದ್ದು ಮುಂದಿನ ವರ್ಷ ಕಾಲೇಜ್ ಆರಂಭಗೊಳ್ಳಲಿದೆ ಎಂದರು.

ಇಲಾಖೆಯಿಂದ ನೀಡುತ್ತಿರುವ ದೇಸಿ ತಳಿಯ ಕರುಗಳ ಪ್ರದರ್ಶನ ಕಾರ್ಯಕ್ರಮ ಮಾಡುವುದು ಉತ್ತಮ. ಕೆಎಂಎಫ್‌ನಿಂದ ಹೈನುಗಾರರಿಗೆ ತಮಿಳುನಾಡಿನಿಂದ ಉತ್ತಮ ತಳಿಯ, ಹೆಚ್ಚಿನ ಹಾಲು ನೀಡುವ ಹಸುಗಳನ್ನು ಖರೀದಿ ಮಾಡುವ ವ್ಯವಸ್ಥೆ ಮಾಡಲಾಗುತ್ತಿದೆ. ಪಶು ಸಖಿಯರ ವೇತನವನ್ನು ಹಂತ ಹಂತವಾಗಿ ಹೆಚ್ಚಳ ಮಾಡುವಲ್ಲಿ ಪ್ರಯತ್ನ ಮಾಡುತ್ತೇನೆ ಎಂದು ಅವರು ಹೇಳಿದರು.

ಸವಲತ್ತುಗಳ ವಿತರಣೆ

ಪಶು ವೈದ್ಯಕೀಯ ಸೇವಾ ಇಲಾಖೆಯಿಂದ ತಾಲೂಕಿನ ಹೈನುಗಾರರಿಗೆ ಉತ್ತೇಜನ ನೀಡಲು ಹಸುಗಳ ಆರೋಗ್ಯ ದೃಷ್ಟಿಯಿಂದ ಶೇ.50ರ ಸಹಾಯಧನದಲ್ಲಿ ಒಟ್ಟು 18 ಫಲಾನುಭವಿಗಳಿಗೆ ತಲಾ 2 ರಬ್ಬರ್ ನೆಲಹಾಸು, 6 ಫಲಾನುಭವಿಗಳಿಗೆ 2 ಹೆಚ್‌ಪಿ ಸಾಮರ್ಥ್ಯದ ಮೇವು ಕತ್ತರಿಸುವ ಯಂತ್ರ, 3 ಫಲಾನುಭವಿಗಳಿಗೆ ಮಲೆನಾಡು ಗಿಡ್ಡ ತಳಿಯ ಹೆಣ್ಣುಕರುಗಳನ್ನು ವಿತರಿಸಲಾಯಿತು. 9ನೇ ಸುತ್ತಿನ ಕಾಲುಬಾಯಿ ಲಸಿಕಾ ಪೋಸ್ಟರನ್ನು ಬಿಡುಗಡೆಗೊಳಿಸಲಾಯಿತು.

ಪಶು ವೈದ್ಯಕೀಯ ಸೇವಾ ಇಲಾಖೆಯ ಮುಖ್ಯ ಪಶು ವೈದ್ಯಾಧಿಕಾರಿ ಡಾ. ಧರ್ಮಪಾಲ ಕೆ. ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಜೆಟ್‌ನಲ್ಲಿ 20 ತಾಲೂಕುಗಳಿಗೆ ಪಾಲಿ ಕ್ಲಿನಿಕ್‌ನ ಘೋಷಣೆ ಮಾಡಿದ್ದರು. ಇದರ ಭಾಗವಾಗಿ ಪುತ್ತೂರು ತಾಲೂಕಿಗೆ ಪ್ರಥಮವಾಗಿ ಪಾಲಿಕ್ಲಿನಿಕ್ ಮಂಜೂರುಗೊಂಡಿದ್ದು ಸರಕಾರದಿಂದ ರೂ.40 ಲಕ್ಷ ಅನುದಾನ ಬಿಡುಗಡೆಗೊಂಡಿದೆ. ಕರ್ನಾಟಕ ಸ್ಟೇಟ್ ಹ್ಯಾಬಿಟೇಟ್ ಸೆಂಟರ್‌ನವರು ನಾಳೆಯಿಂದಲೇ ಕಾಮಗಾರಿ ಆರಂಭಗೊಳ್ಳಲಿದೆ. ಪಶು ವೈದ್ಯಕೀಯ ಆಸ್ಪತ್ರೆಯ ಸಮೀಪವೇ ಪಾಲಿಕ್ಲಿನಿಕ್ ನಿರ್ಮಾಣವಾಗಲಿದೆ ಎಂದರು.

ಉಪ್ಪಿನಂಗಡಿ ಪಶುವೈದ್ಯಾಧಿಕಾರಿ ಡಾ. ಉಷಾ, ಪಾಣಾಜೆಯ ಮುಖ್ಯ ಪಶು ವೈದ್ಯಾಧಿಕಾರಿ ಡಾ.ಎಂ.ಪಿ. ಪ್ರಕಾಶ್, ಗುತ್ತಿಗೆದಾರರಾದ ರಾಧಾಕೃಷ್ಣ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಜಾನುವಾರು ಅಭಿವೃದ್ಧಿ ಅಧಿಕಾರಿ ಪುಷ್ಪರಾಜ ಶೆಟ್ಟಿ ಹಿರಿಯ ಪಶು ವೈದ್ಯಕೀಯ ಪರೀಕ್ಷಕ ವೀರಪ್ಪ ಈಶ್ವರಮಂಗಲದ ಹಿರಿಯ ಪಶುವೈದ್ಯ ಪರೀಕ್ಷಕ ಬಸವರಾಜ್ ಮತ್ತಿತರರು ಪಾಲ್ಗೊಂಡಿದ್ದರು.

ಕೊಡಗು ಬ್ಯಾರಿ ಸಾಹಿತ್ಯ ಸಮ್ಮೇಳನದಲ್ಲಿ ಸ್ಪೀಕರ್ ಖಾದರ್ ಘೋಷಣೆ

ಸಮುದಾಯ ಭವನಕ್ಕೆ 1 ಕೋಟಿ ರೂ. ನೆರವು

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಜಾಗ ಗುರುತಿಸಿ ಬ್ಯಾರಿ ಸಮುದಾಯ ಭವನ ನಿರ್ಮಾಣಕ್ಕೆ ಮುಂದಾದಲ್ಲಿ ಒಂದು ಕೋಟಿ ರೂ. ಒದಗಿಸಲಾಗುವುದು ವಿಧಾನಸಭೆಯ ಸಭಾಧ್ಯಕ್ಷ ಯು.ಟಿ.ಖಾದರ್ ಘೋಷಿಸಿದರು.

ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ವತಿಯಿಂದ ಮಡಿಕೇರಿಯ ಕೊಡಗು ಬ್ಯಾರೀಸ್ ವೆಲ್‌ಫೇರ್ ಟ್ರಸ್ಟ್ ಸಹಯೋಗದಲ್ಲಿ ನಗರದ ಕಾವೇರಿ ಹಾಲ್‌ನಲ್ಲಿ ಮಂಗಳವಾರ ನಡೆದ ಕೊಡಗು ಜಿಲ್ಲಾ ಬ್ಯಾರಿ ಪ್ರಥಮ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜಿಲ್ಲೆಯ ಸ್ಥಳೀಯ ಶಾಸಕ ಡಾ.ಮಂಥರ್ ಗೌಡ ಹಾಗೂ ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಹಾಗೂ ವೀರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಅವರ ಸಹಕಾರದಿಂದ ಒಟ್ಟು 1 ಕೋಟಿ ರೂ. ಬಿಡುಗಡೆ ಮಾಡಲಾಗುವುದು ಎಂದು ಖಾದರ್ ಭರವಸೆ ನೀಡಿದರು.

ಬ್ಯಾರಿ ಸಂಸ್ಕೃತಿ, ಸಾಹಿತ್ಯ, ಪರಂಪರೆಗೆ ತನ್ನದೇ ಇತಿಹಾಸ ಇದ್ದು, ಬ್ಯಾರಿ ಸಂಸ್ಕೃತಿ, ಸಾಹಿತ್ಯ, ಪರಂಪರೆ ಉಳಿಸಿ ಬೆಳೆಸಲು ಶ್ರಮಿಸಬೇಕು ಎಂದು ಕರೆ ನೀಡಿದ ಅವರು, ಬ್ಯಾರಿ ಸಾಹಿತ್ಯ ಸಮ್ಮೇಳನದಿಂದ ಬ್ಯಾರಿ ಭಾಷೆ ಬೆಳವಣಿಗೆ ಜೊತೆಗೆ ಚಿಂತನ ಮಂಥನಗಳು ನಡೆಯಲಿದ್ದು, ಸಮಾಜ ಅಭಿವೃದ್ಧಿಯತ್ತ ಮುನ್ನಡೆಯಬೇಕು ಎಂದು ಸಲಹೆ ಮಾಡಿದರು.



ಶಾಸಕರಿಂದ ಭರವಸೆ

ಬ್ಯಾರಿ ಸಮುದಾಯ ಭವನ ನಿರ್ಮಾಣಕ್ಕೆ ಜಾಗ ಗುರುತಿಸಿದಲ್ಲಿ ಅನುದಾನ ಒದಗಿಸಲಾಗುವುದು ಎಂದು ಶಾಸಕ ಡಾ.ಮಂಥರ್ ಗೌಡ ಕೂಡ ಭರವಸೆ ನೀಡಿದರು.

ಬ್ಯಾರಿ ಸಾಹಿತ್ಯ ಅಭಿವೃದ್ಧಿಗೆ ಹಸನಬ್ಬ, ಷಂಶುದ್ದೀನ್ ಸೇರಿದಂತೆ ಹಲವರು ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಆ ನಿಟ್ಟಿನಲ್ಲಿ ಬ್ಯಾರಿ ಸಾಹಿತ್ಯ ಅಕಾಡೆಮಿ ಸ್ಥಾಪಿಸಲಾಗಿದ್ದು, ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಬ್ಯಾರಿ ಅಕಾಡೆಮಿ ಅಧ್ಯಕ್ಷರು ಮತ್ತು ಸದಸ್ಯರ ಸ್ಥಾನಕ್ಕೆ ಕೊಡಗು ಜಿಲ್ಲೆಯವರಿಗೂ ಅವಕಾಶ ಮಾಡಬೇಕು ಎಂದು ಇದೇ ಸಂದರ್ಭದಲ್ಲಿ ಕೋರಿದರು.

ಬಿ.ಎ.ಷಂಶುದ್ದೀನ್ ಅವರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಸಾಹಿತಿ ಹಾಗೂ ಚಿಂತಕ ಎಸ್.ಜಿ.ಸಿದ್ಧರಾಮಯ್ಯ, ಕೊಡಗು ಜಿಲ್ಲಾ ಜಾನಪದ ಪರಿಷತ್ ಅಧ್ಯಕ್ಷ ಬಿ.ಜಿ.ಅನಂತಶಯನ, ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಎಂ.ಪಿ.ಕೇಶವ ಕಾಮತ್ ಮಾತನಾಡಿದರು. ಕರ್ನಾಟಕ ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ.ಎಂ.ಶಾಹಿದ್ ತೆಕ್ಕಿಲ್, ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಮಹೇಶ್ ನಾಚಯ್ಯ, ಮಾಜಿ ಎಂಎಲ್ಸಿ ಬಿ.ಎ.ಹಸನಬ್ಬ, ಅಮೀನ್ ಮೊಹಿಸಿನ್, ಮನ್ಸೂರ್, ಮಹಮ್ಮದ್, ಮಡಿಕೇರಿ ನಗರಸಭೆ ಸದಸ್ಯ ಎಂ.ಎ.ಮುಸ್ತಫಾ, ಬಶೀರ್ ಅಹ್ಮದ್, ನಾಮ ನಿರ್ದೇಶಿತ ಸದಸ್ಯ ಮಹಮ್ಮದ್ ಯಾಕೂಬ್, ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಯು.ಹೆಚ್. ಉಮರ್ ಇದ್ದರು. ಮುನೀರ್ ಅಹಮದ್ ಪ್ರಾಸ್ತಾವಿಕವಾಗಿ ಮಾತನಾಡಿದರು. ನಾಜೀರ್ ಅಹಮದ್ ಸ್ವಾಗತಿಸಿದರು.

ಪುತ್ತೂರು ದೇವದ ಜಾಗದಲ್ಲಿದ್ದ ಹಳೆ ಕಟ್ಟಡ ತೆರವು | ಪೊಲೀಸರಿಗೆ ಮನವಿ

ಶಾಸಕರು, ಅಧ್ಯಕ್ಷರ ಮೇಲಿನ ಕೇಸ್ ರದ್ದುಪಡಿಸಿ

ಪುತ್ತೂರು: ಬಲ್ನಾಡು ಶ್ರೀ ದಂಡನಾಯಕ ಉಳ್ಳಾಲ್ತಿ ಅಮ್ಮನವರ ಕಿರುವಾಳು ಬರುವಲ್ಲಿ ಮಹಿಳಾ ಪೊಲೀಸ್ ಠಾಣೆ ಬಳಿಯ ಹಳೆ ಕಟ್ಟಡ ತೆರವು ಮಾಡಿದ ವಿಚಾರದಲ್ಲಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರ ಮತ್ತು ಶಾಸಕರ ವಿರುದ್ಧ ಮಾಡಿರುವ ಕೇಸನ್ನು ರದ್ದುಪಡಿಸಬೇಕೆಂದು ಆಗ್ರಹಿಸಿ ಸೋಮವಾರ ಸಂಜೆ ಸಮೂಹ ಪುತ್ತೂರು ನಗರ ಪೊಲೀಸ್ ಠಾಣೆ ಮುಂದೆ ಜಮಾಯಿಸಿ ಡಿವೈಎಸ್ಪಿ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭ ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ ಕೋಶಾಧಿಕಾರಿ ಹೇಮನಾಥ ಶೆಟ್ಟಿ ಕಾವು ಮಾತನಾಡಿ, ಹಳೆ ಕಟ್ಟಡ ತೆರವು ಭಕ್ತರ ನಿರ್ಧಾರ. ಶಾಸಕರ ಮತ್ತು ದೇವಳದ ಅಧ್ಯಕ್ಷರ ಗಮನಕ್ಕೆ ಬಂದಾಗ ಅವರು ಭಕ್ತರನ್ನು ಸಮಾಧಾನಿಸಿದ್ದಾರೆ ಹೊರತು ಅವರು ಕಟ್ಟಡ ತೆರವುಗೊಳಿಸುವಲ್ಲಿ ನೇರವಾಗಿ ಭಾಗವಹಿಸಿದ್ದಾರೆ ಎಂಬುದು ಸುಳ್ಳು. ದೇವಳಕ್ಕೆ ಸಂಬಂಧಿಸಿ ಶಾಸಕರು ಅಭೂತಪೂರ್ವ ಕೆಲಸ ಮಾಡಿದ್ದಾರೆ. ಆದರೆ, ಕಟ್ಟಡದ ವಿಚಾರದಲ್ಲಿ ಈ ರೀತಿಯ ಆರೋಪದ ಮಾತು ಬರುವುದು ಸರಿಯಲ್ಲ, ಶಾಸಕರ ಮೇಲೆ ಆರೋಪ ಮಾಡುವ ಪೊಲೀಸರ ಕ್ರಮ ಸರಿಯಲ್ಲ ಎಂದರು.

ಶಾಸಕ ಅಶೋಕ್ ಕುಮಾರ್ ರೈ ಅವರು ಠಾಣೆಯ ಮುಂದೆ ಜಮಾಯಿಸಿದ ಭಕ್ತರ ಬಳಿಗೆ ಬಂದು ಡಿವೈಎಸ್ಪಿ ಜೊತೆ ಮಾತನಾಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಪ್ರಸಾದ್ ಆಳ್ವ ಅವರು ಪ್ರಾಸ್ತಾವಿಸಿದರು. ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯ ಶಿವನಾಥ ರೈ ಮೇಗಿನಗುತ್ತು, ಕೋಟಿ–ಚೆನ್ನಯ ಜೋಡುಕರೆ ಕಂಬಳ ಸಮಿತಿ ಅಧ್ಯಕ್ಷ ಚಂದ್ರಹಾಸ ಶೆಟ್ಟಿ ಮಠಂತಬೆಟ್ಟು ಮಹಿಷಮರ್ದಿನಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ನಿರಂಜನ ರೈ ಮಠಂತಬೆಟ್ಟು, ಮುರಳೀಧರ ರೈ ಮಠಂತಬೆಟ್ಟು, ರೋಶನ್ ರೈ ಬನ್ನೂರು, ಅಮರನಾಥ ಗೌಡ ಬಪ್ಪಳಿಗೆ, ದಾಮೋದರ್ ಭಂಡಾರ್‌ಕರ್, ಶಿವರಾಮ್ ಆಳ್ವ ಸಂತೋಷ್ ಚಿಲ್ಮೆತ್ತಾರು, ಸನತ್ ರೈ ವಳತ್ತಡ್ಕ, ಮಂಜುನಾಥ್ ಕೆಮ್ಮಾಯಿ, ಯೋಗೀಶ್ ಸಾಮಾನಿ, ಶ್ರೀರಾಮ ಪಕ್ಕಳ, ಲೋಕೇಶ್ ಪಡ್ಡಾಯೂರು, ರೋಹನ್ ರಾಜ್, ಉದಯ ಪಾಟಾಳಿ, ದೀಕ್ಷಿತ್ ರೈ, ಜಾನಕಿ ಮುರ, ಧರಣಿ ಕೆಯ್ಯೂರು, ಚಂದ್ರಪ್ರಭಾ ಗೌಡ, ವಿಕ್ರಂ ಶೆಟ್ಟಿ ಅಂತರ, ಶಿವಪ್ರಸಾದ್ ರೈ ಕೋಡಿಂಬಾಡಿ, ಪೂರ್ಣೇಶ್ ಭಂಡಾರಿ, ಜಯಪ್ರಕಾಶ್ ಬದಿನಾರು, ಸುಶಾಂತ್ ಶೆಟ್ಟಿ ಸುಮಿತ್ ಶೆಟ್ಟಿ ನವೀನ್ ರೈ ಬನ್ನೂರು, ಪೂರ್ಣಿಮ ಆರ್ಯಾಪು, ವಿಟ್ಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪದ್ಮನಾಭ ಪೂಜಾರಿ, ಗಿರೀಶ್ ಸಂಟ್ಯಾರ್, ಅಭಿಷೇಕ್ ಬೆಳ್ಳಿಪ್ಪಾಡಿ, ಪ್ರಸನ್ನ ಭಟ್ ಕೆದಿಲ, ಅಕ್ರಮ ಸಕ್ರಮ ಸಮಿತಿ ಸದಸ್ಯೆ ರೂಪಲೇಖ ಆಳ್ವ ಹರೀಶ್ ಬಂಗೇರ, ರಮೇಶ್ ರೈ ಡಿಂಬ್ರಿ ಇದ್ದರು. ಪುತ್ತೂರು ನಗರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಜಾನ್ಸನ್ ಡಿ'ಸೋಜ, ಮಹಿಳಾ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಸುನಿಲ್ ಕುಮಾರ್ ಅವರ ನೇತೃತ್ವದಲ್ಲಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.



ಆಡಳಿತದಲ್ಲಿ ಸ್ತ್ರೀಯರಿಗೆ ಅವಕಾಶಕ್ಕೆ ಕಾಂಗ್ರೆಸ್‌ನಿಂದ ಅಡ್ಡಿ: ಪ್ರತಾಪ್‌ಸಿಂಹ



ಬೆಳ್ತಂಗಡಿ: ಬೆಳ್ತಂಗಡಿ ಬಿಜೆಪಿ ಮಹಿಳಾ ಮೋರ್ಚಾದ ನೇತೃತ್ವದಲ್ಲಿ ನಾರಿ ಶಕ್ತಿ ವಂದನ್ ಶೇ.33 ಮೀಸಲಾತಿ ಜಾರಿಗೊಳಿಸಲು ವಿರೋಧ ಮಾಡಿದ ಕಾಂಗ್ರೆಸ್ ಹಾಗೂ ಪ್ರತಿಪಕ್ಷಗಳ ವಿರುದ್ಧ ಬೆಳ್ತಂಗಡಿ ಪೇಟೆ ಪರಿಸರದಲ್ಲಿ ಬೃಹತ್ ಪ್ರತಿಭಟನೆ ಮಾಡಲಾಯಿತು.

ವಿಧಾನ ಪರಿಷತ್ ಶಾಸಕ ಪ್ರತಾಪ್ ಸಿಂಹ ನಾಯಕ್ ಮಾತನಾಡಿ, ಕೇಂದ್ರ ಸರ್ಕಾರ ಮಹಿಳೆಯರಿಗೆ ರಾಜಕೀಯ ಹಾಗೂ ದೇಶದ ಆಡಳಿತದಲ್ಲಿ ಅವಕಾಶ ಕಲ್ಪಿಸುವ ಉದ್ದೇಶ ಹೊಂದಿದ್ದರು. ಆದರೆ ಕಾಂಗ್ರೆಸ್ ಅದಕ್ಕೆ ಅಡ್ಡಿ ಮಾಡಿದೆ ಎಂದರು.

ದಕ್ಷಿಣ ಕನ್ನಡ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಡಾ. ಮಂಜುಳಾ ರಾವ್ ಭಾಗವಹಿಸಿ, ಮಾತನಾಡಿದರು. ಪ್ರಾಸ್ತಾವಿಕವಾಗಿ ಜಿಲ್ಲಾ ಕಾರ್ಯದರ್ಶಿ ವಸಂತಿ ಮಚ್ಚಿನ, ಮಂಡಲ ಅಧ್ಯಕ್ಷ ಶ್ರೀನಿವಾಸ್ ರಾವ್ ಮಾತನಾಡಿದರು. ಬಿಜೆಪಿ ಮಹಿಳಾ ಮೋರ್ಚಾ ಪ್ರದಾನ ಕಾರ್ಯದರ್ಶಿ ತುಳಸಿ ಸಂಯೋಜನೆ ಮಾಡಿದರು. ಮಂಡಲ ಮಹಿಳಾ ಮೋರ್ಚಾ ಅಧ್ಯಕ್ಷೆ ವಿದ್ಯಾ ಶ್ರೀನಿವಾಸ್ ವಂದಿಸಿದರು.

ಬಿಜೆಪಿ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಪೂರ್ಣಿಮಾ ಜಯಂತ್, ವಿಭಾಗ ಸಹ ಪ್ರಭಾರಿ ಜಯಂತ್ ಕೋಟ್ಯಾನ್, ಮಂಡಲ ಪ್ರಧಾನ ಕಾರ್ಯದರ್ಶಿ ಗಳಾದ ಪ್ರಶಾಂತ್ ಪಾರೆಂಕಿ ಹಾಗೂ ಜಯಾನಂದ ಗೌಡ, ಸೀತಾರಾಮ್ ಜಿಲ್ಲಾ ಪ್ರಮುಖ, ಮತ್ತು ಮಂಡಲ ಪದಾಧಿಕಾರಿಗಳು, ಸದಸ್ಯರು ಹಾಗೂ ಮಂಡಲ ಮೋರ್ಚಾ ಜಿಲ್ಲಾ ಪದಾಧಿಕಾರಿಗಳು, ಪಕ್ಷದ ಪ್ರಮುಖರು ಸಹಿತ ಮೊದಲಾದವರು ಉಪಸ್ಥಿತರಿದ್ದರು.

ಭಕ್ತಿಯಿಂದ ಮಾತ್ರ ಭಗವಂತನನ್ನು ಒಲಿಸಿಕೊಳ್ಳಲು ಸಾಧ್ಯ: ಪೇಜಾವರ ಶ್ರೀ



ಬಂಟ್ವಾಳ: ಮನುಷ್ಯನಲ್ಲಿ ಆಸ್ತಿ,ಹಣ ಅಂತಸ್ತು ಇದ್ದರೂ ಭಕ್ತಿಯನ್ನು ಮಾರುಕಟ್ಟೆಯಲ್ಲಿ ಖರೀದಿಸಲು ಸಾಧ್ಯವಿಲ್ಲ ಮನುಷ್ಯನ ಭಕ್ತಿಗೆ ಶ್ರೇಷ್ಠ ಶಕ್ತಿ ಇದ್ದು, ಭಕ್ತಿಯಿಂದ ಮಾತ್ರ ಭಗವಂತನನ್ನು ಒಲಿಸಿಕೊಳ್ಳಲು ಸಾಧ್ಯ ಎಂದು ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ನುಡಿದರು.

ಬುಧವಾರ ಬಂಟ್ವಾಳ ತಾಲೂಕಿನ ಕುಕ್ಕಿಪಾಡಿ ಗ್ರಾಮದ ಕೋರ್ಯಾರು ಶ್ರೀ ದುರ್ಗಾ ಮಹಾಮ್ಮಾಯೀ ದೇವಸ್ಥಾನದಲ್ಲಿ ನೂತನ ಪಂಚಲೋಹದ ಶ್ರೀ ದೇವಿಯ ಬಿಂಬ ಪ್ರತಿಷ್ಠೆಯ ಹಿನ್ನಲೆಯಲ್ಲಿ ದೇವಸ್ಥಾನಕ್ಕೆ ಬೇಟಿ ನೀಡಿ ಶ್ರೀಗಳ ಆಶೀರ್ವಚನಗೈದರು.

ಪ್ರತಿಯೊಬ್ಬನಲ್ಲಿಯು ಭಕ್ತಿ ಮೂಡಬೇಕಾದರೆ ನಿರಂತರ ಭಜನೆ ಮಾಡಬೇಕು. ಭಜನೆಯಿಂದ ಸಿಗುವ ಭಕ್ತಿ ದೇವರ ಅನುಗ್ರಹಕ್ಕೆ ಪಾತ್ರವಾಗುತ್ತದೆ. ಇಂತಹ ಧಾರ್ಮಿಕ ಕಾರ್ಯಗಳಿಂದ ಸೇರಿರುವ ಎಲ್ಲಾ ಭಕ್ತರಿಗೆ ದೇವರ ಅನುಗ್ರಹ ಪ್ರಾಪ್ತಿಯಗುವುದರೊಂದಿಗೆ ಜೀವನ ಪರಮ ಪಾವನವಾಗುತ್ತದೆ ಎಂದರು.

ಶ್ರೀಕ್ಷೇತ್ರ ಪೂಂಜಾ ದೇವಸ್ಥಾನದ ಪ್ರಧಾನ ಅರ್ಚಕ ಪ್ರಕಾಶ್ ಆಚಾರ್ಯ, ದೇವಸ್ಥಾನದ ಆಡಳಿತ ಮಂಡಳಿ ಗುರಿಕಾರರಾದ ಗೋಪಾಲ ಗೌಡ ಕೋರ್ಯಾರು, ಎರಡನೇ ಗುರಿಕಾರ ಓಬಯ್ಯ ಗೌಡ, ಆಡಳಿತ ಮೊಕ್ತೇಸರ ಯಶೋಧರ ಗೌಡ ಕೋರ್ಯಾರು, ಆಡಳಿತ ಮಂಡಳಿ ಕಾರ್ಯದರ್ಶಿ ಲೋಕಯ್ಯ ಬಚ್ಚಿರವಲ್ಕೆ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಉಮೇಶ್ ಗೌಡ ಮಂಚಕಲ್ಲು, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಗಂಗಾಧರ ಗೌಡ ಕುಕ್ಕೇಡಿ, ಬ್ರಹ್ಮಕಲಶೋತ್ಸವ ಸಮಿತಿ ಗೌರವ ಅಧ್ಯಕ್ಷ ಹೇಮಚಂದ್ರ ಸಿದ್ದಕಟ್ಟೆ, ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯದರ್ಶಿ ಸಂಜೀವ ಎಲ್ಪೇಲು, ಜೀರ್ಣೋದ್ಧಾರ ಸಮಿತಿ ಗೌರವ ಅಧ್ಯಕ್ಷ ದುರ್ಗಾದಾಸ್ ಶೆಟ್ಟಿ ಕರಿಂಕಿಜೆ, ಪ್ರಭಾಕರ ಪ್ರಭು, ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿ ಗಣೇಶ್ ಕಣಿಯೂರು ಮತ್ತಿತರರು ಉಪಸ್ಥಿತರಿದ್ದರು.

ಅನುದಾನ ಮಂಜೂರಾತಿ ಪತ್ರ ಹಸ್ತಾಂತರ



ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಮುದಾಯ ಅಭಿವೃದ್ಧಿ ವಿಭಾಗದಿಂದ ಬಂಟ್ವಾಳ ತಾಲೂಕು ಬರಿಮಾರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡ ದುರಸ್ತಿಗೆ ಮಂಜೂರಾದ 30 ಸಾವಿರ ರೂ. ಏನ ಮಂಜೂರಾತಿ ಪತ್ರವನ್ನು ಹಸ್ತಾಂತರಿಸಲಾಯಿತು.

ಗ್ರಾಮಾಭಿವೃದ್ಧಿ ಯೋಜನೆಯ ಮಾಣಿ ವಲಯದ ಮೇಲ್ವಿಚಾರಕಿ ಆಶಾ ಪಾರ್ವತಿ, ಬರಿಮಾರು ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ರೋಹಿಣಿ, ಸದಸ್ಯರಾದ ಶಶಿಪ್ರಭಾ, ನಳಿನಿ, ಶಾಲಾ ಮುಖ್ಯ ಶಿಕ್ಷಕಿ ಗಾಯತ್ರಿ, ಗ್ರಾಮಾಭಿವೃದ್ಧಿ ಯೋಜನೆಯ ಸೇವಾ ಪ್ರತಿನಿಧಿಗಳಾದ ಪುಷ್ಪಲತಾ, ಲಾವಣ್ಯ, ಬರಿಮಾರು ಒಕ್ಕೂಟದ ಕಾರ್ಯದರ್ಶಿ ಶಕುಂತಲಾ ಮತ್ತಿತರರಿದ್ದರು.



ಮಂಗಲಾಡಿ ಬಂಡ್ಯೋಡು ಸಮೀಪದ ವೀರನಗರ ಆದ್ಯ ಶ್ರೀ ನಾಗರಾಜ, ನಾಗಕನ್ನಿಕೆ, ರಕ್ತೇಶ್ವರಿ ಹಾಗೂ ಗುಳಿಗಜ್ಜ ಮತ್ತು ಕೊರಗಜ್ಜ ದೈವಗಳ ಸಾನಿಧ್ಯದಲ್ಲಿ ವಾರ್ಷಿಕ ದಿನಾಚರಣೆ ಮತ್ತು ಗುಳಿಗಜ್ಜ ಹಾಗೂ ಕೊರಗಜ್ಜ ದೈವಗಳ ಕೋಲೋತ್ಸವವು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಿತು.

ಯೆನೆಪೋಯ ವೈದ್ಯರ ತಂಡದಿಂದ ಅಂಗವನ್ನು ಉಳಿಸಿಕೊಳ್ಳುವ ಅತ್ಯಪರೂಪದ ಶಸ್ತ್ರಚಿಕಿತ್ಸೆ ಯಶಸ್ವಿ

ಉಳ್ಳಾಲ: ಕ್ಯಾನ್ಸರ್‌ನಿಂದ ಕಾಲು ಕಳೆದುಕೊಳ್ಳುವ ಭೀತಿಯಲ್ಲಿದ್ದ ವ್ಯಕ್ತಿಗೆ ಸವಾಲಿನ ಹಾಗೂ ಅತ್ಯಪರೂಪದ ಶಸ್ತ್ರಚಿಕಿತ್ಸೆ ನಡೆಸುವ ಮೂಲಕ ಯೆನೆಪೋಯ ವೈದ್ಯಕೀಯ ಕಾಲೇಜು ಆಸ್ಪತ್ರೆಯ ಕ್ಯಾನ್ಸರ್ ಶಸ್ತ್ರಚಿಕಿತ್ಸಾ ವಿಭಾಗದಿಂದ ಅಂಗವನ್ನು ಉಳಿಸಿಕೊಳ್ಳುವ ಐತಿಹಾಸಿಕ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನೆರವೇರಿದೆ.

ಈ ಶಸ್ತ್ರಚಿಕಿತ್ಸೆಯು ವೈದ್ಯಕೀಯ ಇತಿಹಾಸದಲ್ಲಿ ಭಾರತದಲ್ಲಿ ಪ್ರಪ್ರಥಮ ಬಾರಿಗೆ ನಡೆದಿದ್ದರೆ, ವಿಶ್ವ ಮಟ್ಟದಲ್ಲಿ ಮೂರನೆಯದ್ದಾಗಿ ದಾಖಲಾಗುವ ಮೂಲಕ ಯೆನೆಪೋಯ ಆಸ್ಪತ್ರೆ ಹೊಸ ಮೈಲುಗಲ್ಲು ಸ್ಥಾಪಿಸಿದೆ ಎಂದು ದೇರಳಕಟ್ಟೆ ಯೆನೆಪೋಯ ಆಸ್ಪತ್ರೆಯ ಕ್ಯಾನ್ಸರ್ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ. ಜಲಾಲುದ್ದೀನ್ ಅಕ್ಬರ್ ಹೇಳಿದರು.

ದೇರಳಕಟ್ಟೆಯ ಯೆನೆಪೋಯ ಆಸ್ಪತ್ರೆಯಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿ, ಹಾವೇರಿ ಮೂಲದ 39 ವರ್ಷದ ರೋಗಿಯೊಬ್ಬರು ತೊಡೆಯ ಮೂಳೆ ಮತ್ತು ಸ್ನಾಯುಗಳಲ್ಲಿ ಉಂಟಾದ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ಬಳಿಕ ಅವರ ಬಲ ಕಾಲನ್ನು ಸಂಪೂರ್ಣವಾಗಿ ತುಂಡರಿಸುವ ನಿರ್ಧಾರಕ್ಕೆ ಬರಲಾಗಿತ್ತು. ಈ ಹಿನ್ನೆಲೆ ಯೆನೆಪೋಯ ಆಸ್ಪತ್ರೆಗೆ ಬಂದ ರೋಗಿಗೆ, ಝುಲೇಖಾ ಯೆನೆಪೋಯ ಇನ್ಸ್ ಟಿಟ್ಯೂಟ್ ಆಫ್ ಆಂಕಾಲಜಿಯ ತಜ್ಞ ವೈದ್ಯರ ತಂಡವು ಹೊಸ ಪರಿಹಾರ ಕ್ರಮಕ್ಕೆ ಮುಂದಾಯಿತು. ಬಳಿಕ ಯೆನೆಪೋಯ ಆಸ್ಪತ್ರೆಯ ಕ್ಯಾನ್ಸರ್ ಶಸ್ತ್ರಚಿಕಿತ್ಸಾ ತಜ್ಞ ಡಾ.ಜಲಾಲುದ್ದೀನ್ ಅಕ್ಬರ್ ಅವರ ನೇತೃತ್ವದ ತಂಡ ಸವಾಲಿನ ಶಸ್ತ್ರಚಿಕಿತ್ಸೆಗೆ ಮುಂದಾಯಿತು.



13 ಗಂಟೆಗಳ ಕಾಲ ನಡೆದ ಶಸ್ತ್ರಚಿಕಿತ್ಸೆ

ಮಾ.10ರಂದು ಯೆನೆಪೋಯ ಪರಿಗಣಿತ ವಿವಿ ಸಹಕುಲಾಧಿಪತಿ ಡಾ.ಎಂ.ವಿಜಯಕುಮಾರ್ ಅವರ ಮಾರ್ಗದರ್ಶನದಲ್ಲಿ ಡಾ. ಜಲಾಲುದ್ದೀನ್ ಅಕ್ಬರ್ ನೇತೃತ್ವದ ತಂಡದಿಂದ ಸುಮಾರು 13 ಗಂಟೆಗಳ ಕಾಲ ನಡೆದ ಶಸ್ತ್ರಚಿಕಿತ್ಸೆಯಲ್ಲಿ ಕ್ಯಾನ್ಸರ್ ಪೀಡಿತ ತೊಡೆಯ ಮೂಳೆ, ಸ್ನಾಯುಗಳನ್ನು ಸಂಪೂರ್ಣವಾಗಿ ತೆಗೆದುಹಾಕಲಾಯಿತು. ಬಳಿಕ ಟೈಟಾನಿಯಂ ಮೆಗಾಪ್ರೊಸ್ಥೆಸಿಸ್ ಮೂಲಕ ಮೂಳೆಯನ್ನು ಪುನರ್ ನಿರ್ಮಿಸಲಾಗಿದ್ದು, ಮೈಕ್ರೋನ್ಯೂರೋವಾಸ್ಕ್ಯುಲರ್ ತಂತ್ರಜ್ಞಾನ ಬಳಸಿ ಎದೆಗೂಡೆಯ ಸ್ನಾಯುಗಳನ್ನು ವರ್ಗಾಯಿಸಿ ಅಂಗದ ಕಾರ್ಯಕ್ಷಮತೆಯನ್ನು ಪುನಃ ಸ್ಥಾಪಿಸಲಾಯಿತು. ಶಸ್ತ್ರಚಿಕಿತ್ಸೆಯ ನಂತರ ರೋಗಿ ಮತ್ತೆ ನಡೆಯಲು ಸಾಧ್ಯವಾಗಿರುವುದು ವೈದ್ಯಕೀಯ ಕ್ಷೇತ್ರದಲ್ಲಿ ಮಹತ್ವದ ಸಾಧನೆಯಾಗಿದೆ. ವೈದ್ಯರಾದ ಡಾ. ರೋಹನ್ ಶೆಟ್ಟಿ ಡಾ.ಎಚ್.ಟಿ. ಅಮರ್ ರಾವ್, ಡಾ. ನೂರ್ ಮೊಹಮ್ಮದ್, ಡಾ.ದೇವಿಪ್ರಸಾದ್,ಡಾ. ಚಾಂದಿನಿ, ಡಾ. ಶೃತಿ, ಡಾ. ತೇಜೇಶ್ ಕೃಷ್ಣ ಡಾ.ಲಕ್ಷ್ಮಿ ಶೆಣೈ, ಡಾ.ಅಭಿಷೇಕ್ ಶೆಟ್ಟಿ ಡಾ.ಲೋಕೇಶ್,ಡಾ.ಪ್ರೀತಿ ಹಾಗೂ ಡಾ. ಮಹಮ್ಮದ್ ಚೌಧರಿ ಸೇರಿದಂತೆ ಹಲವರು ಈ ಶಸ್ತ್ರ ಚಿಕಿತ್ಸೆಯಲ್ಲಿ ಭಾಗವಹಿಸಿದ್ದರೆಂದು ಡಾ. ಜಲಾಲುದ್ದೀನ್ ಅಕ್ಬರ್ ಮಾಹಿತಿ ನೀಡಿದರು.

ಯೆನೆಪೋಯ ವಿವಿ ಸಹಕುಲಾಧಿಪತಿ ಡಾ.ಎಂ. ವಿಜಯಕುಮಾರ್, ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಹಬೀಬ್ ರಹಮಾನ್,ಸಹಪ್ರಾಧ್ಯಾಪಕ ಡಾ. ರೋಹನ್ ಶೆಟ್ಟಿ ಡಾ.ಎಚ್.ಟಿ. ಅಮರ್ ರಾವ್, ಡಾ. ನೂರ್ ಮೊಹಮ್ಮದ್, ವೈದ್ಯಕೀಯ ಕ್ಯಾನ್ಸರ್ ತಜ್ಞ ಡಾ. ತೇಜೇಶ್ ಕೃಷ್ಣ ಡಾ.ಲಕ್ಷ್ಮಿ ಶೆಣೈ, ಇಂಟರ್‌ವೆನ್ಷನಲ್ ರೇಡಿಯೋಲಾಜಿಸ್ಟ್ ಡಾ.ಟಿ.ವಿ. ಸತೀಶ್ ಬಾಬು, ಆರ್ಥೋಪೆಡಿಕ್ಸ್ ವಿಭಾಗ ಸಹ ಪ್ರಾಧ್ಯಾಪಕ ಡಾ.ಅಭಿಷೇಕ್ ಶೆಟ್ಟಿ ಡಾ.ಲೋಕೇಶ್, ಪ್ಲಾಸ್ಟಿಕ್ ಸರ್ಜರಿ ವಿಭಾಗದ ಡಾ. ದೇವಿಪ್ರಸಾದ್, ಡಾ. ಚಾಂದಿನಿ,ಡಾ. ಶೃತಿ, ಕ್ಯಾನ್ಸರ್ ಅರವಳಿಕೆ ತಜ್ಞೆ ಡಾ. ಪ್ರೀತಿ, ಆಕ್ಯುಪೇಶನಲ್ ಥೆರಪಿಸ್ಟ್ ಡಾ.ಮಹಮ್ಮದ್ ಚೌಧರಿ ಇದ್ದರು.

> **ಈ ಸಾಧನೆಗೆ ಕೈಜೋಡಿಸಿದ ನಮ್ಮ ತಂಡದ ಎಲ್ಲ ಸದಸ್ಯರಿಗೂ ಹೃತ್ಪೂರ್ವಕ ಅಭಿನಂದನೆಗಳು. ಈ ಶಸ್ತ್ರಚಿಕಿತ್ಸೆ ಬಹಳ ಸಂಕೀರ್ಣ ಮತ್ತು ಸವಾಲಿನದ್ದಾಗಿದೆ. ಇದು ನಮ್ಮ ದೇಶದಲ್ಲೇ ಮೊದಲ ಸಾಧನೆಯೆಂದು ಹೇಳಬಹುದು.**
>
> • **ಡಾ. ಎಂ. ವಿಜಯಕುಮಾರ್,** ಸಹಕುಲಾಧಿಪತಿ, ಯೆನೆಪೋಯ ವಿವಿ

ಸಾಧನೆಗೆ ಮೆಚ್ಚುಗೆ

ಯೆನೆಪೋಯ ಪರಿಗಣಿತ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಯೆನೆಪೋಯ ಅಬ್ದುಲ್ಲಾ ಕುಂಞಿ, ಸಹಕುಲಾಧಿಪತಿ ಫರ್ಹಾದ್ ಯೆನೆಪೋಯ, ಡಾ.ಎಂ. ವಿಜಯಕುಮಾರ್ ಹಾಗೂ ಉಪಕುಲಪತಿ ಡಾ.ಗಂಗಾಧರ ಸೋಮಯಾಜಿ ಅವರು ವೈದ್ಯರ ತಂಡದ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸುತ್ತಮುತ್ತ

ಮಳೆಗಾಲ ಪೂರ್ವ ಸ್ವಚ್ಛತಾ ಕಾರ್ಯ: ಇಂದು ಸಭೆ

ಕಾಸರಗೋಡು: ಜಿಲ್ಲಾ ಮಾಹಿತಿ ಕಚೇರಿ ಪಿಆರ್‌ಡಿ ಸಭಾಂಗಣದಲ್ಲಿ ಮಳೆಗಾಲ ಪೂರ್ವ ಸ್ವಚ್ಛತಾ ಚಟುವಟಿಕೆಗಳ ಕುರಿತು ಚರ್ಚಿಸಲು ಏ.30ರಂದು ಅಪರಾಹ್ನ 2.30ಕ್ಕೆ ಸಭೆ ನಡೆಯಲಿದೆ. ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಮುಖ್ಯಸ್ಥರು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಉಪ ಕಲೆಕ್ಟರ್ ಲಿಪು ಎಸ್. ಲಾರೆನ್ಸ್ ಅಧ್ಯಕ್ಷತೆ ವಹಿಸಲಿದ್ದಾರೆ.

ಇಂದು ಶಿಲಾನ್ಯಾಸ ಕಾರ್ಯಕ್ರಮ

ಬದಿಯಡ್ಕ: ಪಾತೇರಿ ಶ್ರೀ ಶಂಕರನಾರಾಯಣ ಕ್ಷೇತ್ರದ ಗರ್ಭಗುಡಿಯ ಶಿಲಾನ್ಯಾಸ ಕಾರ್ಯಕ್ರಮವು ಏ.30ರಂದು ಬೆಳಗ್ಗೆ 8.02ರ ಶುಭಮುಹೂರ್ತದಲ್ಲಿ ಬ್ರಹ್ಮಶ್ರೀ ದೇಲಂಪಾಡಿ ಗಣೇಶ ತಂತ್ರಿಗಳ ನೇತೃತ್ವದಲ್ಲಿ ಜರಗಲಿದೆ. ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಶಿಲಾನ್ಯಾಸ ನೆರವೇರಿಸುವರು. ಧಾರ್ಮಿಕ ಮುಖಂಡರು ಸಹಿತ ಹಲವಾರು ಮಂದಿ ಗಣ್ಯರು ಭಾಗವಹಿಸುವರು.

ಇಂದು ಕಾಸರಗೋಡು ಹೊಸ ಬಸ್ ನಿಲ್ದಾಣ ಶುಚೀಕರಣ

ಕಾಸರಗೋಡು: ಕಾಸರಗೋಡು ನಗರದ ಶುಚಿತ್ವ ಹಾಗೂ ಆರೋಗ್ಯ ಖಚಿತಪಡಿಸಲು ಮಳೆಗಾಲ ಪೂರ್ವ ಶುಚೀಕರಣದ ಅಂಗವಾಗಿ ಕಾಸರಗೋಡು ನಗರಸಭೆ ಆಡಳಿತ ಸಮಿತಿ ನೇತೃತ್ವದಲ್ಲಿ ಏ.30ರಂದು ಬೆಳಗ್ಗೆ 8.30ರಿಂದ ಹೊಸ ಬಸ್ ನಿಲ್ದಾಣ ಪರಿಸರದಲ್ಲಿ ಶುಚೀಕರಣ ನಡೆಸಲಾಗುವುದು. ಜನಪ್ರತಿನಿಧಿಗಳು, ಕುಟುಂಬಶ್ರೀ ಸದಸ್ಯೆಯರು, ನಗರಸಭಾ ನೌಕರರು,ವ್ಯಾಪಾರಿ ವ್ಯವಸಾಯಿಗಳ, ಯುವಜನ ಸಂಘಟನೆಗಳು, ಎನ್‌ಸಿಸಿ, ಎನ್‌ಎಸ್ ಎಸ್ ಕಾರ್ಯಕರ್ತರು, ರೆಸಿಡೆಂಟ್ ಅಸೋಸಿಯೇಶನ್ ಸದಸ್ಯರು, ಸಾಮಾಜಿಕ ರಾಜಕೀಯ ಕಾರ್ಯಕರ್ತರು, ಸ್ವಯಂ ಸೇವಾ ಸಂಘಗಳ ಕಾರ್ಯಕರ್ತರು ಭಾಗವಹಿಸುವರೆಂದು ನಗರಸಭಾ ಚೆಯರ್‌ಪರ್ಸನ್ ಶಾಹಿನಾ ಸಲೀಂ ತಿಳಿಸಿದ್ದಾರೆ.

ಇಂದು ಬೆಳ್ಳೂರು ಕ್ಷೇತ್ರದಲ್ಲಿ ಮಹೋತ್ಸವ

ಮುಳ್ಳೇರಿಯ: ಬೆಳ್ಳೂರು ಶ್ರೀ ಮಹಾವಿಷ್ಣು ದೇವಾಲಯದಲ್ಲಿ 10ನೇ ಪ್ರತಿಷ್ಠಾ ವಾರ್ಷಿಕ ಮಹೋತ್ಸವ ಏ.30ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಬೆಳಗ್ಗೆ 7ಗಂಟೆಗೆ ಗಣಪತಿ ಹೋಮ, 8ರಿಂದ ಭಜನೆ, 10ಕ್ಕೆ ನವಕ ಕಲಶ, 10.30ಕ್ಕೆ ತಂಬಿಲ ಸೇವೆ, ಬಲಿವಾಡು ಕೂಟ, ಮಧ್ಯಾಹ್ನ 12ರಿಂದ ಮಹಾಪೂಜೆ, ಅನ್ನ ಸಂತರ್ಪಣೆ, 1.30ರಿಂದ ಸಾಹಿತ್ಯ ಗಾನ ನೃತ್ಯ ವೈಭವ, ಸಂಜೆ 6ರಿಂದ ಭಜನೆ, ರಾತ್ರಿ 8.30ಕ್ಕೆ ದುರ್ಗಾಪೂಜೆ, ದುರ್ಗಾಹೋಮ, ವಸಂತ ಪೂಜೆ ನೆರವೇರಲಿದೆ.

ನೆಕ್ರಾಜೆ ಶ್ರೀ ಕ್ಷೇತ್ರದಲ್ಲಿ ಸಹಸ್ರನಾಮ ಪಾರಾಯಣ

ಮುಳ್ಳೇರಿಯ: ನೆಕ್ರಾಜೆ ಶ್ರೀ ಸಂತಾನ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಮೇ 12ರಂದು ಲೋಕ ಕಲ್ಯಾಣಾರ್ಥ ಸಾವಿರ ಮಂದಿ ಭಕ್ತರು ಏಕಕಾಲದಲ್ಲಿ ವಿಷ್ಣು ಸಹಸ್ರನಾಮ ಪಾರಾಯಣ ನಡೆಸಲಿದ್ದಾರೆ. ಶ್ರೀ ಕ್ಷೇತ್ರದ ಪ್ರಕಟಣೆಯಲ್ಲಿ ವಿನಂತಿಸಲಾಗಿದೆ.

ನಾಳೆ ಬೀಳ್ಕೊಡುಗೆ, ಪೂರ್ವ ವಿದ್ಯಾರ್ಥಿ ಸಂಗಮ

ಕಾಸರಗೋಡು: ಚೆಮ್ನಾಡ್ ಜಿಎಚ್‌ಎಸ್ ಶಾಲೆಯಲ್ಲಿ 29 ವರ್ಷಗಳ ವಿಶಿಷ್ಟ ಸೇವೆ ಬಳಿಕ ನಿವೃತ್ತಿ ಹೊಂದುವ ಪ್ರಸ್ತುತ ಶಾಲೆ ಪ್ರಾಂಶುಪಾಲ ಡಾ. ಸುಕುಮಾರನ್ ಮಾಸ್ಟರ್ ಹಾಗೂ ಇದೇ ಶಾಲೆಯಿಂದ ನಿವೃತ್ತಿ ಹೊಂದುವ ಇಂಗ್ಲೀಷ್ ಅಧ್ಯಾಪಿಕೆ ಆರ್. ಶ್ರೀಲತಾ ಟೀಚರ್‌ಗೆ ಬೀಳ್ಕೊಡುಗೆ ಸಮಾರಂಭ ಮತ್ತು ಪೂರ್ವ ವಿದ್ಯಾರ್ಥಿ ಸಂಗಮ ಕಾರ್ಯಕ್ರಮ ಮೇ 1ರಂದು ಸಂಜೆ 5ರಿಂದ ಶಾಲಾ ಸಭಾಂಗಣದಲ್ಲಿ 'ಸಿಜೋತ್ಸವ್-26' ಎಂಬ ಹೆಸರಲ್ಲಿ ನಡೆಯಲಿದೆ. ಪ್ರಸ್ತುತ ಕಾರ್ಯಕ್ರಮದಲ್ಲಿ ಪ್ರಸ್ತುತ ಶಾಲೆಯ ಪೂರ್ವ ವಿದ್ಯಾರ್ಥಿ , ಚಲನಚಿತ್ರ ತಾರೆ ರಾಜೇಶ್ ಮಾಧವನ್ ಅತಿಥಿಗಳಾಗಿರುವರು ಎಂದು ಕಾರ್ಯಕ್ರಮದ ಸಂಘಟಕರು ಬುಧವಾರ ಪ್ರೆಸ್ ಕ್ಲಬ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಮಾಜಿ ಸಚಿವ ಹಾಗೂ ಪ್ರಸ್ತುತ ಶಾಲೆ ಮೆನೇಜರ್ ಸಿ.ಟಿ.ಅಹಮ್ಮದಾಲಿ ಕಾರ್ಯಕ್ರಮ ಉದ್ಘಾಟಿಸುವರು. ಚೆಮ್ನಾಡ್ ಗ್ರಾ.ಪಂ.ಅಧ್ಯಕ್ಷೆ ಆಯಿಷಾ ಅಬೂಬಕ್ಕರ್ ನಿವೃತ್ತರನ್ನು ಸನ್ಮಾನಿಸುವರು. ವಿವಿಧ ಕ್ಷೇತ್ರಗಳ ಗಣ್ಯರು ಶುಭ ಹಾರೈಸುವರು. ಬಳಿಕ ಜಿಲ್ಲಾ, ರಾಜ್ಯ ಯುವಜನೋತ್ಸವದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಂದ ಮೆಗಾ ಆರ್ಕೆಸ್ಟ್ರಾ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು.
ಕೆ.ವಿಜಯನ್, ಬಿ.ಎಚ್.ಅಬ್ದುಲ್‌ಖಾದರ್, ಖಲೀಲುಲ್ಲಾಹ್, ಜಿ.ಜಿ.ಥೋಮಸ್, ಫಾರೂಕ್ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮತ ಎಣಿಕೆ: ಮೇ 2ರಂದು ಅಧಿಕಾರಿಗಳಿಗೆ ತರಬೇತಿ

ಕಾಸರಗೋಡು: ನಾಯನ್ಮಾರಮೂಲೆ ಟಿಐಎಚ್ ಎಸ್‌ಎಸ್‌ನಲ್ಲಿ ವಿಧಾನಸಭಾ ಚುನಾವಣೆ ಅಂಗವಾಗಿ ಮತ ಎಣಿಕೆಗೆ ಸಂಬಂಧಿಸಿದ ಅಧಿಕಾರಿಗಳಿಗೆ ಮೊದಲ ಹಂತದ ತರಬೇತಿಯನ್ನು ಬುಧವಾರ ಆಯೋಜಿಸಲಾಯಿತು. ಸೂಕ್ಷ್ಮ ವೀಕ್ಷಕರು, ಎಣಿಕೆ ಅಧೀಕ್ಷಕರು, ಎಣಿಕೆ ಸಹಾಯಕರು ಮತ್ತು ಸಹಾಯಕ ಚುನಾವಣಾ ಅಧಿಕಾರಿಗಳಿಗೆ ಈ ಸಂದರ್ಭ ತರಬೇತಿ ನೀಡಲಾಯಿತು. ಇದೇ ವೇಳೆ ಅಧಿಕಾರಿಗಳಿಗೆ ಎರಡನೇ ಹಂತದ ತರಬೇತಿಯು ಮೇ 2 ರಂದು ನಾಯನ್ಮಾರಮೂಲೆ ಟಿಐಎಚ್‌ಎಸ್ ಎಸ್‌ನಲ್ಲಿ ನಡೆಯಲಿದೆ. ಮೊದಲ ಹಂತದ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಲು ಸಾಧ್ಯವಾ ಗದ ಅಧಿಕಾರಿಗಳಿಗೆ ಏ.30ರಂದು ಬೆಳಿಗ್ಗೆ 10 ಗಂಟೆಗೆ ಕಾಸರಗೋಡು ಕಲೆಕ್ಟರೇಟ್‌ನ ಮಿನಿ ಕಾನ್ಫರೆನ್ಸ್ ಹಾಲ್‌ನಲ್ಲಿ ತರಬೇತಿ ಹಮ್ಮಿಕೊಳ್ಳಲಾಗಿದೆ.

ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ದೇವಾಲಯದಲ್ಲಿ ಬ್ರಹ್ಮಕಲಶ | ಮಾತೃಸಂಗಮ ಕಾರ್ಯಕ್ರಮ

ಮಮತೆ -ನೈತಿಕತೆ ಭಾರತೀಯ ತಾಯಂದಿರ ಶಕ್ತಿ: ಸಾಧ್ವಿ

ಕಾಸರಗೋಡು: ನಮ್ಮ ಸಮಾಜವನ್ನು ಆರೋಗ್ಯ ಪೂರ್ಣವಾಗಿಸುವಲ್ಲಿ ತಾಯಂದಿರ ಪಾತ್ರ ಅಮೋಘವಾದುದು. ಮಮತೆ ಮತ್ತು ನೈತಿಕತೆ ಅವರ ಮೂಲಶಕ್ತಿ ಎಂದು ಒಡಿಯೂರು ಗುರುದೇವದತ್ತ ಸಂಸ್ಥಾನದ ಸಾಧ್ವಿ ಶ್ರೀ ಮಾತಾನಂದಮಯೀ ಹೇಳಿದ್ದಾರೆ.



ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ದೇವಳದಲ್ಲಿ ನಡೆಯುತ್ತಿರುವ ಬ್ರಹ್ಮಕಲಶ ಸಂಬಂಧ ಮಂಗಳವಾರ ನಡೆದ ಮಾತೃಸಂಗಮ ಕಾರ್ಯಕ್ರಮ ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು.
ಹಿಂದೂ ಐಕ್ಯವೇದಿಕೆಯ ರಾಜ್ಯ ಉಪಾಧ್ಯಕ್ಷೆ ನಿಶಾ ಟೀಚರ್ ಕಣ್ಣೂರು ಧಾರ್ಮಿಕ ಭಾಷಣ ಮಾಡಿದರು. ಬ್ರಹ್ಮಕಲಶ ಸಮಿತಿ ಅಧ್ಯಕ್ಷ ಮತ್ತು ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ ಡಾ.ಕೆ. ಎನ್.ವೆಂಕಟ್ರಮಣ ಹೊಳ್ಳ ಮತ್ತು ರೂಪಕಲಾ ದಂಪತಿಗೆ ಗೌರವಾರ್ಪಣೆ ನಡೆಯಿತು.
ಖ್ಯಾತ ನಾಟಿವೈದ್ಯೆ ಯಮುನಾ ಸುಬ್ಬಣ್ಣ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಬ್ರಹ್ಮಕಲಶ ಮಾತೃ ಸಮಿತಿ ಅಧ್ಯಕ್ಷೆ ರಾಧಿಕಾ ರಂಜಿತ್ ಅಧ್ಯಕ್ಷತೆ ವಹಿಸಿದ್ದರು. ಮಧೂರು ಗ್ರಾ.ಪಂ.ಅಧ್ಯಕ್ಷೆ ಸುಜ್ಞಾನಿ ಶ್ಯಾನುಭೋಗ್, ಸ್ಥಾಯೀ ಸಮಿತಿ ಅಧ್ಯಕ್ಷೆ ಪುಷ್ಪಾ ಗೋಪಾಲನ್, ಜಿಲ್ಲಾ ವೈದ್ಯಾಧಿಕಾರಿ ಡಾ.ಜಯಶ್ರೀ ನಾಗರಾಜ್, ಶ್ರೀ ನಾರಾಯಣ ಗುರು ವನಿತಾ ಸಹಕಾರಿ ಸೊಸೈಟಿ ಅಧ್ಯಕ್ಷೆ ಸರೋಜಿನಿ ಸುಬ್ಬಣ್ಣ ಪೂಜಾರಿ, ಬ್ರಹ್ಮಕಲಶ ಸಮಿತಿ ಗೌರವ ಸಲಹೆಗಾರೆ ಮೀರಾ ಕಾಮತ್, ಮುಖ್ಯ ಶಿಕ್ಷಕಿ ಯಶೋದಾ ಟೀಚರ್, ನಗರಸಭೆ ಸದಸ್ಯೆ ಶಾರದಾ, ಪುಷ್ಪಲತಾ ಮತ್ತಿತರರಿದ್ದರು.
ಮಾತೃ ಸಮಿತಿ ಪ್ರಧಾನ ಕಾರ್ಯದರ್ಶಿ ದೀಪಾ ರಾಜೇಶ್ ಸ್ವಾಗತಿಸಿ, ಜ್ಯೋತಿ ಸಂತೋಷ್ ವಂದಿಸಿ, ಹರ್ಷಿತಾ ಕಾಳ್ಯಂಗಾಡು ಪ್ರಸ್ತಾವನೆಗೈದರು. ಮಮತಾ ರಂಜಿತ್ ನಿರೂಪಿಸಿದರು. ಬಳಿಕ ಮಂಜೇಶ್ವರ ಬಾಲಕೃಷ್ಣ ಮಾಸ್ಟರ್ ಶಿಷ್ಯ ವೃಂದದಿಂದ ನಾಟ್ಯೋತ್ಸವ ನಡೆಯಿತು.

> **ತಾಯಂದಿರ ಪಾತ್ರ ಮಹತ್ವದ್ದು**
> ತಮ್ಮ ಮನೆಯನ್ನೇ ದೇವಾಲಯವನ್ನಾಗಿಸುವ, ಬದುಕಿನಲ್ಲಿ ದೇವಾಲಯಗಳನ್ನು ಪ್ರಧಾನ ಕೇಂದ್ರವಾ ಗಿಸುವ ಕಲೆ ತಾಯಂದಿರಿಗಿದೆ. ತಾವು ಧಾರ್ಮಿಕವಾಗಿ ತೊಡಗಿಕೊಳ್ಳುವುದರ ಜೊತೆಗೆ ಮುಂದಿನ ಪೀಳಿಗೆ ಯನ್ನೂ ಆ ನಿಟ್ಟಿನಲ್ಲಿ ಸಜ್ಜುಗೊಳಿಸುವ ದೊಡ್ಡ ಹೊಣೆಯನ್ನು ತಾಯಂದಿರು ಮಾಡಬೇಕು.
> • ಸಾಧ್ವಿ ಶ್ರೀ ಮಾತಾನಂದಮಯಿ

ಕಾಳ್ಯಂಗಾಡು ಶ್ರೀದೇವಿಯ ಪ್ರತಿಷ್ಠೆ

ಕಾಸರಗೋಡು: ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ದೇವಳದಲ್ಲಿ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶ ವಿವಿಧ ವೈದಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಆರಂಭಗೊಂಡಿದ್ದು, ಬುಧವಾರ ಪ್ರಧಾನ ಆರಾಧನಾ ಮೂರ್ತಿಯಾಗಿರುವ ಶ್ರೀದೇವಿಯ ಪ್ರತಿಷ್ಠೆ ನಡೆಯಿತು. ತಂತ್ರಿವರ್ಯ ಶ್ರೀಕೃಷ್ಣ ಗುರೂಜಿ ಕುಕ್ಕಾಜೆ ನೇತೃತ್ವ ಜರಗಿತು. ಕಾರ್ಯಕ್ರಮ ಅಂಗವಾಗಿ ಗಣಪತಿ ಹೋಮ, ಪ್ರತಿಷ್ಠಾಂಗ ಹೋಮ, ಶಿಖರ ಪೂಜೆ, ಜೀವಕಲಶ ಪೂಜೆ, ಜೀವಕಲಶಾಭಿಷೇಕ, ಮಹಾ ಪೂಜೆ, ಕವಾಟಬಂಧನ ನಡೆದವು. ದೇವಳ ಮೊಕ್ತೇಸರ ಅಚ್ಯುತ ಕಾಳ್ಯಂಗಾಡು, ಧರ್ಮದರ್ಶಿ ನಾರಾಯಣ ಕಾಳ್ಯಂಗಾಡು, ಬ್ರಹ್ಮಕಲಶ ಸಮಿತಿ ಅಧ್ಯಕ್ಷ ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ, ಪ್ರಧಾನ ಕಾರ್ಯದರ್ಶಿ ದಯಾನಂದ ಕೊಳ್ಕೆಬೈಲು, ಕಾರ್ಯದರ್ಶಿಗಳಾದ ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿಗಳಾದ ರಂಜಿತ್ ಮನ್ನಿಪ್ಪಾಡಿ, ಗೋವಿಂದ ನಾಯ್ಕ್ ಕಾಳ್ಯಂಗಾಡು, ಕೋಶಾಧಿಕಾರಿ ಶಾಂತಕುಮಾರ್, ಜೊತೆ ಕಾರ್ಯದರ್ಶಿ ಪುನೀತ್ ಕೆಮ್ಮಣ್ಣು , ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಮೋಹನರಾಜ್ ಕಾಳ್ಯಂಗಾಡು, ಪ್ರಧಾನ ಕಾರ್ಯದರ್ಶಿ ಹರೀಶ್ ಕೆ.ಆರ್., ರಘುಮೀಪುಗಿರಿ ಮತ್ತಿತರರಿದ್ದರು.



ಕಾಳ್ಯಂಗಾಡು ದೈವ, ದೇವರ ಪ್ರತಿಷ್ಠೆ



ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ದೇವಾಲಯದಲ್ಲಿ ಮಂಗಳವಾರ ನಾಗರಾಜ ಹಾಗೂ ಪರಿವಾರ ದೈವ, ದೇವರುಗಳ ಪ್ರತಿಷ್ಠೆ ನಡೆಯಿತು. ತಂತ್ರಿವರ್ಯ ಶ್ರೀಕೃಷ್ಣ ಗುರೂಜಿ ಕುಕ್ಕಾಜೆ ನೇತೃತ್ವದಲ್ಲಿ ಜರಗಿತು.

ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ದೇವಳದಲ್ಲಿ ಭಜನಾ ಸಂಕೀರ್ತನೆ



ಕಾಸರಗೋಡು: ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ದೇವಾಲಯದಲ್ಲಿ ನಡೆಯುತ್ತಿರುವ ಬ್ರಹ್ಮಕಲಶ ಸಂಬಂಧ ಊರ ಪರವೂರ ನೂರಾರು ಭಜನಾ ತಂಡಗಳು ಇಲ್ಲಿ ಸಂಕೀರ್ತನೆ ನಡೆಸಿ ಕೊಡುತ್ತಿದ್ದಾರೆ. ಭಜನೆಗೆಂದೇ ಇಲ್ಲಿ ಸಿದ್ಧಪಡಿ ಸಿರುವ ಶ್ರೀ ಸರಸ್ವತಿ ಮಂಟಪದಲ್ಲಿ ಬೆರಳೆಣಿಕೆ ಇತರ ಕಾರ್ಯಕ್ರಮ ಬಿಟ್ಟರೆ ಬಹುಪಾಲು ಭಜನೆಗಳೇ ನಡೆಯುತ್ತಿವೆ.
ನವವಿಧ ಭಕ್ತಿಗಳಲ್ಲಿ ಅಗ್ರಮಾನ್ಯವಾಗಿರುವ ಶ್ರವಣ ಮತ್ತು ಕೀರ್ತನಗಳಿಗೆ ಮಹತ್ವಿಕೆಯಿದ್ದು,ಮೂಕಾಂಬಿಕಾಕ್ಷೇತ್ರಕ್ಕೆಭಜನೆಯೊಂದಿಗಿರುವ ಸನಾತನ ಸಂಬಂಧವನ್ನೂ ಈ ಕ್ರಮ ಸಾಬೀತುಪಡಿಸಿದೆ. ಆಗಮಿಸಿದ ಎಲ್ಲಾ ಸಂಕೀರ್ತನೆಕಾರರಿಗೆ ಶಾಲು, ತಂಡಗಳಿಗೆ ಸ್ಮರಣಿಕೆ ನೀಡಿ ಗೌರವಿಸಲಾಗುತ್ತಿದೆ. ಭಜನೆ ಸಮಿತಿಯ ಪದಾಧಿಕಾರಿಗಳಾದ ಗಣೇಶ ಕೇಳುಗುಡ್ಡೆ, ತಿರುಮಲೇಶ ಆಚಾರ್ಯ, ನಾರಾಯಣ ಕಾಳ್ಯಂಗಾಡು, ರೋಹಿತ್ ಮಧೂರು ಸಹಿತ ಮಂದಿ ಈ ನಿಟ್ಟಿನಲ್ಲಿ ಅಹೋರಾತ್ರಿ ಶ್ರಮಿಸುತ್ತಿದ್ದಾರೆ.
ಮೊಕ್ತೇಸರ ಅಚ್ಯುತ ಕಾಳ್ಯಂಗಾಡು, ಧರ್ಮದರ್ಶಿ ನಾರಾಯಣ ಕಾಳ್ಯಂಗಾಡು, ಬ್ರಹ್ಮಕಲಶಸಮಿತಿ ಅಧ್ಯಕ್ಷಮತ್ತು ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ ಡಾ.ಕೆ.ಎನ್. ವೆಂಕಟ್ರಮಣ ಹೊಳ್ಳ, ಸಲಹಾ ಸಮಿತಿಯ ರಘು ಮೀಪುಗುರಿ, ಭಾಸ್ಕರ ಕಾಳ್ಯಂಗಾಡು, ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ದಯಾನಂದ ಕೊಳ್ಕೆಬೈಲು, ಕಾರ್ಯದರ್ಶಿಗಳಾದ ರಂಜಿತ್ ಮನ್ನಿಪ್ಪಾಡಿ, ಗೋವಿಂದ ನಾಯ್ಕ್ ಕಾಳ್ಯಂಗಾಡು, ಕೋಶಾಧಿಕಾರಿ ಶಾಂತಕುಮಾರ್ ಮುಂಡ್ಯತ್ತಡ್ಕ, ಜೊತೆ ಕೋಶಾಧಿಕಾರಿ ಪುನೀತ್ ಕೆಮ್ಮಣ್ಣು, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಮೋಹನರಾಜ್ ಕಾಳ್ಯಂಗಾಡು, ಪ್ರಧಾನ ಕಾರ್ಯದರ್ಶಿ ಹರೀಶ್ ಕೆ.ಆರ್., ಮಾತೃ ಸಮಿತಿ ಮತ್ತು ಇತರ ಸಮಿತಿಗಳ ಪದಾಧಿಕಾರಿಗಳು ಮತ್ತಿತರರಿದ್ದರು.

ಕಾವೇರಿ ಜೆಎಲ್‌ಜಿ: ವರ್ಕಾಡಿಯಲ್ಲಿ ಕಲ್ಲಂಗಡಿ ಬೆಳೆ ಕೊಯ್ಲು ಉದ್ಘಾಟನೆ



ಮಂಜೇಶ್ವರ: ವರ್ಕಾಡಿ ಗ್ರಾ.ಪಂ.ವ್ಯಾಪ್ತಿಯಲ್ಲಿ ಕುಟುಂಬಶ್ರೀ ಜೆಎಲ್‌ಜಿ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಗುಂಪಾದ ಕಾವೇರಿ ಜಾಯಿಂಟ್ ಲೈಬಿಲಿಟಿ ಗ್ರೂಪ್ ವತಿಯಿಂದ ಬೆಳೆದ ಕಲ್ಲಂಗಡಿ ಬೆಳೆ ಕೊಯ್ಲು ಕಾರ್ಯಕ್ರಮ ನಡೆಯಿತು.
ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲೀಕರಣ ಮತ್ತು ಕೃಷಿ ಚಟುವಟಿಕೆಗಳಲ್ಲಿ ಅವರ ಸಕ್ರಿಯ ಭಾಗವಹಿಸುವಿಕೆಯನ್ನು ಉತ್ತೇಜಿಸುವ ಉದ್ದೇಶ ಹೊಂದಿತ್ತು. ಕಾರ್ಯಕ್ರಮವನ್ನು ಕುಟುಂಬಶ್ರೀ ಜಿಲ್ಲಾ ಮಿಷನ್ ಕೋ ಓರ್ಡಿನೇಟರ್ ರತೀಶ್ ಕೊಯ್ಲು ಕಾರ್ಯಕ್ಕೆ ಚಾಲನೆ ನೀಡುವ ಮೂಲಕ ಉದ್ಘಾಟಿಸಿ ಮಾತನಾಡಿ, ಜೆಎಲ್ ಜಿಗಳ ಮೂಲಕ ಮಹಿಳೆಯರು ಕೃಷಿ ಕ್ಷೇತ್ರದಲ್ಲಿ ಆತ್ಮನಿರ್ಭರರಾಗುತ್ತಿರುವುದು ಸಂತೋಷದ ವಿಷಯವಾಗಿದೆ. ಅಲ್ಲದೆ ಇಂತಹ ಉಪಕ್ರಮಗಳು ಗ್ರಾಮೀಣ ಆರ್ಥಿಕತೆಗೆ ಮಹತ್ವದ ಕೊಡುಗೆ ನೀಡುತ್ತವೆ ಎಂದರು.
ಸಿಡಿಎಸ್ ಅಧ್ಯಕ್ಷೆ ವಿಜಯಲಕ್ಷ್ಮಿ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭ ಅಸಿಸ್ಟೆಂಟ್ ಸೆಕ್ರೆಟರಿ ಐತಪ್ಪ ನಾಯ್ಕ್, ಅಕೌಂಟೆಂಟ್ ಉದಯ ಕುಮಾರ್, ಸಚಿನ್ ಮತ್ತು ರೇಷ್ಮಾ, ಸಿಆರ್‌ಪಿ, ಎಎಚ್ ಸಿಆರ್‌ಪಿಗಳು, ಸಿಡಿಎಸ್ ಸದಸ್ಯರು, ಜೆಎಲ್‌ಜಿ ಸದಸ್ಯರು ಉಪಸ್ಥಿತರಿದ್ದರು.
ಮಹಿಳಾ ಗುಂಪುಗಳ ಕೃಷಿ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಮಾಹಿತಿ
ಕಾರ್ಯಕ್ರಮದ ನಂತರ ಅಧಿಕಾರಿಗಳು ಮತ್ತು ಸದಸ್ಯರು ನಲ್ಲಂಗಿ ವಾರ್ಡ್‌ನಲ್ಲಿರುವ ಕಾವಿ ಜೆಎಲ್‌ಜಿ ವತಿಯಿಂದ ಬೆಳೆದ ಹಾಗಲಕಾಯಿ ಮತ್ತು ಹಿರೇಕಾಯಿ ತೋಟಗಳಿಗೆ ಭೇಟಿ ನೀಡಿ ಬೆಳೆಗಳ ಸ್ಥಿತಿ, ನಿರ್ವಹಣೆ ಹಾಗೂ ಉತ್ಪಾದನಾ ವಿಧಾನಗಳ ಬಗ್ಗೆ ಮಾಹಿತಿ ಪಡೆದುಕೊಂಡರು.
ತಾಂತ್ರಿಕ ಮಾರ್ಗದರ್ಶನ ಮತ್ತು ಪ್ರೋತ್ಸಾಹ ನೀಡಲಾಯಿತು.

ನವಪುರಂನಲ್ಲಿ ಬಹುಭಾಷಾ ಕವಿ ಸಂಗಮ, ಪುಸ್ತಕ ಸಮರ್ಪಣೆ, ಪ್ರಶಸ್ತಿ ಪ್ರದಾನ, ಸನ್ಮಾನ



ಪೆರ್ಲ: ವೈವಿಧ್ಯಮಯ ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಜನಮನ ಸೆಳೆದ ಸವಿಹೃದಯದ ಕವಿ ಮಿತ್ರರು ವೇದಿಕೆ ಪೆರ್ಲ ಇದರ ವಿನೂತನ ಕಾರ್ಯಕ್ರಮವಾದ ಬಹು ಭಾಷಾ ಕವಿ ಸಂಗಮ , ಪುಸ್ತಕ ಸಮರ್ಪಣೆ ಕಣ್ಣೂರುಜಿಲ್ಲೆಯಚೆರುಪುಳಸಮೀಪನವಪುರಂ ಜಾತ್ಯಾತೀತ ಪುಸ್ತಕ ದೇವಳದಲಿ ಜರಗಿತು.
ಪೆರ್ಲದಿಂದಹೊರಟಕಾಸರಗೋಡುಜಿಲ್ಲೆಯ 35 ಮಂದಿ ಸಾಹಿತಿ ಕಲಾವಿದರ ತಂಡವು ಸಾಹಿತ್ಯಯಾತ್ರೆ ಮೂಲಕ ನವಪುರಕ್ಕೆ ತಲುಪಿ ಅಕ್ಷರೋತ್ಸವದಲ್ಲಿ ಭಾಗವಹಿಸಿತು. ವೇದಿಕೆ ಸಂಚಾಲಕ ಸುಭಾಷ್ ಪೆರ್ಲ ಸಾರಥ್ಯದಲ್ಲಿ ಸಂಯೋಜಿಸಟ್ಟ ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತರು ಭಾಗವಹಿಸಿದ್ದರು.
ಅಧ್ಯಕ್ಷತೆಯನ್ನು ನವಪುರಂ ದೇವಾಲಯದ ಸ್ಥಾಪಕ ಹಾಗೂ ವ್ಯವಸ್ಥಾಪಕ ಪ್ರಾಪೊಯಿಲ್ ನಾರಾಯಣನ್ ಮಾಸ್ಟರ್ ವಹಿಸಿದ್ದರು. ಪ್ರಸಿದ್ಧಸಾಹಿತಿ ಪಿ.ಕೆ.ಗೋಪಿ ಉದ್ಘಾಟಿಸಿದರು. ಹಿರಿಯ ಕವಿ, ಸಾಹಿತಿ, ಪತ್ರಕರ್ತ ರಾಧಾಕೃಷ್ಣ ಕೆ. ಉಳಿಯತ್ತಡ್ಕ ಅತಿಥಿಯಾಗಿದ್ದರು.
ಸುಳ್ಯ ತಾ.ಚುಟುಕುಸಾಹಿತ್ಯ ಪರಿಷತ್‌ನ ಅಧ್ಯಕ್ಷೆ ಅಶ್ವಿನಿ ಕೊಡಿಬೈಲು, ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಜಯನಂದ ಪೆರಾಜೆ ಹಿತನುಡಿಗಳನ್ನಾಡಿದರು. ಪಿ.ಕೆ.ಗೋಪಿ ಪ್ರಶಸ್ತಿ ಪುರಸ್ಕಾರ ಪ್ರದಾನ ಮಾಡಿದರು.

ವಿಶೇಷ ಆಹ್ವಾನಿತರಿಗೆ ಸನ್ಮಾನ
ಸವಿ ಹೃದಯದ ಕವಿ ಮಿತ್ರರು ಬಳಗದ ವಿಶೇಷ ಆಹ್ವಾನಿತರಾದ ಜಯಾನಂದ ಪೆರಾಜೆ, ದಿನೇಶ್ ಕುಂದರ್ ಬಿಳಿನೆಲೆ, ಜೋತ್ಸ್ನಾ ಎಂ. ಕಡಂದೇಲು, ಗಣೇಶ್ ಆಚಾರ್ಯ ಅಡ್ಯನಡ್ಕ, ಅನುರಾಧ ರಾಜೀವ್ ಸುರತ್ಕಲ್ ಅವರನ್ನು ಗೌರವಿಸಲಾಯಿತು.
ಅನುರಾಧ ರಾಜೀವ್ ಸುರತ್ಕಲ್ ಪ್ರಾರ್ಥಿಸಿ, ನವಪುರಂ ಕಾರ್ಯದರ್ಶಿ ಸಾಬು ಮೊಳಯೆಕಲ್ ಸ್ವಾಗತಿಸಿದರು. ಸವಿ ಹೃದಯದ ಕವಿ ಮಿತ್ರರು ವೇದಿಕೆ ಸಂಚಾಲಕ ಸುಭಾಷ್ ಪೆರ್ಲ ವಂದಿಸಿದರು. ಸುಶೀಲಾ ಪದ್ಯಾಣ ಮತ್ತು ಹರ್ಷಿತಾ ಪೆರ್ಲ ನಿರೂಪಿಸಿದರು. ಬಳಿಕ ನೃತ್ಯ, ಕೊಳಲುವಾದನ ಗಮನ ಸೆಳೆಯಿತು. ಸಾಹಿತಿ, ಕಲಾವಿದ ವೆಂಕಟ್ ಭಟ್ ಎಡನೀರು ಅವರು ಭಾವಾಭಿನಯದ ಮೂಲಕ ರಂಜಿಸಿದರು.
ಸಭಾ ಕಾರ್ಯಕ್ರಮಕ್ಕೆ ಮೊದಲು ಅತಿಥಿ ಅಭ್ಯಾಗತರನ್ನು, ಬಹುಭಾಷಾ ಸಾಹಿತಿಗಳನ್ನು ನವಪುರಂ ಪದಾಧಿಕಾರಿಗಳು ಮೆರವಣಿಗೆಯೊಂದಿಗೆ ಬರಮಾಡಿಕೊಂಡರು. ನವಪುರಂ ಮಾರ್ಗದರ್ಶಕ ಫಲಕವನ್ನು ಪಿ.ಕೆ.ಗೋಪಿ, ರಾಧಾಕೃಷ್ಣ ಕೆ. ಉಳಿಯತ್ತಡ್ಕ ಸುಭಾಷ್ ಪೆರ್ಲ, ಪ್ರಾಪೊಯಿಲ್ ನಾರಾಯಣನ್ ಮಾಸ್ಟರ್ ಅನಾವರಣಗೊಳಿಸಿದರು.

> **ಪ್ರಶಸ್ತಿ ಪ್ರದಾನ**
> ಮಂಗಳೂರು ತಾ.ಚುಟುಕು ಸಾಹಿತ್ಯ ಪರಿಷತ್‌ನ ಅಧ್ಯಕ್ಷ, ಸಾಹಿತಿ ಹರೀಶ್ ಸುಲಾಯ ಒಡ್ಡಂಬೆಟ್ಟು ಮತ್ತು ಕವಯತ್ರಿ, ಪ್ರಾಧ್ಯಾಪಕಿ ಡಾ.ಆರ್ಯ ಗೋಪಿನಾಥ್ ಅವರಿಗೆ ನವಪುರಂ ದೇವಾಲಯದ ದ್ರಾವಿಡ ಭಾಷಾ ಸಾಹಿತ್ಯ ಪುರಸ್ಕಾರ ನೀಡಲಾಯಿತು.

ಪೆರಡಾಲ ದೇವಳ: ಯಕ್ಷಗಾನ ತಾಳಮದ್ದಳೆ



ಮಂಜೇಶ್ವರ: ಬದಿಯಡ್ಕ ಸಮೀಪದ ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವ ಹಾಗೂ ವಾರ್ಷಿಕ ಜಾತ್ರಾ ಉತ್ಸವದ ಪ್ರಯುಕ್ತ ಮೂಡಂಬೈಲಿನ ವಾಗ್ದೇವೀ ಯಕ್ಷಗಾನ ಕಲಾಸಂಘದವರಿಂದ 'ಕೊಲ್ಲೂರು ಕ್ಷೇತ್ರ ಮಹಾತ್ಮೆ' ಎಂಬ ಕಥಾ ಭಾಗದ ಯಕ್ಷಗಾನ ತಾಳಮದ್ದಳೆ ಜರಗಿತು. ಪಾತ್ರವರ್ಗದಲ್ಲಿ ನಾರಾಯಣ ನಾವಡ ಮೂಡಂಬೈಲು, ಚಂದ್ರಕುಮಾರ್ ಬಲಿಪಗುಳಿ, ಶಾಶ್ವತಿ ನಾವಡ ಮೂಡಂಬೈಲು ಹಾಗೂ ಶಾರ್ವರಿ ನಾವಡ ಮೂಡಂಬೈಲು ಭಾಗವಹಿಸಿದ್ದರು.
ಹಿಮ್ಮೇಳದಲ್ಲಿ ಭಾಗವತರಾಗಿ ರವಿಶಂಕರ ಮಧೂರು, ಚೆಂಡೆಯಲ್ಲಿ ಗೋಪಾಲಕೃಷ್ಣ ನಾವಡ ಮಧೂರು ಮತ್ತು ಮೃದಂಗದಲ್ಲಿ ಮುರಳೀಮಾಧವ ಮಧೂರು ಇವರು ಸಹಕರಿಸಿದರು.

ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜು: ಪ್ರಶಸ್ತಿ ಪ್ರದಾನ, ವಿಚಾರಗೋಷ್ಠಿ



ಮಂಜೇಶ್ವರ: ಧಾರವಾಡದ ಸಾಹಿತ್ಯ ಗಂಗಾ ಸಂಸ್ಥೆ ಮತ್ತು ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜು ಇವುಗಳ ಜಂಟಿ ಆಶ್ರಯದಲ್ಲಿಸುನಂದಾ ಬೆಳಗಾಂವಕರ ಕಾದಂಬರಿ ಪ್ರಶಸ್ತಿ ಮತ್ತು ಮಹಾಶ್ವೇತಾದೇವಿ ಜನ್ಮ ಶತಮಾನೋತ್ಸವ ಕಥಾ ಪ್ರಶಸ್ತಿ ಪ್ರದಾನ ಸಮಾರಂಭ ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜಿನ ಸಭಾಂಗಣದಲ್ಲಿ ಮಂಗಳವಾರ ಜರಗಿತು.
ಕೃಷ್ಣಯ್ಯನಕೊಳಲುಎಂಬಕಾದಂಬರಿಗೆ ಸುನಂದಾ ಬೆಳಗಾಂವಕರ ಕಾದಂಬರಿ ಪ್ರಶಸ್ತಿಗೆ ಆಯ್ಕೆಯಾದ ಜಾನಪದ ತಜ್ಞ ಡಾ.ಟಿ.ಗೋವಿಂದರಾಜು ಮತ್ತು ಕೆಂಪು ನದಿ ಕಥಾ ಸಂಕಲನಕ್ಕಾಗಿ ಮಹಾಶ್ವೇತಾದೇವಿ ಜನ್ಮ ಶತಮಾನೋತ್ಸವ ಕಥಾ ಪ್ರಶಸ್ತಿಗೆ ಆಯ್ಕೆಯಾದ ಲಿಂಗರಾಜ ಸೊಟ್ಟಪ್ಪನವರ ಅವರಿಗೆ ಖ್ಯಾತ ಸಾಹಿತಿ ಡಾ.ನಾ.ಮೊಗಸಾಲೆ ಪ್ರಶಸ್ತಿ ಪ್ರದಾನ ಮಾಡಿದರು.
ಕಾಲೇಜು ಪ್ರಾಂಶುಪಾಲ ಡಾ. ಮೊಹಮ್ಮದ್ ಅಲಿ ಅಧ್ಯಕ್ಷತೆ ವಹಿಸಿದ್ದರು. ಯುವ ವಿಮರ್ಶಕ ವಿಕಾಸ ಹೊಸಮನಿ ಅಭಿನಂದನಾ ಭಾಷಣ ಮಾಡಿದರು. ಪ್ರೊ.ಶಿವಶಂಕರ ಪಿ., ಡಾ.ಸುಭಾಷ್ ಪಟ್ಟಾಜೆ, ಡಾ.ರತ್ನಾಕರ ಕುನಗೋಡು, ಡಾ.ಪ್ರವೀಣ ಪದ್ಯಾಣ, ರೇಷ್ಮಾ ಭಟ್, ಸೌಮ್ಯಾ ಪ್ರವೀಣ್, ಕಲ್ಲಚ್ಚು ಮಹೇಶ ನಾಯಕ್ ವಿಚಾರಗೋಷ್ಠಿಯಲ್ಲಿ ಪ್ರಬಂಧಗಳನ್ನು ಮಂಡಿಸಿದರು. ಡಾ.ಯು.ಮಹೇಶ್ವರಿ, ಪ್ರೊ.ಪಿ.ಎನ್. ಮೂಡಿತ್ತಾಯ ಉಪಸ್ಥಿತರಿದ್ದರು. ಪ್ರಾಧ್ಯಾಪಿಕೆ ಜಯಂತಿ ಸ್ವಾಗತಿಸಿ, ವಂದಿಸಿದರು.

> **ಲೇಖಕರಿಗೆ ಪ್ರಶಸ್ತಿ ಸಂತಸದಾಯಕ**
> ಸಾಹಿತ್ಯ ಗಂಗಾ ಸಂಸ್ಥೆಯು ಪ್ರಶಸ್ತಿಯ ಯೋಗ್ಯತೆ ಹೆಚ್ಚಿಸುವ ಕೆಲಸವನ್ನು ಮಾಡುತ್ತಿದೆ. ಜಾತಿ, ಮತ, ಪಕ್ಷ, ಪಂಥಗಳಿಗೆ ಕಟ್ಟುಬೀಳದೆ ಕೃತಿಯ ಸತ್ವ ಮತ್ತು ಗುಣಮಟ್ಟವನ್ನು ಮಾತ್ರ ಮಾನದಂಡವಾಗಿಸಿಕೊಂಡು ಯೋಗ್ಯರನ್ನಷ್ಟೇ ಆಯ್ದು ಪ್ರಶಸ್ತಿಯನ್ನು ನೀಡುತ್ತದೆ. ಇದರಿಂದಾಗಿ ಎಲೆಮರೆಯ ಕಾಯಿಗಳು ಬೆಳಕಿಗೆ ಬರುತ್ತವೆ. ಕನ್ನಡದ ಪ್ರಮುಖ ಲೇಖಕರಿಗೆ ಪ್ರಶಸ್ತಿ ದೊರೆತಿರುವುದು ಸಂತಸದ ವಿಚಾರವಾಗಿದೆ.
> • ಡಾ.ನಾ.ಮೊಗಸಾಲೆ

ಮೆಟ್ರಿಕ್ ಪೂರ್ವ ಹಾಸ್ಟೆಲ್ ಪ್ರವೇಶ

ಕಾಸರಗೋಡು: ಜಿಲ್ಲೆಯ ಪರಿಶಿಷ್ಟ ಜಾತಿ ಅಭಿವೃದ್ಧಿ ಇಲಾಖೆಯ ರಾಜಾಪುರಂನಲ್ಲಿರುವ ಬಾಲಕರ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಕ್ಕೆ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. 5 ರಿಂದ 10ನೇ ತರಗತಿ ತನಕ ಓದುತ್ತಿರುವ ಪರಿಶಿಷ್ಟ ಜಾತಿ ವಿಭಾಗದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅವರು ಗೈರು ಹಾಜರಾದರೆ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ಪರಿಗಣಿಸಲಾಗುತ್ತದೆ. ಇತರ ವರ್ಗಗಳಿಗೂ ಕೆಲವು ಸ್ಥಾನಗಳನ್ನು ಕಾಯ್ದಿರಿಸಲಾಗಿದೆ. ಅರ್ಜಿಯನ್ನು ಪೂರಕ ದಾಖಲೆಗಳೊಂದಿಗೆ ಪರಪ್ಪ ಪರಿಶಿಷ್ಟ ಜಾತಿ ಅಭಿವೃದ್ಧಿ ಕಚೇರಿಗೆ ಮೇ 20 ರೊಳಗೆ ನೇರವಾಗಿ ಸಲ್ಲಿಸಬೇಕು. ಈ ಬಗ್ಗೆ ಹೆಚ್ಚಿನ ಮಾಹಿತಿಗೆ 8848757193 ಅಥವಾ 0467 2255465 ಕರೆ ಮಾಡಬಹುದು.



ಮಂಜೇಶ್ವರ ಕನಿಲ ಶ್ರೀ ಭಗವತೀ ಕ್ಷೇತ್ರದಲ್ಲಿ ಭರಣಿ ಮಹೋತ್ಸವದ ಪ್ರಯುಕ್ತ ಮಂಜೇಶ್ವರ ವಸುಂದರಾ ಯಕ್ಷಗಾನ ಅಧ್ಯಯನ ಕೇಂದ್ರದ ಮಕ್ಕಳಿಂದ ಯಕ್ಷಗಾನ ಬಯಲಾಟ ಆಕರ್ಷಕವಾಗಿ ಜರಗಿತು.

ಉಕ್ಕಿನಡ್ಕದ ಕಾಸರಗೋಡು ಸರಕಾರಿ ನರ್ಸಿಂಗ್ ಕಾಲೇಜು ಆರಂಭಗೊಂಡು ಸಂದಿತು ವರುಷ ಮೂರು

ವಿದ್ಯಾರ್ಥಿಗಳಿಗೆ ಮಾತ್ರ ಇನ್ನೂ ಸಿಗದ ವಸತಿ ಸೌಕರ್ಯ ಭಾಗ್ಯ!

ಪೆರ್ಲ: ಉಕ್ಕಿನಡ್ಕದ ಕಾಸರಗೋಡು ಸರಕಾರಿ ಮೆಡಿಕಲ್ ಕಾಲೇಜು ಅಕಾಡೆಮಿಕ್ ಬ್ಲಾಕ್‌ನಲ್ಲಿ ಮೂರು ವರ್ಷ ಹಿಂದೆ ಕಾಸರಗೋಡು ಸರಕಾರಿ ನರ್ಸಿಂಗ್ ಕಾಲೇಜು ಕಾರ್ಯಾರಂಭಗೊಂಡಿದ್ದರೂ ಇದುವರೆಗೆವಸತಿಸೌಕರ್ಯ ಒದಗಿಸಲಾಗಿಲ್ಲ ಎಂದು ಕಾಲೇಜು ವಿದ್ಯಾರ್ಥಿಗಳು ಆರೋಪಿಸಿದ್ದಾರೆ.
ಉಕ್ಕಿನಡ್ಕದಲ್ಲಿ ಒಂದು ವರ್ಷ ಹಿಂದೆ ಮೆಡಿಕಲ್ ಕಾಲೇಜು ತರಗತಿ ಆರಂಭವಾಗಿದೆ. ಶೀಘ್ರದಲ್ಲೇ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳ ಹಾಸ್ಟೆಲ್ ತೆರೆಯಲಿದ್ದು, ತಮ್ಮನ್ನೂ ಅಲ್ಲಿ ಸೇರಿಸಿಕೊಳ್ಳುವಂತೆ ನರ್ಸಿಂಗ್ ವಿದ್ಯಾರ್ಥಿಗಳು ಒತ್ತಾಯಿಸಿದ್ದಾರೆ.
ಮೆಡಿಕಲ್ ಕಾಲೇಜು ಕಟ್ಟಡದ ಅಕಾಡೆಮಿಕ್ ಬ್ಲಾಕ್‌ನಲ್ಲಿ ನರ್ಸಿಂಗ್ ಕಾಲೇಜು ಕಾರ್ಯನಿರ್ವಹಿಸುತ್ತಿದೆ. ನರ್ಸಿಂಗ್ ಕಾಲೇಜಿಗೆ ಪ್ರತ್ಯೇಕ ಕಟ್ಟಡ ಅಥವಾ



ಹಾಸ್ಟೆಲ್ ಸೌಲಭ್ಯ ಒದಗಿಸಲಾಗಿಲ್ಲ, ಇದರಿಂದಾಗಿ ನರ್ಸಿಂಗ್ ವಿದ್ಯಾರ್ಥಿಗಳು ಖಾಸಗಿ ಕ್ವಾರ್ಟರ್ಸ್‌ಗಳನ್ನು ಅವಲಂಬಿಸಿದ್ದಾರೆ.
ಮೂರು ವರ್ಷಗಳಿಂದ ನರ್ಸಿಂಗ್ ಕಾಲೇಜಿಗೆ ಹಾಸ್ಟೆಲ್ ಸೌಲಭ್ಯಗಳನ್ನು ಒದಗಿಸದ ಅಧಿಕಾರಿಗಳು, ಕೇವಲ ಒಂದು ವರ್ಷದ ಹಿಂದೆ ಆರಂಭವಾದ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯಗಳನ್ನು ಒದಗಿಸಿದ್ದಾರೆ ಎಂದು ನರ್ಸಿಂಗ್ ವಿದ್ಯಾರ್ಥಿಗಳು ತಿಳಿಸಿದ್ದಾರೆ.
ಖಾಸಗಿ ಕ್ವಾರ್ಟರ್ಸ್‌ಗಳಲ್ಲಿ ವಾಸಿಸುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಶುಲ್ಕ ಮರುಪಾವತಿಯ ವಿದ್ಯಾರ್ಥಿ ವೇತನ ಸಿಗುತ್ತಿಲ್ಲ, ಇತರ ಅನೇಕ ಹೊಸ ಮೆಡಿಕಲ್ ಕಾಲೇಜುಗಳಲ್ಲಿ ನರ್ಸಿಂಗ್ ವಿದ್ಯಾರ್ಥಿ ಗಳಿಗೆ ಎಂಬಿಬಿಎಸ್ ಹಾಸ್ಟೆಲ್‌ಗಳಲ್ಲಿ ತಾತ್ಕಾಲಿಕ ಪ್ರವೇಶ ನೀಡಲಾಗಿದೆ. ಹೊಸದಾಗಿ ಆರಂಭಿಸಿದ ಮೆಡಿಕಲ್ ಕಾಲೇಜುಗಳಲ್ಲಿ ಹಾಸ್ಟೆಲ್ ಹಂಚಿಕೊಳ್ಳಲು ಅವಕಾಶ ನೀಡಲಾಗಿದೆ ಎಂದು ವಿದ್ಯಾರ್ಥಿಗಳು ತಿಳಿಸಿದ್ದಾರೆ.

ಪ್ರತಿಭಟನೆಯ ಎಚ್ಚರಿಕೆ
ಹೊಸ ಬ್ಯಾಚ್ ಆಗಮನದೊಂದಿಗೆ ಈ ಬಿಕ್ಕಟ್ಟು ಮತ್ತಷ್ಟು ಹೆಚ್ಚಲಿದ್ದು ತಮ್ಮ ಬೇಡಿಕೆಯನ್ನು ಅಂಗೀಕರಿಸುವಂತೆ ಆಗ್ರಹಿಸಿ ಕೆಬಿಎನ್‌ಎಸ್‌ಎ ಮತ್ತು ಎಸ್ ಎನ್‌ಎಐ ಕಾಲೇಜು ಯೂನಿಯನ್‌ಗಳು ಕಾಲೇಜು ಪ್ರಾಂಶುಪಾಲರಿಗೆ ಮನವಿ ಸಲ್ಲಿಸಿವೆ. ವಿದ್ಯಾರ್ಥಿಗಳ ಹಕ್ಕುಗಳನ್ನು ನಿರಾಕರಿಸಿದರೆ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಲಾಗಿದೆ.

> **ತಾತ್ಕಾಲಿಕ ವ್ಯವಸ್ಥೆ ಒದಗಿಸಿ**
> ಪ್ರಸ್ತುತ ಮೆಡಿಕಲ್ ಕಾಲೇಜು ಹಾಸ್ಟೆಲ್‌ನ 4 ಮಹಡಿಗಳಲ್ಲಿ ಕೇವಲ 50 ಎಂಬಿಬಿಎಸ್ ವಿದ್ಯಾರ್ಥಿಗಳು ಇದ್ದಾರೆ. ಆದ್ದರಿಂದ ಲಭ್ಯವಿರುವ ಸೌಲಭ್ಯಗಳನ್ನು ಬಳಸಿ ನರ್ಸಿಂಗ್ ವಿದ್ಯಾರ್ಥಿಗಳಿಗೆ ತಾತ್ಕಾಲಿಕ ವಸತಿ ಒದಗಿಸಬೇಕೆಂದು ವಿದ್ಯಾರ್ಥಿಗಳು ಒತ್ತಾಯಿಸಿದ್ದಾರೆ.

> **ದುಬಾರಿ ಬಾಡಿಗೆ ನೀಡಬೇಕಾಗಿದೆ**
> ಖಾಸಗಿ ಕ್ವಾರ್ಟರ್ಸ್‌ಗಳು ಕಾಡುಪೊದೆಗಳಿಂದ ಆವೃತವಾಗಿವೆ. ವಿದ್ಯಾರ್ಥಿಗಳು ವಿಷ ಜಂತುಗಳು, ಕಾಡು ಪ್ರಾಣಿಗಳ ಭೀತಿಯಲ್ಲಿ ದಿನ ದೂಡುತ್ತಿದ್ದಾರೆ. ಖಾಸಗಿ ಕ್ವಾರ್ಟರ್ಸ್‌ಗಳಲ್ಲಿ ಮಾಸಿಕ 5 ಸಾವಿರದಿಂದ 10 ಸಾವಿರ ರೂ. ತನಕ ಬಾಡಿಗೆ ಪಡೆಯಲಾಗುತ್ತಿದೆ. ಇತರ ಸರಕಾರಿ ನರ್ಸಿಂಗ್ ಹಾಸ್ಟೆಲ್‌ಗಳಲ್ಲಿ 150ರಿಂದ 300ರೂ. ಬಾಡಿಗೆ ಇರುವಾಗ ಉಕ್ಕಿನಡ್ಕದ ನರ್ಸಿಂಗ್ ವಿದ್ಯಾರ್ಥಿಗಳು ದುಬಾರಿ ಬಾಡಿಗೆ ನೀಡಬೇಕಾಗಿದೆ.

ಸುತ್ತಮುತ್ತ

ತೆರಿಗೆಯಲ್ಲಿ ವಂಚನೆ : ವ್ಯತ್ಯಾಸ ದರ ಪಾವತಿಗೆ ನಗರಸಭೆ ಆದೇಶ

ಪುತ್ತೂರು: ಬಾಡಿಗೆಗೆ ನೀಡಲಾದ ಮನೆಗಳಲ್ಲಿ ತೆರಿಗೆಯಲ್ಲಿ ವಂಚನೆ ಮಾಡಿದ್ದು ರೂ.2,03,521 ವ್ಯತ್ಯಾಸ ದರ ಪಾವತಿಸಲು ಪುತ್ತೂರು ನಗರಸಭೆ ಆದೇಶ ಹೊರಡಿಸಿದೆ. ಪುತ್ತೂರು ನಗರಸಭಾ ವ್ಯಾಪ್ತಿಯ ಬನ್ನೂರಿನ ನಂದಿಲ ಎಂಬಲ್ಲಿ ಹಾಗೂ ಪರ್ಲಡ್ಕ ಕಲ್ಲಿಮಾರು ಹೀಗೆ ಎರಡು ಕಡೆ ವಾಸ್ತವ್ಯದ ಮನೆಗಳನ್ನು ಬಾಡಿಗೆಗೆ ನೀಡಿ ಹಲವಾರು ವರ್ಷಗಳಿಂದ ನಗರಸಭೆಗೆ ತೆರಿಗೆ ವಂಚನೆ ಮಾಡಿರುವ ಕುರಿತು ಕಲ್ಲಿಮಾರು ನಿವಾಸಿ, ಮಾಯಿದೆ ದೇವುಸ್ ಚರ್ಚ್‌ನ 21 ಆಯೋಗಗಳ ಸಂಯೋಜಕ ಪಾವ್ಲ್ ಹೆರಾಲ್ಡ್ ಮಸ್ಕರೇನ್ಹಸ್ ಹಾಗೂ ಅವರ ಪತ್ನಿ ರೋಸ್ಲಿನ್ ಫ್ಲೇವಿ ಲೋಬೊ ಎಂಬವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪುತ್ತೂರು ಸಾಮೆತ್ತಡ್ಕ ನಿವಾಸಿ ಅರುಣ್ ಪಿಂಟೊ ಎಂಬವರು ನಗರಸಭೆಗೆ ಲಿಖಿತ ದೂರು ಸಲ್ಲಿಸಿದ್ದರು. ದೂರಿನ ತನಿಖೆ ನಡೆಸಿದ ಪುತ್ತೂರು ನಗರಸಭೆ ಅಧಿಕಾರಿಗಳು ಬನ್ನೂರು ನಂದಿಲದಲ್ಲಿರುವ ಪಾವ್ಲ್ ಹೆರಾಲ್ಡ್ ಮಸ್ಕರೇನ್ಹಸ್ ಹೆಸರಿನಲ್ಲಿರುವ ಕ.ನಂಬ್ರ 1-81/3 ಗೆ ರೂ.51765 ಹಾಗೂ ಅವರ ಪತ್ನಿ ಹೆಸರಿನಲ್ಲಿರುವ ಕಲ್ಲಿಮಾರಿನ ಕ.ನಂಬ್ರ 4-355/2 ಗೆ ರೂ.151756 ಹೀಗೆ ಒಟ್ಟು ರೂ.2,03,521 ನ್ನು ನೋಟೀಸ್ ಸಿಕ್ಕಿದ ಏಳು ದಿನಗಳ ಒಳಗೆ ನಗರಸಭೆಗೆ ಪಾವತಿಸಲು ಆದೇಶ ನೀಡಿರುತ್ತಾರೆ. ಪಾವ್ಲ್ ಹೆರಾಲ್ಡ್ ಮಸ್ಕರೇನ್ಹಸ್ ಸಂತ ಫಿಲೋಮಿನಾ ಕಾಲೇಜಿನ ಬಿ.ಎಸ್.ಡಬ್ಲ್ಯೂ ವಿಭಾಗದ ನಿವೃತ್ತ ಉಪನ್ಯಾಸಕರಾಗಿ ಹಾಗೂ ಅವರ ಪತ್ನಿ ರೋಸ್ಲಿನ್ ಫ್ಲೇವಿ ಲೋಬೊರವರು ಸಂತ ವಿಕ್ಟರನ ಬಾಲಿಕಾ ಪ್ರೌಢಶಾಲೆಯಲ್ಲಿ ಮುಖ್ಯಶಿಕ್ಷಕರಾಗಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಮೇ 5: ಫೈರಿಂಗ್ ರೇಂಜ್ ಉದ್ಘಾಟನೆ

ಮಡಿಕೇರಿ: ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜ್ ನ ಹಳೇ ವಿದ್ಯಾರ್ಥಿ ಸಂಘ ಕಾಲೇಜು ಮೈದಾನದ ಬಳಿ ನಿರ್ಮಿಸಿರುವ ಫೈರಿಂಗ್ ರೇಂಜ್ ಮೇ 5 ರಂದು ಉದ್ಘಾಟನೆಗೊಳ್ಳಲಿದೆ. ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜ್ ಹಾಗೂ ಹಳೇ ವಿದ್ಯಾರ್ಥಿ ಸಂಘದ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಬೆಳಗ್ಗೆ 10 ಗಂಟೆಗೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಕೊಡಗು ವಿಶ್ವವಿದ್ಯಾನಿಲಯದ ಉಪ ಕುಲಪತಿ ಪ್ರೊ.ಅಶೋಕ್ ಸಂಗಪ್ಪ ಆಲೂರ್ ಹಾಗೂ ಎನ್‌ಸಿಸಿಯ ಕಮಾಂಡಿಂಗ್ ಆಫೀಸರ್ ಕರ್ನಲ್ ರೆಜಿತ್ ಮುಕುಂದನ್ ಅವರು ಫೈರಿಂಗ್ ರೇಂಜ್ ನ್ನು ಉದ್ಘಾಟಿಸಲಿದ್ದಾರೆ. ಫೀ.ಮಾ.ಕಾರ್ಯಪ್ಪ ಕಾಲೇಜ್ ಪ್ರಾಂಶುಪಾಲ ಮೇಜರ್ ಪ್ರೊ.ರಾಘವ ಬಿ. ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎನ್‌ಸಿಸಿಯ ಆಡಳಿತಾಧಿಕಾರಿ ಲೆಫ್ಟಿನೆಂಟ್ ಕರ್ನಲ್ ಶ್ರೀನಿವಾಸ್ ಎಸ್., ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಮುಕ್ಕಾಟಿರ ಎ.ಅಪ್ಪಯ್ಯ, ಫೀ.ಮಾ.ಕಾರ್ಯಪ್ಪ ಕಾಲೇಜ್ ನ ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯ ಹಾಗೂ ವಕೀಲ ಮಂಡುವಂಡ ಸುದಯ್ ನಾಣಯ್ಯ ಹಾಗೂ ಉದ್ಯಮಿ ಪುರುಷೋತ್ತಮ್ ಟಿ. ಬೆಂಗಳೂರು ಪಾಲ್ಗೊಳ್ಳಲಿದ್ದಾರೆ. ಸಭಾ ಕಾರ್ಯಕ್ರಮ ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ ಎಂದು ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಅವರು ಪತ್ರಿಕಾ ಪ್ರಕಟಣೆ ನೀಡಿದ್ದಾರೆ.

ಮೇ 5:ಕರ್ಣಂಗೇರಿ ಕ್ಷೇತ್ರದ ವಾರ್ಷಿಕೋತ್ಸವ, ರಥೋತ್ಸವ

ಮಡಿಕೇರಿ: ಮಡಿಕೇರಿ ನಗರದ ಹೊರವಲಯದ ಕರ್ಣಂಗೇರಿ ಕ್ಷೇತ್ರದ ಶ್ರೀರಾಜರಾಜೇಶ್ವರಿ ದೇವಾಲಯದ ವಾರ್ಷಿಕೋತ್ಸವ ಹಾಗೂ ರಥೋತ್ಸವ ಮೇ 5ರಂದು ಶ್ರದ್ಧಾಭಕ್ತಿಯಿಂದ ನಡೆಯಲಿದೆ. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶ್ರೀರಾಜರಾಜೇಶ್ವರಿ ದೇವಾಲಯದ ಧರ್ಮದರ್ಶಿ ಗೋವಿಂದ ಸ್ವಾಮಿ, ಅವರು ದೇವಾಲಯಕ್ಕೆ ಸುಮಾರು 80 ವರ್ಷಗಳ ಇತಿಹಾಸವಿದೆ. ವಾರ್ಷಿಕೋತ್ಸವ ಹಾಗೂ ರಥೋತ್ಸವದಲ್ಲಿ ರಾಜ್ಯ ಮತ್ತು ಹೊರ ರಾಜ್ಯದ ಸಾವಿರಾರು ಭಕ್ತರು ಪಾಲ್ಗೊಳ್ಳಲಿದ್ದಾರೆ ಎಂದರು. ಮೇ 5 ರಂದು ಬೆಳಿಗ್ಗೆ 6 ಗಂಟೆಗೆ ಧ್ವಜಾರೋಹಣ, 6.30ಕ್ಕೆ ಗಣಪತಿ ಹೋಮ, 7.30ಕ್ಕೆ ದೇವಿಗೆ ಅಭಿಷೇಕ, ಹೂವಿನ ಅಲಂಕಾರ ನಂತರ ತೀರ್ಥಸ್ನಾನ, 9.20ಕ್ಕೆ ಕಳಸ ಪೂಜೆ, ನೈವೇದ್ಯ ಪ್ರಸಾದ ಹಾಗೂ ಮಹಾ ಮಂಗಳಾರತಿಯಾಗಲಿದೆ. 11.45ಕ್ಕೆ ಶುಭ ಕಾಲದಂದು ದೇವಿಯ ರಥೋತ್ಸವವು ದೇವಸ್ಥಾನದ ಆವರಣದ ಸುತ್ತಲೂ ನಡೆಯಲಿದೆ ಎಂದರು. ಶ್ರೀರಾಜರಾಜೇಶ್ವರಿ ದೇವಾಲಯದ ಭಕ್ತ ಚುಮ್ಮಿ ದೇವಯ್ಯ, ಹರೀಶ್ ಇದ್ದರು. ವಾರ್ಷಿಕೋತ್ಸವಕ್ಕೆ ಸಹಕಾರ ನೀಡುವ ಭಕ್ತರು 9480730523, 9481959080, 9448647161, 9060646676 ಮತ್ತು 08272-295668 ನ್ನು ಸಂಪರ್ಕಿಸಬಹುದಾಗಿದೆ.

ಮೃತ ವ್ಯಕ್ತಿಯ ವಾರಸುದಾರರಿಗೆ ಸೂಚನೆ

ಉಡುಪಿ: ಉಡುಪಿ ತಾಲೂಕು ಮೂಡನಿಡಂಬೂರು ಗ್ರಾಮದ ಆದಿ ಉಡುಪಿಯ ಎ.ಪಿ.ಎಂ.ಸಿ ಮಾರ್ಕೆಟ್ ಬಳಿಯ ಪಾಳು ಬಿದ್ದಿರುವ ಬಾವಿಯಲ್ಲಿ ಸುಮಾರು 40-50 ವರ್ಷ ಪ್ರಾಯದ ಅಪರಿಚಿತ ಗಂಡಸಿನ ಶವವು ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿರುತ್ತದೆ.
ಮೃತದೇಹವನ್ನು ಬೀಡನಗುಡ್ಡೆಯಲ್ಲಿ ದಫನ ಮಾಡಲಾಗಿದ್ದು, ಮೃತರ ವಾರಸುದಾರರು, ರಕ್ತಸಂಬಂಧಿಕರು ಯಾರಾದರೂ ಇದ್ದಲ್ಲಿ ಉಡುಪಿ ನಗರ ಪೊಲೀಸ್ ಠಾಣೆಯನ್ನು ಸಂಪರ್ಕಿಸಬಹುದಾಗಿದೆ ಎಂದು ಉಡುಪಿ ನಗರ ಪೊಲೀಸ್ ಠಾಣಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನ ಬ್ರಹ್ಮಕಲಶೋತ್ಸವ | ಧಾರ್ಮಿಕ ಸಭೆ

ಅಧ್ಯಾತ್ಮ ಕಾರ್ಯದಲ್ಲಿ ಎಲ್ಲರೂ ಸಕ್ರಿಯರಾಗಬೇಕು: ಪುತ್ತಿಗೆ ಶ್ರೀ

ಪಡುಬಿದ್ರಿ: ಧಾರ್ಮಿಕ ಮತ್ತು ಅಧ್ಯಾತ್ಮ ಕಾರ್ಯದಲ್ಲಿ ನಾವೆಲ್ಲರೂ ಸಕ್ರಿಯರಾಗಿದ್ದಲ್ಲಿ ಸಾಮಾಜಿಕ ಏಕತೆ ಜೊತೆಗೆ ಜೀವನದ ಸಾರ್ಥಕ್ಯ ಸಾಧ್ಯವಾಗಲಿದೆ. ಭಾರತೀಯ ತತ್ವಶಾಸ್ತ್ರದ ಪ್ರಕಾರ ಒಳ್ಳೆಯತನ ಉನ್ನತಿಯನ್ನು ಕಾಣಬೇಕು. ದುಷ್ಟತನ ದಮನವಾಗಬೇಕು ಎಂಬುದು ವಿಶ್ವಮಾನ್ಯತೆಯನ್ನು ಪಡೆದಿದೆ ಎಂದು ಶ್ರೀ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು ಹೇಳಿದರು.

ಶ್ರೀಗಳವರು ಬುಧವಾರ 33 ಕೋಟಿ ರೂ. ವೆಚ್ಚದಲ್ಲಿ ಸಮಗ್ರವಾಗಿ ಜೀರ್ಣೋದ್ಧಾರಗೊಂಡ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿನ ಸುಧರ್ಮ ಪ್ರಕಾಶ ವೇದಿಕೆಯಲ್ಲಿ ನಡೆದ ಧಾರ್ಮಿಕ ಸಭೆಯನ್ನು ದೀಪ ಪ್ರಜ್ವಲನೆಯ ಮೂಲಕ ಉದ್ಘಾಟಿಸಿ ದಾನಿಗಳನ್ನು ಸನ್ಮಾನಿಸಿ ಗೌರವಿಸಿ ಬಳಿಕ ಆಶೀರ್ವಚನದಲ್ಲಿ ಸಂದೇಶ ನೀಡುತ್ತಾ ಮಾತನಾಡಿದರು.



ಆಶೀರ್ವಚನ ನೀಡಿದ ಶ್ರೀ ಬಾರ್ಕೂರು ಮಹಾಸಂಸ್ಥಾನದ ಶ್ರೀ ವಿದ್ಯಾವಾಚಸ್ಪತಿ ಡಾ. ವಿಶ್ವಸಂತೋಷ್ ಭಾರತಿ ಶ್ರೀಪಾದರು, ಗಣಪತಿಯ ಸಂಕಲ್ಪದಂತೆ 21 ದಿನಗಳ ಹಬ್ಬವನ್ನು ಪಡುಬಿದ್ರಿ ಆಚರಿಸುತ್ತಿದೆ. ಭಗವಂತನಿಂದ ಸಾಧನೆಗೆ ಅವಕಾಶ ಪಡೆದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರಾಗಿ ಡಾ.ಕೆ. ಪ್ರಕಾಶ್ ಶೆಟ್ಟಿ ಅವರ ನೇತೃತ್ವದಲ್ಲಿ ಶ್ರದ್ಧಾ ಭಕ್ತಿಯ ಸೇವೆಯ ಮೂಲಕ ಅದ್ಭುತ ದೇವಾಲಯ ಮೂಡಿ ಬಂದಿದೆ. ಪಡುಬಿದ್ರಿ ಆಸುಪಾಸಿನ ಆಸ್ತಿಕರ ಬಲುದೊಡ್ಡ ಆಸ್ತಿಯಾಗಿದೆ ಎಂದರು.

ಶ್ರೀ ಕ್ಷೇತ್ರ ಕಟೀಲು ಅನುವಂಶಿಕ ಅರ್ಚಕ ಹರಿನಾರಾಯಣ ಅಸ್ರಣ್ಣರು ಆಶೀರ್ವಚನ ನೀಡಿದರು. ಧಾರ್ಮಿಕ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಬ್ರಹ್ಮಕಲಶೋತ್ಸವ, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಉದ್ಯಮಿ ಡಾ.ಕೆ. ಪ್ರಕಾಶ್ ಶೆಟ್ಟಿ ಸ್ವಾಗತಿಸಿದರು. ವೇದಿಕೆಯಲ್ಲಿ ಶಾಸಕರಾದ ಕಿರಣ್ ಕೊಡ್ಗಿ, ಗುರ್ಮೆ ಸುರೇಶ್ ಶೆಟ್ಟಿ ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯರಾದ ಶ್ರೀಶ ಉಪಾಧ್ಯಾಯ, ಕಾಪು ಹೊಸ ಮಾರಿಗುಡಿ ಅಭಿವೃದ್ಧಿ ಸಮಿತಿ ಅಧ್ಯಕ್ಷ ರಾಜರ್ಷಿ ಕೆ. ವಾಸುದೇವ ಶೆಟ್ಟಿ, ಉದ್ಯಮಿಗಳಾದ ಮಣೆ ಸಂತೋಷ್ ಶೆಟ್ಟಿ, ಸದಾನಂದ ಶೆಟ್ಟಿ ಪುಣೆ, ಕೆ. ಡಿ. ಶೆಟ್ಟಿ ಮುಂಬೈ, ಉಪೇಂದ್ರ ಶೆಟ್ಟಿ ಬೆಂಗಳೂರು, ಅಶೋಕ ಶೆಟ್ಟಿ ಮುಂಬೈ, ಕುಶಲ್ ಹೆಗ್ಡೆ ಪುಣೆ, ಜಿತೇಂದ್ರ ಶೆಟ್ಟಿ ಪುಣೆ, ಸುಗ್ಗಿ ಸುಧಾಕರ ಶೆಟ್ಟಿ ಹುಬ್ಬಳ್ಳಿ ಇದ್ದರು.

ಭೂಮಿಕ, ಅಕ್ಷಯಾ ಪ್ರಾರ್ಥಿಸಿದರು. ಜಯ ಎಸ್. ಶೆಟ್ಟಿ ಪದ್ರ ದಾನಿಗಳನ್ನು ಪರಿಚಯಿಸಿದರು. ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಮುರಳಿನಾಥ ಶೆಟ್ಟಿ, ಬ್ರಹ್ಮ ಶ್ರೀಧರ ಆಚಾರ್ ಕಾರ್ಯಕ್ರಮ ನಿರೂಪಿಸಿದರು.

> **ನಾಡಿನ ಅಭ್ಯುದಯಕ್ಕೆ ಶಾಶ್ವತವಾದ ಕೊಡುಗೆ**
> **ಹಲವಾರು ವರ್ಷಗಳಿಂದ ಜೀರ್ಣೋದ್ಧಾರಕ್ಕೆ ಮುಂದಡಿ ಇರಿಸಿದರೂ ಕೈಗೂಡದ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನವು ಇದೀಗ ಡಾ.ಕೆ. ಪ್ರಕಾಶ್ ಶೆಟ್ಟಿ ಅವರ ಸಾರಥ್ಯದಲ್ಲಿ ಅಭೂತಪೂರ್ವವಾಗಿ ಮೂಡಿಬಂದಿದ್ದು, ದಾಖಲೆಯ ಸೇವೆಯಾಗಿದೆ. ಇದು ನಾಡಿನ ಕ್ಷೇಮ ಮತ್ತು ಅಭ್ಯುದಯಕ್ಕೆ ಶಾಶ್ವತವಾದ ಕೊಡುಗೆಯಾಗಿದೆ.**
> • ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು, ಪುತ್ತಿಗೆ ಮಠ

ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಮಾಡೂರು ಶಾಖೆ ವಾರ್ಷಿಕೋತ್ಸವ

ಆತ್ಮಶಕ್ತಿಯಿಂದ ಗುಣಮಟ್ಟದ ಬ್ಯಾಂಕಿಂಗ್ ಸೇವೆ

ಮಂಗಳೂರು: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಮಾಡೂರು ಶಾಖೆಯ 14ನೇ ವಾರ್ಷಿಕೋತ್ಸವ ಹಾಗೂ ಗ್ರಾಹಕರ ಸಭೆ ಜರುಗಿತು.

ಸಂಘದ ಸದಸ್ಯ ಬಿ.ಎಸ್. ಭಾಸ್ಕರ್, ಶ್ರೀ ಸೀತಾರಾಮ ಪೂಜಾರಿ, ಶ್ರೀ ಗೋಪಾಲ ಯು. ಹಾಗೂ ಇಸ್ಮಾಯಿಲ್ ಅಚ್ಚಬ್ಬ ಉದ್ಘಾಟಿಸಿದರು. ಬಳಿಕ ಬಿ.ಎಸ್. ಭಾಸ್ಕರ್ ಅವರು ಮಾತನಾಡಿ, ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘವು ಸಂಘದ ಅಧ್ಯಕ್ಷ ಸಹಕಾರ ರತ್ನ ಶ್ರೀ ಚಿತ್ತರಂಜನ್ ಬೋಳಾರ್ ಮುಂದಾಳತ್ವದಲ್ಲಿ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಬ್ಯಾಂಕಿಂಗ್ ಸೇವೆಯನ್ನು ನೀಡುತ್ತಿದ್ದು ನಮ್ಮೆಲ್ಲರ ಅಚ್ಚುಮೆಚ್ಚಿನ ಸಂಘವಾಗಿದೆ ಎಂದರು.

ಸದಸ್ಯ ಗೋಪಾಲ ಯು ರವರು ಮಾತನಾಡಿ, ಸೇವಾ ಮನೋಭಾವದ ಉದ್ದೇಶದಿಂದ ಸಹಕಾರಿ ಕ್ಷೇತದಲ್ಲಿ ಸೇವೆ ಸಲ್ಲಿಸುತ್ತಿರುವ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘವು ಇನ್ನೂ ಹೆಚ್ಚಿನ ಉನ್ನತ ಸ್ಥಾನಕ್ಕೆ ಏರಲಿ ಎಂದು ಶುಭ ಹಾರೈಸಿದರು.

ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಮಾತನಾಡಿ, ಗ್ರಾಹಕರ ಪ್ರೋತ್ಸಾಹದಿಂದ ಸಂಘವು ಉತ್ತಮ ಪ್ರಗತಿಯನ್ನು ಹೊಂದಲು ಸಾಧ್ಯವಾಗಿದೆ. ಶಾಖೆಯ ವಾರ್ಷಿಕೋತ್ಸವದ ಪ್ರಯುಕ್ತ 500 ದಿನಗಳ ಠೇವಣಿಗಳಿಗೆ ವಿಶೇಷ ಬಡ್ಡಿ ದರ ಶೇ. 10 ಹಾಗೂ 1000 ದಿನಗಳ ಠೇವಣಿಗಳಿಗೆ ವಿಶೇಷ ಬಡ್ಡಿ ದರ ಶೇ. 10.50 ವನ್ನು ನೀಡಲಾಗುತ್ತಿದ್ದು ಚಿನ್ನಾಭರಣ ಸಾಲಗಳಿಗೆ ಪ್ರತಿ ಗ್ರಾಂ ಗೆ ಗರಿಷ್ಠ ಮೌಲ್ಯ ರೂ. 12,000 ರವರೆಗೆ ಯಾವುದೇ ಸೇವಾ ಶುಲ್ಕವಿಲ್ಲದೆ ಸಾಲವನ್ನು ಸದಸ್ಯರಿಗೆ ನೀಡಲಾಗುವುದು. ನಮ್ಮ ಎಲ್ಲಾ ಶಾಖೆಗಳಲ್ಲಿ ಇ-ಮುದ್ರಾಂಕ, ನೆಫ್ಟ್ ಆರ್‌ಟಿಜಿಎಸ್ ಸೇವೆಯು ವ್ಯವಹಾರದ ಸಮಯದಲ್ಲಿ ಲಭ್ಯವಿದ್ದು ಅದೇ ರೀತಿ ವಿಮಾ ಪಾಲಿಸಿಗಳಾದ ಎಲ್‌ಐಸಿ, ಕೇರ್, ಇಫ್ಕೋಟೋಕಿಯ, ಜನರಲ್ ಇನ್ಶುರೆನ್ಸ್ ಕಂಪೆನಿ ಮುಂತಾದ ಕಂಪೆನಿಗಳ ವಿಮಾ ಸೌಲಭ್ಯಗಳು ಲಭ್ಯವಿರುತ್ತದೆ. ಇದರ ಪ್ರಯೋಜನ ಪಡೆಯಬೇಕೆಂದು ವಿನಂತಿಸಿದರು.

ಸಂಘದ ನಿರ್ದೇಶಕ ಆನಂದ್ ಎಸ್. ಕೊಂಡಾಣ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸೌಮ್ಯ ವಿಜಯ್ ಇದ್ದರು. ಶಾಖೆ ಸಿಬ್ಬಂದಿ ಮೇಘಶ್ರೀ ಪಿ.ಎನ್. ಸ್ವಾಗತಿಸಿದರು. ಪ್ರದೀಪ್ ಕುಮಾರ್ ಕೆ. ವಂದಿಸಿದರು. ಪ್ರಭಾರ ಶಾಖಾಧಿಕಾರಿ ಭವ್ಯ ನಿರೂಪಿಸಿದರು.



> **ಸಿಬ್ಬಂದಿಯಿಂದ ಉತ್ತಮ ಸೇವೆ**
> **ಸಂಘದ ಸಿಬ್ಬಂದಿ ಗ್ರಾಹಕರಿಗೆ ಉತ್ತಮ ಸೇವೆಯನ್ನು ನೀಡುತ್ತಿದ್ದು, ನಮ್ಮೆಲ್ಲರ ದೈನಂದಿನ ವ್ಯವಹಾರಕ್ಕೆ ಉತ್ತಮ ಸಂಘವಾಗಿದೆ.**
> • ಗಣೇಶ್ ಭಂಡಾರಿ, ಸದಸ್ಯ

ವಿವೇಕಾನಂದದಲ್ಲಿ ವಿದ್ಯಾರ್ಥಿ ಸಂಘದ ದಿನಾಚರಣೆಯಲ್ಲಿ ಪ್ರೊ. ದಾಮೋದರ

ಯುವ ಜನತೆಯಿಂದ ರಾಷ್ಟ್ರದ ಅಭಿವೃದ್ಧಿ ಸಾಧ್ಯ

ಪುತ್ತೂರು: ವಿವೇಕಾನಂದರ ತತ್ವಗಳಿಂದ ಜಾಗತಿಕ ಮಟ್ಟದಲ್ಲಿ ಭಾರತವನ್ನು ಗುರುತಿಸಲು ಸಾಧ್ಯವಾಗಿದೆ. ಭವ್ಯ ಭಾರತದಲ್ಲಿ ಸಂಸ್ಕಾರಯುತ ಜೀವನವನ್ನು ನಡೆಸುವ ಜವಾಬ್ದಾರಿ ಇಂದಿನ ಯುವ ಜನಾಂಗಕ್ಕಿದೆ. ರಾಷ್ಟ್ರದ ಉನ್ನತಿಗಾಗಿ ಯುವ ಜನತೆ ಶ್ರಮಿಸಬೇಕು ಎಂದು ಬೆಟ್ಟಂಪಾಡಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಪ್ರೊ. ದಾಮೋದರ ಕಣಜಾಲು ಹೇಳಿದರು.

ನಗರದ ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜ್(ಸ್ವಾಯತ್ತ) ಹಾಗೂ ವಿವೇಕಾನಂದ ವಿದ್ಯಾವರ್ಧಕ ಸಂಘದ ಸಹಯೋಗದೊಂದಿಗೆ ನಡೆದ ವಿದ್ಯಾರ್ಥಿ ಸಂಘದ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಯಾಗಿ ಮಾತನಾಡಿದರು.

ಜೀವನದಲ್ಲಿ ದುಡ್ಡು ಗಳಿಸುವುದಕ್ಕಿಂತಲೂ ಹೆಚ್ಚಾಗಿ ಮನಸ್ಸು ಮತ್ತು ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಸನ್ನಡತೆ ಮತ್ತು ಸಜ್ಜನತೆಯನ್ನು ಅಳವಡಿಸಿಕೊಳ್ಳಬೇಕು. ಸಮಸ್ಯೆ ಬಂದಾಗ ಅದನ್ನು ಸವಾಲಾಗಿ ಸ್ವೀಕರಿಸುವ ಮನಸ್ಥಿತಿ ಇಂದಿನ ಯುವಜನಾಂಗಕ್ಕಿಲ್ಲ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ.ಕೆ.ಎಂ. ಕೃಷ್ಣ ಭಟ್, ಪ್ರಕೃತಿಯ ಬಗ್ಗೆ ಪ್ರೀತಿ ಬೆಳೆಸಬೇಕು. ಯಾವುದಾದರೂ ಒಂದು ಸಮಸ್ಯೆ ಬಂದಾಗ ಅದನ್ನು ಬೆಳೆಯಲು ಬಿಡದೆ ಪರಿಹಾರವನ್ನು ಕಂಡುಕೊಳ್ಳಬೇಕು. ನಮ್ಮ ಉದ್ಧಾರ ನಮ್ಮಿಂದಲೇ ಆಗಬೇಕು. ಸಮಸ್ಯೆಗಳು ಏನೇ ಇದ್ದರೂ ಅದರ ವಿರುದ್ಧ ಧ್ವನಿ ಎತ್ತುವ ಕೆಲಸವನ್ನು ಯುವಜನತೆಯಿಂದ ಆಗಬೇಕು ಎಂದು ತಿಳಿಸಿದರು.

ಕಾಲೇಜಿನ ಆಡಳಿತಮಂಡಳಿಯ ಸಂಚಾಲಕ ಮುರಳೀಕೃಷ್ಣ ಕೆ.ಎನ್. ಶುಭ ಹಾರೈಸಿದರು. ಈ ಸಂದರ್ಭ ಸ್ನಾತಕೋತ್ತರ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳಿಂದ ರೂಪಿಸಲ್ಪಟ್ಟ ವಿನೂತನ ಪ್ರಾಯೋಗಿಕ ಪತ್ರಿಕೆಯನ್ನು ಪ್ರೊ. ದಾಮೋದರ ಕಣಜಾಲು ಬಿಡುಗಡೆಗೊಳಿಸಿದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವಿದ್ಯಾರ್ಥಿಗಳನ್ನು ಉಪನ್ಯಾಸಕರನ್ನು ಸನ್ಮಾನಿಸಲಾಯಿತು. ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಆಡಳಿತ ಮಂಡಳಿ ಅಧ್ಯಕ್ಷ ಡಾ. ಶ್ರೀಪತಿ ಕಲ್ಲೂರಾಯ, ಪ್ರಾಚಾರ್ಯ ಪ್ರೊ. ಶ್ರೀಕೃಷ್ಣ ಗಣರಾಜ್ ಭಟ್, ಕೋಶಾಧಿಕಾರಿ ಎಂ. ಶ್ರೀನಿವಾಸ ಸಾಮಂತ್, ಸದಸ್ಯರಾದ ಅನಂತಕೃಷ್ಣ ನಾಯಕ್, ಸುಕುಮಾರ ರಾವ್ ಎನ್.ಎಸ್., ಜಗನ್ನಾಥ ಎ., ಯಮುರ್ಂಜ ಶಂಕರ ಜೋಯಿಸ, ಶಿವಕುಮಾರ್, ವಿದ್ಯಾರ್ಥಿ ಸಂಘದ ಉಪಾಧ್ಯಕ್ಷೆ ಸುಮನಾ, ಕಾರ್ಯದರ್ಶಿ ಅಶ್ವಿನ್ ಕುಮಾರ್, ಜೊತೆ ಕಾರ್ಯದರ್ಶಿ ಗಣೇಶ್ ಕುಮಾರ್ ಉಪಸ್ಥಿತರಿದ್ದರು. ವಿದ್ಯಾರ್ಥಿ ಸಂಘದ ಅಧ್ಯಕ್ಷ ಅಭನೀಶ್ ಕುಮಾರ್ ಸ್ವಾಗತಿಸಿ, ಜೊತೆ ಕಾರ್ಯದರ್ಶಿ ಹಂಪನ ಎಚ್.ಪಿ. ವಂದಿಸಿದರು. ದ್ವಿತೀಯ ಎಂಕಾಂ ವಿದ್ಯಾರ್ಥಿನಿ ಅನನ್ಯಾ ಎಸ್. ನಿರ್ವಹಿಸಿದರು. ಕಾಲೇಜಿನ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಯಕ್ಷ ರಂಜಿನಿಯ ವಿದ್ಯಾರ್ಥಿಗಳಿಂದ ಸಹಸ್ರಾರ-ಸಹಸ್ರಾಕ್ಷಿ ಎನ್ನುವ ಯಕ್ಷಗಾನ ಪ್ರಸಂಗ ನಡೆಯಿತು



ಮುಕ್ಕ ಶ್ರೀನಿವಾಸ್ ವಿವಿ: ಐಇಇಇ ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ



ಮಂಗಳೂರು: ಮುಕ್ಕ ಶ್ರೀನಿವಾಸ್ ಯೂನಿವರ್ಸಿಟಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಆಂಡ್ ಟೆಕ್ನಾಲಜಿಯು ಐಇಇಇ (ಇನ್‌ಸ್ಟಿಟ್ಯೂಟ್ ಆಫ್ ಎಲೆಕ್ಟ್ರಿಕಲ್ ಆ್ಯಂಡ್ ಎಲೆಕ್ಟ್ರಾನಿಕ್ಸ್ ಇಂಜಿನಿಯರ್ಸ್) ಬೆಂಗಳೂರು ಮತ್ತು ಮಂಗಳೂರು ವಿಭಾಗಗಳ ಸಹಭಾಗಿತ್ವದಲ್ಲಿ 'ಹೊಸತಾಗಿ ಬೆಳೆಯುತ್ತಿರುವ ಸಮನ್ವಯ ವಿಜ್ಞಾನ ಮತ್ತು ತಂತ್ರಜ್ಞಾನ'ಗಳ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನ ಮಂಗಳೂರಿನ ಹೋಟೆಲ್ ಶ್ರೀನಿವಾಸ್ ಸಭಾಂಗಣದಲ್ಲಿ ನಡೆಯಿತು.

ಇಸ್ರೋ ಮಾಜಿ ಅಧ್ಯಕ್ಷ ಎ.ಎಸ್ ಕಿರಣ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಭಾರತವು ಈಗ ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದ್ದು, 2047ರ ವೇಳೆಗೆ 'ವಿಕಸಿತ ಭಾರತ' ಗುರಿಯನ್ನು ಸಾಧಿಸುವತ್ತ ಮುನ್ನಡೆಯುತ್ತಿದೆ ಎಂದು ಹೇಳಿದರು. ವಿಜ್ಞಾನ ಮತ್ತು ತಂತ್ರಜ್ಞಾನವು ಮಾನವ ಬದುಕನ್ನು ಉಳಿಸಿಕೊಳ್ಳುವುದಕ್ಕೆ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸುವುದಕ್ಕೆ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಅವರು ಅಭಿಪ್ರಾಯಪಟ್ಟರು.

ಕುಲಾಧಿಪತಿ ಡಾ.ಎ. ಶ್ರೀನಿವಾಸ್ ರಾವ್ ಅಧ್ಯಕ್ಷತೆ ವಹಿಸಿದ್ದರು. ಐಇಇಇ ಮಂಗಳೂರು ಉಪವಿಭಾಗದ ಅಧ್ಯಕ್ಷ ಡಾ. ವೇಣುಗೋಪಾಲ ಪಿ.ಎಸ್., ಶ್ರೀನಿವಾಸ್ ವಿವಿ ವಿಶ್ವಸ್ತ ಮಂಡಳಿ ಸದಸ್ಯ ಇಶಾನ್ ರಾವ್ ಮತ್ತು ಉಪಕುಲಪತಿ ಡಾ.ಕೆ.ಸತ್ಯನಾರಾಯಣ ರೆಡ್ಡಿ, ಕುಲಸಚಿವ ಡಾ.ಅನಿಲ್ ಕುಮಾರ್, ಅಭಿವೃದ್ಧಿ ವಿಭಾಗದ ಕುಲಸಚಿವ ಡಾ. ಅಜಯ್ ಕುಮಾರ್, ಸಮ್ಮೇಳನದ ಪ್ರಧಾನ ಮೇಲ್ವಿಚಾರಕ ಡಾ.ರಾಮಕೃಷ್ಣ ಎನ್. ಹೆಗಡೆ, ಸಂಚಾಲಕ ಪ್ರೊ.ಗೌರವ್ ಪ್ರಸಾದ್ ಮತ್ತು ಸಂಶೋಧನಾ ವಿಭಾಗದ ನಿರ್ದೇಶಕ ಡಾ.ಪ್ರವೀಣ್ ಬಿ.ಎಂ ಉಪಸ್ಥಿತರಿದ್ದರು.

ಬಾಲವಿಕಾಸ ಆಂಗ್ಲ ಮಾಧ್ಯಮ ಶಾಲೆ ವಿದ್ಯಾರ್ಥಿನಿ ಪೂರ್ವಿಗೆ ಸನ್ಮಾನ



- ಬಂಟ್ವಾಳ ತಾಲೂಕಿಗೆ ಪ್ರಥಮ ಸ್ಥಾನಿ, ರಾಜ್ಯಕ್ಕೆ ಆರನೇ ರ್‍ಯಾಂಕ್
- ಪರೀಕ್ಷೆ ಬರೆದ 79 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣ
- ಶಿಕ್ಷಕ ವೃಂದ, ಆಡಳಿತ ಮಂಡಳಿಗೆ ಅಭಿನಂದನೆ

ಬಂಟ್ವಾಳ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 620 ಅಂಕಗಳನ್ನು ಗಳಿಸಿ, ಬಂಟ್ವಾಳ ತಾಲೂಕಿಗೆ ಪ್ರಥಮ ಸ್ಥಾನಿಯಾದ ಹಾಗೂ ರಾಜ್ಯಕ್ಕೆ ಆರನೇ ರ್‍ಯಾಂಕ್ ಪಡೆದ ಮಾಣಿ ಬಾಲವಿಕಾಸ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ಪೂರ್ವಿ ಎ. ಭಾರದ್ವಾಜ್ ನ್ನು ಬಂಟ್ವಾಳ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಮಾಲತಿ ಕೆ, ಅವರು ಶಾಲೆಗೆ ಭೇಟಿ ನೀಡಿ ಅಭಿನಂದಿಸಿದರು.

ಪರೀಕ್ಷೆ ಬರೆದ 79 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣಗೊಳ್ಳಲು ಹಾಗೂ ಬಂಟ್ವಾಳ ತಾಲೂಕಿನಲ್ಲಿ ಸಂಸ್ಥೆ ಮುಂಚೂಣಿಯಲ್ಲಿರಲು ಶ್ರಮಿಸಿದ ಶಾಲೆಯ ಶಿಕ್ಷಕ ವೃಂದವನ್ನು ಹಾಗೂ ಶಾಲಾ ಆಡಳಿತ ಮಂಡಳಿಯ ಕಾರ್ಯ ವೈಖರಿಯನ್ನು ಇವರು ಈ ಸಂದರ್ಭದಲ್ಲಿ ಶ್ಲಾಘಿಸಿದರು.

ಅಭಿನಂದನಾ ಕಾರ್ಯಕ್ರಮದಲ್ಲಿ ಶಿಕ್ಷಣ ಸಂಯೋಜಕ ರಮಾನಂದ, ಸುಧಾ, ಪ್ರತಿಮಾ, ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷ ಪ್ರಹ್ಲಾದ ಶೆಟ್ಟಿ ಜೆ, ಶಾಲಾ ಮುಖ್ಯೋಪಾಧ್ಯಾಯಿನಿ ಶ ಸುಪ್ರಿಯಾ ಡಿ, ಸಾಧಕ ವಿದ್ಯಾರ್ಥಿನಿಯ ಪೋಷಕರಾದ ಅಮಿತ್ ಕುಮಾರ್ ಬಿ. ಜೆ. ಶಿಲ್ಪಾ ಸಿ. ಹಾಗೂ ಶಾಲೆಯ ಶಿಕ್ಷಕ- ಶಿಕ್ಷಕೇತರ ವೃಂದದವರು ಉಪಸ್ಥಿತರಿದ್ದರು.

ಅಕ್ಷಯ ಕಾಲೇಜ್: ಭಿತ್ತಿ ಪತ್ರಿಕೆ ಉದ್ಘಾಟನೆ



ಪುತ್ತೂರು: ಅಕ್ಷಯ ಎಜುಕೇಶನಲ್ ಆ್ಯಂಡ್ ಚಾರಿಟೇಬಲ್ ಟ್ರಸ್ಟ್ ಅಧೀನದಲ್ಲಿರುವ ಅಕ್ಷಯ ಕಾಲೇಜಿನ ಇಂಟೀರಿಯರ್ ಡಿಸೈನ್ ಆಂಡ್ ಡೆಕೋರೇಷನ್ ವಿಭಾಗದ ಭಿತ್ತಿ ಪತ್ರಿಕೆ 'ಆಟಿಲಿಯರ್' ಉದ್ಘಾಟನೆ ಎಲೈಟ್ ಅಸೋಸಿಯೇಷನ್ ಹಾಗೂ ಐಕ್ಯೂಎಸಿ ಅಸೋಸಿಯೇಷನ್ ವತಿಯಿಂದ ನಡೆಯಿತು. ಆರ್ಕಿಟೆಕ್ಟ್ ರಾಮ್ ಪ್ರಕಾಶ್ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿದ್ದ ಪ್ರಾಂಶುಪಾಲ ಸಂಪತ್ ಕೆ. ಪಕ್ಕಳ ಶುಭ ಹಾರೈಸಿದರು. ಆಡಳಿತಾಧಿಕಾರಿ ಅರ್ಪಿತ್ ಟಿ.ಎ., ಎಲೈಟ್ ಅಸೋಸಿಯೇಷನ್ ಸಂಯೋಜಕಿ, ಪದಾಧಿಕಾರಿಗಳು ಹಾಜರಿದ್ದರು.



ಕಾಸರಗೋಡು ಕೂಡ್ಲು ರಾಮದಾಸನಗರದ ಕಾಳ್ಯಂಗಾಡಿನಲ್ಲಿರುವ ಬಾರಿಕಾಡು ಅಂಚಾರಿಲ್ಲಂ ತರವಾಡಿನ ನವೀಕೃತ ತರವಾಡು ಮನೆಯ ಗೃಹ ಪ್ರವೇಶ, ಕೊರತ್ತಿಯಮ್ಮ ಹಾಗೂ ಗುಳಿಗ ದೈವಗಳ ಪುನರ್ ಪ್ರತಿಷ್ಠಾ ಕಲಶಾಭಿಷೇಕವು ಮೇ 17ರಿಂದ 19ರ ತನಕ ಬ್ರಹ್ಮಶ್ರೀ ಉಳಿಯತ್ತಾಯ ವಿಷ್ಣು ಆಸ್ರ ನೇತೃತ್ವದಲ್ಲಿ ಜರಗಲಿದೆ. ಇದರ ಆಮಂತ್ರಣ ಪತ್ರಿಕೆಯನ್ನು ಕೊಂಡೆವೂರು ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಬಿಡುಗಡೆಗೊಳಿಸಿದರು.

ಮಂಗಳೂರು ವಿಶೇಷ ಆರ್ಥಿಕ ವಲಯ (ಎಂಎಸ್‌ಇಜೆಡ್) ಯೋಜನೆಗಾಗಿ ಭೂಮಿ ನೀಡಿದ ಕುಟುಂಬದ ಸದಸ್ಯರ ಅಳಲು

ಸಂತ್ರಸ್ತರಿಗೆ ನೀಡಿದ್ದ ಮೂಲಭೂತ ಭರವಸೆಗಳು ಇಂದಿಗೂ ಜಾರಿಗೆ ಬಂದಿಲ್ಲ

ಮಂಗಳೂರು: ಮಂಗಳೂರು ವಿಶೇಷ ಆರ್ಥಿಕ ವಲಯ (ಎಂಎಸ್‌ಇಜೆಡ್) ಯೋಜನೆಗಾಗಿ ಭೂಮಿ ನೀಡಿದ ಕುಟುಂಬದ ಸದಸ್ಯರಿಗೆ ಎಂಎಸ್‌ಇಜೆಡ್ ಖಾಯಂ ಉದ್ಯೋಗ ನೀಡಿಲ್ಲ ಎಂದು ಭೂಮಿ ನೀಡಿದ ಕುಟುಂಬದ ಸದಸ್ಯರು ಆರೋಪಿಸಿದ್ದಾರೆ.

ಕೈಗಾರಿಕಾ ಅಭಿವೃದ್ಧಿಯ ಹೆಸರಿನಲ್ಲಿ ತಮ್ಮ ಪೀಳಿಗೆಯ ಜೀವನಾಧಾರವಾಗಿದ್ದ ಕೃಷಿ ಭೂಮಿ ಯನ್ನು ಬಿಟ್ಟುಕೊಟ್ಟ ಸ್ಥಳಾಂತರಿತ ರೈತ ಕುಟುಂಬಗಳು ಇಂದು ಗಂಭೀರ ಅನಿಶ್ಚಿತತೆ ಮತ್ತು ಅನ್ಯಾಯದ ಪರಿಸ್ಥಿತಿಯನ್ನು ಎದುರಿಸುತ್ತಿವೆ. ತಮ್ಮ ಭೂಮಿಯನ್ನು ತಾಯಿಯಂತೆ ಪೂಜಿಸುತ್ತಿದ್ದ ಈ ಕುಟುಂಬಗಳು ದೇಶದ ಅಭಿವೃದ್ಧಿಗಾಗಿ ಭೂಮಿಯನ್ನು ತ್ಯಾಗ ಮಾಡಿದ್ದರೂ, ಅವರಿಗೆ ನೀಡಲಾದ ಮೂಲಭೂತ ಭರವಸೆಗಳು ಇಂದಿಗೂ ಜಾರಿಗೆ ಬಂದಿಲ್ಲ ಎಂದು ಉದ್ಯೋಗಾಕಾಂಕ್ಷಿಗಳು ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ Rehabilitation and Resettlement ನೀತಿ ಹಾಗೂ ಕರ್ನಾಟಕ ಸರ್ಕಾರದ ಆದೇಶಗಳ ಪ್ರಕಾರ, ಭೂಸ್ವಾಧೀನದಿಂದ ಬಾಧಿತರಾದ ಪ್ರತಿಯೊಂದು ಕುಟುಂಬಕ್ಕೂ ಒಂದು ಉದ್ಯೋಗವನ್ನು ನೀಡಬೇಕು ಎಂಬ ಸ್ಪಷ್ಟ ನಿಯಮವಿದೆ. ಈ ಭರವಸೆಗಳು ಸರ್ಕಾರದ ಆದೇಶಗಳು, ಲೀಸ್ ಒಪ್ಪಂದಗಳು ಮತ್ತು ನೀತಿ ಪ್ರಾವಧಾನಗಳ ಮೂಲಕ ದಾಖಲೆ ಬದ್ಧವಾಗಿವೆ. ಆದಾಗ್ಯೂ, ಈ ಭರವಸೆಗಳು ಕೇವಲ ದಾಖಲೆಗೆ ಸೀಮಿತವಾಗಿದ್ದು ಕಾರ್ಯರೂಪಕ್ಕೆ ಬಂದಿಲ್ಲ ಎಂದು ಸ್ಥಳಾಂತರಿತ ಕುಟುಂಬಗಳು ಆಕ್ರೋಶ ವ್ಯಕ್ತಪಡಿಸಿವೆ.

ಈ ವಿಷಯವನ್ನು ಸಂಬಂಧಿತ ಅಧಿಕಾರಿಗಳ ಗಮನಕ್ಕೆ ಹಲವು ಬಾರಿ ತರಲಾಗಿದ್ದರೂ, ಪರಿಣಾಮಕಾರಿ ಕ್ರಮ ಆಗಿಲ್ಲ, ಸಾರ್ವಜನಿಕ ಉದ್ದಿಮೆಗಳ ಇಲಾಖೆ ಈ ವಿಚಾರವನ್ನು ಪರಿಶೀಲಿಸಿ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯಕ್ಕೆ ಮುಂದಿನ ಕ್ರಮಕ್ಕಾಗಿ ಕಳುಹಿಸಿರುವುದು ದಾಖಲೆಗಳಲ್ಲಿ ಇದೆ. ಆದರೂ, ಇಂದಿನ ತನಕ ಯಾವುದೇ ಸ್ಪಷ್ಟ ನಿರ್ಧಾರ ಅಥವಾ ಅನುಷ್ಠಾನಾತ್ಮಕ ಕ್ರಮಗಳು ಪ್ರಕಟವಾಗಿಲ್ಲ ಎಂಬುದು ಕುಟುಂಬಗಳ ಅಭಿಪ್ರಾಯವಾಗಿದೆ.

ಜಿಎಂಪಿಎಲ್ ಸಂಸ್ಥೆ ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ ಸಾರ್ವಜನಿಕ ಕ್ಷೇತ್ರದ ಸಂಸ್ಥೆಯಾಗಿದ್ದರೂ, ಸರ್ಕಾರದ ಆರ್ ಆ್ಯಂಡ್ ಆರ್ ನೀತಿಯನ್ನು ಸಂಪೂರ್ಣವಾಗಿ ಜಾರಿಗೆ ತರಲು ಹಿಂದೇಟು ಹಾಕುತ್ತಿದೆ. ಕೈಗಾರಿಕೆಗಳ ಸ್ಥಾಪನೆಗೆ ಭೂಮಿ ಅಗತ್ಯವಿದ್ದಾಗ, ಅದೇ ಭೂಮಿಯನ್ನು ಬಿಟ್ಟುಕೊಟ್ಟ ಸ್ಥಳೀಯ ರೈತ ಕುಟುಂಬಗಳ ವಿದ್ಯಾರ್ಹತೆಯನ್ನು ಹೊಂದಿದ ನಿರ್ವಸಿತರಿಗೆ ಉದ್ಯೋಗ ನೀಡುವಲ್ಲಿ ವಿಳಂಬ ಮತ್ತು ನಿರ್ಲಕ್ಷ್ಯ ತೋರಲಾಗುತ್ತಿದೆ ಎಂದು ಆರೋಪಿಸಲಾಗಿದೆ.

ಸ್ಥಳಾಂತರಿತ ಕುಟುಂಬಗಳ ಪ್ರಕಾರ, ಭರವಸೆಗಳನ್ನು ನಂಬಿ ಭೂಮಿ ಬಿಟ್ಟುಕೊಟ್ಟ ಕುಟುಂಬಗಳು ಇಂದು ಉದ್ಯೋಗದ ನಿರೀಕ್ಷೆಯಲ್ಲಿ ವರ್ಷಗಳಿಂದ ಕಾಯುತ್ತಿದ್ದು, ಯಾವುದೇ ಸ್ಪಷ್ಟ ಸಮಯಾವಧಿ ಅಥವಾ ಕ್ರಮಗಳ ಬಗ್ಗೆ ಮಾಹಿತಿ ಇಲ್ಲದಿರುವುದು ಅವರ ಅನಿಶ್ಚಿತತೆಯನ್ನು ಹೆಚ್ಚಿಸಿದೆ. ಆದ್ದರಿಂದ, ಸಂಬಂಧಿತ ಪ್ರಾಧಿಕಾರಗಳು ಈ ವಿಷಯವನ್ನು ಸಮಗ್ರವಾಗಿ ಪರಿಶೀಲಿಸಿ, ದಾಖಲೆಗಳ ಆಧಾರದ ಮೇಲೆ ಸ್ಪಷ್ಟ ಮತ್ತು ನ್ಯಾಯಸಮ್ಮತ ನಿರ್ಧಾರ ಕೈಗೊಳ್ಳುವುದು ಅತ್ಯಾವಶ್ಯಕವಾಗಿದೆ ಎಂದು ಭೂಮಿ ನೀಡಿರುವ ಕುಟುಂಬಗಳ ಸದಸ್ಯರು ಒತ್ತಾಯಿಸಿದ್ದಾರೆ.

> **ಖಾಯಂ ಉದ್ಯೋಗ ನೀಡಲಿ**
> **ಎಂಎಸ್‌ಇಜೆಡ್‌ಗೆ ಭೂಮಿ ಬಿಟ್ಟುಕೊಟ್ಟವರಿಗೆ ಉದ್ಯೋಗ ನೀಡುವಂತೆ ಕೇಂದ್ರ ಸರಕಾರ ಸ್ಪಷ್ಟವಾಗಿ ತಿಳಿಸಿದ್ದರೂ, ಜಿಎಂಪಿಎಲ್ ಸಂಸ್ಥೆ ಭೂನಿರ್ವಸಿತರಿಗೆ ಉದ್ಯೋಗ ನೀಡಲು ಹಿಂದೇಟು ಹಾಕುತ್ತಿದೆ. ಜಿಎಂಪಿಎಲ್ ಸಂಸ್ಥೆಯ ಈ ಧೋರಣೆ ಸರಿಯಲ್ಲ. ಭೂಮಿ ಬಿಟ್ಟುಕೊಟ್ಟ ಅರ್ಹ ಉದ್ಯೋಗಾಕಾಂಕ್ಷಿಗಳಿಗೆ ತಕ್ಷಣ ಖಾಯಂ ಉದ್ಯೋಗ ನೀಡಬೇಕು.**
> • ಮಹೇಶ್ ಕೋಟ್ಯಾನ್, ಬಜ್ಪೆ ನಿವಾಸಿ

ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವ ಸಂಭ್ರಮ

ಶಿಲಾಮಯ ಗರ್ಭಗುಡಿಯಲ್ಲಿ ಶ್ರೀ ದೇವರ ಪುನರ್ ಪ್ರತಿಷ್ಠೆ

ಪಡುಬಿದ್ರಿ: ಸಮಗ್ರವಾಗಿ ಜೀರ್ಣೋದ್ಧಾರಗೊಂಡ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ನೂತನವಾಗಿ ನಿರ್ಮಿಸಲ್ಪಟ್ಟ ಶಿಲಾಮಯಗರ್ಭಗುಡಿಯಲ್ಲಿಶ್ರೀಮಹಾಲಿಂಗೇಶ್ವರ ದೇವರ ಪುನಃಪ್ರತಿಷ್ಠೆಯು ಶ್ರೀ ಕ್ಷೇತ್ರದ ತಂತ್ರಿ ಕಂಬ್ಳಕಟ್ಟ ರಾಧಾಕೃಷ್ಣ ಉಪಾಧ್ಯಾಯರ ನೇತೃತ್ವದಲ್ಲಿ ಬುಧವಾರ ಜರಗಿತು. ಆ ಪ್ರಯುಕ್ತ ಅಷ್ಟೋತ್ತರ ಶತನಾರಿಕೇಲ ಗಣಯಾಗ, ಮಹಾರುದ್ರಯಾಗ, ಪ್ರತಿಷ್ಠಾ ಯಾಗ, ಪೀಠಿಕಾ ಯಾಗ, ಶಕ್ತಿಯಾಗವು ಜರಗಿದ್ದು ಸುಮಹೂರ್ತದಲ್ಲಿಶ್ರೀ ಮಹಾಲಿಂಗೇಶ್ವರ ದೇವರ ಪ್ರತಿಷ್ಠೆಯು ಜರಗಿತು. ಬಳಿಕ ಅಷ್ಟಬಂಧ ಲೇಪನ, ನವಕ ಪ್ರಧಾನ ಕಲಶಾಭಿಷೇಕ, ಪ್ರಸನ್ನ ಪೂಜೆ, ಪ್ರತಿಜ್ಞಾ ವಿಧಿ, ಮಹಾ ಪೂಜೆ, ಗಣಪತಿ ದೇವರ ಶುದ್ಧಿ ಪ್ರಕ್ರಿಯಾದಿಗಳು ನೆರವೇರಿತು.

ಮುಂಬೈ ಸಮಿತಿಯಿಂದ ಅನ್ನಸಂತರ್ಪಣೆ

ಆನಂತರದಲ್ಲಿ ಪಲ್ಲಪೂಜೆಯು ಜರಗಿ ಜೀರ್ಣೋದ್ಧಾರ ಮುಂಬೈ ಸಮಿತಿಯ ವತಿಯಿಂದ ಮಹಾ ಅನ್ನಸಂತರ್ಪಣೆ ನಡೆಯಿತು. ಶ್ರೀ ಅದಮಾರು







ಮಠದ ಶ್ರೀ ಈಶಪ್ರಿಯತೀರ್ಥ ಶ್ರೀಪಾದರ ದಿವ್ಯಸಾನಿಧ್ಯ ಮತ್ತು ಸಂಸ್ಥಾನ ಪೂಜೆಯು ಜರಗಿತು. ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಡಾ.ಕೆ. ಪ್ರಕಾಶ್ ಶೆಟ್ಟಿ ನೇತೃತ್ವದಲ್ಲಿ ದಾನಿಗಳನ್ನು ಗುರುತಿಸಿ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭ ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷ, ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಮಾಜಿ ಶಾಸಕ ಲಾಲಾಜಿ ಆರ್. ಮೆಂಡನ್, ಕೊರ್ನಾಯ ಪದ್ಮನಾಭ ರಾವ್ ಅನುವಂಶಿಕ ಮೊಕ್ತೇಸರ ರತ್ನಾಕರರಾಜ ಅರಸು ಕಿನ್ನಿಕ್ಕ ಬಲ್ಲಾಳ್, ಪೇಟೆಮನೆ ಭವಾನಿಶಂಕರ್ ಹೆಗ್ಡೆ ಕೊರ್ನಾಯ ಶ್ರೀಪತಿ ರಾವ್, ಕಾರ್ಯನಿರ್ವಹಣಾಧಿಕಾರಿ ಕೆ. ರಾಜಗೋಪಾಲ ಉಪಾಧ್ಯಾಯ, ಅರ್ಚಕ ಎಚ್.ಪದ್ಮನಾಭ ಭಟ್, ವೈ.ಗುರುರಾಜ ಭಟ್, ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಮುರಳಿನಾಥ ಶೆಟ್ಟಿ ಜೀರ್ಣೋದ್ಧಾರ ಸಮಿತಿಯ ಪ್ರಧಾನ ಕಾರ್ಯದರ್ಶಿ ಪಿ. ರಾಘವೇಂದ್ರ ನಾವಡ, ಬ್ರಹ್ಮಕಲಶೋತ್ಸವ ಮತ್ತು ಜೀರ್ಣೋದ್ಧಾರ ಸಮಿತಿಯ ಪದಾಧಿಕಾರಿಗಳು, ವಿವಿಧ ಉಪಸಮಿತಿಗಳ ಸಂಚಾಲಕರು, ಸರ್ವ ಸದಸ್ಯರು ಊರಿನ ಹತ್ತು ಸಮಸ್ತರು ಉಪಸ್ಥಿತರಿದ್ದರು.

ವಿವಿಧ ಧಾರ್ಮಿಕ ವಿಧಿವಿಧಾನ

ದೇಗುಲದಲ್ಲಿ ವಿವಿಧ ಧಾರ್ಮಿಕ ವಿಧಿವಿಧಾನ ನೆರವೇರಿತು. ಸಂಜೆ ಅಷ್ಟದಿಕ್ಪಾಲ, ಬಲಿಶಿಲಾ ಪ್ರತಿಷ್ಠೆ, ಮಹಾಬಲಿ ಪೀಠ ಪ್ರತಿಷ್ಠೆ, ಧ್ವಜಾಧಿವಾಸ, ದುರ್ಗಾರಾಧನೆ, ಮುಹೂರ್ತ ಬಲಿ, ರಾತ್ರಿ ಪೂಜೆ, ಗಣಪತಿ ದೇವರ ಬಿಂಬ ಶಯ್ಯಾ ಕಲ್ಪನೆ, ಶಿರಸ್ತತ್ವಯಾಗ, ಅಧಿವಾಸಯಾಗ, ನಪುಂಸಕ ಶಿಲಾನ್ಯಾಸ, ರತ್ನನ್ಯಾಸಯಾಗ, ಭದ್ರಕಮಂಡಲ ಪೂಜೆ, ದುರ್ಗಾರಾಧನೆಯು ನೆರವೇರಿತು.

ಉಡುಪಿ ನೇತ್ರಜ್ಯೋತಿ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕ ದಿನಾಚರಣೆ



ಉಡುಪಿ: ನೇತ್ರಜ್ಯೋತಿ ಕಾಲೇಜು ಹಾಗೂ ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆಯ ವತಿಯಿಂದ ಅಂತಾರಾಷ್ಟ್ರೀಯ ಕಾರ್ಮಿಕ ದಿನಾಚರಣೆಯನ್ನು ವಿಶಿಷ್ಟವಾಗಿ ಆಚರಿಸಲಾಯಿತು.

ಮುಖ್ಯ ಅತಿಥಿ ಉಡುಪಿ ಕಾರ್ಮಿಕ ಅ ಕಾರಿ ಕಮಲ್ ಶಾ ಅಲ್ತಾಫ್ ಅಹ್ಮದ್ ಮಾತನಾಡಿ, ದೇಹವನ್ನು ನಾವು ಸ್ವಚ್ಛವಾಗಿ ಇಡುವಂತೆ ಸಮಾಜವನ್ನೂ ಸಹ ಸ್ವಚ್ಛವಾಗಿ ಇಡುವುದು ಪ್ರತಿಯೊಬ್ಬ ವ್ಯಕ್ತಿಯ ಆದ್ಯ ಕರ್ತವ್ಯ. ಇಂದು ಸಮಾಜದ ಕಟ್ಟಕಡೆಯ ವ್ಯಕ್ತಿಗಳಾದ ಪೌರಕಾರ್ಮಿಕರು ಹಾಗೂ ಸ್ವಚ್ಛತಾ ಸಿಬ್ಬಂದಿಯನ್ನು ಗುರುತಿಸಿ ಸನ್ಮಾನ ಮಾಡಿರುವುದು ಸಂತೋಷ ತಂದಿದೆ ಎಂದರು.

ಗೌರವ ಅತಿಥಿಯಾಗಿದ್ದ ಕುಂದಾಪುರದ ಕಾರ್ಮಿಕಅಧಿಕಾರಿವಿಜಯೇಂದ್ರಕಾರ್ಮಿಕ ಕಾನೂನುಗಳ ಬಗ್ಗೆ ವಿವರವಾಗಿ ತಿಳಿಸಿದರು. ಉಡುಪಿ ಕಾರ್ಮಿಕ ಅಧಿಕಾರಿ ಮಲ್ಲಿಕ್ ಪ್ರಸಾದ್ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಬಗ್ಗೆ ಮಾತನಾಡಿದರು. ನೇತ್ರಜ್ಯೋತಿ ಕಾಲೇಜು ಹಾಗೂ ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆಯ ಸಂಸ್ಥಾಪಕ ಅಧ್ಯಕ್ಷ ನಾಡೋಜ ಡಾ. ಕೃಷ್ಣ ಪ್ರಸಾದ್ ಕೂಡ್ಲು ಅಧ್ಯಕ್ಷತೆಯನ್ನು ವಹಿಸಿದ್ದರು. ಪ್ರಾಸ್ತಾವಿಕವಾಗಿ ಕಾಲೇಜಿನ ಅಧ್ಯಕ್ಷೆ ರಶ್ಮಿ ಕೃಷ್ಣಪ್ರಸಾದ್ ಮಾತನಾಡಿದರು. ವೇದಿಕೆಯಲ್ಲಿ ಕಾಲೇಜಿನ ಸಿಒಒ ಡಾ. ಗೌರಿ ಪ್ರಭು ಉಪಸ್ಥಿತರಿದ್ದರು. ವಿದ್ಯಾರ್ಥಿನಿಯರಾದ ಅನಿಷಾ, ಸಂಗಡಿಗರು ಪ್ರಾರ್ಥಿಸಿದರು. ಪ್ರಸಾದ್ ನೇತ್ರಾಲಯದ ಆಡಳಿತಾಧಿಕಾರಿ ಶ್ರೀ ಮಧ್ವ ವಲ್ಲಭ ಸ್ವಾಗತಿಸಿದರು. ಶ್ರೀ ಮಾಧವ ಪೂಜಾರಿ ನಿರೂಪಿಸಿ ವಂದಿಸಿದರು.

ಮುನ್ಸಿಪಾಲಿಟಿಕರ್ಮಚಾರಿಗಳಾದಆನಂದ, ಮಹದೇವ್, ಸುರೇಶ್, ರಾಜೇಶ್ ಹಾಗೂ ನೇತ್ರಜ್ಯೋತಿ ಕಾಲೇಜು ಮತ್ತು ಪ್ರಸಾದ್ ನೇತ್ರಾಲಯ ಉಡುಪಿಯ ಸ್ವಚ್ಛತಾ ಸಿಬ್ಬಂದಿ ಜಯಂತಿ, ವನಜ, ಸುಮಾ, ಲಲಿತಾ ಮತ್ತು ವಿನಯ ಅವರನ್ನು ಸನ್ಮಾನಿಸಲಾಯಿತು.

ಆತ್ರಾಡಿ, ಚಿತ್ತೇರಿ, ಕಂಬಳಗದ್ದೆ ದೈವಸ್ಥಾನ ನಿರ್ಮಾಣಕ್ಕೆ ಶಿಲಾನ್ಯಾಸ



ಕುಂದಾಪುರ: ಜೀರ್ಣೋದ್ಧಾರಗೊಳ್ಳಲಿರುವ ವಂಡ್ಸೆ ಗ್ರಾಮದ ಆತ್ರಾಡಿ ಶ್ರೀ ಬ್ರಹ್ಮಲಿಂಗೇಶ್ವರ, ಚಿಕ್ಕು ಪರಿವಾರ ದೇವಸ್ಥಾನ ಚಿತ್ತೇರಿ ಹಾಗೂ ಕಂಬಳಗದ್ದೆ ಶ್ರೀ ಹೋರ್ ಬೊಬ್ಬರ್ಯ ದೈವಸ್ಥಾನದ ಶಿಲಾನ್ಯಾಸ ಕಾರ್ಯಕ್ರಮ ಶುಕ್ರವಾರ ನಡೆಯಿತು.

ಹೈದರಾಬಾದ್ ಸುಪ್ರಭಾತ್ ಗ್ರೂಪ್‌ನ ಮುಖ್ಯಸ್ಥ ಕೃಷ್ಣಮೂರ್ತಿ ಮಂಜರು ಮಾರಣಕಟ್ಟೆ ಶ್ರೀ ಬ್ರಹ್ಮಲಿಂಗೇಶ್ವರ ದೇವಸ್ಥಾನ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಿ, ಅತ್ಯಂತ ಶೀಘ್ರವಾಗಿ ದೇವಸ್ಥಾನಗಳ ನಿರ್ಮಾಣವಾಗಲಿ. ದೇವಸ್ಥಾನ ಜೀರ್ಣೋದ್ಧಾರ ಮಹಾತ್ಕಾರ್ಯದಲ್ಲಿ ಪ್ರತಿಯೊಬ್ಬರೂ ಶ್ರಮಿಸುವ ಮೂಲಕ ಶ್ರೀದೇವರ ಕೃಪೆಗೆ ಪಾತ್ರರಾಗಬೇಕು ಎಂದು ಹೇಳಿದರು.

ಕೋಟದ ಗೀತಾನಂದ ಫೌಂಡೇಶನ್ ಪ್ರವರ್ತಕ ಆನಂದ್ ಸಿ.ಕುಂದರ್ ಅವರು ಶ್ರೀ ಚಿಕ್ಕಮ್ಮ ದೈವಸ್ಥಾನ (ಚಿತ್ತೇರಿ) ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಿದರು. ಹಳೆಯಮ್ಮ ದೇವಸ್ಥಾನ ನಿರ್ಮಾಣಕ್ಕೆ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ನಾರಾಯಣ ಶೆಟ್ಟಿ ಶಿಲಾನ್ಯಾಸ ನೆರವೇರಿಸಿದರು. ಶ್ರೀ ಕುದ್ರ ಬ್ರಹ್ಮ ದೈವಸ್ಥಾನ (ಚಿತ್ತೇರಿ)ಕ್ಕೆ ಹಿರಿಯರಾದ ಕಲ್ಮಾಡಿ ಮರ್ಲ ಪೂಜಾರಿ ಶಿಲಾನ್ಯಾಸ ನೆರವೇರಿಸಿದರು. ಕಂಬಳಗದ್ದೆ ಶ್ರೀ ಹೋರ್ ಬೊಬ್ಬರ್ಯ ದೈವಸ್ಥಾನ ನಿರ್ಮಾಣಕ್ಕೆ ಕುಂದಾಪುರ ಚಿನ್ಮಯಿ ಆಸ್ಪತ್ರೆಯ ಎಲುಬು ಮತ್ತು ಕೀಲು ರೋಗತಜ್ಞರಾದ ಡಾ. ದಿನೇಶ ಶೆಟ್ಟಿ ಶಿಲಾನ್ಯಾಸ ನೆರವೇರಿಸಿದರು. ಈ ಸಂದರ್ಭದಲ್ಲಿ ಆನಂದ ಸಿ.ಕುಂದರ್, ಡಾ.ದಿನೇಶ ಶೆಟ್ಟಿ ಅವರನ್ನು ಜೀರ್ಣೋದ್ಧಾರ ಸಮಿತಿಯ ವತಿಯಿಂದ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾಜಿ ಶಾಸಕ, ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ ಕೆ.ಗೋಪಾಲ ಪೂಜಾರಿ, ದೇವಸ್ಥಾನದ ಆಡಳಿತ ಮೊಕ್ತೇಸರ ಡಾ.ಕುಸುಮಾಕರ ಶೆಟ್ಟಿ ನಿವೃತ್ತ ಶಸ್ತ್ರಚಿಕಿತ್ಸಕ ತಜ್ಞರಾದ ಡಾ.ಅಂಪಾರು ವಸಂತ ಶೆಟ್ಟಿ ಜೀರ್ಣೋದ್ಧಾರ ಸಮಿತಿ ಪದಾಧಿಕಾರಿಗಳು, ಕುಟುಂಬಸ್ಥರು, ಸ್ಥಳೀಯ ಗಣ್ಯರು, ಅರ್ಚಕರು ಇದ್ದರು. ಎ. ಜಯಕರ ಶೆಟ್ಟಿ ಸ್ವಾಗತಿಸಿದರು.

ಅಚ್ಲಾಡಿಯಲ್ಲಿ ಗೆಳೆಯರ ಬಳಗ ಕ್ರೀಡಾಸಂಘದ ಸನ್‌ಶೈನ್ ಉತ್ಸವ



ಕೋಟ: ಅಚ್ಲಾಡಿ ಸನ್‌ಶೈನ್ ಗೆಳೆಯರ ಬಳಗ ಕ್ರೀಡಾಸಂಘ ಆಶ್ರಯದಲ್ಲಿ ಸನ್‌ಶೈನ್ ಉತ್ಸವ ಅಚ್ಲಾಡಿ ಸನ್‌ಶೈನ್ ಕ್ರೀಡಾಂಗಣದಲ್ಲಿ ಜರಗಿತು.

ಕುಂದಾಪುರ ಶಾಸಕ ಕಿರಣ್ ಕುಮಾರ್ ಕೊಡ್ಗಿ ಕಾರ್ಯಕ್ರಮದಲ್ಲಿ ಮಾತನಾಡಿ, ಸನ್‌ಶೈನ್ ಸಂಸ್ಥೆ 2 ದಶಕಗಳಿಂದ ಈ ಊರಿನಲ್ಲಿ ಸಾಂಸ್ಕೃತಿಕ, ಸಮಾಜಸೇವಾ ವಾತಾವರಣ ಹುಟ್ಟುಹಾಕಿರುವುದು ವಿಶೇಷ ಎಂದರು.

ಉದ್ಯಮಿ ಸುಗ್ಗಿ ಸುಧಾಕರ ಶೆಟ್ಟಿ, ದಿನೇಶ್ ಹೆಗ್ಡೆ ಮೊಳಹಳ್ಳಿ, ಜಿಲ್ಲಾ ಬಿಜೆಪಿ ಯುವಮೋರ್ಚಾ ಅಧ್ಯಕ್ಷ ಪೃಥ್ವಿರಾಜ್ ಶೆಟ್ಟಿ ಬಿಲ್ಲಾಡಿ ಶುಭ ಹಾರೈಸಿದರು.

ಈ ಸಂದರ್ಭ ಎಸ್ಸೆಸೆಲ್ಸಿಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಪ್ರೀತಮ್ ಪೂಜಾರಿ ಮೊಳಹಳ್ಳಿ ಹಾಗೂ ಗ್ರಾ.ಪಂ. ಮಾಜಿ ಸದಸ್ಯ ಅಚ್ಲಾಡಿ ಚಂದ್ರಶೇಖರ್ ಶೆಟ್ಟಿ ಮುಖ್ಯಮಂತ್ರಿ ಪದಕ ಪುರಸ್ಕೃತ ಪೊಲೀಸ್ ಅಧಿಕಾರಿ ಚಂದ್ರ ಶೆಟ್ಟಿ ಕೊಮೆ, ಜಿಲ್ಲಾ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ ಪುರಸ್ಕೃತ ವಿಜಯ ಟೀಚರ್ ಅವರನ್ನು ಸಮ್ಮಾನಿಸಲಾಯಿತು. ಕಾಮಿಡಿ ಕಿಲಾಡಿಗಳು ತಂಡದ ಜಗ್ಗಪ್ಪ ಹುಲಿಕಾರ್ತಿಕ್ ಅವರನ್ನು ಗೌರವಿಸಲಾಯಿತು. ಶೈಕ್ಷಣಿಕ ಸಾಧಕ ಪ್ರೀತಮ್ ಪೂಜಾರಿ ಅವರಿಗೆ ಶೈಕ್ಷಣಿಕ ಸಹಾಯಧನ ವಿತರಿಸಲಾಯಿತು. ಅನಾಥಾಶ್ರಮಕ್ಕೆ ಸಹಾಯಧನ, ಮೂಡುಕೇರಿ ಶಾಲೆ ಶೈಕ್ಷಣಿಕ ಸಹಾಯಧನ ನೀಡಲಾಯಿತು.

ಸಂಸ್ಥೆಯ ಅಧ್ಯಕ್ಷ ಗಿರೀಶ್ ಎಂ.ಎನ್. ಅಧ್ಯಕ್ಷತೆ ವಹಿಸಿದ್ದರು. ಅಚ್ಲಾಡಿ ಸಿದ್ಧಿವಿನಾಯಕ ದೇಗುಲದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಬಾಲಕೃಷ್ಣ ಶೆಟ್ಟಿ, ಸನ್-ಇನ್ ಸೆಕ್ಯೂರಿಟಿ ಸಂಸ್ಥೆಯ ಕೃಷ್ಣ ಪೂಜಾರಿ ಹಳವಳ್ಳಿ, ಉದ್ಯಮಿ ಗಣೇಶ್‌ಪ್ರಸಾದ್ ಕಾಂಚನ್ ಶಿರಿಯಾರ, ಕನ್ನಡ ಚಲನಚಿತ್ರ ನಿರ್ಮಾಪಕ ನಾಗೇಂದ್ರ ಜೋಷಿ, ಗುರುಪ್ರಸಾದ್ ಶಿರೂರುಮೂರ್ಕೈ, ಬಾರ್ಕೂರು ಶ್ರೀ ಪಂಚಲಿಂಗೇಶ್ವರ ದೇಗುಲದ ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿ ಶ್ರೀನಿವಾಸ ಶೆಟ್ಟಿ, ಉದ್ಯಮಿ ಸುಧೀಂದ್ರ ಶೆಟ್ಟಿಶಿರಿಯಾರ, ಯುವ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಅಜಿತ್ ಶೆಟ್ಟಿಯಾಳಕ್ಕು, ಉದ್ಯಮಿ ರಕ್ಷಿತ್ ಪೂಜಾರಿ, ಹರೀಶ್ ಶೆಟ್ಟಿ ಲಕ್ಷ್ಮೀ ಎಕ್ಸ್‌ಪ್ರೆಸ್, ಸಂಘದ ಗೌರವಾಧ್ಯಕ್ಷ ಯೋಗೀಶ್ ಗಾಣಿಗ, ಕಾಯದರ್ಶಿ ಪ್ರವೀಣ್ ಆಚಾರ್ಯ, ಖಜಾಂಚಿ ಗುರುಪ್ರಸಾದ್ ಮೊದಲಾದವರಿದ್ದರು. ಜಾಬ್ಲಿನ್ ಆಮಾಸೆಬೈಲು ನಿರೂಪಿಸಿದರು.

ಕೋಟ ಪಡುಕರೆ ಕಾಲೇಜಿನಲ್ಲಿ ವಿಶ್ವ ಆರೋಗ್ಯ ದಿನಾಚರಣೆ, ಉಪನ್ಯಾಸ



ಕೋಟ: ಲಕ್ಷ್ಮೀ ಸೋಮ ಬಂಗೇರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾಲೇಜಿನ ಐಕ್ಯೂಎಸಿ, ಸಮಾಜಶಾಸ್ತ್ರ ವಿಭಾಗ ಮತ್ತು ಮಹಿಳಾ ಘಟಕದ ವತಿಯಿಂದ ವಿಶ್ವ ಆರೋಗ್ಯ ದಿನ ಉಪನ್ಯಾಸ ಕಾರ್ಯಕ್ರಮ ಇತ್ತೀಚಿಗೆ ಹಮ್ಮಿಕೊಂಡಿತು.

ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಪುತ್ತೂರು ಇದರ ಸಹ ಪ್ರಾಧ್ಯಾಪಕಿ ಡಾ. ಸುಚಿತ್ರಾ ಎಸ್.ಆರ್. ಉದ್ಘಾಟಿಸಿ, ಪ್ರಚಲಿತ ಸಮಾಜದಲ್ಲಿ ಆರೋಗ್ಯಕರ ಜೀವನ ಶೈಲಿಯ ಕುರಿತು ಉಪನ್ಯಾಸ ನೀಡುತ್ತಾ ವಿದ್ಯಾರ್ಥಿಗಳು ಆರೋಗ್ಯಕರ ಜೀವನ ನಡೆಸಲು ಆರೋಗ್ಯಕರವಾದ ಆಹಾರಾಭ್ಯಾಸವನ್ನು ರೂಢಿಸುವ ಅವಶ್ಯಕತೆಯಿದೆ ಎಂದು ತಿಳಿಸಿದರು.

ಪ್ರಾಂಶುಪಾಲ ಡಾ. ರಾಜೇಂದ್ರ ಎಸ್. ನಾಯಕ ಅಧ್ಯಕ್ಷತೆ ವಹಿಸಿ ಮಾತನಾಡಿ, ಆಧುನಿಕ ಕಾಲಘಟ್ಟದಲ್ಲಿ ನಮ್ಮ ಆಹಾರ ಪದ್ಧತಿಯಲ್ಲಿ ಆಗಿರುವ ಬದಲಾವಣೆಗಳು, ಪರಿಸರ ಮಾಲಿನ್ಯತೆ ಮುಂತಾದವು ಆರೋಗ್ಯವಂತ ಸಮಾಜವನ್ನು ನಿರ್ಮಾಣ ಮಾಡಲು ತೊಡಕನ್ನುಂಟುಮಾಡುತ್ತಿದೆ ಎಂದು ಹೇಳಿದರು.

ಉಪನ್ಯಾಸಕಿ ಡಾ. ಸುನೀತ ವಿ. ವಿಶ್ವ ಆರೋಗ್ಯ ದಿನದ ಪ್ರಸ್ತುತತೆಯನ್ನು ತಿಳಿಸಿದರು. ಇತಿಹಾಸ ಉಪನ್ಯಾಸಕಿ ಡಾ. ರಶ್ಮಿ ಸ್ವಾಗತಿಸಿದರು. ಅರ್ಥಶಾಸ್ತ್ರ ಉಪನ್ಯಾಸಕಿ ಸುಜಾತ ವಂದಿಸಿದರು. ಭೂಮಿಕ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಐಕ್ಯೂ ಎ ಸಿ ಸಂಚಾಲಕ ಡಾ. ಸುಬ್ರಮಣ್ಯ, ವಿದ್ಯಾರ್ಥಿ ಪ್ರತಿನಿಧಿ ರಕ್ಷಿತಾ ತೃತೀಯ ಬಿ.ಎ ಉಪಸ್ಥಿತರಿದ್ದರು.

ರಸರಂಗ ಪ್ರಸ್ತುತಿಯ ತಾಳಮದ್ದಳೆ ಪ್ರಸಂಗ ಪ್ರತಿ ಭಾಗವತರಿಗೆ ಹಸ್ತಾಂತರ



ಕೋಟ: ವಾಸುದೇವ ಸಾಮಗರು ಅಸಾಮಾನ್ಯ ಪ್ರತಿಭೆ. ಹಲವು ಕಲಾವಿದರನ್ನು ಸಂಯಮಂ ತಾಳಮದ್ದಳೆಯ ತಂಡದಲ್ಲಿ ಬೆಳೆಸಿದವರು. ಉದಯೋನ್ಮುಖ ಕಲಾವಿದರಿಗೆ ಅವಕಾಶ ನೀಡುತ್ತಾ ಅವರನ್ನು ರಂಗಕ್ಕಿಳಿಸಿದವರು. ಅವರನ್ನು ಪ್ರತೀ ಕಲಾವಿದನೂ, ಕಲಾಭಿಮಾನಿಗಳೂ ಸ್ಮರಿಸಬೇಕಾದದ್ದು ಆದ್ಯ ಕರ್ತವ್ಯ. ಎಲ್ಲಾ ಪಾತ್ರಕ್ಕೂ ಜೀವ ತುಂಬುವ ಸಾಮರ್ಥ್ಯ ಇವರಲ್ಲಿದೆ. ಏಕಕಾಲಕ್ಕೇ ಎಲ್ಲಾ ಪಾತ್ರವನ್ನು ಏಕಕಾಲದಲ್ಲಿ ಕುಳಿತು ತಾಳಮದ್ದಳೆ ಮಾಡುವ ವಿಶೇಷ ಪ್ರತಿಭೆಯ ಸಂಪನ್ನರು. ಇವರ ಹೆಸರಿನಲ್ಲಿ ಸರಣಿ ತಾಳಮದ್ದಳೆ ಮಾಡುವುದು ಅತ್ಯಂತ ಸೂಕ್ತ ಎಂದು ವಾಸುದೇವ ಸಾಮಗರ ಶಿಷ್ಯ ಡಾ. ವೈಕುಂಠ ಹೇರ್ಳೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅಭಿಪ್ರಾಯಪಟ್ಟರು.

ರಸರಂಗ ಪ್ರಸ್ತುತಿಯಲ್ಲಿ ಸರಣಿ ತಾಳಮದ್ದಳೆಯನ್ನು ಭಾಗವತರಾದ ಲಂಬೋದರ ಹೆಗಡೆಯವರಿಗೆ ಪ್ರಸಂಗ ಪ್ರತಿಯನ್ನು ಹಸ್ತಾಂತರಿಸುವ ಮೂಲಕ ಏಪ್ರಿಲ್ 24ರಂದು ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

ರಸರಂಗದ ಸುಧಾ ಮಣೂರು ನೇತೃತ್ವದ ತಂಡ ರಸರಂಗ ಪ್ರಸುತಪಡಿಸುವ ತಾಳಮದ್ದಳೆ ಕವಿ ಶಿವಕುಮಾರ ಅಳಗೋಡು ವಿರಚಿತ ಪ್ರಸಂಗ ಭಕ್ತ ಸುಧಾಮದಲ್ಲಿ ಸುಶೀಲಾ ಹೊಳ್ಳ, ಸುಪ್ರಿತಾ ಪುರಾಣಿಕ, ಶ್ಯಾಮಲ ವರ್ಣ, ರಾಘವೇಂದ್ರ ಹೆಗಡೆ ಭಾಗವಹಿಸಿದ್ದರು. ಯಶಸ್ವಿ ಕಲಾವೃಂದದ ಸಹಕಾರದೊಂದಿಗೆ ಕಾರ್ಯಕ್ರಮ ಯಶಸ್ವಿಯಾಯಿತು.

ಮೂಡ್ಲಕಟ್ಟೆ ತಾಂತ್ರಿಕ ಕಾಲೇಜು ವಾರ್ಷಿಕೋತ್ಸವ



ಕುಂದಾಪುರ: ಕುಂದಾಪುರದ ಮೂಡ್ಲಕಟ್ಟೆ ತಾಂತ್ರಿಕ ವಿದ್ಯಾಲಯದ ಕಾಲೇಜು ವಾರ್ಷಿಕೋತ್ಸವ ನಡೆಯಿತು.

ಎನ್‌ಎಕ್ಸ್‌ಪಿ ಸೆಮಿಕಂಡಕ್ಟರ್ ಸಿಎಫ್‌ಒ ಸುಂದರ್ ರಾಜ್ ಮುಖ್ಯ ಅತಿಥಿಗಳಾಗಿ ಮಾತನಾಡಿ, ಇಂದಿನ ವಿದ್ಯಾರ್ಥಿಗಳು ಆಧುನಿಕತಂತ್ರಜ್ಞಾನಕ್ಕೆ ಸರಿಸಾಟಿಯಾಗಿ ಕ್ಷಮತೆಯನ್ನು ಬೆಳೆಸಿಕೊಂಡಾಗ ಮಾತ್ರ ಉದ್ಯೋಗಾವಕಾಶಗಳು ಸಿಗಲು ಸಾಧ್ಯ ಎಂದು ಹೇಳಿದರು.

ಐಎಂಜೆ ವಿದ್ಯಾಸಂಸ್ಥೆಗಳ ಅಕಾಡೆಮಿಕ್ ಡೈರೆಕ್ಟರ್ ಡಾ. ಎಸ್.ಎನ್. ಭಟ್ ಶುಭ ಹಾರೈಸಿದರು. ಈ ಸಂದರ್ಭ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು. ಎಂಬಿಎ ವಿಭಾಗದ ಮುಖ್ಯಸ್ಥೆ ಡಾ. ಸುಚಿತ್ರ ಪೂಜಾರಿ ಸ್ವಾಗತಿಸಿದರು. ಪ್ರಾಂಶುಪಾಲ ಡಾ. ರಾಮಕೃಷ್ಣ ಹೆಗಡೆ ಕಾಲೇಜಿನ ವಾರ್ಷಿಕ ವರದಿ ವಾಚಿಸಿದರು. ಸುಷ್ಮಾ ಶೆಟ್ಟಿ ಪರಿಚಯಿಸಿದರು. ಫರಾನ ವಂದಿಸಿದರು. ಶಾಂಭವಿ, ಅಧಿತಿ ನಿರೂಪಿಸಿದರು.

ಸುತ್ತ ಮುತ್ತ

ಇಂದು ಉಚಿತ ನೇತ್ರ ತಪಾಸಣಾ ಶಿಬಿರ

ಕೋಟ: ನೇತ್ರಜ್ಯೋತಿ ಚಾರಿಟೇಬಲ್ ಟ್ರಸ್ಟ್ ಉಡುಪಿ,ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ, ಉಡುಪಿ,ಶ್ರೀದೇವಿ ಮಾರಿಕಾಂಬಾ ಹಾಗೂ ನಾಲ್ಕು ಪಾದದ ಹಾಗೂಳಿ ಕೋಳಿಯರ ಮಾಮನ ದೇವಸ್ಥಾನ ಕೋಡಿ ಕನ್ಯಾಣ, ಶ್ರೀದೇವಿ ಮಾರಿಕಾಂಬಾ ಸೌಹಾರ್ದ ಸಹಕಾರಿ ಸಂಘ ಕೋಡಿ ಕನ್ಯಾಣ ಇವರ ಸಹಯೋಗದೊಂದಿಗೆ ಉಚಿತ ನೇತ್ರ ತಪಾಸಣಾ ಶಿಬಿರ ಏ.30ರಂದು ಬೆಳಗ್ಗೆ 9.300ರ ಮಧ್ಯಾಹ್ನ 1ರ ವರೆಗೆ ಶ್ರೀದೇವಿ ಮಾರಿಕಾಂಬಾ ಹಾಗೂ ನಾಲ್ಕು ಪಾದದ ಹಾಗೂಳಿ ಕೋಳಿಯರ ಮಾಮನ ದೇವಸ್ಥಾನ ವಠಾರ, ಕೋಡಿ ಕನ್ಯಾಣ ಇಲ್ಲಿ ಜರಗಲಿದೆ ಎಂದು ಸಂಘಟಕರು ತಿಳಿಸಿದ್ದಾರೆ

ಸೇನಾ ಪೂರ್ವ ಸಿದ್ಧತಾ ತರಬೇತಿಯ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಉಡುಪಿ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಭಾರತೀಯ ಸೇನೆ, ಇತರೆ ಯೂನಿಫಾರ್ಮ್ ಸೇವೆಗಳಿಗೆ ಸೇರ ಬಯಸುವ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ-1, 2(ಎ), 3(ಎ) ಹಾಗೂ 3(ಬಿ) ಗಳ ಅರ್ಹ ಅಭ್ಯರ್ಥಿಗಳಿಗೆ ಆಯ್ಕೆಯ ಪೂರ್ವ ಸಿದ್ಧತೆ ಬಗ್ಗೆ ವೃತ್ತಿ ಮಾರ್ಗದರ್ಶನ ಹಾಗೂ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತಿದ್ದು 2006 ರ ಏ.27ರಿಂದ 2009ರ ಏ.27ರ ಅವಧಿಯಲ್ಲಿ ಜನಿಸಿರುವ ಅರ್ಹ ಅಭ್ಯರ್ಥಿಗಳಿಂದ (ಬಾಲಕರು ಮಾತ್ರ) ತರಬೇತಿಗಾಗಿ ಅರ್ಜಿ ಸಲ್ಲಿಸುವ ಅವಧಿಯನ್ನು ಮೇ 13 ರ ವರೆಗೆ ವಿಸ್ತರಿಸಲಾಗಿದೆ. ತರಬೇತಿಯು ಬ್ರಹ್ಮಾವರ ತಾಲೂಕು ಬಾರ್ಕೂರು ಹನೆಹಳ್ಳಿ ನ್ಯಾಷನಲ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆಯಲಿದೆ. ರ‍್ಯಾಲಿಯ ದಿನಾಂಕವನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಕೊಠಡಿ ಸಂಖ್ಯೆ: 304, ಬಿ ಬ್ಲಾಕ್, ಎರಡನೇ ಮಹಡಿ, ರಜತಾದ್ರಿ, ಮಣಿಪಾಲ ಉಡುಪಿ ದೂ.ಸಂಖ್ಯೆ: 0820-2574881, ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಥವಾ ವೆಬ್‌ಸೈಟ್ http://udupi.nic.in ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಐಟಿಐ ಪ್ರವೇಶಾತಿಗೆ ಅರ್ಜಿ ಆಹ್ವಾನ

ಉಡುಪಿ: ಉಡುಪಿಯ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ (ಐ.ಟಿ.ಐ) ವಿವಿಧ ತಾಂತ್ರಿಕ ಕೋರ್ಸುಗಳ ಪ್ರವೇಶಾತಿಗಾಗಿ ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ಹಾಗೂ ಪಿ.ಯು.ಸಿ ಅನುತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಂದ ಇಲಾಖೆಯ ವೆಬ್‌ಸೈಟ್ www.cite.karnataka.gov.inನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಮೇ 8 ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಗತಿನಗರ, ಮಣಿಪಾಲ, ಉಡುಪಿ ಇಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: 9900329668, 8762798115, 9902001790, 7975141464, 8722453232 ಹಾಗೂ 9738439619 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಸಂಸ್ಥೆಯ ಪ್ರಾಚಾರ್ಯರ ಕಚೇರಿ ಪ್ರಕಟಣೆ ತಿಳಿಸಿದೆ.

ಕಾಗ್ನಿಜೆಂಟ್ ಕಂಪೆನಿಗೆ ವಿದ್ಯಾರ್ಥಿಗಳ ನೇಮಕ

ಕುಂದಾಪುರ: ಕಾಗ್ನಿಜೆಂಟ್ ಕಂಪೆನಿಯು ನಡೆಸಿದ ಸಂದರ್ಶನದಲ್ಲಿ ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿನ ಅಂತಿಮ ಬಿಸಿಎ ವಿದ್ಯಾರ್ಥಿಗಳಾದ ಕೃತಿ ಜೆ. ಯು., ನಿಶ್ಚಿತಾ ಚೆಟ್ಟಿಯಾರ್ ಸದಾನಂದ್, ಶ್ರೀಶಾನ್ ಎಸ್. ಶೆಟ್ಟಿ ಶ್ರೇಯಸ್ ಎಸ್. ಪೂಜಾರಿ, ಭೂಮಿಕಾ, ಸ್ವಾದನ ಯು., ಅನನ್ಯ ಜಿ., ಸುಕನ್ಯಾ ಎಸ್. ಶೆಟ್ಟಿ ಆಯ್ಕೆಯಾಗಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ. ಶುಭಕರಾಚಾರಿ ಹಾಗೂ ಉದ್ಯೋಗ ಹಾಗೂ ತರಬೇತಿ ಘಟಕದ ಸಂಯೋಜಕ ಪ್ರೊ. ರಾಜೇಂದ್ರ ಹೊಳಬಳೆದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೇಸಿಗೆ ಶಿಬಿರ

ಕುಂದಾಪುರ: ತಲ್ಲೂರು ಸಂತ ಫ್ರಾನ್ಸಿಸ್ ಅಸ್ಸಿಸಿ ಚರ್ಚ್‌ನಲ್ಲಿ ನಾಲ್ಕು ದಿನಗಳ ಬೇಸಿಗೆ ರಜೆಯ ಆಧ್ಯಾತ್ಮಿಕ ತರಬೇತಿ ಶಿಬಿರ ನಡೆಯಿತು.

ಉಡುಪಿ ಧರ್ಮಪ್ರಾಂತ್ಯದ ದೇವಕರೆಯ ಆಯೋಗದ ನಿರ್ದೇಶಕ ಅಶ್ವಿನ್ ಅರಾನ್ಹ ಶಿಬಿರವನ್ನು ಉದ್ಘಾಟಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಅಶ್ವಿನ್ ಅರಾನ್ಹಾ ಉಡುಪಿ ಧರ್ಮಪ್ರಾಂತ್ಯದ ಪವಿತ್ರ ಬೈಬಲ್ ಆಯೋಗದ ನಿರ್ದೇಶಕ ಜಿತೇಶ್ ಕ್ಯಾಸ್ತಲಿನೋ, ವಿಲ್ಸನ್ ಡಿಸೋಜಾ ಭಾಗವಹಿಸಿದ್ದರು. ಚರ್ಚಿನ ಧರ್ಮಗುರು ಎಡ್ವಿನ್ ಡಿಸೋಜಾ ಮುಂದಾಳತ್ವದಲ್ಲಿ ಶಿಬಿರ ನಡೆಯಿತು.

ಉಡುಪಿ ತಾಲೂಕು 16ನೇ ಕನ್ನಡ ಸಮ್ಮೇಳನಾಧ್ಯಕ್ಷರಿಗೆ ಆಮಂತ್ರಣ | ಜಯಕರ ಶೆಟ್ಟಿ ಬಣ್ಣನೆ

ಸಮಾಜಕ್ಕೆ ಡಾ. ಭಾಸ್ಕರಾನಂದ ಕುಮಾರ್ ಕೊಡುಗೆ ಅಪಾರ

ಉಡುಪಿ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಉಡುಪಿ ತಾಲೂಕು ಘಟಕ ಇದರ ವತಿಯಿಂದ ಮೇ 3ರಂದು ನಡೆಯಲಿರುವ ಉಡುಪಿ ತಾಲೂಕು ಹದಿನಾರನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಡಾ. ಭಾಸ್ಕರಾನಂದ ಕುಮಾರ್ ಅವರಿಗೆ ಆಮಂತ್ರಣ ಪತ್ರಿಕೆಯೊಂದಿಗೆ ವೀಳ್ಯ ನೀಡಿ ಆಮಂತ್ರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಮ್ಮೇಳನ ಸ್ವಾಗತ ಸಮಿತಿ ಕಾರ್ಯಾಧ್ಯಕ್ಷ ಜಯಕರ ಶೆಟ್ಟಿ ಇಂದ್ರಾಳಿ, ದೇಶದ ಪ್ರಸಿದ್ಧ ವೈದ್ಯರಾದ ಡಾ. ಭಾಸ್ಕರಾನಂದ ಕುಮಾರ್ ಈ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿರುವುದು ನಮ್ಮೆಲ್ಲರಿಗೂ ಹೆಮ್ಮೆ. ವೈದ್ಯರಾಗಿ ಕಲಾವಿದರಾಗಿ ಮತ್ತು



ಸಂಘಟಕರಾಗಿ ಅವರು ಸಮಾಜಕ್ಕೆ ನೀಡಿದ ಕೊಡುಗೆಅಪಾರವಾಗಿದೆ. ಅವರಅಧ್ಯಕ್ಷತೆಯಲ್ಲಿ ಸಮ್ಮೇಳನ ಅತ್ಯಂತ ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ವೈದ್ಯ ದಂಪತಿಗಳನ್ನು ಗೌರವಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಕೃತಿ ವಿಶ್ವ ಪ್ರತಿಷ್ಠಾನ ಸ್ಥಾಪಕ ಉಡುಪಿ ವಿಶ್ವನಾಥ ಶೆಣೈ, ಅಧ್ಯಕ್ಷ ಪ್ರೊ.ಶಂಕರ್, ಸುಹಾಸಂ ಅಧ್ಯಕ್ಷೆ ಸಂಧ್ಯಾ ಶೆಣೈ, ಶ್ರೀನಿವಾಸ ಉಪಾಧ್ಯ, ಕಲಾಪೋಷಕ ಭುವನ ಪ್ರಸಾದ ಹೆಗ್ಡೆ ತುಳುಕೂಟದ ಕಾರ್ಯದರ್ಶಿ ಗಂಗಾಧರ ಕಿದಿಯೂರು, ಪ್ರಭಾಕರ್ ಭಂಡಾರಿ, ಕನ್ನಡ ಸಾಹಿತ್ಯ ಪರಿಷತ್ ಉಡುಪಿ ತಾಲೂಕು ಪದಾಧಿಕಾರಿಗಳಾದ ರಂಜನಿ ವಸಂತ್, ಸತೀಶ್ ಕೊಡವೂರು, ರಾಜೇಶ್ ಭಟ್ ಪಣಿಯಾಡಿ, ಅನಿತಾ ಸಿಕ್ವೇರಾ, ಆರ್ ವಸಂತ್, ಶಶಿಕಾಂತ್ ಶೆಟ್ಟಿ, ದೀಪಾ ಕರ್ಕಿ, ಚಂದ್ರಕಾಂತ್, ಸಿದ್ದ ಬಸಯ್ಯ ಸ್ವಾಮಿ ಚಿಕ್ಕಮಠ ಉಪಸ್ಥಿತರಿದ್ದರು.

ಕನ್ನಡ ಸಾಹಿತ್ಯ ಪರಿಷತ್ ಉಡುಪಿ ತಾಲೂಕು ಅಧ್ಯಕ್ಷ ರವಿರಾಜ್ ಎಚ್.ಪಿ ಪ್ರಸ್ತಾವನೆಗೈದು ಸ್ವಾಗತಿಸಿದರು. ಗೌರವ ಕಾರ್ಯದರ್ಶಿ ಜನಾರ್ದನ್ ಕೊಡವೂರು ನಿರೂಪಿಸಿದರು. ಸಂಘಟನಾ ಕಾರ್ಯದರ್ಶಿ ರಾಘವೇಂದ್ರ ಪ್ರಭು ಕರ್ವಾಲು ವಂದಿಸಿದರು.

ಎಂಆರ್‌ಪಿಎಲ್, ಕರ್ಣಾಟಕ ಬ್ಯಾಂಕ್ ಸಿಎಸ್ಸಾರ್ ಅನುದಾನ

ಆರೋಗ್ಯ ಇಲಾಖೆಗೆ ವಾಹನ ಹಸ್ತಾಂತರ

ಉಡುಪಿ: ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್ ಮೂಲಕ ಎಂಆರ್‌ಪಿಎಲ್ ಮತ್ತು ಕರ್ನಾಟಕ ಬ್ಯಾಂಕ್ ವತಿಯಿಂದ ಪ್ರಸಕ್ತ ಸಾಲಿನ ಸಿಎಸ್‌ಆರ್ ಅನುದಾನದಡಿ ಮಣಿಪಾಲದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಮೂರು ವಾಹನಗಳನ್ನು ಹಸ್ತಾಂತರಿಸಲಾಯಿತು.

ಈ ಸಂದರ್ಭದಲ್ಲಿ ಕರ್ಣಾಟಕ ಬ್ಯಾಂಕ್‌ನ ಎಜಿಎಂ ರಮೇಶ್ ವೈದ್ಯರನ್ನು ಕೃತಜ್ಞತಾ ಪೂರ್ವಕವಾಗಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಪ್ರಭಾರ ಜಿಲ್ಲಾ ಆರೋಗ್ಯ



ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಚಿದಾನಂದ ಸಂಜು, ಜಿಲ್ಲಾ ಆರ್ ಸಿಎಚ್ ಅಧಿಕಾರಿ ಡಾ. ಜ್ಯೋತ್ಸ್ನಾ ಬಿ.ಕೆ., ಜಿಲ್ಲಾ ಎನ್‌ಫೋರ್ಸ್‌ಮೆಂಟ್ ಅಧಿಕಾರಿ ಡಾ. ಶ್ರೀರಾಮ್ ರಾವ್ ಕೆ., ಡಿಪಿಡಿಒ ಡಾ. ಪ್ರಶಾಂತ್ ಭಟ್, ಜಿಲ್ಲಾ ಎನ್‌ಸಿಡಿ ಅಧಿಕಾರಿ ಡಾ. ಲತಾ ನಾಯಕ್ ಹಾಗೂ ಇಲಾಖಾ ಅಧಿಕಾರಿಗಳು ಮತ್ತು ಬ್ಯಾಂಕ್‌ನ ಮುಖ್ಯ ಅಧಿಕಾರಿಗಳು ಉಪಸ್ಥಿತರಿದ್ದರು.

ಫೋಟೊ ಇದೆ. ಎಂಆರ್‌ಪಿಎಲ್